ಮ್ಯಾಸಬೇಡರ ಸಾಂಸ್ಕೃತಿಕ ಆತ್ಮಕಥನ

(ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪಿಎಚ್.ಡಿ ಮಹಾಪ್ರಬಂಧ)

ಸಂಶೋಧಕ
ದೇವರಕುರಿ ಓಬಯ್ಯ

ಮಾರ್ಗದರ್ಶಕರು
ಡಾ. ಮೊಗಳ್ಳಿ ಗಣೇಶ್
ಪ್ರವಾಚಕರು
ಜಾನಪದ ಅಧ್ಯಯನ ವಿಭಾಗ

ಜಾನಪದ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೦೮ - ೦೯

ಮ್ಯಾಸಬೇಡರ ಸಾಂಸ್ಕೃತಿಕ ಆತ್ಮಕಥನ

(ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪಿಎಚ್.ಡಿ ಮಹಾಪ್ರಬಂಧ)

ಸಂಶೋಧಕ

ದೇವರಕುರಿ ಓಬಯ್ಯ

ಮಾರ್ಗದರ್ಶಕರು

ಡಾ. ಮೊಗಳ್ಳಿ ಗಣೇಶ್

ಪ್ರವಾಚಕರು

ಜಾನಪದ ಅಧ್ಯಯನ ವಿಭಾಗ

ಜಾನಪದ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೮ - ೦೯

ಮಾರ್ಗದರ್ಶಕರ ದೃಢೀಕರಣ ಪತ್ರ

ಶ್ರೀ ದೇವರಕುರಿ ಓಬಯ್ಯ ಇವರು ಮ್ಯಾಸಬೇಡರ ಸಾಂಸ್ಕೃತಿಕ ಆತ್ಮಕಥನ ಎಂಬ ಶೀರ್ಷಿಕೆಯ ಪಿಎಚ್.ಡಿ. ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಪ್ರಬಂಧ ಇಡಿಯಾಗಿ, ಬಿಡಿಯಾಗಿ ಎಲ್ಲಿಯೂ ಈ ಮೊದಲು ಪ್ರಕಟಗೊಂಡಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ :

ಸ್ಥಳ : ಕನ್ನಡ ವಿಶ್ವವಿದ್ಯಾಲಯ, ಹಂಪಿ

ಡಾ. ಮೊಗಳ್ಳಿ ಗಣೇಶ್

ಮಾರ್ಗದರ್ಶಕರು

ಘೋಷಣಾ ಪತ್ರ

ಮ್ಯಾಸಬೇಡರ ಸಾಂಸ್ಕೃತಿಕ ಆತ್ಮಕಥನ ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಲು ಡಾ.ಮೊಗಳ್ಳಿ ಗಣೇಶ್ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಈ ಮಹಾಪ್ರಬಂಧವನ್ನು ಅಥವಾ ಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಲಿ, ಇತರ ಯಾವುದೇ ಉದ್ದೇಶಗಳಿಗಾಗಿಯಾಗಲಿ ಬಳಸಿಕೊಂಡಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ.

Devarakuri Obaiah

ದಿನಾಂಕ : ದೇವರಕುರಿ ಓಬಯ್ಯ

ಸ್ಥಳ : ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪರಿವಿಡಿ

ಅಧ್ಯಾಯ - ಒಂದು

ಅಧ್ಯಯನದ ಪ್ರವೇಶ

ಇಂದು ಸಮುದಾಯಗಳ ಕುರಿತು ಶೋಧಿಸುವುದು ಅಂದರೆ ವರ್ತಮಾನದ ರಾಜಕೀಯ, ಆರ್ಥಿಕ, ಸಾಮಾಜಿಕ ಸಂರಚನೆಗಳ ಸ್ವರೂಪವನ್ನು ತಿಳಿಯುವುದು ಎಂದು ಅರ್ಥ. ನಿರಂತರ ತೀವ್ರ ಬದಲಾವಣೆಗೆ ಒಳಗಾಗುತ್ತಿರುವ ಸಾಂಸ್ಕೃತಿಕ ಪರಿಸರದಲ್ಲಿ ಒಂದು ಸಮುದಾಯವನ್ನು ಕುರಿತು ಒಂದು ಕಾಲದ ಅಧ್ಯಯನ, ಅದು ಆ ಸಮುದಾಯದ ಎಲ್ಲ ಕಾಲಕ್ಕೂ ಸಲ್ಲುವುದಿಲ್ಲ. ಹಾಗಾಗಿ ಆಯಾ ಕಾಲಘಟ್ಟಗಳ ಒಳಗಿಂದಲೆ ಸಮುದಾಯಗಳ ಕುರಿತ ಸಂಶೋಧನೆಗಳು ನಡೆಯಬೇಕು. ಇಂತಹ ಸಂಶೋಧನೆಗೆ ವರ್ತಮಾನದ ಸೂಕ್ಷ್ಮಗಳನ್ನು ಗ್ರಹಿಸುವ ಕಣ್ಣಿರಬೇಕು. ಕರ್ನಾಟಕದ ಜನಸಂಖ್ಯೆ ಪ್ರಮಾಣದಲ್ಲಿ ಹೆಚ್ಚಿರುವ ಸಮುದಾಯವೆಂದರೆ ಬೇಡ ಸಮುದಾಯ. ಈ ಸಮುದಾಯದ ಕುರಿತು ಅನೇಕ ಅಧ್ಯಯನಗಳು ನಡೆದಿವೆ. ಈ ಅಧ್ಯಯನಗಳಲ್ಲಿ ಹಲವು ಸಮಸ್ಯೆಗಳಿವೆ. ನಮ್ಮ ಕಾಲದ ಬೇಡ ಸಮುದಾಯದ ಬದುಕಿನ ಸೂಕ್ಷ್ಮಗಳನ್ನು ಅರ್ಥ ಮಾಡಿಕೊಳ್ಳಲು, ಬೇಡ ಸಮುದಾಯವೆ ನೇರವಾಗಿ ಮಾತಿಗಿಳಿಯಬೇಕು. ಅಂದರೆ ಸಮುದಾಯವೆ ಮಾತನಾಡುತ್ತ ತಮ್ಮ ಕಾಲವನ್ನು ಕಟ್ಟಿಕೊಳ್ಳುವ ಇಕ್ಕಟ್ಟುಗಳನ್ನು ತಿಳಿಸುವುದು. ಒಂದು ಸಮುದಾಯದ ಪರವಾಗಿ ಮಾತನಾಡುವುದಕ್ಕೂ, ಸಮುದಾಯವೇ ನೇರವಾಗಿ ಮಾತನಾಡುವುದಕ್ಕೂ ನಡುವೆ ಅಂತರವಿದೆ. ಈವರೆಗಿನ ಅಧ್ಯಯನಗಳು ಸಮುದಾಯದ ಪರವಾಗಿ ಮಾತನಾಡಿವೆ. ಈಗಿನ ಅಧ್ಯಯನಗಳಲ್ಲಿ ಸಮುದಾಯವೆ ಮಾತನಾಡಬೇಕಿದೆ. ಪ್ರಸ್ತುತ ಈ ಸಂಶೋಧನೆಯು ಇಂತಹ ತಿಳುವಳಿಕೆಯನ್ನು ಪ್ರಧಾನವಾಗಿ ಗುರುತಿಸಿಕೊಂಡು, ಬೇಡ ಸಮುದಾಯದ ಸಾಂಸ್ಕೃತಿಕ ಆತ್ಮಕಥನವನ್ನು ನಿರೂಪಿಸಲು ಪ್ರಯತ್ನಿಸಿದೆ.

ಭಾರತದಲ್ಲಿ ಸಮುದಾಯಗಳ ಅಧ್ಯಯನಗಳನ್ನು ಪ್ರಾರಂಭ ಮಾಡಿದವರು ಪಾಶ್ಚಾತ್ಯರು.ಅವರು ತಮ್ಮ ಆಡಳಿತದ ಅನುಕೂಲಕ್ಕಾಗಿ ಪ್ರಾರಂಭಿಸಿದ ಈ ಅಧ್ಯಯನ ವಿಧಾನಗಳು ಕ್ರಮೇಣ ಶೈಕ್ಷಣಿಕ

ಕುತೂಹಲವನ್ನು ಕೆರಳಿಸಿ ಅದು ಒಂದು ಅಧ್ಯಯನ ಶಿಸ್ತಾಗಿ ರೂಪಿಸಲ್ಪಟ್ಟಿತು. ಎಡ್ಗರ್‌ಥರಸ್ಟನ್ ಕೆ.ರಂಗಾಚಾರಿ ಅವರು ಒಟ್ಟಾಗಿ ದಕ್ಷಿಣ ಭಾರತವನ್ನು ಕೇಂದ್ರವಾಗಿಸಿಕೊಂಡು ಅಧ್ಯಯನ ಮಾಡಿ Caste and tribes southern India" ಎಂಬ ಕೃತಿಯನ್ನು ಪ್ರಕಟಿಸಿದರು. ಅದರಲ್ಲಿ ಕರ್ನಾಟಕದಲ್ಲಿ ನೆಲೆಗೊಂಡಿರುವ ಪಶುಪಾಲಕರಾದ ಮ್ಯಾಸಬೇಡರ ಬಗ್ಗೆ ಉಲ್ಲೇಖ ಮಾಡಿದ್ದಾರೆ. ಕನ್ನಡ ಮಾತನಾಡುವವರು ಊರು ಬೇಡರು, ತೆಲುಗು ಮಾತನಾಡುವವರು ಮ್ಯಾಸಬೇಡರು ಎಂಬ ವಿವರಣೆ ನೀಡುತ್ತಾ' ಮ್ಯಾಸರೆಂದರೆ ಮೇಯಿಸುವವರು ಎಂದು ಅರ್ಥಕೊಟ್ಟಿರುತ್ತಾರೆ. ಮತ್ತೆ ಈ ಎರಡೂ ಬಗೆಯ ನಾಯಕರು ಅನೇಕ ಗುಂಪುಗಳಾಗಿ ವಿಭಾಗಿಸಲ್ಪಟ್ಟಿದ್ದಾರೆ. ೧೯೦೧ರ ಜನಗಣತಿಯ ಆಧಾರದ ಮೇಲೆ ಇವರ ಮೂಲದೈವ ತಿರುಪತಿ ವೆಂಕಟರಮಣ, ಮಾರೆಮ್ಮ, ಮತ್ತು ಇವರ ಗುರು ತಿರುಮಲಾಚಾರ್ಯ ಎಂದು ಗುರುತಿಸಲಾಗಿದೆ. ಈ ಲಕ್ಷಣಗಳು ಸಮುದಾಯ ಬಹುಮೂಲವನ್ನು ಏಕಮೂಲಗೊಳಿಸುವ ಪ್ರಯತ್ನವಾಗಿದೆ.

ಮೈಸೂರು ಕಡೆಯ ಬೇಡರು ಶೈವಾರಾಧಕರು ಎಂದು ಅವರು ಹೇಳಿದ್ದಾರೆ. ಬಳ್ಳಾರಿ ಜಿಲ್ಲೆಯ ಉಜ್ಜಿನಿಮಠದ ಗುರುಗಳಿಂದ ಶೈವಾರಾಧಕಾರಾಗಿ ಬೇಡರು ಮಾರ್ಪಡುತ್ತಾರೆ ಎಂಬುದು ಇವರ ಅಭಿಪ್ರಾಯ. ಇವರಿಗೆ ಇಡಿಯಾದ ಸಂಸ್ಕೃತಿಯ ಅಧ್ಯಯನ ಸಾಧ್ಯವಾಗದ ಕಾರಣ ಮೇಲ್ವರ್ಗದವರ ಗ್ರಹಿಕೆ ಪಾರಿಣಾಮದಿಂದಾಗಿ ಮೂಲತಃ ಶೈವರಾಧಕರಾದ ಬೇಡರನ್ನು ವೈಷ್ಣವ ಪಂಥದವರು ಎಂದು ತಪ್ಪಾಗಿ ಅರ್ಥೈಸಲಾಗಿದೆ. ಇವರ ನಂತರ ಹೆಚ್.ವಿ.ನಂಜುಂಡಯ್ಯ ಮತ್ತು ಎಲ್.ಕೆ.ಅನಂತಕೃಷ್ಣ ಅಯ್ಯರ್ ಅವರು ೧೯೨೮ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಮೂಲಕ ಪ್ರಕಟಿಸಿದ "Mysore Castes and Tribes" ಎಂಬ ಕೃತಿಯಲ್ಲಿ ಇವರು ಆರ್ಯೇತರರು ದಕ್ಷಿಣ ದ್ರಾವಿಡ ಜನಾಂಗದ ಪೂರ್ವಜರು ಎಂದು ಅಭಿಪ್ರಾಯಪಡುತ್ತಾರೆ. ಅಲ್ಲದೆ ಸಂಸ್ಕೃತದ ಮ್ಯಾಸ ಪದದಿಂದ ಬೇಡ ಎಂಬ ಪದ ನಿಷ್ಪನ್ನವಾಗಿದೆ ಎಂದು ಹೇಳುತ್ತಾರೆ. ಈ ಸಮುದಾಯದ ಸಾಂಸ್ಕೃತಿಕ ವಿವರಗಳೂ ಇಲ್ಲಿ ತಕ್ಕಮಟ್ಟಿಗೆ ದಾಖಲಾಗಿದೆ. ೧೯೮೨ರಲ್ಲಿ ಎಂ.ಜಿ.ಈಶ್ವರಪ್ಪನವರು 'ಮ್ಯಾಸ ಬೇಡರು' ಎಂಬ ಕಿರುಪುಸ್ತಕವನ್ನು ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ ಸಂಕ್ಷಿಪ್ತವಾಗಿ ಮ್ಯಾಸಬೇಡರ ಪದ ನಿಷ್ಪತ್ತಿ ಅವರ ದೈವರಾಧನೆ ವೇಷಭೂಷಣ, ವಾಸದನೆಲೆ, ಕುಟುಂಬ ಪದ್ಧತಿ ಸಾಂಪ್ರದಾಯಿಕ ನಂಬಿಕೆಗಳು, ಹುಟ್ಟುಸಾವಿನ ವಿವರ, ಹಬ್ಬ-ಹರಿದಿನ ನ್ಯಾಯ ತೀರ್ಮಾನ ಇವುಗಳ ಬಗ್ಗೆ ವಿವರಗಳನ್ನು ಕೊಟ್ಟಿದ್ದಾರೆ.

ಅದೇ ವರ್ಷ ಪ್ರಕಟವಾದ ಚಳ್ಳಕೆರೆ ಆರ್.ರಾಜಣ್ಣನವರ "ನಾಯಕ ಜನಾಂಗದ ಇತಿಹಾಸ" ಎಂಬ ಕೃತಿಯು ಬೇಡರ ಚಹರೆ ಮತ್ತು ಸಾಂಸ್ಕೃತಿಕ ಲಕ್ಷಣಗಳನ್ನು ವಿವರಿಸುತ್ತ ಈ ಜನರು ತಮ್ಮನ್ನು ವಾಲ್ಮೀಕಿ, ಕಿರಾತ, ಪರಿವಾರ, ಪಾಳೇಗಾರ, ನಾಯಕ, ಬೇಡ, ತಳವಾರ ಇತ್ಯಾದಿಯಾಗಿಯೂ ಕರೆದುಕೊಳ್ಳುತ್ತಾರೆ ಎಂದು ಹೇಳುತ್ತಾ ವೃತ್ತಿಯನ್ನು ಸಂಕೇತಿಸುವ ಹೆಸರುಗಳ ಪ್ರಸ್ತಾಪ ಮಾಡುತ್ತಾರೆ. ಬೇಡರ ಸಮುದಾಯಕ್ಕೆ ಸೇರಿದ ಐತಿಹಾಸಿಕ, ಪೌರಾಣಿಕ ವ್ಯಕ್ತಿಗಳ ಬಗ್ಗೆ ವಿವರಣೆ ಕೊಟ್ಟು ಅರಸರ

ಪಡೆಗಳಲ್ಲಿ ಯೋಧರಾಗಿ ಕಾರ್ಯನಿರ್ವಹಿಸುತ್ತಿದ್ದ ಇವರು ಮುಸ್ಲಿಂಮರ ದಾಳಿಯಿಂದ ಮಡಿದಾಗ ಅವರ ಕುಟುಂಬಗಳು ಅತಂತ್ರಗೊಂಡಿದ್ದು ಅನಿಷ್ಟ ಪದ್ಧತಿಗಳಿಗೆ ಬಲಿಯಾಗಿದ್ದನ್ನು ತಿಳಿಸುತ್ತಾರೆ. ಒಂದು ಬುಡಕಟ್ಟಿನ ನಾಶಕ್ಕೆ ಕಾರಣವಾಗುವ ಸಂಗತಿಗಳನ್ನು ತಿಳಿಸುತ್ತಲೆ ಅವರು ವರ್ತಮಾನದ ಬೇಡರ ಅಭಿವೃದ್ಧಿ ಮಾಡಬೇಕಾಗಿರುವ ಅವಶ್ಯಕತೆ ಬಗ್ಗೆ ಬರೆಯುತ್ತಾರೆ. ಅದಕ್ಕಾಗಿ ರಾಜಕಾರಣಿಗಳಿಗೆ ಬೇಕಾಗಿರುವ ಬದ್ಧತೆಗಳ ಬಗ್ಗೆಯೂ ತಿಳಿಸುತ್ತಾರೆ. ಕೇವಲ ಸಾಂಸ್ಕೃತಿಕ ವಿವರಗಳನ್ನು ಕೊಡುವ ಹಂತಕ್ಕೆ ನಿಲ್ಲದೆ ಅವರ ಅಭಿವೃದ್ಧಿ ಬಗ್ಗೆಯೂ ಚಿಂತಿಸುವ ಇವರ ಕೃತಿ ಅಂದಿನ ಮಟ್ಟಿಗೆ ಆಧುನಿಕ ಚಿಂತನೆಯೆನಿಸುತ್ತದೆ.

ಎಂ.ಎನ್.ಪ್ರಭಾಕರ್‌ರವರು ೧೯೭೬ರಲ್ಲಿ 'ಚಂದ್ರವಳ್ಳಿ' ಕೃತಿಯಲ್ಲಿ ನಾಯಕನಹಟ್ಟಿ ಬಖೈರನ್ನು ವಿವರಿಸಿ ಮ್ಯಾಸಗಂಪಳವು ಶ್ರೀಶೈಲ ಮೂಲದಿಂದ ಕಾಟಮಲ್ಲನಾಯಕನ ನೇತೃತ್ವದಲ್ಲಿ ಹೊರಟು ಪಶುಸಂಪತ್ತಿನೊಂದಿಗೆ ಸಮುದಾಯವು ಈ ಭಾಗವನ್ನು ಪ್ರವೇಶಿಸಿತು ಎಂಬ ವಿವರ ಕೊಡುತ್ತಾರೆ. ಡಾ.ಕೃಷ್ಣಮೂರ್ತಿ ಹನೂರರು 'ಬೇಡನಾಯಕರು' ಎಂಬ ತಮ್ಮ ಸಂಶೋಧನಾ ಕೃತಿಯಲ್ಲಿ ಚಿತ್ರದುರ್ಗ ಜಿಲ್ಲೆಯ ಬೇಡರನ್ನು ಕುರಿತು ಬಹಳ ಮಹತ್ವದ ಅಧ್ಯಯನ ಮಾಡಿದ್ದಾರೆ. ಬೇಡರ ಸಂಸ್ಕೃತಿಯ ಬಗ್ಗೆ ಉಪಯುಕ್ತ ವಿವರಗಳನ್ನು ಕೊಟ್ಟು ಬೇಡರ ಪುರಾಣ ಮತ್ತು ಬೇಡರ ಶರಣರನ್ನು ಕುರಿತು ಮಾಹಿತಿಗಳನ್ನು ಕೊಟ್ಟಿದ್ದಾರೆ.

ಇಷ್ಟು ಬಿಟ್ಟರೆ ವಿವಿಧ ಬುಡಕಟ್ಟು ಸಮುದಾಯಗಳ ಬಗ್ಗೆ ೧೯೯೩ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಉಪಸಂಸ್ಕೃತಿ ಮಾಲೆಯ ಅಡಿಯಲ್ಲಿ ವಿವಿಧ ಲೇಖಕರು ಸುಮಾರು ४೨ ಗ್ರಂಥಗಳನ್ನು ಪ್ರೊ.ಬರಗೂರು ರಾಮಚಂದ್ರಪ್ಪನವರ ನೇತೃತ್ವದಲ್ಲಿ ಪ್ರಕಟಿಸುವ ಮೂಲಕ ಬುಡಕಟ್ಟು ಸಮುದಾಯಗಳ ಬಗ್ಗೆ ವಿಸ್ತೃತ ಅಧ್ಯಯನಕ್ಕೆ ವಿಪುಲ ಮಾಹಿತಿಯನ್ನು ಒದಗಿಸಲಾಯಿತು. ಈ ಮಾಲೆಯಲ್ಲಿ ಡಾ.ಕೃಷ್ಣಮೂರ್ತಿ ಹನೂರರವರು 'ಮ್ಯಾಸಬೇಡರ ಸಂಸ್ಕೃತಿ' ಎಂಬ ಕೃತಿಯನ್ನು ರಚಿಸಿದ್ದಾರೆ. ಬೇಡ ಸಮುದಾಯ ಕುರಿತ ಕೃಷ್ಣಮೂರ್ತಿಹನೂರ್ ಅವರ ಈ ಅಧ್ಯಯನ ಹೆಚ್ಚು ಸೂಕ್ಷ್ಮವೂ, ಮಹತ್ವದ ಸೂಕ್ಷ್ಮ ವಿವರಗಳ ಮೂಲಕ ಬೇಡ ಸಮುದಾಯದ ಅದರೆಲ್ಲಾ ಆಯಾಮಗಳ ಮೂಲಕ ಹಿಡಿಯಲು ಪ್ರಯತ್ನಿಸಿದ್ದಾರೆ. ಹನೂರು ಸ್ವತಃ ಸೃಜನಶೀಲ ಲೇಖಕರೂ ಆಗಿದ್ದರಿಂದ ಅವರ ಸಮುದಾಯ ಅಧ್ಯಯನದ ಕಥನಕ್ಕೆ ಸೃಜನಶೀಲ ಆಯಾಮವೊಂದು ಒದಗಿದೆ. ಹಾಗಾಗಿ ಈಗ ಬೇಡ ಸಮುದಾಯನ್ನು ಯಾರೇ ಅಧ್ಯಯನ ಮಾಡಲಿ ಅಂತವರಿಗೆ ಹನೂರು ಅವರ ಕೃತಿ ಮಾರ್ಗದರ್ಶಕ ಕೃತಿಯಾಗಿ ನಿಲ್ಲುತ್ತದೆ. ಇಲ್ಲಿ ವೈಚಾರಿಕ ಮನಸ್ಸೊಂದು ಸೃಜನಶೀಲವಾಗಿ, ಕಟ್ಟಿದ ಸಮುದಾಯದ ಕಥನವಾದ ಕಾರಣಕ್ಕೆ ಈ ಅಧ್ಯಯನಕ್ಕೆ ಹೆಚ್ಚಿನ ಮಹತ್ವವಿದೆ. ಪ್ರಸ್ತುತ ಇವತ್ತಿನ ಸಂದರ್ಭದಲ್ಲಿ ಇಂತಹ ಅಧ್ಯಯನಗಳು ಅಷ್ಟು ಪ್ರಾಮುಖ್ಯತೆ ಅನ್ನಿಸದೇ ಇರಬಹುದು. ಆದರೆ ಆ ಸಂದರ್ಭದಲ್ಲಿ ಈ ತರಹದ ಅಧ್ಯಯನಗಳು ಪ್ರಾಮುಖ್ಯತೆ ಪಡೆದಿವೆ ಮತ್ತು ಆಗಿನ ಕಾಲಕ್ಕೆ ತುರ್ತಾಗಿತ್ತು. ಚಾರಿತ್ರಿಕವಾಗಿ ಹನೂರು ಕೃತಿಗೆ ಬಹುಮುಖ್ಯ ಪ್ರಾಶಸ್ತ್ಯವಿದೆ.

ನಂತರದ ಈ ಸಮುದಾಯದ ಬಗ್ಗೆ ಅಧ್ಯಯನ ಮಾಡಿ ಚಾರಿತ್ರಿಕ ದೃಷ್ಟಿಕೋನದಿಂದ ನೋಡಿದವರಲ್ಲಿ ವಿರೂಪಾಕ್ಷಿ ಪೂಜಾರಹಳ್ಳಿಯವರು ಪ್ರಮುಖರು. ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ಸಮುದಾಯಗಳಲ್ಲಿ ಪ್ರಮುಖ ಬುಡಕಟ್ಟು ಸಮುದಾಯವಾದ ಮ್ಯಾಸಬೇಡ ಬುಡಕಟ್ಟಿನ ಚರಿತ್ರೆ ಮತ್ತು ಸಾಂಸ್ಕೃತಿಕ ವಿವರಗಳನ್ನು ದಾಖಲಿಸಿದ್ದಾರೆ. ಈ ಸಮುದಾಯದ ಸಾಹಿತ್ಯ ಮತ್ತು ಸಂಸ್ಕೃತಿಯ ಬಗ್ಗೆ ಈಗಾಗಲೇ ಕೆಲವು ಕೃತಿಗಳು ಪ್ರಕಟವಾಗಿದ್ದರೂ ಬುಡಕಟ್ಟಿನ ವೀರರನ್ನು ಮತ್ತು ಜಿಲ್ಲೆಯಲ್ಲಿರುವ ಆರಾಧನಾ ನೆಲೆಗಳು ಮತ್ತು ಆ ಕಾರಣದಿಂದಾಗಿ ಹುಟ್ಟಿಕೊಂಡ ಸಾಂಸ್ಕೃತಿಕ ನಡವಳಿಕೆಗಳ ವಿವರಗಳನ್ನು ದಾಖಲಿಸಿದ್ದಾರೆ. ಜಿಲ್ಲೆಯ ಪ್ರಮುಖ ಐತಿಹಾಸಿಕ ಸ್ಥಳಗಳನ್ನು ಮತ್ತು ಆ ಸ್ಥಳಗಳ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಪುರಾಣಗಳು ಹಾಗು ಅಲ್ಲಿನ ಸ್ಥಳೀಯ ಇತಿಹಾಸ ಹೇಳುವ ಕಥೆಗಳನ್ನು ಸಂಗ್ರಹಿಸಿ ವಿಶ್ಲೇಷಿಸಿದ್ದಾರೆ.

ನಂತರ ಕರಿಶೆಟ್ಟಿ ರುದ್ರಪ್ಪನವರು ಈ ಸಮುದಾಯದ ಸಾಂಸ್ಕೃತಿಕ ವಿವರಗಳಿಗೆ ಸಂಬಂಧಿಸಿದಂತೆ ಸಂಶೋಧನೆ ಮಾಡಿ ಮೇಲ್ಪದರದ ವಿವರಗಳನ್ನು ತಮ್ಮ ಕೃತಿಯಾದ 'ಮ್ಯಾಸನಾಯಕರು ಒಂದು ಜನಾಂಗಿಕ ಅಧ್ಯಯನ'ದಲ್ಲಿ ತಿಳಿಸಿದ್ದಾರೆ. ವಿರೂಪಾಕ್ಷಿ ಪೂಜಾರಹಳ್ಳಿಯವರು ೨೦೦೭ರಲ್ಲಿ 'ಬೇಟೆ ಮತ್ತು ಬೇಡರು' ಎಂಬ ಕೃತಿಯಲ್ಲಿ ಮಧ್ಯಕಾಲೀನ ಕನ್ನಡ ಕಾವ್ಯಗಳಲ್ಲಿ ನಿರೂಪಿತವಾಗಿರುವ ಬೇಟೆ ಮತ್ತು ಬೇಡ ಸಮೂಹದ ಐತಿಹಾಸಿಕ ವಿವರಗಳ ಅಮೂಲಾಗ್ರವಾಗಿ ಅಧ್ಯಯನ ಮಾಡಿದ್ದಾರೆ. ಇದರಲ್ಲಿ ಬೇಟೆಯ ಚಾರಿತ್ರಿಕ ಪರಿಕಲ್ಪನೆ, ಬೇಡ ಬುಡಕಟ್ಟಿನ ಚಾರಿತ್ರಿಕ ಹಿನ್ನೆಲೆ, ಕನ್ನಡ ಕಾವ್ಯ ಮತ್ತು ಸಮಕಾಲೀನ ಗ್ರಂಥಗಳಲ್ಲಿ ಬೇಟೆಯ ಪ್ರಸ್ತಾಪ ಮುಂತಾದ ವಿವರಗಳ ಬಗ್ಗೆ ಹೆಚ್ಚುಮಾಹಿತಿಯನ್ನು ಒದಗಿಸಿದ್ದಾರೆ. ವಿರೂಪಾಕ್ಷಿ ಪೂಜಾರಹಳ್ಳಿಯವರು, ಕನ್ನಡ ವಿಶ್ವವಿದ್ಯಾಲಯದ ವಾಲ್ಮೀಕಿ ಅಧ್ಯಯನ ಪೀಠದ ಸಂಚಾಲಕರಾಗಿದ್ದಾಗ ಕೈಗೊಂಡ ಯೋಜನೆಗಳು ಬೇಡ ಸಮುದಾಯದ ಅಧ್ಯಯನಕ್ಕೆ ಮಹತ್ವದ ಕೊಡುಗೆಗಳಾಗಿವೆ ಕಾಮಗೇತಲರು, ತಳವಾರರು, ವಾಲ್ಮೀಕಿ ಪ್ರಾಸಸ್ಮರಣೀಯರು, ಚಿತ್ರದುರ್ಗದ ಬುಡಕಟ್ಟು ವೀರರು ಮುಂತಾದ ಕೃತಿಗಳು ಬೇಡ ಸಮುದಾಯದ ಭಿನ್ನ ಗುರುತುಗಳನ್ನು ಹುಡುಕಲು ಯತ್ನಿಸಿದೆ. ಹಾಗಾಗಿ ವಿರೂಪಾಕ್ಷ ಪೂಜಾರಹಳಿಯವರನ್ನು ಬೇಡಸಮುದಾಯದ ಅಧ್ಯಯನ ಮಾಡುವ ಸಂದರ್ಭದಲ್ಲಿ ಪರಿಗಣಿಸದೆ ಮುನ್ನಡೆಯುವಂತಿಲ್ಲ.

ಹೀಗೆ ಬೇಡ ಸಮುದಾಯದ ಕುರಿತು ಹಲವು ಅಧ್ಯಯನಗಳು ನಡೆದಿವೆ. ಇವುಗಳು ಮಾನವಶಾಸ್ತ್ರೀಯ ನೆಲೆಯ ಪರಿಚಯಾತ್ಮಕ ಮಾದರಿಯನ್ನು ಪ್ರಧಾನವಾಗಿ ನಂಬಿವೆ.

ಅಧ್ಯಯನದ ಉದ್ದೇಶ

'ಮ್ಯಾಸಬೇಡರ ಸಾಂಸ್ಕೃತಿಕ ಆತ್ಮಕಥನ' ಎನ್ನುವ ಈ ಸಂಶೋಧನೆ ಈವರೆಗಿನ ಎಲ್ಲಾ ಅಧ್ಯಯನಗಳನ್ನೂ ಗ್ರಹಿಸುತ್ತಲೇ ಅದರ ಒಳಗಿರುವ ಮಿತಿಗಳನ್ನು ಗುರುತಿಸುತ್ತ, ಇಂತಹ ಅಧ್ಯಯನದ

ಒಳಗೆ ಇರುವ ಎಚ್ಚರಗಳನ್ನು ಗ್ರಹಿಸುತ್ತಾ ಆತ್ಮಕಥನ ಮಾದರಿಯ ಹೊಸ ಸಾಧ್ಯತೆಯ ಮೂಲಕ ಮ್ಯಾಸಬೇಡರ ಸಮುದಾಯವೇ ಸಂಶೋಧನೆಯ ಭಾಗವಾಗಿ ಮಾತನಾಡುವ ಸ್ವರೂಪದಲ್ಲಿ ಈ ಅಧ್ಯಯನವನ್ನು ರೂಪಿಸಲಾಗಿದೆ.

ಮ್ಯಾಸಬೇಡರ ಸಾಂಸ್ಕೃತಿಕ ಆತ್ಮಕಥನ ಎಂದ ಕೂಡಲೇ ಇಡಿಯಾದ ಮ್ಯಾಸಬೇಡರ ಸಮುದಾಯವನ್ನು ಒಂದು ಗ್ರಹಿಕೆಯಲ್ಲಿ ನಿರ್ವಚಿಸುವುದು ಎಂದರ್ಥವಲ್ಲ. ಈ ಸಮುದಾಯದ ಒಳಗೇ ಇರುವ ಸಂಘರ್ಷಗಳನ್ನು ಗುರುತಿಸುತ್ತಲೇ ಅವರ, ಚಾರಿತ್ರಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಕಥನಗಳ ಶ್ರೇಣೀಕರಣಗಳನ್ನು ತಿಳಿಯುವುದು, ಒಂದು ಕಡೆ ಆಧುನಿಕ ಪರಿಕರಗಳನ್ನು ಬಳಸುತ್ತಲೆ, ತಮ್ಮ ಸಾಂಸ್ಕೃತಿಕ ಚಹರೆಯನ್ನು ಉಳಿಸಿಕೊಂಡ ಸಂಕೀರ್ಣತೆಯನ್ನು ತಿಳಿಯುವುದು, ಇವುಗಳ ನಡುವೆ ಇರುವ ಸಂಘರ್ಷಾತ್ಮಕ ಸಂಬಂಧ ಮತ್ತು ಇದರ ಸ್ವರೂಪವನ್ನು ಶೋಧಿಸುವುದು ಇಲ್ಲಿನ ಬಹುಮುಖ್ಯ ಅಗತ್ಯವಾಗಿದೆ.

ಮ್ಯಾಸಬೇಡರು ಸಮುದಾಯ ನಿಯಮಗಳನ್ನು ಮೀರಿದವರನ್ನು ಕುಲಗೆಟ್ಟವರು ಎಂದು ಕುಲದಿಂದ ಹೊರಗಿಡಲಾಗುತ್ತದೆ. ಇಂತಹ ಸಾಂಸ್ಕೃತಿಕ ಪರಿಮಿತಿಯಲ್ಲಿ ಬದುಕುತ್ತಾ, ಆಧುನಿಕ ಬಣ್ಣದ ಬದುಕನ್ನು ಬೆರಗುಗಣ್ಣಿನಿಂದ ನೋಡುತ್ತಾ 'ಹಟ್ಟಿ' ಎನ್ನುವ ತನ್ನ ಪುಟ್ಟಲೋಕದಲ್ಲಿ ಬದುಕುತ್ತಲೇ ಹೊರಜಗತ್ತನ್ನು ನೋಡುವ ಆತ್ಮಕಥನದ ನೆಲೆಯಲ್ಲಿ ಬೇಡ ಸಮುದಾಯವನ್ನು ನಿರ್ವಚಿಸಬೇಕಾದ ತುರ್ತು ಈ ಅಧ್ಯಯನಕ್ಕಿದೆ.

ಪ್ರಮುಖವಾದ ಅಧ್ಯಯನದ ಉದ್ದೇಶಗಳನ್ನು ಈ ಕೆಳಗಿನಂತೆ ವಿವರಿಸಬಹುದು.

೧. ವರ್ತಮಾನದಲ್ಲಿ ಈ ಬೇಡ ಸಮುದಾಯದ ಬದುಕು ಯಾವ ಬಗೆಯ ಸಾಂಸ್ಕೃತಿಕ ಸ್ವರೂಪವನ್ನು ಪಡೆದಿದೆ ಎಂದು ತಿಳಿಯುವುದು.

2. ಮ್ಯಾಸಬೇಡರು ತಮ್ಮನ್ನು ತಾವೇ ಗುರುತಿಸಿಕೊಳ್ಳುವ ಸಾಂಸ್ಕೃತಿಕ ಚಹರೆಗೂ ಅಧ್ಯಯನಕಾರರು ಗುರುತಿಸುವ ಸಾಂಸ್ಕೃತಿಕ ಚಹರೆಗೂ ಇರುವ ಭಿನ್ನತೆಯನ್ನು ಗುರುತಿಸುವ ಉದ್ದೇಶವಿದೆ..

3. ಒಂದು ಕಡೆ ರಾಜಕೀಯ ಮೀಸಲಾತಿ ಪಡೆದು, ಸಮುದಾಯವನ್ನು ಪ್ರತಿನಿಧಿಸುವ ರಾಜಕಾರಣಗಳಿದ್ದಾರೆ. ಇನ್ನೊಂದು ಕಡೆ ಸಮುದಾಯದ ರಾಜಕಾರಣಿಗಳೆ ಬೇಡ ಸಮುದಾಯದ ಅಭಿವೃದ್ಧಿಗೆ ಶ್ರಮಿಸುತ್ತಿಲ್ಲ. ಹಾಗಾಗಿ ಬೇಡರ ಆರ್ಥಿಕ, ಸಾಮಾಜಿಕ ಸ್ಥಿತಿ-ಗತಿಗಳು ಹಾಗೇ ಉಳಿದಿದೆ. ಇದರ ಸ್ವರೂಪವನ್ನು ತಿಳಿಯುವುದು ಈ ಅಧ್ಯಯನದ ಉದ್ದೇಶವಾಗಿದೆ.

4. ಬೇಡ ಸಮುದಾಯವನ್ನು ಪ್ರತಿನಿಧಿಸುವ 'ಸ್ವಾಮೀಜಿ' ಇದ್ದಾರೆ. ಮಠವಿದೆ, ಇದರ ಹಿನ್ನೆಲೆಯಲ್ಲಿ ಬೇಡ ಸಮುದಾಯ ಹೊಸ ಬಗೆಯ ಅನನ್ಯತೆಯನ್ನು ಕಟ್ಟಿಕೊಳ್ಳುತ್ತಿದೆಯೇ? ಇದರ ಸ್ವರೂಪವನ್ನು ಅರ್ಥಮಾಡಿಕೊಳ್ಳುವುದು ಈ ಅಧ್ಯಯನದ ಉದ್ದೇಶವಾಗಿದೆ.

5. ಒಂದು ಸಮುದಾಯ ಏಕಕಾಲದಲ್ಲಿ ಹಲವು ಸಮುದಾಯಗಳ ಜೊತೆ ತನ್ನ ಸಾಂಸ್ಕೃತಿಕ ಸಂಬಂಧಗಳನ್ನು ಇಟ್ಟುಕೊಂಡಿರುತ್ತದೆ. ಹಾಗಾಗಿ ಮ್ಯಾಸಬೇಡರ ಸಮುದಾಯವನ್ನು ಅಧ್ಯಯನ ಮಾಡುವಾಗ ಇತರೆ ಸಮುದಾಯಗಳೊಂದಿಗೆ ಇರಿಸಿಕೊಂಡ ಸಂಬಂಧದ ನೆಲೆಯಲ್ಲಿ 'ಅಲಕ್ಷಿತ ಸಮುದಾಯಗಳು' ಎನ್ನುವ ಒಟ್ಟಂದದಲ್ಲಿ ಮ್ಯಾಸ ಬೇಡರನ್ನು ಗುರುತಿಸಲಾಗಿದೆ. ಹಾಗಾಗಿ ಇಲ್ಲಿ ಸಮುದಾಯ ನಿಷ್ಠತೆಯನ್ನು ಮೀರುವ ಉದ್ದೇಶವಿದೆ.

6. ತಳ ಸಮುದಾಯಗಳ ನಡುವೆಯೇ ಕೋಮುಗಲಭೆಗಳು ಜರುಗುತ್ತಿವೆ. ಬಲ ಪಂಥೀಯರು ಬೇಡಸಮುದಾಯವನ್ನು ಆಯುಧದಂತೆ ಬಳಸಿಕೊಳ್ಳುತ್ತಾರೆ. ಆರ್.ಎಸ್.ಎಸ್ ಬಜರಂಗ ದಳದಂತ ಧಾರ್ಮಿಕ ಮೂಲಭೂತವಾದಿ ಸಂಘಟನೆಯಲ್ಲಿ ಬೇಡರು ಕಾಣಿಸಿಕೊಳ್ಳುತ್ತಿದ್ದಾರೆ. ಇದಕ್ಕೆ ಕಾರಣವೇನು? ಎಂಬ ಹುಡುಕಾಟ ಈ ಅಧ್ಯಯನದ ಉದ್ದೇಶಗಳಲ್ಲೊಂದಾಗಿದೆ.

೭. ಬೇಡರ ಒಳಗೆಯೇ ಊರು ಬೇಡರು ಮತ್ತು ಮ್ಯಾಸಬೇಡರು ಎಂಬ ಎರಡು ಪಂಗಡಗಳು ಪ್ರಬಲವಾಗಿ ಬೆಳೆಯುತ್ತಿವೆ. ಮತ್ತು ನನ್ನ ಕ್ಷೇತ್ರಕಾರ್ಯದ ಅನುಭವದ ಹಿನ್ನೆಲೆಯಲ್ಲಿ. ಮ್ಯಾಸಬೇಡರ ಜೀವನ ಪದ್ಧತಿಗಿಂತ ಊರು ಬೇಡರ ಜೀವನ ಪದ್ಧತಿಯೇ ಉತ್ತಮ ಸ್ಥಿತಿಯಲ್ಲಿರುವುದು ಕಂಡುಬರುತ್ತಿದೆ. ಹಾಗಾಗಿ ಇವರ ಶೈಕ್ಷಣಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ, ಅಂಶಗಳನ್ನು ಪ್ರಮುಖವಾಗಿಟ್ಟುಕೊಂಡು ತೌಲನಿಕವಾಗಿ ಚರ್ಚಿಸುವುದು ನನ್ನ ಅಧ್ಯಯನ ಉದ್ದೇಶಗಳಲ್ಲೊಂದಾಗಿದೆ.

೮. ಬೇಡಸಮುದಾಯಲ್ಲಿ ಹೊಸ ಬಗೆಯ ಶ್ರೇಣೀಕರಣ ಹುಟ್ಟುತ್ತಿದೆ, ಇಲ್ಲಿ ನೌಕರಶಾಹಿ ಬೇಡರು, ಕೃಷಿಕ ಬೇಡರನ್ನು ಅಸ್ಪೃಶ್ಯರನ್ನಾಗಿ ಕಾಣುತ್ತಿದ್ದಾರೆ. ಹೀಗೆ ಈ ಸಮುದಾಯದ ಒಳಗೇ ಇರಬಹುದಾದ ವರ್ಗಶ್ರೇಣೀಕರಣದ ಸ್ವರೂಪವನ್ನು ತಿಳಿಯುವುದು ಈ ಅಧ್ಯಯನದ ಉದ್ದೇಶವಾಗಿದೆ.

೯. ಆರ್ಥಿಕವಾಗಿ ಹಲವು ಸ್ಥಿತ್ಯಂತರಗಳು ಸಮುದಾಯದ ನಂಬಿಕೆಗಳನ್ನು ಪಲ್ಲಟಗೊಳಿಸಿವೆ. ಈ ಬಗೆಯ ಪಲ್ಲಟದ ಸಂದರ್ಭದಲ್ಲಿ ಬೇಡ ಸಮುದಾಯ ಕಂಡುಕೊಳ್ಳುತ್ತಿರುವ ಪರ್ಯಾಯದ ಸ್ವರೂಪವನ್ನು ಗುರುತಿಸುವುದು.

೧೦. ಬೇಡ ಸಮುದಾಯ ಸಂಸ್ಕೃತೀಕರಣಕ್ಕೆ ಒಳಗಾಗುತ್ತಿದೆ. ಈ ಸಮುದಾಯದ ಮೇಲ್ವರ್ಗದವರು, ಮೇಲ್ಜಾತಿಯನ್ನು ಅನುಕರಿಸುತ್ತಿದ್ದಾರೆ. ಈ ಬಗೆಯ ಸಂಸ್ಕೃತೀಕರಣದ ಸೂಕ್ಷ್ಮತೆಯನ್ನು ಗುರುತಿಸುವುದು. ಅಧ್ಯಯನದ ಉದ್ದೇಶವಾಗಿದೆ.

ವ್ಯಾಪ್ತಿ

ಪ್ರತಿಯೊಂದು ಅಧ್ಯಯನವೂ ತನ್ನ ವ್ಯಾಪ್ತಿಯನ್ನು ಮೊದಲೇ ಗುರುತಿಸಿಕೊಳ್ಳಬೇಕಾಗುತ್ತದೆ. ಇದರಿಂದ ಪೂರ್ಣಪ್ರಮಾಣದ ಅಧ್ಯಯನ ಕೈಗೊಳ್ಳಲು ಸಾಧ್ಯವಾಗುತ್ತದೆ. ಅಧ್ಯಯನದ ವಸ್ತು ವಿಷಯಕ್ಕೆ

ಇರುವ ಮಹತ್ವದ ಹಿನ್ನೆಲೆಯಲ್ಲಿ ಅದರ ವ್ಯಾಪ್ತಿಯನ್ನು ಗುರುತಿಸಿಕೊಳ್ಳಬೇಕಾಗುತ್ತದೆ. ಈ ಕಾರಣದಿಂದಾಗಿ ಅಧ್ಯಯನದ ಅನುಕೂಲಕ್ಕೆ ಒಂದು ಭೌಗೋಳಿಕ ಚೌಕಟ್ಟನ್ನು ನಿರ್ಮಿಸಿಕೊಂಡು ಪರಿಪೂರ್ಣ ಮತ್ತು ಸಮಗ್ರ ಅಧ್ಯಯನ ಕೈಗೊಳ್ಳಬೇಕೆಂಬ ದೃಷ್ಟಿಯಿಂದ ಚಿತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆಯಲ್ಲಿ ನೆಲೆಸಿರುವ ಮ್ಯಾಸಬೇಡರನ್ನು ಈ ಅಧ್ಯಯನ ವ್ಯಾಪ್ತಿಗೆ ಆಯ್ಕೆ ಮಾಡಿಕೊಳ್ಳಲಾಗಿದೆ. ಭೌಗೋಳಿಕ ವ್ಯಾಪ್ತಿ ಆಯ್ಕೆ ಮಾಡಿಕೊಳ್ಳಲು ಕಾರಣ ಮ್ಯಾಸಬೇಡರ ಮೂಲ ಸಂಸ್ಕೃತಿ ಎಂದ ಕೂಡಲೆ ಪ್ರತಿಯೊಬ್ಬರ ಕಣ್ಣೆದುರಿಗೆ ಚಿತ್ರಮೂಡುವುದು ಚಿತ್ರದುರ್ಗ ಜಿಲ್ಲೆ ನಂತರ ಬಳ್ಳಾರಿ ಜಿಲ್ಲೆ. ಇಡೀ ಮ್ಯಾಸಮಂಡಲದ ಮೂಲ ಈ ಪ್ರದೇಶ ಎಂದು ಗುರುತಿಸುತ್ತಾರೆ. ಹಾಗಾಗಿಯೇ, ಈ ಕ್ಷೇತ್ರವನ್ನು ನಾನು ಆಯ್ಕೆ ಮಾಡಿಕೊಂಡಿದ್ದೇನೆ. ಈತನಕ ನಡೆದ ಅಧ್ಯಯನಗಳಲ್ಲಿ ಸಿಗುವ ಆತ್ಮಕಥನದ ಭಾಗಗಳನ್ನು ಬಳಸಿಕೊಳ್ಳುವುದು, ಈ ಅಧ್ಯಯನಕಾರರೆ ಸಂಗ್ರಹಿಸಿದ ಆತ್ಮಕಥನದ ಭಾಗಗಳನ್ನು ಒಳಗೊಳ್ಳುವುದು, ಈ ಅಧ್ಯಯನದ ವ್ಯಾಪ್ತಿ.

ಅಧ್ಯಯನದ ವಿಧಾನ

ಈ ಅಧ್ಯಯನವು ಮುಖ್ಯವಾಗಿ ಕ್ಷೇತ್ರಕಾರ್ಯವನ್ನು ಆಧರಿಸಿದೆ ಹಾಗಾಗಿ ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ ಆತ್ಮಕಥನಕದ ಭಾಗಗಳನ್ನು ದೀರ್ಘವಾಗಿ ಉಲ್ಲೇಖಿಸಿ ಆ ಮೂಲಕ ಸಮುದಾಯವೊಂದರ ಅಂತರ್ಯದ ವೈರುದ್ಯಗಳನ್ನು, ಅದರೆಲ್ಲಾ ಆಯಾಮಗಳೊಂದಿಗೆ ಗ್ರಹಿಸುವುದು ಈ ಅಧ್ಯಯನದ ಮುಖ್ಯತಿರುಳು. ಹಾಗಾಗಿ ಈ ಅಧ್ಯಯನ ಆತ್ಮಕಥಾನಕ ಮಾದರಿಯನ್ನು ಒಳಗೊಂಡಿದೆ. ಇಲ್ಲಿ ಸಂಶೋಧಕನಿಗಿಂತ ಸಂಶೋಧನೆಗೆ ಒಳಗಾಗುವ ಸಮುದಾಯವೇ ಸಂಶೋಧನೆಯಲ್ಲಿ ಮಾತನಾಡುತ್ತಾ ಹೋಗುತ್ತಾರೆ. ಹೀಗೆ ಸಂಶೋಧಕ ಗೈರುಹಾಜರಾಗುವ, ಸಮುದಾಯದ ಜನರೇ ಹಾಜರಾಗುವ ವಿಧಾನ ಈ ಅಧ್ಯಯನದ್ದು.

ಈ ಬಗೆಯ ಅಧ್ಯಯನಗಳು ನಡೆದಿರುವುದು ವಿರಳ ಹಾಗಾಗಿ ಈ ಅಧ್ಯಯನ ಮಾಡುತ್ತಲೇ. ಅಧ್ಯಯನ ವಿಧಾನವೊಂದನ್ನು ರೂಪಿಸಿಕೊಳ್ಳುವುದು ಸಂಶೋಧಕನ ಅಗತ್ಯ. ಅಂತಹ ತಿಳುವಳಿಕೆಯ ಹಿನ್ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ. ಈ ಅಧ್ಯಯನ ವಿಧಾನವು ಮುಖ್ಯವಾಗಿ ಮೊಗಳ್ಳಿ ಗಣೇಶ್ ಅವರು ಪ್ರತಿಪಾದಿಸುವ ದೇಸಿ ಸಂಶೋಧನ ವಿಧಾನವನ್ನು ಹೋಲುತ್ತದೆ. ಅಂದರೆ ಸಮುದಾಯದ ಅಂತರ್ಯದ ತುಡಿತಗಳು ದಾಖಲಾಗುತ್ತಲೇ, ಸಮುದಾಯವೊಂದರ ಸಮಗ್ರದರ್ಶನವೊಂದು ಆಗುತ್ತೆ.

ಪ್ರಸ್ತುತ ಮ್ಯಾಸಬೇಡರ ಬಗ್ಗೆ ಅಧ್ಯಯನಗಳು ನಡೆದಿವೆ. ಆದರೆ ಮ್ಯಾಸಬೇಡರ ಸಾಂಸ್ಕೃತಿಕ ಆತ್ಮಕಥನದ ಬಗ್ಗೆ ಪ್ರತ್ಯೇಕವಾಗಿ ಅಧ್ಯಯನಗಳು ಬರಲಿಲ್ಲ. ಆ ಕಾರಣಕ್ಕಾಗಿ ನಾನು ದೇಶಿ ಸಂಶೋಧನಾ ವಿಧಾನದ ಮೂಲಕ ಮ್ಯಾಸಬೇಡರ ಸಾಂಸ್ಕೃತಿಕ ಆತ್ಮಕಥನವನ್ನು ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ. ಸಾಂಸ್ಕೃತಿಕ ಆತ್ಮಕಥನದ ಪರಿಕಲ್ಪನೆಯನ್ನು ಮೊದಲು ಮೊಗಳ್ಳಿ ಗಣೇಶ್ ಅವರು 'ದೇಶಿ ಸಂಶೋಧನಾ ವಿಧಾನದ' ಮೂಲಕ ಕಟ್ಟಿಕೊಟ್ಟಿದ್ದಾರೆ. ಅವರ ಈ ಅಧ್ಯಯನದ ವಿಧಾನವನ್ನೇ ಇಲ್ಲಿ ಅನುಸರಿಸಲಾಗಿದೆ.

ಅವರ ಪ್ರಕಾರ ದೇಶಿ ಎಂದರೆ: ತನ್ನ ಅಸ್ತಿತ್ವವನ್ನು ಪುನರ್ ಸೃಷ್ಟಿಸಿಕೊಳ್ಳುವ ಕಥನ ಗತಕಾಲವನ್ನು ವರ್ತಮಾನದ ಜೊತೆ ಅನುಸಂಧಾನ ಮಾಡುವ ಸೃಜನಶೀಲ ಅಭಿವ್ಯಕ್ತಿ. ಆಧುನಿಕೋತ್ತರ ಜಗತ್ತಿಗೆ ಮುಖಾಮುಖಿಯಾಗುವುದಕ್ಕೆ ನಾವು ಪುನರ್‌ಧ್ಯಾನಿಸುವ ಬೌದ್ಧಿಕ ನಿರೂಪಣೆ. ಇಂತಹ ಅರ್ಥಗಳು ಸಂಶೋಧಕರ ನೆಲೆಯವು. ಜನಪದರ ನೆಲೆಯಲ್ಲಿ ದೇಶಿಯು ಎಂದರೆ ಪೂರ್ವಿಕರು ಹಾಕಿಕೊಟ್ಟ ಮಾರ್ಗ ಎಂದು ಹೇಳಿದ್ದಾರೆ. ತನ್ನ ಸ್ಥಳೀಯ ಅಸ್ತಿತ್ವವನ್ನು ಆಧುನಿಕ ಜಗತ್ತಿನ ಜೊತೆ ಪುನರ್ ಅನುಸಂಧಾನಿಸಿ ವರ್ತಮಾನವನ್ನು ಸುಭದ್ರಗೊಳಿಸುವುದೇ ಪ್ರಮುಖ ಆಶಯ ಮತ್ತು ಬೌದ್ಧಿಕವಾದ ಕಥನಗಳಿಂದ ಗತಕಾಲದ ಮೌಖಿಕ ಪರಂಪರೆಯನ್ನು ವರ್ತಮಾನಕ್ಕೆ ತಂದುಕೊಳ್ಳುವುದು.

ದೇಶಿ ಸಂಶೋಧನೆಯ ತಾತ್ವಿಕತೆ ಸತ್ಯಸಂಶೋಧನೆಯ ಗುರಿಯಲ್ಲ. ಅದು ಅಸ್ತಿತ್ವದ ದಾರಿಯನ್ನು ಹೊಸ ಜಗತ್ತಿನ ಜೊತೆ ಕಂಡುಕೊಳ್ಳಬಹುದಾಗಿದ್ದು, ತನ್ನ ಗತಕಾಲದ ವಿವೇಕದಿಂದ ವರ್ತಮಾನವನ್ನು ಪರಿಶೀಲಿಸುತ್ತದೆ. ಅಂದರೆ ಗತಕಾಲದಿಂದ ಪ್ರಯಾಣಬೆಳೆಸಿ ವರ್ತಮಾನಕ್ಕೆ ಬರುವುದೇ ಈ ದೇಶಿ ಸಂಶೋಧನೆ ಕ್ರಮ. ಇಂತಹ ವಿಧಾನದ ಮೂಲಕ ಮುಖ್ಯವಾಗಿ ಸಂಶೋಧಕನು ಮಾತನಾಡದೆ ಸಮುದಾಯವೇ ಸಂಶೋಧನೆಯಲ್ಲಿ ಮಾತನಾಡುತ್ತಿದೆ. ಲಿಖಿತ ಆಕರಗಳ ಉಲ್ಲೇಖಗಳಿಗಿಂತ ಬೇಡ ಸಮುದಾಯದವರ ನೇರ ಮಾತಿನ ಉಲ್ಲೇಖಗಳು ಈ ಸಂಶೋಧನೆಯ ಮುಖ್ಯ ಕೇಂದ್ರವಾಗಿದೆ.

ಸಮುದಾಯದ ನಿರೂಪಣೆಗಳನ್ನು ಗಮನದಲ್ಲಿರಿಸಿಕೊಂಡು ವರ್ತಮಾನದ ಸಂಗತಿಗಳ ಜೊತೆಗಿಟ್ಟು ಒಂದು ಸಮುದಾಯದ ವಾಸ್ತವ ಬದುಕನ್ನು ಕಟ್ಟಿಕೊಡುವುದು ಅಥವಾ ಶೋಧಿಸುವುದು ಈ ಸಂಶೋಧಕನ ಅಧ್ಯಯನ ವಿಧಾನವಾಗಿದೆ. ಈ ಅಧ್ಯಯನದಲ್ಲಿ ಮಾತಿನ ಪರಂಪರೆಗೆ ಹೆಚ್ಚು ಪ್ರಾಮುಖ್ಯತೆಯಿದ್ದು ಅಥವಾ ಪ್ರಾಥಮಿಕ ಆಕರವೆಂದು ಭಾವಿಸಿ ಈ ಸಮುದಾಯವನ್ನು ಕುರಿತ ಅಧ್ಯಯನಗಳನ್ನು ಪೂರಕ ಆಕರಗಳೆಂದು ಬಳಸಿಕೊಳ್ಳಲಾಗುತ್ತದೆ.

ತಳಸಮುದಾಯಗಳ ಆತ್ಮಕಥನಗಳ ನಿರೂಪಣೆ ಎಷ್ಟು ಮುಖ್ಯವೋ ಅಷ್ಟೇ ಕೂಡ ಮೌಖಿಕ ಪರಂಪರೆಯು ಮುಖ್ಯವಾಗಿರುತ್ತದೆ. ಆತ್ಮಕಥನಗಳ ನಿರೂಪಣೆ ಹೇಗೆ ಹುಟ್ಟಿಕೊಂಡಿತು? ಯಾವ ಬಗೆಯಲ್ಲಿ ಹುಟ್ಟಿಕೊಂಡವು? ಅವು ಮೌಖಿಕ ಪರಂಪರೆಗೆ ಹೇಗೆ ಸಂಬಂಧ ಪಟ್ಟವು? ನಮ್ಮ ಸಮುದಾಯಗಳಿಗೆ ಹೇಗೆ ಸಂಬಂಧಟ್ಟಿವೆ ಎಂಬುದನ್ನು ವಿಶ್ಲೇಷಿಸುತ್ತದೆ.

ಆತ್ಮಕಥೆಯ ಸ್ವರೂಪವೇ ಬೇರೆ ಮೇಲ್‌ನೋಟಕ್ಕೆ ಸೀಮಿತ ಯಾವುದೇ ಸಮಾಜದ ವ್ಯಕ್ತಿಯ ಜೀವಿತ ಗತಕಾಲವನ್ನು ಅನುಸರಿಸಿಕೊಂಡ ಒಂದು ಕಥೆ ಎಂದು ಅನ್ನಿಸಬಹುದು. ವ್ಯಕ್ತಿಯ ಜೀವನ ಸಣ್ಣ ಕೌಟುಂಬಿಕೆಯ ಜೀವನವನ್ನು ವಿಸ್ತರಿಸುವ ಸ್ವರೂಪವೇ ಹೊರತು ಅವುಗಳಾಚೆಯ ಸ್ವರೂಪ ಅಲ್ಲ. ಆದರೆ ಆತ್ಮ ಕಥೆಯ ಒಂದು ಸಮುದಾಯದ ಅಂತರಾಳದಲ್ಲಿರುತ್ತದೆ. ಆತ್ಮಕಥೆಗಳನ್ನು ಚರಿತ್ರೆ ಕಟ್ಟಲಿಕ್ಕೆ ಬಳಸುತ್ತಾರೆ. ಉದಾಹರಣೆ ಲಕ್ಷ್ಮಣಗಾಯಕ್ವಾಡರವರ 'ಉಚಲ್ಯ,' ಸಿದ್ದಲಿಂಗಯ್ಯನವರ

'ಊರುಕೇರಿ,' ಅದೇ ರೀತಿ ಗಾಂಧೀಜಿಯವರ ಆತ್ಮಕಥನ ಮುಂತಾದವು ಯಾವ ಯಾವ ಮಾದರಿ ಹೇಗೆ ಹುಟ್ಟಿಕೊಂಡಿದೆ ಎಂಬುದನ್ನು ತಿಳಿಸುತ್ತದೆ.

ಮೌಖಿಕ ಪರಂಪರೆ ತನ್ನ ಸಮುದಾಯದ ಸಾಂಸ್ಕೃತಿಕವಾದ ಆತ್ಮಕಥನವೇ ಬೇರೆ ಇದೆ. ಆತ್ಮಕಥನ ದಲಿತರ ಅನುಭವವನ್ನು ಹೇಳಿಕೊಳ್ಳಕ್ಕೆ ಅಗೌರವ ಏತಕ್ಕೆ? ಹೇಗೆ? ಯಾವ ಪರಿಭಾಷೆಯಲ್ಲಿ ನಿರ್ಮಿತವಾಗಿರಬಹುದು ಅನ್ನಿಸುತ್ತದೆ. ಈ ಬಗೆಯ ಸಾಹಿತ್ಯದ ಚೌಕಟ್ಟನ್ನು ಮೀರಿ ಒಂದು ಸಾಂಸ್ಕೃತಿಕ ನಿರೂಪಣೆಯಾಗಿ "ಮ್ಯಾಸಬೇಡರು" ಅವರು ಜೀವಂತವಾಗಿ ರೂಪಿಸಿಕೊಂಡಿರುವ ಸಮುದಾಯದ ಜೀವನ ಪದ್ಧತಿಯೇ ಆತ್ಮಕಥನ. ಹೀಗೆ ಇಷ್ಟೆಲ್ಲಾ ಪ್ರಮಾಣದಲ್ಲಿ ಸಾಂಸ್ಕೃತಿಕ ಆತ್ಮಕಥನ ಪ್ರವೇಶವಿದೆ. ಇದು ಕೇವಲ ಸಾಹಿತ್ಯಕ್ಕೆ ಮಾತ್ರ ಪರಿಭಾವಿಸಿಕೊಂಡ ನಿರೂಪಣೆಯಲ್ಲ. ಆದರೆ ಮೌಖಿಕ ಪರಂಪರೆಯಲ್ಲಿ ಸಾಂಸ್ಕೃತಿಕವಾದ ಆತ್ಮಕಥನವನ್ನು ಸ್ಥಾಪಿಸಿಕೊಳ್ಳುವಾಗ ಅವು ತನ್ನ ಅಸ್ತಿತ್ವಕ್ಕಾಗಿ ಬೇರೆ ರೀತಿಯಲ್ಲಿ ಸ್ಥಾಪಿಸಿಕೊಂಡಿದೆ. ಅಖಂಡವಾದ ಭಾರತೀಯ ಸಮಾಜದ ಒಳಗೆ ಇವರಿಗಿರುವ ಸಣ್ಣ ಚೌಕಟ್ಟು ಯಾವುದು? ಅದರಲ್ಲಿ ಛಿದ್ರಗೊಂಡ ಇಂತಹ ತಳಸಮುದಾಯದ ಮ್ಯಾಸಬೇಡರ ಚೌಕಟ್ಟು ಯಾವುದು? ಪ್ರತಿಬಿಂಬಿತವಾಗಿರುವ ಇವರ ಚಿತ್ರಣ ಯಾವುದು. ವರ್ತಮಾನದೊಂದಿಗೆ ಹೇಗೆ ಹೊಂದಾಣಿಕೆ ಮಾಡಿಕೊಂಡು ಹೋಗುತ್ತದೆ ಎಂಬುದನ್ನು ತಿಳಿಸುವ ಪ್ರಯತ್ನವಾಗಿದೆ. ಆದ್ದರಿಂದ ಇಲ್ಲಿ ಮ್ಯಾಸಬೇಡರ ಸಾಂಸ್ಕೃತಿಕ ಆತ್ಮಕಥನ ಎನ್ನುವ ಸಂಶೋಧನಾ ಶೀರ್ಷಿಕೆಯನ್ನಿಟ್ಟುಕೊಂಡು ನನ್ನ ಅಧ್ಯಯನವನ್ನು ಕೈಗೊಳ್ಳಲು ಪ್ರಯತ್ನಿಸಲಾಗಿದೆ. ಈ ಸಂಶೋಧಕ ಈ ಸಮುದಾಯದವನಾಗಿದ್ದರೂ ಸಹ ಈ ಸಮುದಾಯದ ಹೊರಗಿನವರಾಗಿಯೇ ಈ ಸಂಶೋಧನೆ ಕೈಗೊಳ್ಳಲು ಪ್ರಯತ್ನಿಸಲಾಗಿದೆ.

ಅಧ್ಯಯನದ ಸ್ವರೂಪ

'ಮ್ಯಾಸಬೇಡರ ಸಾಂಸ್ಕೃತಿಕ ಆತ್ಮಕಥನ' ಎನ್ನುವ ಪರಿವಿಡಿಗೆ ಸಂಬಂಧಿಸಿದಂತೆ ಒಂಬತ್ತು ಅಧ್ಯಾಯನಗಳಲ್ಲಿ ವಿಷಯವನ್ನು ವರ್ಗೀಕರಿಸಲಾಗಿದೆ. ಇದರಲ್ಲಿ ಮೊದಲನೆಯದಾಗಿ ಈ ವಿಷಯಕ್ಕೆ ಹೇಗೆ ಪ್ರವೇಶಿಸಬೇಕು ಈ ತರಹದ ಅಧ್ಯಯನಗಳ ಸ್ವರೂಪ ಎಂಥಹದು ಎಂಬುದನ್ನು ಹೇಳಲಾಗಿದೆ. ನಂತರ ಅಧ್ಯಯನದ ಉದ್ದೇಶಗಳನ್ನು ವ್ಯಾಪ್ತಿ ವಿಧಾನವನ್ನು ಹೇಳಲಾಗಿದೆ.

ಎರಡನೆಯ ಅಧ್ಯಾಯನದಲ್ಲಿ 'ಮ್ಯಾಸಬೇಡರ ಆತ್ಮಕಥನದ ತಾತ್ವಿಕ ನೆಲೆ' ಸಮುದಾಯದ ಆತ್ಮಕಥನವನ್ನು ಹೇಗೆ ನಿರ್ವಚಿಸಿಕೊಳ್ಳಲಾಗಿದೆ. ಒಂದು ಸಮುದಾಯವೇ ತನ್ನ ಕಥನವನ್ನು ಹೇಳುವ ನೆಲೆಯಲ್ಲಿ ಸಂಶೋಧಕರು ಗೈರುಹಾಜರಾಗುವ ಮಾದರಿ ಅಥವಾ ಸಮುದಾಯವೇ ಎನ್ನುವ ಚರ್ಚೆಯಿದೆ. ಆತ್ಮಕಥನವನ್ನು ಕಟ್ಟಿಕೊಡುವ ಪ್ರಯತ್ನದ ಮೂಲಕ ಸಂಶೋಧನೆಯ ಭಿನ್ನ ಅರ್ಥವನ್ನು ವಿವರಿಸಿದೆ. ವ್ಯಕ್ತಿಗತ ಆತ್ಮಕಥನಕ್ಕಿಂತ ಸಮುದಾಯದ ಆತ್ಮಕಥನ ಹೇಗೆ ಸಾಂಸ್ಕೃತಿಕ ಸಂದರ್ಭದಲ್ಲಿ ಭಿನ್ನವಾಗುತ್ತದೆ ಎನ್ನುವ ಚರ್ಚೆ ಇಲ್ಲಿದೆ. ಸಮುದಾಯದ ಆತ್ಮಕಥನದ ಸ್ವರೂಪ ಹೇಗಿದೆ? ಎಂಬುದನ್ನು ವಿಶ್ಲೇಷಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಮ್ಯಾಸಬೇಡರ ಚಾರಿತ್ರಿಕ ಕಥನದ ಕುರಿತು ಚರ್ಚಿಸಿದೆ. ಇದರಲ್ಲಿ ಜಗತ್ತಿನಲ್ಲಿ ಇಂದು ಪ್ರತಿಯೊಂದು ಸಮುದಾಯವು ಜ್ಞಾನ ಮತ್ತು ಅರಿವಿನ ಪ್ರಭಾವದಿಂದ ತಮ್ಮ ಪ್ರಾಚೀನ ಪರಂಪರೆ ಮತ್ತು ಸಂಸ್ಕೃತಿಯನ್ನು ಚರಿತ್ರೆಯಲ್ಲಿ ನೋಡಿಕೊಳ್ಳುತ್ತಿರುವುದು ಸಹಜ. ಆದರೆ ಚರಿತ್ರೆಯಲ್ಲಿ ದಾಖಲಾಗದವರು ತಮ್ಮ ಮೂಲವನ್ನು ನೋಡಿಕೊಳ್ಳುವಲ್ಲಿ ವಿಫಲರಾದರು. ಅವಮಾನಿತರಾದರು. ಇಂತಹ ಅವಮಾನಕ್ಕೀಡಾದ ಸಮುದಾಯಗಳು ಇವತ್ತು ಚರಿತ್ರೆಯಲ್ಲಿ ಎಲ್ಲಿಂದ ಎಲ್ಲಿಯವರೆಗೆ ದಾಖಲಾಗಿವೆ. ಮತ್ತು ಯಾವ ಯಾವ ವೃತ್ತಿಗಳಲ್ಲಿ ತೊಡಗಿಸಿಕೊಂಡು ತಮ್ಮ ಅಸ್ತಿತ್ವವನ್ನು ಸ್ಥಾಪಿಸಿಕೊಂಡರು ಎಂಬುದನ್ನು ಚರ್ಚಿಸುತ್ತ, ಕರ್ನಾಟಕದಲ್ಲಿ ಇವತ್ತು ಯಾವ ಯಾವ ಜಿಲ್ಲೆಗಳಲ್ಲಿ ಇವರು ನೆಲೆಸಿದ್ದಾರೆ ಎಂಬುದನ್ನು ತಿಳಿಸುತ್ತ, ಪ್ರಸ್ತುತ ಸಂದರ್ಭದಲ್ಲಿ ಯಾವ ಸ್ಥಿತಿಯಲ್ಲಿದ್ದಾರೆ ಎಂಬುದನ್ನು ಚರ್ಚಿಸಲಾಗುತ್ತದೆ. ಅಧ್ಯಯನಗಳು ಗ್ರಹಿಸುವ ಚಾರಿತ್ರಿಕ ಪ್ರಜ್ಞೆಗೂ, ಜನಸಮುದಾಯವೆ ಗ್ರಹಿಸುವ ಚಾರಿತ್ರಿಕ ಪ್ರಜ್ಞೆಗೂ ಇರುವ ಅಂತರವನ್ನು ಈ ಅಧ್ಯಾಯದಲ್ಲಿ ಗುರುತಿಸಲು ಪ್ರಯತ್ನಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಮ್ಯಾಸಬೇಡರ ಸಾಂಸ್ಕೃತಿಕ ಕಥನವನ್ನು ನಿರೂಪಿಸಲಾಗಿದೆ. ಸಾಂಸ್ಕೃತಿಕ ಶ್ರೀಮಂತಿಕೆಯ ವಿಷಯದಲ್ಲಿ ಕರ್ನಾಟಕದ ಅನೇಕ ಸಮುದಾಯಗಳು ಮುಂಚೂಣಿಯಲ್ಲಿವೆ. ಅಂತಹ ಸಮುದಾಯಗಳಲ್ಲಿ ಮ್ಯಾಸಬೇಡರು ಪ್ರಮುಖರು. ಹಾಗೆ ಇವರ ಸಾಂಸ್ಕೃತಿಕ ಹಬ್ಬಗಳು, ಆಚರಣೆಗಳು, ಸಾಂಸ್ಕೃತಿಕ ನಾಯಕರು ಅವರು ಸಮುದಾಯಕ್ಕೆ ಸಲ್ಲಿಸಿರುವ ಕೊಡುಗೆ ಅವರ ಪವಾಡಗಳು ಮುಂತಾದವುಗಳ ಬಗ್ಗೆ ಬೇಡರದೆ ಅನುಭವಗಳನ್ನು ದಾಖಲಿಸಿದೆ. ಪ್ರಸ್ತುತ ಸಂದರ್ಭದಲ್ಲಿ ಮ್ಯಾಸಬೇಡರ ಜನರು ಹೊರ ದೈವಗಳ ಆಕರ್ಷಣೆಯಲ್ಲ ದೈವಗಳಲ್ಲಿ ನಂಬಿಕೆಯನ್ನು ಕಳೆದುಕೊಂಡ ಬಗೆಯನ್ನು ಚರ್ಚಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ 'ಮ್ಯಾಸಬೇಡರ ಸಮುದಾಯದ ಸಾಮಾಜಿಕ ಕಥವನ್ನು ನಿರೂಪಿಸಲಾಗಿದೆ. ಇದರಲ್ಲಿ ಸಮಾಜದಲ್ಲಿ ಇವರ ಸ್ಥಾನಮಾನ, ಕುಟುಂಬ ಪದ್ಧತಿ, ವಿಭಕ್ತ ಮತ್ತು ಅವಿಭಕ್ತ ಕುಟುಂಬ ಪದ್ಧತಿಯ ಅವನತಿ ಮತ್ತು ವಿಭಕ್ತ ಕುಟುಂಬದ ಉಗಮದ ಬಗ್ಗೆ ಚರ್ಚಿಸುತ್ತ ಆಧುನಿಕ ಸಂದರ್ಭದಲ್ಲಿ ಅವರ ಉಡುಗೆ-ತೊಡುಗೆಗೆ ಕೊಡುವ ಮಹತ್ವ ಮತ್ತು ಯುವಕರು ಇವತ್ತಿನ ಸಂದರ್ಭದಲ್ಲಿ ಹಳೆಯದರ ನಿರಾಕರಣೆ ಹೊಸ ದರ ಸ್ವೀಕರಣೆ, ಇಂಗ್ಲಿಷ್ ಮೆಡಿಷನ್ ಪ್ರಭಾವದಿಂದ ಜಾನಪದ ವೈದ್ಯದ ಸಧ್ಯದ ಸ್ಥಿತಿ-ಗತಿ. ಹಾಗೆ ಆಹಾರ ಪದ್ಧತಿ, ಪಾರಂಪರಿಕವಾಗಿ ರೂಢಿಸಿಕೊಂಡು ಬಂದಿರುವ ನಂಬಿಕೆಗಳು ಮತ್ತು ಅವುಗಳ ಸ್ಥಿತಿ-ಗತಿ ಹಾಗೆ ಕಟ್ಟೆಮನೆ, ನ್ಯಾಯಪದ್ಧತಿ ಆಧುನಿಕ ಸಂದರ್ಭದಲ್ಲಿ ಅರಕ್ಷಕಠಾಣೆಗಳಿದ್ದರೂ ಸಹ ತಮ್ಮ ಕಟ್ಟೆಮನೆಗಳ ನ್ಯಾಯಪಂಚಾಯ್ತಿಗೆ ಕೊಡುವ ಸ್ಥಾನಮಾನದ ಬಗ್ಗೆ ವಿಶ್ಲೇಷಿಸುತ್ತ ಸಮುದಾಯದ ವಕ್ತೃಗಳ ನೇರ ಸಂದರ್ಶನವನ್ನು ದಾಖಲಿಸಿದ್ದೇನೆ.

ಆರನೆಯ ಅಧ್ಯಾಯದಲ್ಲಿ ಮ್ಯಾಸಬೇಡರ ಆರ್ಥಿಕ ಕಥನವನ್ನು ನಿರೂಪಿಸಲಾಗಿದೆ. ಇವತ್ತು ಸಮುದಾಯ ತಮ್ಮ ಜೀವನವನ್ನು ಸಾಗಿಸಲು ಯಾವ ಯಾವ ವೃತ್ತಿಗಳನ್ನು ಅವಲಂಬಿಸಿ ಬದುಕುತ್ತಿದೆ,

ತಮ್ಮ ಮೂಲವೃತ್ತಿ ಬೇಟೆಯಿಂದ ಪ್ರಾರಂಭಿಸಿದ ಸಮುದಾಯ ಆ ವೃತ್ತಿ ತೊರೆದು ಪಶುಪಾಲನೆ ಕೃಷಿಯಲ್ಲಿ ತೊಡಗಿಸಿಕೊಂಡು ಹೇಗೆ ಬದುಕುತ್ತಿದ್ದಾರೆ. ಜೊತೆಗೆ ಕೂಲಿಕಾರ್ಮಿಕರಾಗಿ, ದಿನಗೂಲಿಗಳಾಗಿ, ಅಗತ್ಯ ಸಂದರ್ಭದಲ್ಲಿ ತಮ್ಮ ಜೀವನ ನಡೆಸುವುದಕ್ಕಾಗಿ ಬೇರೆ ಬೇರೆ ಜಿಲ್ಲೆಗಳಿಗೆ ವಲಸೆ ಹೋಗುತ್ತಿರುವುದು ಇನ್ನೂ ಮುಂತಾದ ವೃತ್ತಿಗಳಲ್ಲಿ ತೊಡಗಿಸಿಕೊಂಡು ಯಾವರೀತಿ ತಮ್ಮ ಬದುಕಿನ ನಿರ್ವಾಹಣೆಯನ್ನು ನಿಭಾಯಿಸುತ್ತಿದ್ದಾರೆ ಎಂಬುದನ್ನು ಚರ್ಚಿಸಲಾಗಿದೆ.

ಏಳನೆಯ ಅಧ್ಯಾಯದಲ್ಲಿ ಮ್ಯಾಸಬೇಡರ ವರ್ತಮಾನದ ಕಥನವನ್ನು ನಿರೂಪಿಸಲಾಗಿದೆ. ವರ್ತಮಾನದಲ್ಲಿ ಅಭಿವೃದ್ಧಿ ಎನ್ನುವ ನಾಗಾಲೋಟದಿ ಸಾಗುತ್ತಿರುವ ಸಮಾಜದಲ್ಲಿ ಈ ಸಮುದಾಯದ ಸಧ್ಯದ ಸ್ಥಿತಿ:ಗತಿಯನ್ನು ಚರ್ಚಿಸುತ್ತ ಅವರ ಸಾಮಾಜಿಕ, ಚಾರಿತ್ರಿಕ, ಸಾಂಸ್ಕೃತಿಕ, ಆರ್ಥಿಕ ಸ್ಥಿತಿ:ಗತಿಯನ್ನು ವಿವರಿಸುವುದರ ಜೊತೆಗೆ ಇವರ ಶೈಕ್ಷಣಿಕ ಹಾಗೂ ರಾಜಕೀಯ ಸ್ಥಿತಿಗತಿಯನ್ನು ಗುರುತಿಸಲಾಗಿದೆ. ಸದಾ ಬದಲಾಗುತ್ತಿರುವ ಸಂದರ್ಭದಲ್ಲಿ ಸಮುದಾಯ ಹೇಗೆ ತನ್ನ ಹಳೆಯ ವಿಧಾನದ ಜೊತೆ ಹೊಸದನ್ನು ಸ್ವೀಕರಿಸುತ್ತದೆ ಎಂಬುದನ್ನು ಚರ್ಚಿಸಲಾಗಿದೆ.

ಅಧ್ಯಾಯ ಎಂಟರಲ್ಲಿ ತಳೆದ ನಿಲುವುಗಳು ಮತ್ತು ಪರ್ಯಾಯಗಳನ್ನು ತಿಳಿಸಲಾಗಿದೆ. ಇಲ್ಲಿಯವರೆಗೆ ಸಮುದಾಯದ ನಿಲುವುಗಳನ್ನು ಚರ್ಚಿಸುತ್ತ ಪರ್ಯಾಯವಾಗಿ ಹೊಸ ಸಾಧ್ಯತೆಗಳನ್ನು ರೂಪಿಸಿಕೊಂಡು ಸಮುದಾಯ ಹೇಗೆ ಬದುಕಬಹುದು ಎಂಬುದನ್ನು ತಿಳಿಸಲು ಪ್ರಯತ್ನಿಸಿದ್ದೇನೆ.

ಕೊನೆಯದಾಗಿ ಸಮಾರೋಪ: ಒಟ್ಟಾರೆಯಾಗಿ ಪ್ರಬಂಧದ ಫಲಿತಗಳನ್ನು ಹೇಳುತ್ತ, ಇಲ್ಲಿಯವರೆಗೆ ನಡೆದಿರುವ ಅಧ್ಯಯನದ ಮಿತಿಗಳನ್ನು ಗುರುತಿಸಲಾಗಿದೆ. ಈ ಅಧ್ಯಯನದಿಂದ ಸಮುದಾಯಕ್ಕೆ ಯಾವ ರೀತಿ ಉಪಯೋಗವಾಗಬಹುದು, ಈ ಅಧ್ಯಯನದಿಂದ ಮುಂದೆ ಸಮುದಾಯವನ್ನು ಕುರಿತು ಅಧ್ಯಯನ ಮಾಡುವವರಿಗೆ ಹೇಗೆ ಮಾದರಿಯಾಗುತ್ತದೆ, ಹಾಗೆ ಇದನ್ನು ಹೊರತುಪಡಿಸಿ ಮುಂದೆ ಹೇಗೆ ಮಾಡಬಹುದು ಎಂಬುದನ್ನು ಚರ್ಚಿಸಲಾಗಿದೆ. ಇವತ್ತು ಸರ್ಕಾರ ಸಮುದಾಯಗಳಿಗೆ ಹಲವಾರು ಯೋಜನೆಗಳನ್ನು ರೂಪಿಸುತ್ತಿದೆ. ಇಂತಹ ಯೋಜನೆಗಳನ್ನು ಸಮುದಾಯ ಹೇಗೆ ಉಪಯೋಗ ಪಡೆದುಕೊಳ್ಳುತ್ತಿವೆ ಹಾಗೆ ಸಮುದಾಯಕ್ಕೆ ಈ ಯೋಜನೆಗಳು ಯಾವ ಮಟ್ಟದಲ್ಲಿ ತಲುಪುತ್ತಿವೆ. ಇಂತಹ ಯೋಜನೆಗಳಿಂದ ಸಮುದಾಯದ ಜೀವನಮಟ್ಟ ಸುಧಾರಿಸಬಹುದೇ? ಎಂಬುದನ್ನು ಚರ್ಚಿಸಿದ್ದೇನೆ. ಮಾಹಿತಿದಾರರ ವಿವರವನ್ನು ಸೇರ್ಪಡಿಸಿದ್ದೇನೆ. ಒಟ್ಟಾರೆಯಾಗಿ ಸಮುದಾಯವೇ ಸಂಶೋಧನೆಯ ಭಾಗವಾಗಿ ಮಾತನಾಡುತ್ತಿದೆ ಎನ್ನುವ ರೀತಿಯಲ್ಲಿ ನನ್ನ ಮಹಾಪ್ರಬಂಧವನ್ನು ಸಿದ್ಧಪಡಿಸಿದ್ದೇನೆ.

* * *

ಅಧ್ಯಾಯ - ಎರಡು

ಮ್ಯಾಸಬೇಡರ ಆತ್ಮಕಥನದ ತಾತ್ವಿಕ ನೆಲೆ

ಅಧ್ಯಾಯ - ಎರಡು

ಮ್ಯಾಸಬೇಡರ ಆತ್ಮಕಥನದ ತಾತ್ವಿಕ ನೆಲೆ

ಮ್ಯಾಸಬೇಡರ ಆತ್ಮಕಥನದ ತಾತ್ವಿಕತೆಯನ್ನು ಮುಖ್ಯವಾಗಿ ಮೂರು ನೆಲೆಯಲ್ಲಿ ವಿವರಿಸಬಹುದು. ಒಂದು. ಈಗಾಗಲೇ ಮ್ಯಾಸಬೇಡರ ಸಮುದಾಯವನ್ನು ಅಧ್ಯಯನ ಮಾಡಿದ ಫಲಿತಗಳು ಕಟ್ಟಿಕೊಡುವ ತಾತ್ವಿಕತೆ. ಎರಡು ಮ್ಯಾಸಬೇಡರ ಸಾಂಸ್ಕೃತಿಕ ವಿವರಗಳು ಕಟ್ಟಿಕೊಡುವ ತಾತ್ವಿಕತೆ. ಮೂರು ವರ್ತಮಾನದಲ್ಲಿ ಮ್ಯಾಸಬೇಡರ ಬದುಕಿನ ನಿಜಸ್ಥಿತಿ ಕಟ್ಟಿಕೊಡುವ ತಾತ್ವಿಕತೆ. ಈ ಮೂರು ಬೇರೆ ಅಂದೇನಲ್ಲ. ಇವು ಒಂದರೊಳಗೊಂದು ಬೆರೆತ ಒಂದು ಸಂಕೀರ್ಣ ಸ್ಥಿತಿಯ ಮೂರು ಭಿನ್ನ ಆಯಾಮಗಳು ಅಷ್ಟೆ.

ಒಂದು ಸಮುದಾಯದ ಆತ್ಮಕಥನದ ತಾತ್ವಿಕತೆ ರೂಪಿಸಿಕೊಳ್ಳುವ ಹೊತ್ತಲ್ಲಿ. ಆ ಸಮುದಾಯವನ್ನು ಭಾವನಾತ್ಮಕವಾಗಿ ನಿರೂಪಿಸುವ ಅಪಾಯವಿದೆ. ಅಥವಾ ಅ ವಿಮರ್ಶಾತ್ಮಕವಾಗಿ ಮೋಹಿಸುವ ಅಪಾಯವೂ ಇಲ್ಲದಿಲ್ಲ. ಈ ಅಪಾಯದಿಂದ ಪಾರಾಗುವುದೆಂದರೆ ಸಮುದಾಯವೊಂದರ ಆಂತರ್ಯದ ಸಂವೇದನೆಯನ್ನು ಸೂಕ್ಷ್ಮಾತಿಸೂಕ್ಷ್ಮವಾಗಿ ಗ್ರಹಿಸಿ ವಿವರಿಸಬೇಕಿದೆ. ಇಂತಲ್ಲಿ ಭಾವನಾತ್ಮಕತೆಗಿಂತ ಆತ್ಮವಿಮರ್ಶೆ ಮುಖ್ಯವಾಗುತ್ತದೆ.

ಮೊದಲನೆಯದಾಗಿ ನೋಡುವುದಾದರೆ ಇತರೆ ಬುಡಕಟ್ಟು ಸಮುದಾಯಗಳೊಂದಿಗೆ ಹೋಲಿಸಿದರೆ ಬೇಡ ಸಮುದಾಯದ ಬಗೆಗಿನ ಅಧ್ಯಯನಗಳ ಪ್ರಮಾಣ ಹೆಚ್ಚಿದೆ. ಕಾರಣ ಕರ್ನಾಟಕದಲ್ಲಿ ಅತಿ ಹೆಚ್ಚು ಜನ ಸಂಖ್ಯೆಯನ್ನು ಹೊಂದಿದ ಬುಡಕಟ್ಟುಗಳಲ್ಲಿ ಇದು ಒಂದು.

ಎರಡನೆಯದಾಗಿ ಅಧ್ಯಯನಕಾರರನ್ನು ಆಕರ್ಷಿಸುವ ಚಿತ್ತಾಕರ್ಶಕ ಜೀವನ ವಿಧಾನ. ಹಾಗೆಯೇ ಎಲ್ಲಾ ತಳ ಸಮುದಾಯಗಳನ್ನು ಅಧ್ಯಯನ ಮಾಡುವ ಎಚ್ಚರ ಉಂಟಾದದ್ದು. ಈಗೀನ ಬೇಡ ಸಮುದಾಯದವರೇ ಶಿಕ್ಷಿತರಾಗುತ್ತಿದ್ದು, ಇಂತಹ ಶಿಕ್ಷಿತರು ತಾವು ಹುಟ್ಟಿ ಬೆಳೆದ ಸಮುದಾಯವನ್ನು ಕುರಿತು ಬೇರೆ ಬೇರೆ ನೆಲೆಯಲ್ಲಿ ಸಂಶೋಧನೆಗಳನ್ನು ಮಾಡತೊಡಿಗದ್ದಾರೆ. ಈ ಬಗೆಯ ಎಲ್ಲಾ

ಅಧ್ಯಯನಗಳು ಮುಂದಿನ ಅಧ್ಯಯನಕಾರರಿಗೆ ಮಹತ್ವದ ಆಕರಗಳಾಗಿವೆ ಅಂತೆಯೇ ಇಂತಹ ಅಧ್ಯಯನಗಳು ಮ್ಯಾಸಬೇಡರ ಕೆಲವು ಚಹರೆಗಳನ್ನು ಗುರುತಿಸಿವೆ. ಈ ಚಹರೆಗಳನ್ನು ಗುರುತಿಸುವ ನಿಲುವೆ ಮತ್ತೆ ಮತ್ತೆ ಬಳಕೆಯಾಗುತ್ತಿದೆ. ಅವುಗಳೆಂದರೆ ಬೇಟೆಯನ್ನು ಬೇಡರ ಜತೆ ಬಿಟ್ಟೂ ಬಿಡದೆ ಸಮೀಕರಿಸುವುದು. ಈಗ ಬೇಟೆ ಪರಂಪರೆ ಇಲ್ಲದಿರುವ ಬಗ್ಗೆ ವಿಷಾದಿಸುವುದು. ಬೇಡರೆಂದರೆ ಕಾಡುವಾಸಿಗಳು ಎಂಬ ಅರ್ಥದಲ್ಲಿಯೇ ನಾಡವಾಸಿಗಳನ್ನು ನೋಡುವುದು. ಬೇಡರೆಂದರೆ ಕೇವಲ ಚಿತ್ರದುರ್ಗ ಬಳ್ಳಾರಿಯ ಪ್ರದೇಶಗಳನ್ನು ಹೆಚ್ಚು ಕೇಂದ್ರೀಕರಿಸುವುದು. ಈ ಪ್ರದೇಶದಲ್ಲೇ ಪಶುಪಾಲಕ ಬುಡಕಟ್ಟುಗಳ ಜತೆ ಹೋಲಿಸುವುದು. ಹೀಗೆ ಕೆಲವು ಮುಖ್ಯ ವಿಷಯಗಳ ಕುರಿತ ಚರ್ಚೆ ಅಭಿಪ್ರಾಯಗಳು ದಾಖಲಾಗಿವೆ. ಈ ಮೇಲಿನ ವಿವರಗಳನ್ನೇ ಮ್ಯಾಸಬೇಡರ ಸಾಂಸ್ಕೃತಿಕ ಚಹರೆ ಎಂದು ಗುರುತಿಸಲಾಗಿದೆ. ಇದೇ ನಿಲುವು ಸಹ ಇವರ ಆತ್ಮಕಥನವನ್ನು ನಿರೂಪಿಸಲು ಬಳಕೆಯಾಗುತ್ತಿದೆ. ಇದು ಒಂದು ವಿಧಾನ ಸರಿಯೆ. ಆದರೆ ಈ ಒಂದು ವಿಧಾನದಿಂದ ಮ್ಯಾಸಬೇಡರ ಆತ್ಮಕಥನವನ್ನು ನಿರೂಪಿಸುವುದು ಕಷ್ಟ. ಬೇಡ ಸಮುದಾಯ ಅಂದಾಗಲೂ ಈ ಸಮುದಾಯದ ಒಂದು ಜನಪ್ರಿಯ ಮಾದರಿಯನ್ನು ಆಯ್ಕೆ ಮಾಡಿ ವಿವರಿಸುವ, ಈ ವಿವರಗಳನ್ನು ಇಡೀ ಸಮುದಾಯಕ್ಕೆ ಲಗತ್ತಿಸುವ ಮಾದರಿ ಬೇಡರ ಆತ್ಮಕಥನದ ತಾತ್ವಿಕತೆಗೆ ಪೂರಕವೇ ಹೊರತು, ಬಹು ಆಯಾಮಗಳ ನಿರ್ವಚನವಲ್ಲ.

ಎರಡನೆಯದಾಗಿ ಮ್ಯಾಸಬೇಡರ ಸಾಂಸ್ಕೃತಿಕ ಚರಿತ್ರೆ ಅವರ ಆಚರಣಾ ಲೋಕ ಸ್ಮೃತಿಲೋಕಗಳು ಇವರ ಆತ್ಮಕಥನಕ್ಕೆ ಹೆಚ್ಚು ಶಕ್ತಿಯುತವಾದ ಆಯಾಮವನ್ನು ಒದಗಿಸಬಲ್ಲವು. ಇವರು ತಮ್ಮ ಸ್ಮೃತಿಲೋಕದಲ್ಲಿ ಅನೇಕ ನಾಯಕ ನಾಯಕಿಯರನ್ನು ಮತ್ತೆ ಮತ್ತೆ ಮರುಸೃಷ್ಟಿಸುತ್ತಾ ಬಂದಿದ್ದಾರೆ. ಇವರ ಸಾಹಸಗಾಥೆಗಳನ್ನು ಹಾಡುತ್ತಾ ಅವರ ಪವಾಡಗಳನ್ನು ಮೈದುಂಬಿ ವಿವರಿಸುತ್ತಾ ಆತ್ಮವಿಶ್ವಾಸವನ್ನು ತುಂಬಿಕೊಳ್ಳುತ್ತಿದ್ದಾರೆ. ಚಿತ್ರದುರ್ಗದ ನಾಯಕರ ದೊರೆ ವೀರಮದಕರಿಯ ಶೌರ್ಯ ಸಾಹಸವನ್ನು ಬೇಡರು ಸ್ವತಃ ತಮ್ಮ ಸಮುದಾಯಕ್ಕೆ ಅನ್ವಯಿಸಿಕೊಳ್ಳುತ್ತಾರೆ. ಮಹಾಭಾರತದಲ್ಲಿ ಬರುವ 'ಏಕಲವ್ಯ'ನನ್ನು ತಮ್ಮ ಸಮುದಾಯದ ರೂಪಕವನ್ನಾಗಿ ಬಳಸಿಕೊಳ್ಳುತ್ತಾರೆ. ಈ ಸಮುದಾಯದ ವೀರ ಮಹಿಳೆ ಒನಕೆ ಓಬವ್ವನ ಶೌರ್ಯಸಾಹಸದೊಂದಿಗೆ ಸಮೀಕರಿಸಿಕೊಳ್ಳುತ್ತಾರೆ. ಹೀಗೆ ಮ್ಯಾಸಬೇಡರು ತಮ್ಮ ಸಾಂಸ್ಕೃತಿಕ ನಾಯಕಿಯರ ಜೀವಗಾಥೆಯನ್ನು ಹಾಡುತ್ತಲೇ ನೆನಪಿಸಿಕೊಳ್ಳುತ್ತವೆ. ವರ್ತಮಾನದ ಸಂಘರ್ಷದ ಬದುಕನ್ನು ಎದುರಿಸಲು ಆತ್ಮವಿಶ್ವಾಸವನ್ನು ತುಂಬಿಕೊಳ್ಳುತ್ತಾರೆ. ಹೀಗೆ ಸಾಂಸ್ಕೃತಿಕ ನಾಯಕರ ಮೂಲಕ ಮ್ಯಾಸಬೇಡರ ಆತ್ಮಕಥನದ ಇನ್ನೊಂದು ಆಯಾಮವನ್ನು ನೋಡಬಹುದು.

ಮ್ಯಾಸಬೇಡರ ಗಾದ್ರಿಪಾಲನಾಯಕ ತನ್ನ ಸಮುದಾಯದ ಉತ್ಪಾದನೆಯ ಮೂಲಗಳಾದ ಪಶುಗಳನ್ನು ರಕ್ಷಿಸಲು ಮತ್ತು ಉತ್ಪಾದನೆಯನ್ನು ಹೆಚ್ಚಿಸಿಕೊಳ್ಳಲು ಹೆಣಗುತ್ತಾನೆ. ಮಿಂಚೇರಿ ದಟ್ಟವಾದ ಅರಣ್ಯ ಪ್ರದೇಶದಲ್ಲಿ ಸಮೃದ್ಧವಾದ ಮೇವು ನೀರು ದೊರೆಯುತ್ತಿತ್ತು. ಈ ಕಾರಣಕ್ಕಾಗಿ ಗಾದರಿ ಪಾಲನಾಯಕ ಇಲ್ಲಿ ರೂಪ್ಪ ಕಟ್ಟಿಕೊಂಡು ಜೀವಿಸತೊಡಗುತ್ತಾನೆ. ಅರಣ್ಯದಲ್ಲಿ ಹುಲಿದಂಪತಿಗಳೆರಡು ವಾಸವಾಗಿರುತ್ತವೆ.

ಇದರಿಂದ ಗಾದ್ರಿಪಾಲನಾಯಕ ಹುಲಿಗಳೊಂದಿಗೆ ಕೇಳಿಕೊಳ್ಳುತ್ತಾನೆ ನಮ್ಮ ಪಶುಗಳಿಗೆ ದಿನ ನಿತ್ಯ ಆಹಾರಬೇಕು. ಹಾಗೆ ಹುಲಿಗಳು ಕೂಡ ನಮ್ಮ ಮಕ್ಕಳುಂಟು. ಈ ಪಶುಗಳಿಗೂ ಸಂತಾನವಿರುವುದರಿಂದ ಆಹಾರವಾಗಿ ತಿನ್ನುವುದು ಬೇಡ ಎಂದವು ಇಬ್ಬರಲ್ಲೂ ಒಂದು ಒಪ್ಪಂದವಾದುದು ಅರಣ್ಯದಲ್ಲಿಯೇ ಈ ಒಪ್ಪಂದದಂತೆ ಹುಲಿಮರಿಗಳನ್ನು ಕೊಲ್ಲುವುದಿಲ್ಲ. ಹುಲಿಗಳು ಹಸುಕರುಗಳನ್ನು ಬೇಟೆಯಾಡಬಾರದೆಂದು ನಿರ್ಧರಿಸಿದವು. ಇವನು ಹುಲಿಮರಿಗಳನ್ನ ತನ್ನ ರೂಪ್ಪದಲ್ಲಿ ಸಾಕತೊಡಗಿದ. ಅಂದರೆ ಇಲ್ಲಿ ಕಾಡಿಗೂ ಮತ್ತು ನಾಡಿಗೂ ಇರುವ ಸಂಘರ್ಷವಿಲ್ಲದ ಹೊಂದಾಣಿಕೆಯ ಕಾಲಘಟ್ಟವನ್ನು ಈ ಕಥನ ಸಂಕೇತಿಸುತ್ತದೆ. ಶತ್ರುಗಳೊಂದಿಗೆ ರಾಜಿ ಮಾಡಿಕೊಂಡು ತನ್ನ ಸಮುದಾಯ ಮತ್ತು ಪಶುಗಳ ಕಲ್ಯಾಣಕ್ಕಾಗಿ ಶ್ರಮಿಸುತ್ತಾನೆ. ಕೊನೆಗೆ ಈ ಒಪ್ಪಂದ ಮುರಿದು ಬೀಳುತ್ತನೆ. ಇದರಿಂದ ಶತ್ರುಗಳೊಂದಿಗೆ ಹೋರಾಡಿ ಸಾಯುತ್ತಾನೆ. ಈತನು ತನ್ನ ಸಮುದಾಯಕೋಸ್ಕರ ಕ್ರೂರ ಪ್ರಾಣಿಗಳಿಂದ ರಕ್ಷಿಸಲು ಪಶುಸಂಪತ್ತನ್ನು ಸಮುದಾಯದ ಬದುಕಿಗಾಗಿ ಪರಿಚಯಿಸುತ್ತ ಇಡೀ ಮ್ಯಾಸಬೇಡರಿಗಾಗಿ ಬದುಕುವ ಮಾರ್ಗವನ್ನು ತೋರಿಸಿಕೊಡುತ್ತಾನೆ. ಹಾಗಾಗಿ ಇಂದಿಗೂ ಆತನ ಕಾವ್ಯ ಚಿತ್ರದುರ್ಗ ಚಳ್ಳಕೆರೆ ಭಾಗಗಳಲ್ಲಿ ಪ್ರತಿಯೊಬ್ಬರು ಒಂದೊಂದು ಹಟ್ಟಿಗಳಲ್ಲಿ ಒಂದೊಂದು ರೀತಿಯಲ್ಲೂ ಹಾಡುತ್ತಾರೆ. ಒಂದು ಕಾವ್ಯವನ್ನು ಹಾಡುತ್ತಲೇ ಸಮಕಾಲೀನ ಸಂದರ್ಭಕ್ಕೆ ಆತನನ್ನು ಜೀವಂತಗೊಳಿಸುತ್ತಾರೆ. ಸಂಪ್ರದಾಯ ಆಚರಣೆಗಳನ್ನು ಆಚರಿಸುತ್ತಾರೆ. ಹಾಗೆ ಆತನ ಹೆಸರನ್ನು ಹುಟ್ಟುವ ಮಕ್ಕಳಿಗೆ ಗಾದಿರಯ್ಯ, ಗಾದಿರಮ್ಮ, ಗಾಜಿಲಿಂಗಪ್ಪ ಎಂದು ಕರೆಯುತ್ತಾರೆ. ಹಾಗೆ ಆತನ ಹೆಸರಿನಲ್ಲೇ ಮುಡಿ ಕೊಡುತ್ತಾರೆ. ಸಮುದಾಯದ ಸಾಂಸ್ಕೃತಿಕ ದೈವನಾಗಿ ಆಚರಿಸುತ್ತಿದ್ದಾರೆ ಹಾಗಾಗಿ ಮ್ಯಾಸಬೇಡರ ಸಾಂಸ್ಕೃತಿಕ ನಾಯಕನಾಗಿದ್ದಾನೆ.

ಅದರಂತೆ ಜಗಳೂರಜ್ಜನು ಕೂಡ ತನ್ನ ಜೀವಿತಾವದಿಯ ಉದ್ದಕ್ಕೂ ಬರೀ ಸಂಘರ್ಷಗಳಲ್ಲಿಯೇ ತೊಡಗುತ್ತಾನೆ. ಈತನ ಕಾಲಕ್ಕೆ ರಾಜಶಾಹಿ ಪ್ರಭುತ್ವ ಬಲಗೊಂಡಿರುತ್ತದೆ. ಪಾಳೇಯಪಟ್ಟುಗಳು ಅಸ್ತಿತ್ವಕ್ಕೆ ಬಂದಿರುತ್ತವೆ. ಕಣ್ಣಣದ ಆಯುಧಗಳ ಬಳಕೆ ಶುರುವಾಗುತ್ತದೆ. ಈತ ಸ್ಥಾಪಿಸಿದ ಸೂರ್ಯನಂದನ ಕಠಾರಿ, ಸಿಡಿಲು ಮಿಂಚಿನ ಕಠಾರಿಗಳು ಆಯುಧಗಳ ಬಳಕೆಯನ್ನು ಸೂಚಿಸುತ್ತವೆ. ರಾಜ ಅಧಿಕ ತೆರಿಗೆಯನ್ನು ಜನ ಸಾಮಾನ್ಯರ ಮೇಲೆ ಹೇರುತ್ತಿರುತ್ತಾನೆ. ಪುರೋಹಿತ ಶಾಹಿಯು ಮಂತ್ರಿಯ ಪಟ್ಟದಲ್ಲಿದ್ದು ರಾಜನನ್ನು ನಿಯಂತ್ರಿಸುತ್ತಿರುತ್ತದೆ. ಗೋಣೂರು ಮತ್ತು ಜಗಳೂರು ಪ್ರಾಂತ್ಯದಲ್ಲಿ ಪ್ರಭುತ್ವ ಹೇರಿದ ಅಧಿಕ ತೆರಿಗೆ ಜನಸಾಮಾನ್ಯರನ್ನು ಕಂಗೆಡಿಸುತ್ತದೆ. ಆಗ ಜಗಳೂರಜ್ಜ ತನ್ನ ಸಮುದಾಯದ ಪರವಾಗಿ ರಾಜನನ್ನು ತನ್ನ ಪವಾಡಗಳಿಂದ ಸೋಲಿಸಿ ತೆರಿಗೆಯನ್ನು ರದ್ದು ಪಡಿಸುತ್ತಾನೆ. ಆದರೆ ಜಗಳೂರಜ್ಜ ರಾಜನ ದುಷ್ಟತನದ ವಿರುದ್ಧದ ಹೋರಾಟದಲ್ಲಿ ಮಾತ್ರ ರುದ್ರಭಯಂಕರನಾಗಿ ಹೋರಾಡುತ್ತಾನೆ. ಏಕಾಂಗಿಯಾಗಿ ಇಡೀ ಸೈನ್ಯವನ್ನು ಧ್ವಂಸ ಮಾಡುತ್ತಾನೆ. ಆಗ ತಿರುಪತಿಯ ತಿಮ್ಮಪ್ಪ ಸ್ತ್ರೀರೂಪದಲ್ಲಿ ಬಂದು ಹಿಂದಿನಿಂದ ಬಾಣಬಿಟ್ಟು ಜಗಳೂರಜ್ಜನನ್ನು ಕೊಲ್ಲುತ್ತಾನೆ.

ಜನಸಾಮಾನ್ಯರಿಗಾಗಿ ಹೋರಾಡಿ ಮಡಿದ ಜಗಳೂರಜ್ಜ ಮ್ಯಾಸಬೇಡರ ಸಮುದಾಯದ ಸಾಂಸ್ಕೃತಿಕ ನಾಯಕನಾಗಿದ್ದಾನೆ. ಇಂದಿಗೂ ಕೂಡ ಆತನ ಹೆಸರನ್ನು ಹುಟ್ಟಿದ ಮಕ್ಕಳಿಗೆ ಪ್ರತಿಯೊಂದು ಹಟ್ಟಿಗಳಲ್ಲಿ ಪಾಪನಾಯಕ, ಪಾಪಯ್ಯ, ಪಾಪಮ್ಮ ಅಂತ ಹೆಸರನ್ನು ಇಟ್ಟಿದ್ದಾರೆ. ಪ್ರಸ್ತುತ ಹಿರಿಯ ತಲೆಮಾರಿನವರು ಆತನ ಕಥೆಯನ್ನು ಮಕ್ಕಳಿಗೆ ಹೇಳುವ ಪರಂಪರೆ ರೂಢಿಯಲ್ಲಿದೆ.ಹಾಗೆ ಗೀತೆಗಳನ್ನು ಕಟ್ಟಿಹಾಡುತ್ತಾರೆ. ಮನೆ ದೈವನಾಗಿ ಪೂಜಿಸುತ್ತಿದ್ದಾರೆ. ಈತನ ಕಾವ್ಯ ಕೇವಲ ಒಬ್ಬ ವ್ಯಕ್ತಿಯ ಕಾವ್ಯವಾಗದೆ ಇಡೀ ಸಮುದಾಯದ ಚರಿತ್ರೆಯನ್ನು ಒಳಗೊಂಡಿದೆ. ಹಾಗಾಗಿ ಈ ಕಾವ್ಯ ಸಮುದಾಯದ ಆತ್ಮಕಥನವೆ ಆಗುತ್ತದೆ.

ಮ್ಯಾಸಬೇಡರ ಸಾಂಸ್ಕೃತಿಕ ವಿವರದಲ್ಲಿ ಬೇಡತಿಯರ, ಸಾಂಸ್ಕೃತಿಕ ನಾಯಕಿಯರ ಬದುಕು, ಜೀವನ ಮಹಿಳೆಯರನ್ನು ಪ್ರಭಾವಿಸುತ್ತಿವೆ. ಬೇಡ ಸಮುದಾಯದ ಸ್ತ್ರೀ ದೇವತೆ ಎಂದು ಆರಾಧಿಸುವ ದಾನಸಾಲಮ್ಮ, ಹುಟ್ಟು ಸೂರ್ಯದೇವನ ಆರಾಧನೆಯಿಂದ ಆದದ್ದು. ಇಲ್ಲಿ ದಾನಸಾಲಮ್ಮ ಹುಟ್ಟನ್ನು ಅನಿಷ್ಟ ಎಂದು ಬಗೆದು ಅವಳ ತಂದೆ ಅಂಬೋಜರಾಜ ತನ್ನ ತಮ್ಮನಾದ ಕಾಂಬೋಜರಾಜನಿಗೆ ಕೊಡುತ್ತಾನೆ. ಇಲ್ಲಿ ಹೆಣ್ಣಿನ ಹುಟ್ಟು ಅನಿಷ್ಟ ಅನ್ನುವ ಕಥನವಿದೆ. ದಾನಸಾಲಮ್ಮ ಮ್ಯಾಸಬೇಡರ ನಾಯಕ ಶುಕ್ಲ ಮಲ್ಲಿನಾಯಕ ಎಂಬುವವನನ್ನು ಆರಾಧಿಸಿ ಹಂಬಲಿಸುತ್ತಾಳೆ. ಈ ಕತೆ ಕೇಳುತ್ತಿದ್ದರೆ ನಮಗೆ ಅಕ್ಕಮಹಾದೇವಿಯ ಚನ್ನಮಲ್ಲಿಕಾರ್ಜುನನ ಹಂಬಲ, ಮೀರಾಬಾಯಿಯ ಕೃಷ್ಣನ ಹಂಬಲಗಳು ನೆನಪಿಗೆ ಬರುತ್ತವೆ. ಹೀಗೆ ತುಡಿಯುವ ಈ ಮನಸ್ಥಿತಿಗಳು ಏನನ್ನು ಹೇಳುತ್ತವೆ? ಗಂಡನಾಚೆಗಿನ ಸಂಬಂಧಕ್ಕಾಗಿ ತುಡಿಯುವ ಮನಸ್ಸು ದೈವದ ಪ್ರಕೃತಿಯ ಮೊರೆಹೋಗುತ್ತದೆ. ನನಗೆ ತಿಳಿದ ಮಟ್ಟಿಗೆ ಹೆಣ್ಣು ಪ್ರಕೃತಿ, ದೈವವನ್ನು ಗಂಡನನ್ನಾಗಿ ಕಲ್ಪಿಸಿಕೊಂಡ ಕಥನಗಳಷ್ಟು ಪುರುಷರು ಪ್ರಕೃತಿಯನ್ನು, ದೈವವನ್ನು ಹೆಂಡತಿಯನ್ನಾಗಿ ಕಲ್ಪಿಸಿಕೊಂಡ ಕಥನಗಳು ವಿರಳ. ಇದು ಏನನ್ನು ತಿಳಿಸುತ್ತದೆ ಒಂದು ಪುರುಷ ಹೆಂಡತಿಯಾಚೆಗಿನ ಸಂಬಂಧವನ್ನು ಕಲ್ಪಿಸಿಕೊಂಡೇ ಸುಖಿಸುವ ಮಿತಿಯಿರಲಿಲ್ಲ. ಅವರಿಗೆ ವಾಸ್ತವವೇ ಹೆಂಡತಿಯಾಚೆಗಿನ ಸಂಬಂಧಕ್ಕೆ ಮುಕ್ತ ಅವಕಾಶ ನೀಡಿತ್ತು. ಎರಡು ಹೆಣ್ಣಿಗೆ ತಾನು ಬದುಕುತ್ತಿರುವ ಕಾಲವೇ ಗಂಡಿನಾಚೆಗಿನ ಸಂಬಂಧಕ್ಕೆ ನಿರ್ಬಂಧ ಹೇರಿತ್ತು.

ದಾನಸಾಲಮ್ಮನ ಮಗಳು ಚುಂಚುಲಕ್ಷ್ಮಿ ಬಿಲ್ಲುಬಾಣಗಳ ತರಬೇತಿಯನ್ನು ಪಡೆದಿದ್ದಾಳೆ. ಸ್ವತಃ ಬೇಟೆಯಾಡಲು ಅಡವಿಗೆ ತೆರಳುತಿದ್ದಾಳೆ. ಇವಳ ಬಗೆಗಿನ ಕತೆಗಳು ಸಾಮಾನ್ಯ ಮಹಿಳೆಯರಿಗಿಂತ ಚುಂಚುಲಕ್ಷ್ಮಿ ಭಿನ್ನವಾಗಿದ್ದಳು ಎನ್ನುವುದನ್ನು ಹೇಳುತ್ತದೆ. ಪುರುಷ ಪ್ರಧಾನ ವ್ಯವಸ್ಥೆಯೊಳಗೆ ಸಾಂಪ್ರದಾಯಿಕತೆಯನ್ನು ಮೀರುವಲ್ಲಿ ಚುಂಚುಲಕ್ಷ್ಮಿಯ ಪಾತ್ರ ಹಪಾಹಪಿಸುವಂತೆ ಕಾಣುತ್ತದೆ. ಒಂದು ಮೂಲದ ಪ್ರಕಾರ ಆಂಧ್ರದ ಚಿಲಮತ್ತೂರು ಎಂಬ ಕಾಡಿನಲ್ಲಿ ಬೇಡತಿಯಾಗಿದ್ದಳು. ಹಿರಣ್ಯ ಕಶ್ಯಪುವನ್ನೂ ಮಹಾವಿಷ್ಣುವು ನರಸಿಂಹಾವತಾರದಿಂದ ಕೊಂದು ವ್ಯಾಘ್ರನಾಗಿ ಆ ಕಾಡಿಗೆ ಪ್ರವೇಶಿಸುತ್ತಾನೆ.

ಚುಂಚುಲಕ್ಷ್ಮಿಯ ಸೌಂದರ್ಯವನ್ನು ಕಂಡು ಶಾಂತನಾಗುತ್ತಾನೆ. ನರಸಿಂಹನು ಒಲಿದು ಬಂದು ಇವಳನ್ನು ವಿವಾಹವಾಗುತ್ತಾನೆ. ಅಲ್ಲಿಂದ ನಾಯಕ ಜಾತಿಗೆ ಎಲ್ಲಿಲ್ಲದ ಕೀರ್ತಿಬಂತೆಂದು ಪ್ರತೀತಿ ಇದೆ. ಅದೇನೆ ಇರಲಿ ಈ ಕಥೆಯ ಒಳಗೇ ಇರುವ ತಂತ್ರ ಅಚ್ಚರಿಯನ್ನು ಹುಟ್ಟಿಸುತ್ತದೆ. ನರಸಿಂಹಾವತಾರವು ದೇವತೆಗಳ ಅವತಾರದಲ್ಲಿಯೇ ಉಗ್ರ ಸ್ವರೂಪದ್ದು. ಅಂತೆಯೇ ಉಗ್ರನರಸಿಂಹ ಎಂಬ ಹೆಸರುಗಳೂ ಬಳಕೆಯಲ್ಲಿವೆ. ಇಲ್ಲಿ ಇಂತಹ ಉಗ್ರಸ್ವರೂಪದ ನರಸಿಂಹ ಸಾಮಾನ್ಯ ಮಹಿಳೆಗೆ ಮನಸೋಲುವುದೆಂದರೆ ಅದು ಅವನ ವ್ಯಕ್ತಿತ್ವಕ್ಕೆ ಕುಂದು ಹಾಗಾಗಿಯೇ ನರಸಿಂಹ ಮನಸೋಲುವುದು ಮಹಿಳೆಯರಲ್ಲಿಯೇ ಶೌರ್ಯ ಸಾಹಸಕ್ಕೆ ಹೆಸರಾದ ಬೇಡತಿ ಚುಂಚುಲಕ್ಷ್ಮಿಗೆ ಇಲ್ಲಿ ಮೇಲುನೋಟಕ್ಕೆ ನರಸಿಂಹನ ಉಗ್ರತೆಯನ್ನು ವೈಭವೀಕರಿಸಲಿಕ್ಕಾಗಿಯೇ ಚುಂಚುಲಕ್ಷ್ಮಿಯಂತ ಪಾತ್ರ ಸೃಷ್ಟಿಯಾಗಲಿಕ್ಕೆ ಸಾಧ್ಯವೆಂಬಂತೆ ಕಾಣುತ್ತದೆ. ಅಂದರೆ ಪುರುಷನ ಪೌರುಷವನ್ನು ವಿಶೇಷವಾಗಿ ಚಿತ್ರಿಸಲಿಕ್ಕಾಗಿಯೇ ಮಹಿಳೆಯರಲ್ಲಿ ಅಸಮಾನ್ಯ ಮಹಿಳಾ ಚಿತ್ರಣಗಳು ಸಮುದಾಯದ ಕಥನಗಳಲ್ಲಿ ಕಾಣಿಸುತ್ತವೆಯೇ ಪರಿಶೀಲಿಸಬೇಕು. ಹೀಗೆ ಬೇಡಸಮುದಾಯದ ಸಾಂಸ್ಕೃತಿಕ ಕಥನದ ಒಳಗೇ ಇಂತಹ ವೈರುಧ್ಯಗಳನ್ನು ಗುರುತಿಸಲಿಕ್ಕೆ ಸಾಧ್ಯವಿದೆ. ಇಂತಹ ವೈರುಧ್ಯಗಳ ಶೋಧವೂ ಸಹ ಮ್ಯಾಸಬೇಡರ ಆತ್ಮಕಥನದ ತಾತ್ವಿಕತೆಗೆ ಪೂರಕವಾದುದು.

ಮೂರನೆಯದಾಗಿ ಮ್ಯಾಸಬೇಡರ ವರ್ತಮಾನದ ಬದುಕಿನ ವಿವರಗಳು ಅವರ ಆತ್ಮಕಥನದ ತಾತ್ವಿಕತೆಯನ್ನು ರೂಪಿಸುತ್ತಿವೆ. ಆಚರಣಾಲೋಕ ಸ್ಮೃತಿಲೋಕದಾಚೆಯೂ ವರ್ತಮಾನದ ಬದುಕಿನ ಕಥನ ಆತ್ಮಕಥನದ ಬಹುದೊಡ್ಡಶಕ್ತಿ. ಈ ಅಧ್ಯಯನದಲ್ಲಿ ಮ್ಯಾಸ ಬೇಡರ ವರ್ತಮಾನದ ಬದುಕಿನ ಸೂಕ್ಷ್ಮ ವಿವರಗಳ ಮೂಲಕ ಅವರ ಆತ್ಮಕಥನವನ್ನು ರೂಪಿಸಲಾಗಿದೆ. ಹಾಗಾಗಿ ಮ್ಯಾಸಬೇಡರ ವೃತ್ತಿ ಕೇವಲ ಬೇಟೆಯಲ್ಲದೆ. ಹಮಾಲಿಗಳೂ ಹೌದು, ಕೃಷಿಕರು ಹೌದು, ಕೂಲಿಗಳೂ ಹೌದು, ವ್ಯಾಪಾರಿಗಳೂ ಹೌದು, ನೌಕರರು ಹೌದು, ಶಿಕ್ಷಿತರು ಹೌದು, ಇಂತಹ ಭಿನ್ನ ಚಹರೆಗಳನ್ನು ಗುರತಿಸಲು ಸಾಧ್ಯವಾಗಿದೆ. ದಲಿತರು ಅದರಲ್ಲೂ ಮುಖ್ಯವಾಗಿ, ಹರಿಜನ, ಮಾದಿಗ, ಮುಂತಾದ ಅಸ್ಪೃಶ್ಯರು ಮಾತ್ರ ಕ್ರೈಸ್ತಧರ್ಮಕ್ಕೆ ಮತಾಂತರಗೊಳ್ಳುತ್ತಿದ್ದಾರೆ ಎನ್ನುವ ವಿವರಗಳಿವೆ. ಇಲ್ಲಿ ಬೇಡರೂ ಕ್ರೈಸ್ತಧರ್ಮದ ಕಡೆ ಒಲಿಯುತ್ತಿರುವುದನ್ನು ಗುರುತಿಸಲಾಗಿದೆ. ಇವರು ಪರಿವರ್ತನೆಯ ಹಾದಿಯಲ್ಲಿರುವ ಸೂಕ್ಷ್ಮತೆಗಳನ್ನು ವಿಶ್ಲೇಷಿಸುವ ಮೂಲಕ ಬೇಡರ ಆತ್ಮಕಥನದ ವಿಸ್ತಾರವನ್ನು ತಿಳಿಸಲಾಗಿದೆ. ಹೀಗೆ ಮ್ಯಾಸಬೇಡರ ಆತ್ಮಕಥನವನ್ನು ಮೂರು ಮುಖ್ಯ ಆಯಾಮಗಳನ್ನು ಸಂಕರಗೊಳಿಸುವ ಮೂಲಕ ಆತ್ಮಕಥನದ ತಾತ್ವಿಕತೆಯನ್ನು ಕಟ್ಟಿಕೊಡಲು ಪ್ರಯತ್ನಿಸಲಾಗಿದೆ.

ಇಲ್ಲಿನ ಒಟ್ಟು ಚರ್ಚೆಯನ್ನು ನೋಡಿದರೆ ಸಮುದಾಯದ ಆತ್ಮಕಥನದ ಭಿನ್ನಧಾರೆಗಳು ತಿಳಿಯುತ್ತವೆ. ಜನಪದ ಕತೆ, ಗೀತೆ, ಕಾವ್ಯ ಏಕಕಾಲದಲ್ಲಿ ಸಮುದಾಯಗಳ ಆತ್ಮಕಥನಗಳೂ ಆಗುತ್ತವೆ. ಇನ್ನೂ ಜನಪದ ಮಹಾಕಾವ್ಯಗಳಂತೂ ಜನಪದ ಸಮುದಾಯದ ಆತ್ಮಕಥನದ ಭಾಗಗಳೇ ಆಗಿವೆ.

ಕಾವ್ಯದಲ್ಲಿರುವ ಸಂಗತಿಗಳು ವರ್ತಮಾನದ ಆಚರಣೆಯಲ್ಲಿ ಜೀವಂತಿಕೆ ಪಡೆಯುತ್ತದೆ. ಹಾಗೆಯೇ ವರ್ತಮಾನದ ಸಮುದಾಯದ ಬದುಕು ಕಾವ್ಯಗಳಲ್ಲಿ ಸೇರ್ಪಡೆಯಾಗುತ್ತದೆ. ಹೀಗೆ ಜನಪದ ಸಮುದಾಯಗಳ ಬದುಕು, ಕಾವ್ಯ ಬೇರೆಯಲ್ಲ.

ಪ್ರಸ್ತುತ ಅಧ್ಯಯನವು ಮ್ಯಾಸಬೇಡರ ಸಮುದಾಯದ ಹಲವು ಧ್ವನಿಗಳನ್ನು ದಾಖಲಿಸುತ್ತದೆ. ಆ ಮೂಲಕ ಸಮುದಾಯವೇ ಸ್ವತಃ ಈ ಸಂಶೋಧನೆಯಲ್ಲಿ ಮಾತನಾಡುತ್ತಾ ಹೋಗುತ್ತದೆ. ಸಂಶೋಧಕ ಈ ಧ್ವನಿಗಳನ್ನು ಕೇಳಿಸಿಕೊಂಡು ತನ್ನ ಸಂಶೋಧನ ಫಲಿತಗಳನ್ನು ಕಂಡುಕೊಳ್ಳುತ್ತಾನೆ. ಇದು ಮ್ಯಾಸಬೇಡರ ಆತ್ಮಕಥನದ ತಾತ್ವಿಕ ನೆಲೆ. ಇಲ್ಲಿ ಹಲವು ವಯೋಮಾನದ, ಕಾಲಮಾನದ, ಹಲವು ಪ್ರಾದೇಶಿಕ ಭಿನ್ನತೆಯ ಅಭಿಪ್ರಾಯಗಳು ದಾಖಲಾಗಿವೆ. ವಿಶೇಷವಾಗಿ ಮಹಿಳೆಯ ಧ್ವನಿಯೂ ದಾಖಲಾಗಿದೆ. ಹೀಗೆ ಸಮುದಾಯದ ಹಲವರು ಮಾತನಾಡುವ ಮೂಲಕ ಆಯಾ ಸಮುದಾಯದ ಆತ್ಮಕಥನವೊಂದು ರೂಪುಗೊಳ್ಳುತ್ತಾ ಹೋಗುತ್ತದೆ. ಈ ಅಧ್ಯಯನದಲ್ಲಿ ಇಂತಹ ರೂಪುಗೊಳ್ಳುವಿಕೆಯನ್ನು ಕಾಣಬಹುದು.

ಮ್ಯಾಸಬೇಡರ ಸಮುದಾಯದ ಒಬ್ಬ ಹಿರಿಯ ತನ್ನ ಇಡೀ ಬದುಕಿನ ಕತೆಯನ್ನು ಹೇಳುತ್ತಾ ಹೋದಂತೆ ತನ್ನ ಸಮುದಾಯದ ಚರಿತ್ರೆಯು ತನ್ನಷ್ಟೇ ತಾನೆ ಬಿಚ್ಚಿಕೊಳ್ಳುತ್ತದೆ. ಈ ಮೂಲಕ ಸಮುದಾಯದ ಮಾನಸ ಲೋಕದಲ್ಲಿ ಇರುವ ಸುಪ್ತಪ್ರಜ್ಞೆಯ ಜ್ಞಾನ ಲೋಕವೊಂದು ಅನಾವರಣಗೊಳ್ಳುತ್ತದೆ. ಈ ಜ್ಞಾನ ಲೋಕದ ಮೂಲಕ ಒಂದು ಸಮುದಾಯವನ್ನು ಅರ್ಥಮಾಡಿಕೊಳ್ಳುವುದು, ಆ ಸಮುದಾಯದ ಅಸ್ತಿತ್ವದ ಬಗ್ಗೆ ಆಲೋಚಿಸುವುದು, ಸಮುದಾಯ ಕಟ್ಟಿಕೊಳ್ಳುತ್ತಿರುವ ಹೊಸ ಬಗೆಯ ಅನನ್ಯತೆಯನ್ನು ಗುರುತಿಸುವುದು ಆತ್ಮಕಥನದಿಂದ ಸಾಧ್ಯವಾಗುತ್ತದೆ. ಹಾಗಾಗಿ ಸಮುದಾಯಗಳ ಅಧ್ಯಯನಗಳ ದುಂಡು ಹೇಳಿಕೆಗಳಿಂದ ಪಾರಾಗಬಹುದು.

ಒಂದು ಸಮುದಾಯದೊಳಗೆ ಹಿಂದಿಗಿಂತಲೂ ಇವತ್ತು ವರ್ಗ ಶ್ರೇಣೀಕರಣ ಹೆಚ್ಚಾಗಿ ರೂಪಗೊಳ್ಳುತ್ತಿದೆ. ಉದಾ:- ನೌಕರಿ ಹಿಡಿದ ಬೇಡ ಸಮುದಾಯ ಗ್ರಾಮೀಣ ಬೇಡ ಸಮುದಾಯದ ಸಂದರ್ಭಗಳಿಂದ ದೂರ ಉಳಿಯಲು ಮಾನಸಿಕವಾಗಿ ಪ್ರಯತ್ನಿಸುತ್ತದೆ. ಸಮುದಾಯ ಕುರಿತ, ಮಠ-ಮಾನ್ಯಗಳು, ಸಂಘಟನೆಗಳು ಇಂತಹ ನೌಕರವರ್ಗವನ್ನೇ ಆಶ್ರಯಿಸುತ್ತಿವೆ. ಈ ಬಗೆಯ ವರ್ಗಶ್ರೇಣೀಕರಣದಲ್ಲಿ ಕೆಳಹಂತದಲ್ಲಿ ಬರುವ ಬೇಡ ಸಮುದಾಯದವರು ಆರ್ಥಿಕವಾಗಿ ಸಾಮಾಜಿಕವಾಗಿ ತುಂಬಾ ಶೋಷಣೆಗೆ ಒಳಗಾಗುತ್ತಿದ್ದಾರೆ. ಈಗ ಬೇಡ ಸಮುದಾಯದ ಸಾಂಸ್ಕೃತಿಕ ಚಹರೆಗಳು ಉಳಿದಿರುವುದು ಈ ವರ್ಗದವರಲ್ಲಿ ಮಾತ್ರ. ಹೀಗೆ ಮ್ಯಾಸಬೇಡರ ಆತ್ಮಕಥನವನ್ನು ನಿರೂಪಿಸುವುದೆಂದರೆ ಸ್ವತಃ ಸಮುದಾಯದ ಒಳಗೆ ಆಗಿರುವ ಪಲ್ಲಟಗಳನ್ನು ವರ್ಗಶ್ರೇಣೀಕರಣಗಳನ್ನು ಸಮುದಾಯದ ಒಳಗೆ ಇರುವ ದಮನಕಾರಿ ಅಂಶಗಳನ್ನು ಗುರುತಿಸುವುದಾಗಿದೆ.

ಒಂದು ಸಮುದಾಯದ ವಯೋಮಿತಿಯ ಶ್ರೇಣೀಕರಣವನ್ನು (ಅಜ್ಜ, ಮಗ, ಮೊಮ್ಮಗ) ಲಿಂಗ ಶ್ರೇಣೀಕರಣ, (ಗಂಡು, ಹೆಣ್ಣು ಅದರಲ್ಲಿ ಅಜ್ಜಿ, ಮಗಳು ಮೊಮ್ಮಗಳು) ಆರ್ಥಿಕ ಶ್ರೇಣೀಕರ,

(ಕೂಲಿಕಾರರು, ರೈತರು, ನೌಕರ ಶಾಹಿಗಳು, ಜಮೀನ್ದಾರರು, ರಾಜಕಾರಣಿಗಳು,) ಸಾಂಸ್ಕೃತಿಕ ಶ್ರೇಣೀಕರಣ, (ಮ್ಯಾಸಬೇಡರು, ಊರುಬೇಡರು,) ಅದರಲ್ಲಿ ಒಳಪಂಗಡಗಳು ಬೆಡುಗುಗಳು, ಪ್ರಾದೇಶಿಕ ಶ್ರೇಣೀಕರಣ, (ಚಿತ್ರದುರ್ಗ, ರಾಯಚೂರು, ಬಳ್ಳಾರಿ, ಗುಲಬರ್ಗಾ) ಹೀಗೆ ಆತ್ಮಕಥನಗಳಲ್ಲಿ ಹಲವು ಬಗೆಯ ಶ್ರೇಣೀಕರಣಗಳ ಸೂಕ್ಷ್ಮತೆಯನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿದೆ. ಅಂದರೆ ಇಷ್ಟು ಬಗೆಯ ಶ್ರೇಣೀಕರಣದ ಅನುಭವಗಳು ಇಲ್ಲಿ ದಾಖಲಾಗಿವೆ. ಈ ಅನುಭವಗಳ ಮೂಲಕ ಬೇಡ ಸಮುದಾಯದ ಆತ್ಮಕಥನವೊಂದು ರೂಪುಗೊಂಡಿದೆ. ಇದರಿಂದಾಗಿ ಮ್ಯಾಸಬೇಡರು ಎಂಬ ನೆಲೆಯಲ್ಲಿ ನಡೆದ ಅಧ್ಯಯನಗಳಿಗಿಂತ ಈ ಅಧ್ಯಯನದಲ್ಲಿ ಭಿನ್ನವಾಗಿ ಫಲಿತಗಳನ್ನು ಕಾಣಲು ಸಾಧ್ಯವಾಗಿದೆ. ಹೀಗೆ ಮ್ಯಾಸಬೇಡರ ಸಾಂಸ್ಕೃತಿಕ ಆತ್ಮಕಥನಗಳ ತಾತ್ವಿಕತೆ ಎಂದರೆ ಬೇಡ ಸಮುದಾಯದ ಒಳಗೆ ಇರುವ ಸಾಂಸ್ಕೃತಿಕ ಬಹುರೂಪಗಳ, ಬಹು ಸಂವೇದನೆಗಳ ಮೂಲಕ ಒಂದು ಸಮಾಜವನ್ನು ನೋಡಬಹುದಾದ ನೋಟಗಳ ಮೊತ್ತ ಎಂದು ಹೇಳಬಹುದು. ಪ್ರಸ್ತುತ ಅಧ್ಯಯನದಲ್ಲಿ ಈ ಬಗೆಯ ತಾತ್ವಿಕತೆಗೆ ಪೂರಕವಾಗಿ ಆತ್ಮಕಥನಗಳನ್ನು ವಿಶ್ಲೇಷಿಸಲಾಗಿದೆ.

* * *

ಅಧ್ಯಾಯ - ಮೂರು

ಮ್ಯಾಸಬೇಡರ ಚಾರಿತ್ರಿಕ ಕಥನ

ಅಧ್ಯಾಯ - ಮೂರು

ಮ್ಯಾಸಬೇಡರ ಚಾರಿತ್ರಿಕ ಕಥನ

ಸಮುದಾಯವೊಂದರ ಚಾರಿತ್ರಿಕ ಪ್ರಜ್ಞೆ ರೂಪುಗೊಳ್ಳುವುದು ಅವರ ಪಾರಂಪರಿಕ ತಿಳುವಳಿಕೆಯಿಂದ. ಆದರೆ ಇತಿಹಾಸ ಅಧ್ಯಯನಕಾರರಿಂದ ರೂಪಿತಗೊಂಡ ಚಾರಿತ್ರಿಕ ಪ್ರಜ್ಞೆ, ಶಾಸನ, ಹಸ್ತಪ್ರತಿ, ಕೃತಿ ಬರಹರೂಪದ್ದೂ, ಇದರಿಂದಾಗಿ ಇತಿಹಾಸ ಅಧ್ಯಯನಕಾರರ ಚಾರಿತ್ರಿಕ ಪ್ರಜ್ಞೆಗೂ, ಸಮುದಾಯಗಳ ಚಾರಿತ್ರಿಕ ಪ್ರಜ್ಞೆಗೂ ಅಂತರವಿದೆ. ಈ ಅಂತರವೇ ಸಮುದಾಯಗಳನ್ನು ಗಡೆಗಣಿಸುವಂತೆ ಮಾಡಿದೆ ಹಾಗಾಗಿ ಈ ಸಮುದಾಯಗಳ ಪಾರಂಪರಿಕ ಚಾರಿತ್ರಿಕ ಪ್ರಜ್ಞೆಯನ್ನು ಮಾನ್ಯ ಮಾಡುವುದಿಲ್ಲ. ಇಲ್ಲಿ ಮ್ಯಾಸಬೇಡರ ಸಮುದಾಯದ ಪಾರಂಪರಿಕ ಚಾರಿತ್ರ್ಯಿಕ ಪ್ರಜ್ಞೆಯನ್ನು ಚರಿತ್ರೆ ಅಧ್ಯಯನಕಾರರ ಚಾರಿತ್ರಿಕ ಪ್ರಜ್ಞೆಯನ್ನು ಜೊತೆ ಜೊತೆಯಾಗಿ ವಿಶ್ಲೇಷಿಸುವ ಪ್ರಯತ್ನವನ್ನು ಮಾಡಲಾಗಿದೆ. ಭಾರತ ದೇಶದಲ್ಲಿ ಆದಿಯ ಅಥವಾ ಪ್ರಾಚೀನ ಬುಡಕಟ್ಟುಗಳಲ್ಲಿ ಬೇಡ/ನಾಯಕ/ವಾಲ್ಮೀಕಿ ಸಮುದಾಯವೂ ಒಂದು. ಈ ಸಮುದಾಯದವರನ್ನು ಅವರ ವೃತ್ತಿಯಾದಾರದಲ್ಲಿ ವಿವಿಧ ಹೆಸರುಗಳಿಂದ ಕರೆಯುತ್ತಾರೆ. ಕರ್ನಾಟಕದಲ್ಲಿ ನಾಯಕರು, ನಾಯಕ ಮಕ್ಕಳು, ವಾಲ್ಮೀಕಿ ಮಕ್ಕಳು, ಬೇಡರು, ಪಾಳೇಗಾರರು, ಗುರಿಕಾರರು, ತಳವಾರರು, ಕನ್ನಯ್ಯನ ಕುಲದವರು, ದೊರೆ ಮಕ್ಕಳು, ರಾಜ ಪರಿವಾರದವರು ಎಂತಲೂ, ಆಂಧ್ರದಲ್ಲಿ ಬಾಯಿವಾಳ್ಳು, ಸಂಚಲು, ರಾಜಬಿಡ್ಡಲು, ಪಾಳೆಗಾಳ್ಳು, ಕೊಂಡರಾಜಲು, ಬೋಯಿ ಎಂತಲು, ತಮಿಳುನಾಡಿನಲ್ಲಿ, ವ್ಯಾಧನ್, ನಾಯ್ಡು, ನಾಯರ್, ನಾಯಕನ್, ರಾಜು ಎಂತಲೂ, ಸಂಸ್ಕೃತದಲ್ಲಿ ವ್ಯಾಧ, ಶಬರ, ಪುಳಿಂದ, ಕಿರಾತು, ರಾಜಪೂತ್ ಎಂತಲೂ ಮಹಾರಾಷ್ಟ್ರದಲ್ಲಿ 'ರಾಮೋಶಿ' ಎಂದು ಕರೆಯುತ್ತಾರೆ. (ಕೆ.ಎಂ.ಮೈತ್ರಿ, ಪು-೮೭-೮೮, ೨೦೦೨)

ಒಂದೇ ಅರ್ಥ ಬರುವ ಒಂದೇ ಧರ್ಮದ ಎಲ್ಲಾರೂ ಸೇರಿದ ಈ ಸಮುದಾಯದಲ್ಲಿ ಮುಖ್ಯವಾಗಿ ಊರು ನಾಯಕರು, ಮ್ಯಾಸನಾಯಕರು ಅಥವಾ ಊರುಬೇಡರು, ಮ್ಯಾಸಬೇಡರು, ಮಾರಮ್ಮ ನಾಯಕರು, ಮುತ್ಯಾಲನಾಯಕರು, ಹಾಲು ಬೆಡರು, ವೊಂಡಬೇಡರು, ಸಂಚುಲು, ಬಿಲ್ಲರು ಮತ್ತು

ರಾಜಪರಿವಾರದವರು, ಕೊಂಡರಾಜಲು ಎಂದು ನಾನಾ ಪಂಗಡಗಳಿದ್ದು ಇವರೆಲ್ಲರೂ ಒಂದೇ ಮೂಲ ಬುಡಕಟ್ಟಿಗೆ ಸೇರಿದವರಾಗಿದ್ದು ತಮ್ಮ ವಂಶದ ಪ್ರಭೂತಿಗಳಾದ ವಾಲ್ಮೀಕಿ, ಕನ್ನಯ್ಯ ಇವರುಗಳ ಮೂಲವನ್ನೇ ಹೇಳುತ್ತಾರೆ. ಕಾರಣಾಂತರದಿಂದ ಕಾಡಿನಲ್ಲಿ ಸೇರಿಕೊಂಡು ಅಲೆಮಾರಿಗಳಂತಿದ್ದ ಈ ಜನ ಕೆಲವರು ಊರು ರಾಜ್ಯಗಳನ್ನು ಕಟ್ಟಿ ಆಳುತ್ತಿದ್ದಾರೆ, ಅವರಿಗೆ ಸಹಕಾರಿಗಳಾಗಿ, ಬೇರೆ ಹಟ್ಟಿಗಳನ್ನು ಕಟ್ಟಿಕೊಂಡು ಅಡವಿ ಕಾಡುಗಳಲ್ಲಿ ಗೋ ಮತ್ತು ಆಡುಗಳ ಸಂಪತ್ತನ್ನು ಹೆಚ್ಚಿಸಿಕೊಂಡು ಗೋಪಾಲರಾಗಿ ಯಾದವರೆನಿಸಿಕೊಂಡು ಮೀಸಲು ನಾಯಕರೆಂತಲೂ ಕ್ರಮೇಣ ಶಬ್ದ ರೂಪಾಂತರದಿಂದ 'ಮ್ಯಾಸ' ನಾಯಕರೆಂತಲೂ ಕರೆಯಲ್ಪಟ್ಟರು ಇವರನ್ನು ಹಾಲುಬೇಡರೆಂತಲೂ ಕರೆಯುವುದುಂಟು.(ಹೆಚ್.ವಿ.ವೀರನಾಯಕ, ಪು-೨೫, ೨೦೦೮)

ಈ ಪಂಗಡವರು, ವೀರಯೋಧರೆನಿಸಿ ಅಲ್ಲಲ್ಲೇ ರಾಜ್ಯಗಳನ್ನು ಕಟ್ಟಿ ಸಂಸ್ಥಾನಿಕರಾಗಿ ಆಳಿರುತ್ತಾರೆ. ತಮ್ಮ ಸಮುದಾಯದವರೇ ಆದ ನಾಯಕ ಪ್ರಭುಗಳ ಪಡೆಯಲ್ಲಿ ಬೇಡರು ನೆಚ್ಚಿನ ಭಂಟರಾಗಿಯೂ ರಾಜಪರಿವಾರದವರಾಗಿಯೂ ಇರುತ್ತಿದ್ದರು. ಆಡಳಿತ ಸೂತ್ರದಲ್ಲಿ ತಮ್ಮ ನಾಯಕನಿಗೆ ಸಹಕಾರಿಗಳಾಗಿ ಶತ್ರುಗಳ ದಾಳಿಯಿಂದ ನಾಡನ್ನು ರಕ್ಷಿಸಲು ಗಡಿ ಪ್ರದೇಶಗಳಲ್ಲಿ ವಾಸ ಮಾಡಿಕೊಂಡಿದ್ದು ಪ್ರಭುತ್ವದವರಿಗೆ ಕಾಲಕಾಲಕ್ಕೆ ಶತ್ರುಗಳ ಚಲನವಲನದ ಬಗ್ಗೆ ಸುಳಿವು ಕೊಡುತ್ತ ಗೂಢಾಚಾರರಾಗಿ ಕೆಲಸ ಮಾಡುತ್ತಿದ್ದ ಕುಟುಂಬಗಳಿಗೆ ಗುಡ್ಲುನಾಯಕರೆಂತಲೂ ಇವರುಗಳು ಒಂದು ಗಡಿಯಿಂದ ಮತ್ತೊಂದು ಗಡಿಗೆ ಆಗಿಂದಾಗ್ಯೆ ತಮ್ಮ ವಸತಿಗಳನ್ನು ಬದಲಾಯಿಸಬೇಕಾದ ಪ್ರಕೃತಿವಿದ್ದುದರಿಂದ ಹಂಗಾಮಿ ವಸತಿಗಳಾಗಿ ಗುಡಿಸಲುಗಳನ್ನು ಕಟ್ಟಿಕೊಂಡು ವಾಸಿಸುತ್ತಿದ್ದರಾದ ಕಾರಣ ಇವರುಗಳಿಗೆ 'ಗುಡ್ಲುನಾಯಕ'ರೆಂತಲೂ, ದೇಶಮಧ್ಯದಲ್ಲಿ ಸಂಚರಿಸುತ್ತ ವೇಷ ಭೂಷಣಗಳಿಂದ ತಲೆಮರಿಸಿಕೊಂಡು ತಮ್ಮ ನಾಯಕನ ವಿರುದ್ಧ ಬಂಡೇಳುವ ಸಂದರ್ಭದಲ್ಲಿ ಶತ್ರುರಾಜರಿಗೆ ಸುಳಿವು ಕೊಟ್ಟು ರಾಜದ್ರೋಹವಾಗುತ್ತಿದ್ದ ಸಂದರ್ಭಗಳಂಥ ತುರ್ತು ಪರಿಸ್ಥಿತಿಯಲ್ಲಿ ಶತ್ರುಗಳ ಚಲನವಲನಗಳನ್ನು ಅರಿಯಲಿಕ್ಕೆ ಯುದ್ಧ ವೇಳೆಯಲ್ಲಿ ನಾಯಕನಿಗೆ ಅನುಕೂಲವಾಗುವಂತಹ ಪರಿಸ್ಥಿತಿಯ ಸುದ್ದಿಗಳನ್ನು ಕಾಲಕಾಲಕ್ಕೆ ಮುಟ್ಟಿಸುವ ಕೆಲಸದಲ್ಲಿ ನಿರತರಾಗಿ ಒಂದು ಕಡೇ ಮಾರಮ್ಮನವರಾಗಿಯೂ, ಮುತ್ಯಾಲಮ್ಮನವರಾಗಿಯೂ, ಮೊಂಡರಾಗಿಯೂ ವೇಷಾಂತರಗಳಿಂದ ಅಲೆಮಾರಿಗಳಂತೆ ಸಂಚರಿಸುತ್ತ ಸಂದರ್ಭೋಚಿತ, ಶತ್ರುಪಾಳೆಯಗಳನ್ನು ಹೊಕ್ಕು ವಿಷಯ ಸಂಗ್ರಹಣೆ ಮಾಡುತ್ತಿದ್ದ ಗೂಢಾಚಾರಿ ವರ್ಗದವರು ಮೇಲ್ಕಂಡ ಹೆಸರುಗಳಿಂದ ಕರೆಯಲ್ಪಟ್ಟರು. ನಾಯಕರ ಪ್ರಭುತ್ವ ಕೈಬಿಟ್ಟು ಹೋದ ಮೇಲೆ ಅದೇ ಅಭ್ಯಾಸಕ್ಕೆ ಅಂಟಿಕೊಂಡು ಅಲೆಮಾರಿ ಜನಾಂಗದವರಾಗಿರುತ್ತಾರೆ. ಮೊದಲಿನಿಂದಲೂ ಇವರು ಆಹಾರ ಸಂಗ್ರಹಣೆ ಬೇಟೆ, ಪಶುಪಾಲನೆ ವೃತ್ತಿಗಳಲ್ಲಿ ತೊಡಗಿಸಿಕೊಂಡು ಹಂತ ಹಂತವಾಗಿ ವಿಸ್ತರಣೆಗೊಂಡಿದ್ದು, ಶಿಲಾಯುಗದಿಂದಲೂ ನಡೆದ ಪ್ರಕ್ರಿಯೆ ಉತ್ತರ ಭಾರತದ, ಸಿಂಧೂ, ಗಂಗ, ಬ್ರಹ್ಮಪುತ್ರ ನದಿ ಬಯಲುಗಳಲ್ಲಿ ಕಿರಾತ ದೇಶ, ಪುಳಿಂದ, ಶಬರನಾಡುಗಳಿದ್ದವೆಂದ ತಿಳಿದು ಬರುತ್ತದೆ. ಇವರು ಒರಿಸ್ಸಾ, ಆಂಧ್ರ ಪ್ರದೇಶಗಳಿಂದ

ಕರ್ನಾಟಕಕ್ಕೆ ವಲಸೆ ಬಂದವರೆಂದು ಮೂಲತಃ ಇಲ್ಲಿದ್ದವರೆಂದು ಹೇಳಲಾಗುತ್ತದೆ. ಪ್ರಸ್ತುತ ಕರ್ನಾಟಕದಲ್ಲಿ ಚಿತ್ರದುರ್ಗ, ಬಳ್ಳಾರಿ, ತುಮಕೂರು, ರಾಯಚೂರು, ಬೆಳಗಾವಿ, ಧಾರವಾಡ, ದಾವಣಗೆರೆ ಮುಂತಾದ ಪ್ರದೇಶಗಳಲ್ಲಿ ಹೆಚ್ಚಿನ ಜನಸಂಖ್ಯೆಯಲ್ಲಿ ಇವರಿದ್ದಾರೆ.(ಹೆಚ್.ವಿ.ವೀರನಾಯಕ, ಪು-೨೬, ೨೦೦೮)

ಕಲಿಯುಗದ ಪ್ರಾರಂಭದಿಂದಲೂ ನಾಯ್ಕರು ಬೇಡರು, ಕಿರಾತ, ಶಬರ, ವಾಲ್ಮೀಕಿ, ಸಂಚಲು, ವ್ಯಾಧ, ಪುಳಿಂದ, ಬಿಲ್ಲ ಯಾವುದೇ ಹೆಸರಿನಿಂದ ಕರೆಯಲ್ಪಟ್ಟಿದ್ದರೂ ಒಂದೇ ಸಮುದಾಯದವರಾದ ಇವರ ಪ್ರಭುತ್ವ ಮತ್ತು ಪ್ರಜಾ ನಿನ; ಬೇರಿನ್ನಾವ ಸಮುದಾಯವೂ ದಕ್ಷಿಣದಲ್ಲಿರಲಿಲ್ಲವೆಂಬುದು ನಿಜ ಸಂಗತಿ.

ಕರ್ನಾಟಕದಲ್ಲಿ ಮೊಟ್ಟ ಮೊದಲು ನಾಯಕರ ಸಾಮ್ರಾಜ್ಯವನ್ನು ಸ್ಥಾಪಿಸಿದ್ದು ಕಮ್ಮಟದುರ್ಗ. ಇದಕ್ಕೂ ಮೊದಲು ಗದ್ದೆಮನೆ ಶಾಸನದಲ್ಲಿ ಬೇಡರಾಯರ ಉಲ್ಲೇಖ ಬರುತ್ತದೆ. ಇವರನ್ನು ಮಲೆಪರೆಂದು ಕರೆಯುತ್ತಿದ್ದರು. ಇವರು ಆಳರಸರ ಸೇವೆಯಲ್ಲಿದ್ದು ಕಾಳಗದಲ್ಲಿ ಪಲ್ಲವರ ಅರಸ ಮಹೇಂದ್ರನೊಡನೆ ಹೋರಾಡಿ ಸ್ವರ್ಗಸ್ಥನಾಗಿದ್ದು ತಿಳಿದು ಬರುತ್ತದೆ. ಆದರೆ ರಾಜ್ಯಾಳ್ವಿಕೆ ಬಗ್ಗೆ ಬೆಳಕು ಚೆಲ್ಲುವುದಿಲ್ಲ. ತರುವಾಯ ರಾಮನೆತನಗಳಲ್ಲಿ ಕಂಪಲಿರಾಜ್ಯದ ಕಂಪಲಿರಾಯನು ಬೇಡರವನು. ಇತನು ಕಮ್ಮಟದುರ್ಗದಲ್ಲಿದ್ದುಕೊಂಡು ಮುಸಲ್ಮಾನರ ದಕ್ಷಿಣ ಆಕ್ರಮಣವನ್ನು ನಿಗ್ರಹಿಸಿದನು. ಈತನ ಮಗ ಕುಮಾರರಾಮನು ತನ್ನ ಶೀಲ ಮತ್ತು ಪರಾಕ್ರಮಕ್ಕಾಗಿ ಪ್ರಖ್ಯಾತನಾದವನು. ಹೊಯ್ಸಳ ಮತ್ತು ದೆಹಲಿಯ ಸುಲ್ತಾನರ ಸೈನ್ಯವನ್ನು ಸೋಲಿಸಿದ ಕೀರ್ತಿ ಈತನದು. 'ದೈವಾಂಶಸಂಭೂತ'ನೆಂದು ಈ ವರೆಗೂ ಪೂಜೆಗೊಳ್ಳುತ್ತಿರುವನು, ಅಲ್ಲದೆ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಲ್ಲಿ ಕೂಡ ಕಂಪಲಿ ರಾಜವು ಬಹುಮುಖ್ಯವಾದ ಪಾತ್ರವಾಗಿದೆ. ಕಂಪಲಿಯ ರಾಜ್ಯ ಚಿಕ್ಕದಾಗಿದ್ದರೂ ಹೊಯ್ಸಳರು ಮತ್ತು ಮುಸಲ್ಮಾನರಂತಹ ಪ್ರಬಲರನ್ನು ಪ್ರತಿಭಟಿಸುವಷ್ಟು ಸಾಮರ್ಥ್ಯ ಪಡೆದುದು ಅದರ ನೈಸರ್ಗಿಕ ಸ್ಥಾನದಿಂದ. ಇದನ್ನು ಮನಗಂಡ ಹಕ್ಕ-ಬುಕ್ಕರು ಅದರ ಸಮೀಪದಲ್ಲಿ ಗುಡ್ಡ-ಬೆಟ್ಟಗಳಿಂದ ಆವೃತವಾದ ವಿಜಯನಗರ ಪ್ರದೇಶವನ್ನು ತಮ್ಮ ಹೊಸ ರಾಜ್ಯದ ಕೇದ್ರವಾಗಿ ಆಯ್ದುಕೊಂಡರು. ಕೆಲವು ಇತಿಹಾಸ ತಜ್ಞರ ಅಭಿಪ್ರಾಯದಲ್ಲಿ ಈ ಸಹೋದರರು ಕಂಪಿನ ಭಾವನ ಮಕ್ಕಳಿಗೂ ಮೊದಲು ಕಂಪಿಲನ ಬಳಿಯಲ್ಲಿಯೇ ಅಧಿಕಾರಿಗಳಾಗಿದ್ದವರು.(ಮಂಜುನಾಥ ಬೇವಿಕಟ್ಟಿ, ಪು-೪೪, ೨೦೦೮)

ವಿಜಯನಗರ ರಾಜ್ಯದ ಕಾಲದಲ್ಲಿ ಕರ್ನಾಟಕದ ತುಂಬಾ ಹಲವು ಪಾಳೆಪಟ್ಟುಗಳು ಹರಡಿದ್ದವೆಂಬುದು ನಿಸ್ಸಂಶಯ, ಅವುಗಳ ಉಲ್ಲೇಖಗಳು ಅಲ್ಲಲ್ಲಿ ಕಂಡುಬರುತ್ತವೆ. ಅಂತಹ ಪಾಳೆಯಗಾರರಲ್ಲಿ ಬಹುಜನರು ಬೇಡ ಸಮುದಾಯದವರಾಗಿದ್ದರೆಂದು ಊಹಿಸಬಹುದಾಗಿದೆ. ತಿರುಮಲಾರ್ಯನು ತನ್ನ ಚಿಕ್ಕದೇವರಾಯವಂಶಾವಳಿಯಲ್ಲಿ ಚಿಂತನಕಲ್ಲು, ಚಿಕ್ಕನಾಯಕನಹಳ್ಳಿ, ಬಾಣಾವಾರ, ಬಸವಪಟ್ಟಣ, ಸಿರಾ ಮುಂತಾದ ಪಟ್ಟಣಗಳಲ್ಲಿ ಬೇಡರ ರಾಜರು ಪಾಳೆಯಗಾರರಾಗಿ ಆಳುತ್ತಿದ್ದರೆಂದು ಹೇಳಿದ್ದಾನೆ.

ವಿಜಯನಗರ ಅರಸರು ದುರ್ಬಲರಾದಂತೆ ಈ ಪಾಳೆಯಗಾರರು ದಿನದಿಂದ ದಿನಕ್ಕೆ ಸ್ಥಳೀಯವಾಗಿ ಪ್ರಬಲಗೊಳ್ಳುತ್ತಲೇ ಬಂದರು. ಕ್ರಿ.ಶ. ೧೫೬೫ರ ವಿಜಯನಗರ ಪತನದ ನಂತರ ಈ ಪಾಳೆಯಗಾರರು ಸ್ವತಂತ್ರರಾದರು. ಅವರಲ್ಲಿ ಬೇಡ ಸಂಸ್ಥಾನಗಳೇ ಅಧಿಕವಾಗಿವೆ. ಹೀಗಾಗಿ ವಿಜಯನಗರೋತ್ತರ ಕಾಲೀನ ಕರ್ನಾಟಕದ ಇತಿಹಾಸವನ್ನು ಬೇಡರ ಇತಿಹಾಸವೆಂದು ಕರೆಯಬಹುದಾಗಿದೆ. ತಾಳಿಕೋಟೆ ಯುದ್ಧದಲ್ಲಿ ಪ್ರತ್ಯಕ್ಷವಾಗಿ ಪಾಲ್ಗೊಂಡು ಹಲವಾರು ವರುಷಗಳ ತರುವಾಯ ಸ್ವತಂತ್ರ ಸ್ಥಾಪಿಸಿಕೊಂಡ ಒಟ್ಟು ೭೭ ಪಾಳೆ ಪಟ್ಟುಗಳನ್ನು ಗುರುತಿಸಲಾಗಿದೆ. ಈ ೭೭ ಪಾಳೆಯ ಪಟ್ಟಗಳನ್ನು ಮೊದಲಬಾರಿಗೆ ಗುರುತಿಸಿದ ಕೀರ್ತಿ ಇತಿಹಾಸ ತಜ್ಞರಾದ ಪ್ರೊ.ಲಕ್ಷ್ಮಣ್ ತೆಲಗಾವಿ ಅವರದು.

ಈ ಪಾಳೆಪಟ್ಟುಗಳಲ್ಲಿ ಆನೆಗೊಂದಿ, ಚಿತ್ರದುರ್ಗ, ರತ್ನಗಿರಿ, ನಿಡುಗಲ್ಲ, ಶಿರಾ, ಬಳ್ಳಾರಿ, ಮೊಳಕಾಲ್ಮೂರು, ರಾಯದುರ್ಗ, ಪೆನಗೊಂಡ, ಮದಮನೂರು, ಇಕ್ಕೇರಿ, ಸ್ವಾಧಿ, ಚಂದಾವರ, ಕೊಲ್ಲಾಪುರ, ಬಂಕಾಪುರ, ಬಿದನೂರ, ಮುಂಡಿಕೋಟೆ, ನಂದಿವಾಳ, ದಾವನಹಳ್ಳಿ, ಹರಪನಹಳ್ಳಿ, ಮುಟ್ಟಿ, ಬೆಳಗುತ್ತಿ, ಕಡಪ, ಕರಿಗುಡ್ಡ, ಗುಂತಗೋಳ, ಕೊಡೇಕಲ್ಲ, ಕ್ಯಾದಗೇರೆ, ಕಪಟರಾಳ, ಹಾಗಲವಾಡಿ, ಮಂಗಳೂರು, ಬಸವಾಪಟ್ಟಣ ಬೇಲೂರು, ಬಾದಾಮಿ, ದೊರೆಮಲೆ, ಜರಿಮಲೆ, ಗುಡೇಕೋಟೆ, ನನ್ನಿವಾಳ, ಹರಟೆ ಕೋಟೆ, ಐಮಂಗಲ, ತರೀಕೆರೆ, ಪುರವರ, ಮಿಡಗೇರೆ, ಪಾವಗಡ, ಹೊಸಕೋಟೆ, ಶಿವರ, ಕುಂದಾಪುರ, ಬಾಗೂರ, ಗುತ್ತಿ, ಚನ್ನಪಟ್ಟಣ, ಕಂಪಲಿ, ಮಲೆದುರ್ಗ, ಕನಕಗಿರಿ, ಗುಡಗುಂಟಿ, ಲೇಪಾಕ್ಷಿ, ಮಧುರೆ, ಆದವಾನಿ, ರಾಯಚೂರು, ಠಾಣ್ಯ, ಹದಿನಾಡು, ಯಳಂದೂರು, ಕಾಡುಗಹಳ್ಳಿ, ಹುಲಿಯೂರು, ಕೊರಟಗಿ, ಹೊನ್ನೂಡಕಿ, ಕರಜಗಿ, ಉಚ್ಚಂಗಿದುರ್ಗ ಮತ್ತೋಡು, ನಾಯಕನಹಟ್ಟಿ, ಅರಿಕೇರಿ, ದೂದಿಕೊಂಡಿ, ಸೊಂಪಿ, ಪಾಮನಕಲ್ಲು, ಪ್ಯಾಪಲಿ, ಅಗಳಿ, ಪರಶುರಾಮಪುರ, ತಳಕು, ಧ್ಯಾವನಹಳ್ಳಿ, ಮುದಗಲ್ಲು, ಬಾಣರಾವಿ, ಮುಂತಾದವು ಸೇರಿವೆ. ಆಮನೆತನಗಳಲ್ಲಿ ಚಿತ್ರದುರ್ಗ, ಆನೆಗೊಂದಿ, ಸುರಪುರ, ಗುಡಗಂಟಿ, ಗುಂತಗೋಳ, ದೇವದುರ್ಗ, ಗುಡೇಕೋಟೆ, ಜರಿಮಲೆ, ಕನಕಗಿರಿ, ನಾಯಕನಹಟ್ಟಿ ಮತ್ತೋಡು ಮತ್ತು ಹರಟೆ ಪ್ರಮುಖವಾದವುಗಳಾಗಿವೆ. (ವಿರೂಪಾಕ್ಷಿ ಪೂಜಾರಹಳ್ಳಿ, ಪು-೨೩, ೨೦೦೭)

ಪಾಳೆಗಾರರ ನಂತರ ಈ ನೆಲದಲ್ಲಿ ಬ್ರಿಟೀಷರ ಆಳ್ವಿಕೆಯನ್ನು ವಿರೋಧಿಸಿದವರಲ್ಲಿ ಮೊದಲಿಗರು ಬೇಡರು, ೧೮೦೩ರಲ್ಲಿ ಪಾಳೆಯಗಾರರ (ಬಳ್ಳಾರಿ) ದಂಗೆ ೧೮೨೪ರಲ್ಲಿತರೀಕೆರೆ ಸರ್ಜಪ್ಪನಾಯಕನ ಹೋರಾಟ ಮತ್ತು ಸಾವು. ೧೮೫೭ರಲ್ಲಿ ಹಲಗಲಿ ಬೇಡರ ಬಂಡಾಯ, ೧೮೫೮ರ ಸುರಪುರ ವೆಂಕಟಪ್ಪ ನಾಯಕನ ದಂಗೆ, ೧೯೨೬ರಲ್ಲಿ ವೀರ ಸಿಂಧೂರ್ ಲಕ್ಷ್ಮಣನು ಬ್ರಿಟೀಷರ ವಿರುದ್ಧ, ಹೋರಾಡಿ ಸ್ಥಳೀಯರ ಒಳಸಂಚಿನಿಂದ ಬ್ರಿಟೀಷರಿಗೆ ಸೆರೆಯಾಗಿ ಮಡಿದ. ೧೯೪೭ರ ಸ್ವಾತಂತ್ರ್ಯ ಹೋರಾಟದಲ್ಲಿ ಸಹಸ್ರಾರು ಜನ ಹೋರಾಟಗಾರರು ಇವರೇ ಆಗಿದ್ದರು. ಬ್ರಿಟೀಷರ ನಿರ್ಗಮನದ ನಂತರ ಭಾರತ ಸ್ವತಂತ್ರವಾದ ಪ್ರಜಾಪ್ರಭುತ್ವ ಹಾಗೂ ಸಂವಿಧಾನವನ್ನು ರಚಿಸಿಕೊಳ್ಳುವಷ್ಟರಲ್ಲಿ ಆಧುನಿಕ ಶಿಕ್ಷಣ, ಉದ್ಯೋಗ ಮತ್ತು ಆಡಳಿತವನ್ನು ರೂಢಿಸಿಕೊಂಡಿತು. ಸಾಮಾಜಿಕ ಸ್ಥಾನಮಾನಗಳಲ್ಲಿ ಅನುಗುಣವಾಗಿ

ಸಮುದಾಯಗಳಿಗೆ ಸಮಾನತೆಯನ್ನು ಕಲ್ಪಿಸುವಲ್ಲಿ ಪರಿಶಿಷ್ಟ ಜಾತಿ/ಪಂಗಡ ಮತ್ತು ಹಿಂದುಳಿದ ವರ್ಗಗಳಿಗೆ ಮೀಸಲಾತಿ ಸೌಲಭ್ಯ ದೊರಕಿತು. ಇದರಲ್ಲಿ ಕರ್ನಾಟಕದ ನಾಯಕ ಬೇಡ ಪಂಗಡಗಳು ಉಪಪಂಗಡಗಳನ್ನು ಪರಿಶಿಷ್ಟ ವರ್ಗದ ಮೀಸಲಾತಿಯ ಪಟ್ಟಿಗೆ ಸೇರಿಸಿಲಾಗಿದೆ. ಇದರಿಂದಾಗಿ ಆಧುನಿಕ ಶಿಕ್ಷಣ ಹಾಗೂ ಕೆಲವು ಉದ್ಯೋಗವಕಾಶಗಳು ಅಲ್ಲೊಬ್ಬರಿಗೆ ಇಲ್ಲೊಬ್ಬರಿಗೆ ಎಂಬಂತೆ ಲಭಿಸಿವೆ. ಸ್ವಾತಂತ್ರ್ಯ ನಂತರದಿಂದ ಇಂದಿನವರೆಗೆ ಮೂಲತಃ ರಾಜಪ್ರಭುತ್ವ ನಡೆಸಿದ ನಾಯಕರು ಪ್ರಜಾಪ್ರಭುತ್ವದಲ್ಲಿ ಸ್ಥಾನಗಳಿಸಿದ್ದು ಕಡಿಮೆ. ದಿವಗಂತ, ಎ.ಭೀಮಪ್ಪ ನಾಯಕರು ಮತ್ತು ಹೊ.ಚಿ.ಬೋರಯ್ಯನವರು ಸಚಿವರುಗಳು ಆಗಿದ್ದರು. ಡಿ.ದೇವರಾಜ ಅರಸು ಅವರ ಕಾಳಜಿಯಿಂದ ಈ ಸಮುದಾಯದ ಎಲೆಮರೆಕಾಯಿಯಂತಿದ್ದವರು ಬೆಳಕಿಗೆ ಬಂದರು. ದಿ.ಎಲ್.ಜಿ.ಹಾವನೂರು, ಪಾಟೀಲ್, ಪಾಪನಾಯಕ, ಎನ್.ಜಿ.ನಾಯಕ, ವೆಂಕಟಪ್ಪನಾಯಕ, ಶಂಕರ ಕರನಿಂಗ, ಚಂದ್ರಶೇಖರ್ ನಾಯಕ, ಎನ್.ಟಿ.ಬೊಮ್ಮಣ್ಣ, ಮೊದಲಾದವರನ್ನು ಹೆಸರಿಸಬಹುದು.

ಹೀಗೆ ಆದಿಯಿಂದ ಅದ್ಭುತವಾದ ಚರಿತ್ರೆ-ಸಂಸ್ಕೃತಿ ಹೊಂದಿರುವ ನಾಯಕರು ಇಂದು ನಾನಾ ಕ್ಷೇತ್ರಗಳಲ್ಲಿ ಹಿಂದುಳಿದಿದ್ದಾರೆ. ಬಡತನ, ಶಿಕ್ಷಕರು, ಉದ್ಯೋಗ, ಮೀಸಲಾತಿ ಸೌಲಭ್ಯ ನಾನಾ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ವಾಲ್ಮೀಕಿ ಸಮುದಾಯಕ್ಕೆ ಸೂಕ್ತವಾದ ರಾಜಕೀಯ ಪ್ರಾತಿನಿಧ್ಯವಿಲ್ಲ. ಒಟ್ಟಾರೆ ಹೇಳುವುದಾದರೆ ಕರ್ನಾಟಕ ರಾಜ್ಯದಲ್ಲಿರುವ ನಾಯಕ-ವಾಲ್ಮೀಕಿ ಸಮುದಾಯ ತನ್ನದೇ ಆದ ರಾಜಕೀಯ ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ ಕ್ಷೇತ್ರಗಳಿಂದ ಗುರುತಿಸಿಕೊಂಡಿರುತ್ತಾರೆ. ಗತಕಾಲದ ಭವ್ಯಸ್ಮಾರಕಗಳು ಇತಿಹಾಸದೊಂದಿಗೆ ಮರೆದು ಇಂದು ತೀರ ಅಲಕ್ಷ್ಯಕ್ಕೆ ಗುರಿಯಾಗಿರುವುದು ವಿಷಾದವೆನಿಸುತ್ತದೆ. ಈ ಸಮುದಾಯವನ್ನು ಉತ್ತಮ ಮಾರ್ಗದರ್ಶನದೊಂದಿಗೆ ನಡೆಸಿಕೊಂಡು ಹೋಗುವ ನಾಯಕನ ಕೊರತೆ ಇದೆ. ಪರಸ್ಪರ ಸಮಸ್ಯೆಗೆ ಪರಿಹಾರ ಕಂಡುಕೊಂಡರೆ ಈ ನಾಡು ನುಡಿಗೆ ಕಟ್ಟಿಬೆಳೆಸಿದವರ ಆತ್ಮಕ್ಕೆ ಶಾಂತಿಸಿಗುತ್ತದೆ. ಸ್ವಾತಂತ್ರ್ಯ ಸಮಾನತೆ ಮತ್ತು ಸಹೋದರತೆ ಎಂಬ ತತ್ವಗಳು ಈ ಸಮುದಾಯದಲ್ಲಿ ಅಡಗಿರುವುದು ಸಂತೋಷದ ವಿಷಯವಾಗಿದೆ.

ಬೇಡರು ಪ್ರಾಚೀನ ಕಾಲದಿಂದಲೂ ತಳವಾರಿಕೆ ವೃತ್ತಿಯಲ್ಲಿದ್ದವರು, ಉತ್ತರ ಕರ್ನಾಟಕದಲ್ಲಿ ನಾಯಕರಿಗೆ ತಳವಾರರೆಂದು ಕರೆಯುವುದು ವಾಡಿಕೆ, ಮಧ್ಯಕರ್ನಾಟಕದಲ್ಲಿ ಊರುನಾಯಕರಿಗೆ ತಳವಾರರೆಂದು, ಮಹಿಳೆಯರಿಗೆ, ತಳವಾರಕೆ ಎಂದು ಕರೆಯುವರು. ಬಹುತೇಕ ಬೇಡರೇ ತಳವಾರಿಕೆ ವೃತ್ತಿಯಲ್ಲಿದ್ದ ಕಾರಣ ಅವರು ತಳವಾರ ಎಂಬ ಉಪಜಾತಿಗೆ ಕಾರಣರಾದರು. ಬೇರೆ ಬೇರೆ ಸಮುದಾಯವರನ್ನು ತಳವಾರಿಕೆ ನಿರ್ವಹಿಸುತ್ತಿದ್ದರಾದರೂ ಬೇಡನಾಯಕರಿಗಿಂತ ಅವರು ಭಿನ್ನವಾಗಿ ಕಂಡುಬರುತ್ತಾರೆ. ಸಮಾನ್ಯವಾಗಿ ಇಂದು ಬೇಡರಿಗೆ ತಳವಾರ ಎಂಬ ಪದ ಪ್ರಭಾವ ಬೀರುವಷ್ಟು ಬೇರೆಯವರಿಗೆ ಪರಿಣಾಮ ಬೀರಿಲ್ಲ. ಪ್ರಾಚೀನ ಮಧ್ಯಕಾಲೀನ ಮತ್ತು ಆಧುನಿಕ ಚರಿತ್ರೆಯ ವಿವಿಧ ಕಾಲಘಟ್ಟಗಳಲ್ಲಿ ನಾಯಕರು ವಿವಿಧ ಬಗೆಯಲ್ಲಿ ಕಾರ್ಯನಿರ್ವಹಿಸಿದ್ದು ಪ್ರಮುಖವಾದುದಾಗಿದೆ.

ಅಡಿಟಿಪ್ಪಣಿ

೧. ಮೈತ್ರಿ ಕೆ.ಎಂ, ಬುಡಕಟ್ಟು ಕುಲಕಸುಬುಗಳು, ಪು-೮೭,೮೮ : ೨೦೦೨

೨. ಹೆಚ್.ವಿ.ವೀರನಾಯಕ, ವಾಲ್ಮೀಕಿ ಮಂದಾರ (ಸಂ), ಹರ್ತಿಕೋಟೆ ವೀರೇಂದ್ರ ಸಿಂಹ, ಪು-೨೫ : ೨೦೦೮

೩. ಅದೇ ಕೃತಿ, ಪು-೨೬

೪. ಅದೇ ಕೃತಿ, ಪು-೪೪

೫. ವಿರೂಪಾಕ್ಷಿ ಪೂಜಾರಹಳ್ಳಿ, ಬೇಟೆ ಮತ್ತು ಬೇಡರು, ಪು-೧೨೫ : ೨೦೦೭

* * *

ಅಧ್ಯಾಯ - ನಾಲ್ಕು

ಮ್ಯಾಸಬೇಡರ ಸಾಂಸ್ಕೃತಿಕ ಕಥನ

೪.೧. ಆಚರಣೆಗಳು

೪.೧.೧. ಜನನ ಸಂದರ್ಭದಲ್ಲಿ ಮಾಡುವ ಆಚರಣೆ

೪.೧.೨. ನಾಮಕರಣ

೪.೧.೩. ಒಡಲಕ್ಕಿ ಶಾಸ್ತ್ರ

೪.೧.೪. ಋತುಮತಿ ಶಾಸ್ತ್ರ

೪.೨. ಹಬ್ಬಗಳು

೪.೨.೧. ನಾಗರ ಪಂಚಮಿ

೪.೨.೨. ಹಿರಿಯರಹಬ್ಬ

೪.೨.೩. ಯುಗಾದಿ

೪.೨.೪. ಕಾರಹುಣ್ಣಿಮೆ

೪.೨.೫. ಮಾರೆಮ್ಮನ ಹಬ್ಬ

೪.೩. ಹಟ್ಟಿಗಳಿಂದ ಹೊರದೈವಗಳ ಆಕರ್ಷಣೆ ಮತ್ತು ನಂಬಿಕೆಯಲ್ಲಾದ ಸಿತ್ಯಂತರ

೪.೪. ಮ್ಯಾಸಬೇಡರ ಸಾಂಸ್ಕೃತಿಕ ನಾಯಕರು

೪.೪.೧. ಕಂಪಳ ರಂಗಸ್ವಾಮಿ

೪.೪.೨. ಜಗಳೂರು ಪಾಪನಾಯಕ

೪.೪.೩. ನಾಯಕನ ಹಟ್ಟಿ ತಿಪ್ಪೇಸ್ವಾಮಿ

೪.೪.೪. ಕೋರಿಯರ್‍ರಮಂಚನಾಯಕ

೪.೪.೫. ಗಾದರಿ ಪಾಲನಾಯಕ

೪.೪.೬. ದಡ್ಡ ಸೂರನಾಯಕ

ಅಧ್ಯಾಯ - ನಾಲ್ಕು

ಮ್ಯಾಸಬೇಡರ ಸಾಂಸ್ಕೃತಿಕ ಕಥನ

ಪ್ರತಿಯೊಂದು ಸಮುದಾಯಕ್ಕೂ ಅದರದ್ದೇ ಆದ ಸಾಂಸ್ಕೃತಿಕ ವೈವಿಧ್ಯಗಳು ಇರುವುದನ್ನು ಕಾಣಬಹುದು. ಈ ವೈವಿಧ್ಯಗಳೇ ಇತರೆ ಸಮುದಾಯಗಳಿಂದ ಒಂದು ಸಮುದಾಯವನ್ನು ವಿಶಿಷ್ಟಗೊಳಿಸುತ್ತವೆ. ಹಾಗೆಯೇ ಮ್ಯಾಸಬೇಡ ಸಾಂಸ್ಕೃತಿಕ ಕಥನವೂ ವೈವಿಧ್ಯಮಯವಾದುದು. ಈಗ ಅಂತಹ ವೈವಿದ್ಯಗಳು ನಾಶವಾಗುತ್ತಿವೆ. ಇದು ಸಹಜ ಕೂಡ. ಆದರೆ ಪ್ರಶ್ನೆ ಇರುವುದು ಈಗ ಕಟ್ಟಿಕೊಳ್ಳುತ್ತಿರುವ ಸಮುದಾಯದ ನವ ಸಾಂಸ್ಕೃತಿಕ ಕಥನ ಯಾವುದು ಎಂದು ಶೋಧಿಸುವಲ್ಲಿ. ಈ ಅಧ್ಯಯನದಲ್ಲಿ ಮ್ಯಾಸಬೇಡರ ಜೀವನಾವರ್ತನ ಆಚರಣೆಯನ್ನು ವಾರ್ಷಿಕಾವರ್ತನ ಆಚರಣೆಯನ್ನು ನಿರೂಪಿಸುತ್ತ ಹಲವು ವೈವಿದ್ಯಗಳನ್ನು ಗುರುತಿಸಲಾಗಿದೆ. ಹಾಗೆಯೇ ಸಾಂಸ್ಕೃತಿಕ ಕಥನದ ಸ್ಥಿತ್ಯಂತರಗಳನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ.

ನಿರ್ದಿಷ್ಟವಾದ ಸಮುದಾಯವೊಂದು ತನ್ನ ಸ್ಮರಣೆ ಮತ್ತು ನಡವಳಿಕೆಗಳ ಮೂಲಕ ಜೀವಂತವಾಗಿರಿಸಿಕೊಂಡು ಬಂದ, ಬದುಕಿನ ವಿಧಾನಕ್ಕೆ ಸಂಬಂಧಿಸಿದ ಎಲ್ಲಾ ಚಟುವಟಿಕೆಗಳನ್ನು ಮತ್ತು ಅದರಿಂದ ಬಳಕೆಗೊಳ್ಳುವ ವಸ್ತು ವಿಶೇಷಗಳನ್ನು ಒಳಗೊಂಡಂತೆ ಸಮಗ್ರವನ್ನು ಆ ಸಮುದಾಯದ ಸಂಸ್ಕೃತಿ ಎಂದು ಕರೆಯಲಾಗುತ್ತದೆ. ಇದು ಪ್ರಜ್ಞಾಪೂರ್ವಕವಾಗಿ ಉಳಿಸಿಕೊಂಡು ಬಂದುದಾಗಿರುತ್ತದೆ. ನಾಡಿನ ಪ್ರಸಿದ್ಧ ಸಂಸ್ಕೃತಿ ಚಿಂತಕರಾದ, ಶಂಬಾಜೋಷಿಯವರು, "ಸಂಸ್ಕೃತಿಯು ಅಂತರಂಗ ಭಾವಬುದ್ಧಿಗೆ ಸಂಬಂಧಿಸಿದೆ; ಇದೇ ಮೇರೆಗೆ ಈ ಸುಸಂಸ್ಕೃತ ಭಾವಬುದ್ಧಿಯಿಂದ ನಿರ್ಮಿತ ವಸ್ತುವಿಷಯಗಳಿಗೂ ಸಂಬಂಧಿಸಿದೆ" ಎಂದು ಹೇಳುತ್ತಾರೆ. ಅಂದರೆ ಸಂಸ್ಕೃತಿ ಎಂಬುದು ಅಂತರಂಗದ ಆಲೋಚನೆ ಮತ್ತು ಬಹಿರಂಗದ ನಡವಳಿಕೆ. ಈ ಎರಡನ್ನು ಒಳಗೊಳ್ಳುತ್ತದೆ ಎಂಬುದು ಇಲ್ಲಿ ವಿದಿತವಾಗುತ್ತದೆ. ಇಲ್ಲಿ ಸುಸಂಸ್ಕೃತ ಎಂಬ ಪದವೇ ಮತ್ತೇ ಹಲವು ಚರ್ಚೆಗಳಿಗೆ ಆಸ್ಪದ ಮಾಡಿಕೊಡುತ್ತದೆ. ಕಾರಣ ಒಬ್ಬರಿಗೆ

ಸುಸಂಸ್ಕೃತ ಎನಿಸಿದ್ದು ಮತ್ತೊಂದು ನೆಲೆಯಲ್ಲಿರುವವರಿಗೆ ಬರ್ಬರ, ಕಿರಾತಕ, ಎನಿಸಬಹುದಲ್ಲವೇ? ಒಟ್ಟು ಸಮುದಾಯವೊಂದರ ಅಂತರಂಗಿಕ ಆಲೋಚನೆಗಳ ಫಲಶೃತಿಯೇ ಕಾರಣವಾಗಿ ರೂಪುಗೊಂಡ ಒಟ್ಟು ವಿಧಿ, ವಿಧಾನಗಳನ್ನು ಆ ಸಮುದಾಯದ ಸಂಸ್ಕೃತಿ ಎಂದು ಕರೆಯಬಹುದೆನಿಸುತ್ತದೆ. ಹಲವು ವಿವರಗಳಿಂದ ಕೂಡಿದ ಬದುಕನ್ನು ವ್ಯವಹಾರಿಕವಾಗಿ ನೋಡಹೊರಟಾಗ ಈ ವ್ಯವಹಾರಿಕತೆ ಎಂಬುದು ಇಲ್ಲಿ ಆ ಸಮುದಾಯದ ಅನ್ನದ ಅವಶ್ಯಕತೆಯೂ ಆಗಿರುತ್ತದೆ. ಬೇಟೆ ಮೂಲ ವಿಧಾನವಾಗಿದ್ದು ಅಲ್ಲಿಂದ ನಂತರದಲ್ಲಿ ಬೇರೆ ಬೇರೆ ವಿಧಾನಗಳನ್ನು ರೂಢಿಸಿಕೊಂಡು ಬಂದಿರುವಾಗ ಈ ವಿಧಾನವೂ ಸಂಸ್ಕೃತಿಯ ಒಂದು ಭಾಗವಾಗಿರುತ್ತದೆ. ಇದೇ ಸಂಸ್ಕೃತಿಯು, ಬೇಟೆ ಸಂಸ್ಕೃತಿ, ಪಶುಪಾಲಕ ಸಂಸ್ಕೃತಿ, ಕೃಷಿ ಸಂಸ್ಕೃತಿ ಎಂದು ಮುಂತಾಗಿ ಕರೆಯಲ್ಪಡುತ್ತದೆ. ಪ್ರಧಾನವಾಗಿ ಅಂದರೆ ಒಂದು ಬುಡಕಟ್ಟಿಗೆ ಸೇರಿದ ಜನ ಸಮುದಾಯ, ತಮ್ಮದೇ ಆದ ಸಂಸ್ಕೃತಿಯನ್ನು ರೂಪಿಸಿಕೊಂಡು ಅದಕ್ಕನುಗುಣವಾಗಿ ಬದುಕುತ್ತಿರುತ್ತಾರೆ. ತಮ್ಮ ಸಾಂಸ್ಕೃತಿಕ ವಿಶಿಷ್ಟತೆಯ ಕಾರಣಕ್ಕಾಗಿಯೇ ಬೇರೆಯ ಸಮುದಾಯದಿಂದ ಭಿನ್ನತೆ ಹೊಂದಿರುವುದನ್ನು ಕಾಣಬಹುದು. ಕಾಡುಗೊಲ್ಲರ ಕುಂಚಿಟಿಗರೊಂದಿಗೆ ಇವರನ್ನು ಹೋಲಿಸಬಹುದಾದರೂ ಇವರು ತಮ್ಮದೇ ಆದ ಸ್ವತಂತ್ರ ಅಸ್ತಿತ್ವವನ್ನು ಹೊಂದಿರುವವರು. ಇದೊಂದು ವಿಶಿಷ್ಟವಾದ ಬುಡಕಟ್ಟು. ಏಕೆಂದರೆ ಪಶುಪಾಲನೆ ಆರ್ಯರಿಂದ ಭಾರತಕ್ಕೆ ಕಾಲಿಟ್ಟಿತು ಎಂಬ ಒಂದು ಅಭಿಪ್ರಾಯ ನಮ್ಮಲ್ಲಿದೆ. ಆದರೆ ಕೆಲವು ಸಂಸ್ಕೃತಿ ಮತ್ತು ಇತಿಹಾಸ ಚಿಂತಕರು ಆರ್ಯರು ತಮ್ಮ ಪಶುಸಂಪತ್ತಿನೊಂದಿಗೆ ಭಾರತಕ್ಕೆ ಬಂದರೂ ನಿಜ. ಆದರೆ ಇವರು ಬರುವ ವೇಳೆಗಾಗಲೇ ಇಲ್ಲಿಯ ಮೂಲವಾಸಿಗಳಲ್ಲಿಯೂ ಪಶುಪಾಲಕ ಸಮುದಾಯಗಳಿದ್ದವು ಎಂದು ಅಭಿಪ್ರಾಯ ಪಡುತ್ತಾರೆ.

ಇಡೀ ಭಾರತದಲ್ಲಿಯೇ ಪಶುಪಾಲಕ ಮೂಲದ ನಮ್ಮ ಸಂಸ್ಕೃತಿಯನ್ನು ತುಂಬಾ ಜತನದಿಂದ ಆಚರಣೆಯ ರೂಪದಲ್ಲಿಯಾದರೂ ಉಳಿಸಿಕೊಂಡು ಬರುತ್ತಿರುವ ಮತ್ತು ಇದಕ್ಕೂ ಪೂರ್ವದ ತಮ್ಮ ಬೇಟೆಗಾರಿಕೆಯನ್ನು ಒಂದು ವಾರ್ಷಿಕ ಕ್ರಿಯಾಚರಣೆಯ ಸ್ವರೂಪದಲ್ಲಿ ಉಳಿಸಿಕೊಂಡು ಬಂದಿರುವುದರಲ್ಲಿಯೇ ನಮಗೆ ಈ ಸಮುದಾಯದ ಅನನ್ಯತೆಯ ದರ್ಶನವಾಗುತ್ತದೆ. ಬೇಟೆ ಮತ್ತು ಪಶುಪಾಲನೆಗಳು ಒಟ್ಟು ಬದುಕನ್ನು ಹೇಗೆ ರೂಪಿಸಿವೆ. ಆಚರಣೆ, ನಂಬಿಕೆಗಳ ಮೇಲೆ ಪ್ರಭಾವ ಬೀರಿವೆ ಎಂಬುದನ್ನು ಸಂಬಂಧಿಸಿದ ವಿವರಗಳ ಮೂಲಕ ಕಂಡುಕೊಳ್ಳಲು ಸಾಧ್ಯವಾಗುತ್ತದೆ.

೪.೧.೧. ಜನನ ಸಂದರ್ಭದಲ್ಲಿ ಮಾಡುವ ಆಚರಣೆ

ಜನನ ಸಂದರ್ಭದಲ್ಲಿ ಆಚರಣೆ ಪ್ರತಿಯೊಂದು ಸಮುದಾಯದವರಲ್ಲಿ ಆಚರಿಸುವಂತೆ ಮ್ಯಾಸಬೇಡರ ಸಮುದಾಯದಲ್ಲಿ ಆಚರಿಸುವರು. ಈ ಆಚರಣೆಗೆ ಸಂಬಂಧಿಸಿದಂತೆ ಬೆಳವಿನ ಮರದ ಹಟ್ಟಿ ಪಾಪಮ್ಮ ಕೊಡುವ ವಿವರ ಹೀಗಿದೆ:

ಹೆಸರು - ಪಾಪಮ್ಮ

ವಯಸ್ಸು - ೫೮ ವರ್ಷ

ಅಂಚೆ - ನೇತ್ರನಹಳ್ಳಿ

ತಾಲೂಕು - ಮೊಳಕಾಲ್ಮೂರು

ಜಿಲ್ಲೆ - ಚಿತ್ರದುರ್ಗ



"ನಮ್ ಜಾತಿಯಲ್ಲಿ ಏನೇನು ಮಾಡ್ತೀವಿಯಂದ್ರೆ ಹಿಂದೆ ಹೆಣ್ಣು ಮಗಳು ಗರ್ಭಿಣಿಯಾಗಿ ಒಂಬತ್ತು ತಿಂಗಳಆಚರಣೆ ಆಧುನಿಕ ಸೌಲಭ್ಯಗಳ ಜೊತೆಯೂ ಹೊಂದಾಣಿಕೆ ಮಾಡಿಕೊಳ್ಳುತ್ತಿರುವುದನ್ನು ಗಮನಿಸಬಹುದು.

೪.೧.೨. ನಾಮಕರಣ

ನಾಮಕರಣಕ್ಕೆ ಸಂಬಂಧಿಸಿದಂತೆ ಕರ್ನಾರಹಟ್ಟಿ ನಾಗಮ್ಮ ಹೇಳುವ ವಿವರ ಈ ಕೆಳಗಿನಂತಿದೆ:

ಹೆಸರು - ನಾಗಮ್ಮ

ವಯಸ್ಸು - ೩೮ ವರ್ಷ

ವೃತ್ತಿ - ಕೂಲಿ

ಊರು - ಕರ್ನಾರಹಟ್ಟಿ

ಅಂಚೆ - ಹುಳಿಯಾಳ್

ತಾಲೂಕು - ಕೂಡ್ಲಿಗಿ

ಜಿಲ್ಲೆ - ಬಳ್ಳಾರಿ



"ನಾಮಕರಣ ನಾವೇನು ಬೇರೆ ಮಾಡಲ್ಲ ಎಲ್ಲಾ ಜಾತಿಯವ್ರು ಹೆಂಗೆ ಮಾಡ್ತಾರೋ ನಾವು ಕೂಡ ಹಾಗೆ ಮಾಡ್ತೀವಿ. ಮಗು ಮೊದ್ಲು ಯಾವ ವಾರಾದಲ್ಲಿ ಹುಟ್ಟಿದೆ ಅಂತ ಮೊದ್ಲು ನೋಡ್ಕಂತೀವಿ. ನೋಡ್ಕಂಡು ಶಾಸ್ತ್ರ ಕೇಳಿಸ್ತೀವಿ. ಇಂತ ವಾರ್ದಾಗೆ ನಮ್ಮ ಮಗು ಹುಟ್ಟಿದೆ ಅದಕ್ಕೆ ಏನೇನು ಹೆಸರು ಇಡಬೇಕು ಅಂತ ಕೇಳಿಸ್ತೀವಿ. ಶಾಸ್ತ್ರ ಹೆಂಗೇಳ್ತಾರೆ ಹಾಗೆ ಹೆಸರು ಇಡ್ತೀವಿ ಮೂರು ನಾಲ್ಕು ಹೆಸರು ಹೇಳಿರ್ತಾರೆ ಅದರಲ್ಲಿ ನಮಗೆ ಯಾವುದು ಬೇಕೋ ಆ ಹೆಸರು ಕಾಯಂ ಮಾಡಿಕೊಂತೀವಿ ಮೊದ್ಲು ಹೆಸರು ಇಡಬೇಕಂದ್ರೆ ೧೬ ದಿನಗಳಾಗಲಿ, ಒಂದು ತಿಂಗಳಾಗಲಿ, ಮೂರು ತಿಂಗಳಾಗ್ಲಿ, ಒಂಬತ್ತು ತಿಂಗಳು, ಹಿಂಗೆ ಇಷ್ಟು ದಿನದಲ್ಲಿ ಯಾವಾಗ್‌ಬೇಕಾದ್ರೂ ಇಡಬಹುದು. ಮೊದ್ಲು ಮನೆಯನ್ನು ಸಾರಣೆ ಮಾಡ್ತಿವಿ ಮಾಡಿ ಗೋ ಮೂತ್ರ ತಂದು ಮನೆ ಒಳಗೆ ಸುತ್ತ ಮುತ್ತ ಚಲ್‌ತ್ತೀವಿ ಜಾಸ್ತಿ ಮೂರು ತಿಂಗಳಾಗೆ ಹೆಸರು ಇಡುವುದು ಇತ್ತೀಚಿತ್ಲಾಗೆ ಐದು ತಿಂಗಳಲ್ಲಿ ಇಡ್ತಾರೆ. ಯಾಕೆಂದ್ರೆ ಮಗುವನ್ನು ಬಂದ ಎಲ್ಲಾರು ಎತ್ತಿಕೊಂಡು ಆಡಿಸಬಹುದು ಅಂತ ಎಲ್ಲಾ ಸಂಬಂಧಿಕರನ್ನು ಮೊದ್ಲು ಕರಿಸಿಕೊಳ್ತೀವಿ ಕರಿಸಿಕೊಂಡು ಊರಿನಲ್ಲಿ ಎಲ್ಲಾ ಬಂದು ಬಳಗದವರಿಗೆ ಹೇಳ್ತೀವಿ ತೊಟ್ಲು ಇಡ್ತೀವಿ ಸಂಜೆಯ ಎಲ್ಲಾರು ಬರ್‍ರಿ ಅಂತ ಹೇಳಿ ಅಡಿಗೆ ಮಾಡಿಸ್ತೀವಿ ಉಗ್ಗಿ, ಕೇಸ್‌ರ್‍ರಿಬಾತು, ಮಾಡಿ ತೊಟ್ಲು ಕಟ್ತೀವಿ

ಅದಕ್ಕೆ ಮಗುವನ್ನು ಹಾಕಿ ಸೋದರತ್ತೆ, ಸೋದರಮಾವರಾದವರನ್ನು ಕರಿಸಿ ಗುಗ್ಗರಿ ಹಾಕ್ತೀವಲ್ಲ ಐದು ಗಂಟು ಕಟ್ಟಿ ಮಗುವಿನ ತೊಟ್ಟಿಲಲ್ಲಿ ಇಟ್ಟಿರ್ತೀವಿ. ಆಗ ಸೋದರತ್ತೆ ಬಂದು ಪೂಜೆ ಮಾಡಿ ಕಾಯಿ ಹೊಡಿಸಿ ತೊಟ್ಟಿಲಲ್ಲಿರುವ ಗಂಟುಗಳನ್ನು ಐದು ಜನ ಅತ್ತೆ ಮಾವಂದಿರಾದಂತವ್ರು ಬಾಯಿಯಿಂದ ತಗಂಡು ಆ ತೊಟ್ಟಿಲು ಸುತ್ತ ತಿರುಗ್ತಾರೆ ತಿರುಗ್ತಾನೆ ಹೆಸರು ಕರೀತಾರೆ. ಮೊದ್ಲು ಮನೆದೇವರು ಹೆಸರು ಇಲ್ಲಂದ್ರೆ ಅವ್ರು ಹುಟ್ಟಿದ ದಿನ ಯಾವಾರ ಇರುತ್ತದೋ ಆ ಅಕ್ಷರದಿಂದ ಹೆಸರು ಕರಿತಾರೆ ಒಳಗೆ ಹೊರಗೆ ಓಡುತ್ತಾರೆ. ಆಗ ಆ ಕಡೆ ಈ ಕಡೆ ನಿಂತವ್ರು ಪರಿಕೆ ತಗಂಡು, ಅವ್ರಿಗೆ ಹೊಡಿತ್ತಾರೆ. ಹಿಂಗೆ ಐದು ಸಲ ತಿರುಗಿ ಆ ಗುಗ್ಗರಿ ಗಂಟನ್ನು ತಗಂಡು ಹೊತ್ಕೊಂಡು ಹೋಗಿ ತಿನ್‌ತಾರೆ. ಆ ಮೇಲೆ ಬಂದವರಿಗೆಲ್ಲಾ ಗುಗ್ಗರಿ ಸಕ್ಕರೆ ಹಂಚಿ ಊಟಕ್ಕೆ ಇಡುತ್ತಾರೆ. ಈಗಿನ ಕಾಲ್ದಲ್ಲಿ ಏನಂದ್ರೆ ಗುಗ್ಗರಿ ಸ್ವಲ್ಪ ಹಾಕ್ತಾರೆ. ಅಡಿಗೆ ಕೂಡ ಲಾಡು, ಮೈಸೂರ್ ಪಾಕ್ ಜಿಲೇಬಿ ಅಂತವುಗಳನ್ನು ಮಾಡಿ ಹಗಲ ಹೊತ್ತೇ ಹೆಸರು ಇಡ್ತಾರೆ ನೋಡ್ರಿ ಪೋಟೋಗಿಟೋ ಎಲ್ಲ ತಗಿಸ್ತಾರೆ. ದೇವರು ಹೆಸರು ಇಡಂಗಿಲ್ಲ ಬರೇ ಸಿನಿಮಾ ಹೆಸರು ಇಡ್ತಾರೆ. ಕಾಲ ಎಲ್ಲಾ ಬದ್ಲಾಗಿದೆ ನೋಡ್ರಿ.

ಕರ್ನಾರಹಟ್ಟಿಯ ನಾಗಮ್ಮ ಹೇಳುವ ನಾಮಕರಣದ ವಿವರಗಳನ್ನು ಗಮನಿಸಿದರೆ ಕೆಲವು ಸಂಗತಿಗಳು ತಿಳಿಯುತ್ತವೆ. ಮಗುವಿಗೆ ಹೆಸರಿಡಲು ಶಾಸ್ತ್ರ ಕೇಳುವ ಪದ್ಧತಿ ಇದೆ. ಹೀಗೆ ಶಾಸ್ತ್ರ ಹೇಳುವವರು ಜಂಗಮರು. ಅಥವಾ ಆ ಊರಿನ ಮೇಲ್ವರ್ಗದವರಲ್ಲಿ ಒಬ್ಬರಾಗಿರುತ್ತಾರೆ. ಹೀಗೆ ಮೇಲ್ವರ್ಗದವರು ಶಾಸ್ತ್ರ ಹೇಳಿದ ಹೆಸರನ್ನು ಕೆಳವರ್ಗಗಳೂ ಇಡುವ ಸ್ಥಿತ್ಯಾಂತರವನ್ನು ಗಮನಿಸಬಹುದು. ಮೂಲದಲ್ಲಿ ಮನೆದೇವರ ಹೆಸರು, ತಾವು ಆರಾಧಿಸುವ ದೇವರ ಹೆಸರು, ತಮ್ಮ ಹಿರಿಯರ ಹೆಸರು ಕರೆಯುತ್ತಾ ಸಾಂಸ್ಕೃತಿಕವಾಗಿ ಮುಂದಿನ ಪರಂಪರೆ ಕಟ್ಟಿಕೊಳ್ಳುತ್ತಿರುವುದು ಕಣ್ಮರೆಯಾಗುತ್ತಿರುವುದನ್ನು ಇಲ್ಲಿ ವಿಶೇಷವಾಗಿ ಗಮನಿಸಲು ಸಾಧ್ಯವಿದೆ. ಆಹಾರ ಪದ್ಧತಿ ಬದಲಾಗಿರುವುದನ್ನು ಗಮನಿಸಬಹುದು. ಕೇಸರಿಬಾತು, ಲಾಡು, ಮುಂತಾದ ಸಾರ್ವತ್ರಿಕವಾಗಿ ಮಾಡುವ ಸಿಹಿ ಪದಾರ್ಥವನ್ನು ಮಾಡುತ್ತಿರುವುದನ್ನು ಗಮನಿಸಲು ಸಾಧ್ಯ. ಇದೆಲ್ಲದರ ನಡುವೆಯೂ ಗುಗ್ಗರಿ ಕಾಳಿನ ಆಚರಣೆ ಮಾತ್ರ ಮೂಲ ಬುಡಕಟ್ಟಿನ ಫಲವಂತಿಕೆಯನ್ನು ಬಿಂಬಿಸುತ್ತಿದೆ.

೪.೧.೩.ಒಡಲಕ್ಕಿ ಶಾಸ್ತ್ರ

ಒಡಲಕ್ಕಿ ಶಾಸ್ತ್ರಕ್ಕೆ ಸಂಬಂಧಿಸಿದ ಕ್ಯಾಸಪುರದ ಹಟ್ಟಿ ಪಾಲಮ್ಮ ಹೇಳುವ ವಿವಿರ ಈ ಕೆಳಗಿನಂತಿದೆ.

ಹೆಸರು - ಬೋರಮ್ಮ

ವಯಸ್ಸು - ೪೪ ವರ್ಷ


ವೃತ್ತಿ - ಮನೆಗೆಲಸ

ಊರು - ದೇವರಹಟ್ಟಿ

ಅಂಚೆ - ಅಪ್ಪಯ್ಯನಹಳ್ಳಿ

ತಾಲೂಕು - ಕೂಡ್ಲಿಗಿ

ಜಿಲ್ಲೆ - ಬಳ್ಳಾರಿ




ಗರ್ಭಿಣಿಯಾಗಿರುವಾಗ ಹೆಣ್ಣು ಮಕ್ಕಳಿಗೆ ಮಾಡುವ ಶಾಸ್ತ್ರ ಯಾರೇ ಆಗಿರಬಹುದು ಹೆಣ್ಣು ಮಕ್ಕಳು ಗರ್ಭಿಣಿಯಾಗಿರ್ತಾರಲ್ಲ ಆಗ ೫ನೇ ತಿಂಗಳಲ್ಲಿ ಇಲ್ಲಂದ್ರೆ ೯ನೇ ತಿಂಗಳಲ್ಲಿ ಈ ಶಾಸ್ತ್ರ ಮಾಡ್ತೀವಿ. ಯಾರೇ ಹೆಣ್ಣು ಮಗಳಾದ್ರೂ ಕೂಡ ಅವ್ರು ಎಂತಹ ಬಡತನದಲ್ಲಿರಲಿ ಮೊದಲು ಗರ್ಭಿಣಿ ಆಗಿರುವಾಗ ಈ ಶಾಸ್ತ್ರ ಮಾಡ್ತೀವಿ. ಚೊಚ್ಚಲ ಬಸಿರು ಅಂತಾರೆ, ಅಂತವರಿಗೆ ಗಂಡನ ಮನೆಯಲ್ಲಿರುವ ಹೆಣ್ಣು ಮಗಳನ್ನು ಕರ್ಕೊಂಡು ಬಂದು ಅವಳಿಗೆ ಹಸಿರು ಸೀರೆ, ಹಸಿರು ಕುಪ್ಪಸ, ಹಸಿರು ಬಳೆ ಜೊತೆ ಹಣ್ಣುಗಳು ಅವರಿಗೆ ಇಷ್ಟ ಆಗಿರುವಂತವು ತರಬೇಕು. ತಂದು ಅಕ್ಕಿ, ಎಲೆ, ಅಡಿಕೆ, ಕೊಬ್ಬರಿ, ಕಡ್ಲೆ (ಪುಟಾಣಿ) ಹಸಿಕಡ್ಲೆ ಅಂತೀವಿ, ಅರಿಷಿಣ ಇವುಗಳೆಲ್ಲವನ್ನು ತಂದು ಅವಳಿಗೆ ಉಡಿ ತುಂಬ್ತೀವಿ. ಹಿಂಗೆ ತವರು ಮನೆಗೆ ಬಂದ ತಂದೆ ತಾಯಿ ಮಾತ್ರವಲ್ಲ ಅವರವರ ಸಂಬಂಧಿಕರೆಲ್ಲ ತರ್ತಾರೆ ತಂದು ಇದೇ ರೀತಿ ಮಾಡ್ತಾರೆ. ಜೊತೆಗೆ ತಂದೆ ತಾಯಿ ಮನೆಯರಲ್ಲದೆ ಕೆಲವರು ಗಂಡನ ಮನೆಯವ್ರು ಕೂಡ ಹೀಗೆ ತಂದು ಮಾಡ್ತಾರೆ. ಹಿಂಗೆ ಅವಳಿಗೆ ಶಾಸ್ತ್ರ ಮಾಡುವುದರಿಂದ ಹೆರಿಗೆ ಆಗ್ತದಲ್ಲ ಆವಾಗ ಅವಳಿಗೆ ಏನು ತೊಂದರೆ ಆಗೋದಿಲ್ಲ ಅವಳಿಗೆ ಇಷ್ಟವಾದಂತಹವು ತರದಿದ್ದರೆ ಹೆರಿಗೆಯು ಸರಿಯಾಗಿ ಆಗಲಿಲ್ಲ ಅಂತಾರೆ ಅದಕ್ಕೆ ಈ ಶಾಸ್ತ್ರಮಾಡ್ತೀವಿ. ಇದು ಇವತ್ತೇನಲ್ಲ ಹೊಸದು ನಮ ಮುತ್ತಜ್ಜನ ಕಾಲದಿಂದಲೂ ಹಿಂಗೆ ಮಾಡಿಕೊಂಡು ಬಂದಾರೆ ಅಂತಹೆಳ್ತಾರೆ ಅದಕ್ಕೆ ನಾವು ಕೂಡ ಅದೇ ರೀತಿ ಮಾಡ್ತೀವಿ ನೋಡ್ರಿ. ಕೆಲವ್ರು ಅಂತೂ ಪ್ರತಿಯೊಂದು ಮಗುವಿಗೆ ಗರ್ಭಿಣಿಯಾದಾಗ ಮಾಡ್ತಾರೆ, ಕೆಲವರು ಕೇವಲ ಚೊಚ್ಚಲ ಬಸಿರಿಗೆ ಮಾತ್ರ ಮಾಡ್ತಾರೆ, ಮನೆಯ ಕಡೆ ಚೆನ್ನಾಗಿದ್ರೆ ಅವಳು ಬಸಿರಿಯಾದಾಗ ಸಹನೂ ಪ್ರತಿಯೊಂದು ಸಹ ಹಾಗೆ ಮಾಡ್ತಾರೆ, ಇಲ್ಲದಂತವರು ಒಂದೇ ಸಲ ಮಾಡ್ತಾರೆ ನೋಡ್ರಿ, ನಾವು ಒಡಲಕ್ಕಿ ತುಂಬುವ ಶಾಸ್ತ್ರ ಅಂತ ಕರಿತೀವಿ.

ದೇವರಹಟ್ಟಿಯ ಬೋರಮ್ಮ ಹೇಳುವ ಒಡಲಕ್ಕಿ ಶಾಸ್ತ್ರದ ಆಚರಣೆ ಇದು ತೀರ ಮ್ಯಾಸಬೇಡರಿಗೆ ವಿಶೇಷ ಎಂದೇನೂ ಅನಿಸುತ್ತಿಲ್ಲ. ಸಾಮಾನ್ಯವಾಗಿ ಬಹುಪಾಲು ಸಮುದಾಯಗಳು ಮಾಡುವ ಸಾಮಾನ್ಯ ವಿವರದಂತಿದೆ. ಅಂದರೆ ಈ ಬಗೆಯ ಆಚರಣೆಯ ಮೂಲಕ ಸಮುದಾಯವೊಂದು ತನ್ನ ವಿಶಿಷ್ಟತೆಯನ್ನು ಬಿಟ್ಟುಕೊಟ್ಟು, ಸಾಮಾನ್ಯವಾಗಿ ಎಲ್ಲಾ ಸಮುದಾಯಗಳು ಆಚರಿಸುವ ಏಕರೂಪಿ ಆಚರಣೆಯ ಕಡೆ ತುಡಿಯುತ್ತಿರುವ ಸೂಚನೆಗಳು ಈ ಮಾತಿನಲ್ಲಿವೆ.

೪.೧.೪.ಋತುಮತಿಶಾಸ್ತ್ರ

ಮ್ಯಾಸಬೇಡರ ಸಮುದಾಯದ ಆಚರಿಸುವ ಆಚರಣೆಗಳಲ್ಲಿ ಋತುಮತಿ ಶಾಸ್ತ್ರ ವಿಭಿನ್ನವಾಗಿ ಆಚರಿಸುವಂತಹದ್ದು, ಈ ಒಂದು ಆಚರಣೆ ಪ್ರಾಚೀನ ಕಾಲದಿಂದಲೂ ಪಾರಂಪರಿಕವಾಗಿ ಇವತ್ತಿನವರೆಗೆ ಮುಂದುವರೆಸಿಕೊಂಡು ಬಂದಿದ್ದಾರೆ. ಸಾಮಾನ್ಯವಾಗಿ ಹೆಣ್ಣು ಮಕ್ಕಳು ಹನ್ನೆರಡು ವರ್ಷ ವಯಸ್ಸು ಮೀರಿದ ಕೂಡಲೇ ಋತುಮತಿಯಾಗುತ್ತಾರೆ. ಇಂತಹ ಆಚರಣೆ ಸ್ವತಃ ಸಮುದಾಯದ ಹಿರಿಯ ಬಚ್ಚಿಬೋರಯ್ಯನಹಟ್ಟಿ ಸಣ್ಣೋಬಮ್ಮ ಹೇಳುವ ವಿವರ ಹೀಗಿದೆ.

ಹೆಸರು - ಸಣ್ಣ ಓಬಮ್ಮ



ವಯಸ್ಸು - ೬೭ ವರ್ಷ

ವೃತ್ತಿ - ಮನೆಗೆಲಸ

ಊರು - ಬಚ್ಚಿಬೋರಯ್ಯನಹಟ್ಟಿ

ಅಂಚೆ - ಬಚ್ಚಿಬೋರಯ್ಯನಹಟ್ಟಿ

ತಾಲೂಕು - ಹಿರಿಯೂರು

ಜಿಲ್ಲೆ - ಚಿತ್ರದುರ್ಗ

"ನೋಡ ತಮ್ಮ ನಾವು ಈ ಪದ್ಧತಿಯನ್ನು ಹಳೇ ಕಾಲದಿಂದ್ಲು ಮಾಡಿಕೊಂಡು ಬಂದೀವಿ ಇದೇನು ಇವತ್ತಿಂದಲ್ಲ. ಹೆಣ್ಣು ಮಕ್ಳು ಹನ್ನೆರಡು ಇಲ್ಲಂದ್ರೆ ಹೆಚ್ಚು ಕಡಿಮೆ ಹದಿನಾಲ್ಕು ವರ್ಷಕ್ಕೆ ಋತುಮತಿಯಾಗ್ತಾರೆ. ಋತುಮತಿಯಾದಾಗ ಅವಳು ತಾಯಿಗೆ ಇಲ್ಲಂದ್ರೆ, ತಮ್ ಜೊತೆಯಲ್ಲಿ ಇರುವ ಹುಡುಗಿಯರಿಗೆ ಹೇಳ್ತಾಳೆ. ಇಲ್ಲಂದೆ, ಸುಮ್ನೆ ಒಂದು ಹತ್ರ ಕುಂತ್ಕೊಂಡು ಅಳ್ತಾಳೆ ಹಿಂಗೆ ಋತುಮತಿಯಾದಕೂಡ್ಲೆ ಎಲ್ಲ ಸಂಬಂಧಿಕರಿಗೆ ತಿಳಿಸ್ತೀವಿ ಮೊದ್ಲು ಸೋದರ ಮಾವನಿಗೆ ಹೇಳ್ತೀವಿ ಅವುನು ಬೇವಿನ ತೊಪ್ಲ ಇಲ್ಲಂದ್ರೆ ಹೊಂಗೆ ತೊಪ್ಲ ತರ್ತಾನೆ. ಸೋದರತ್ತೆ ಕೂಟ ನೀರು ಹಾಕಿಸುತ್ತೇವೆ. ಹಿಂಗೆ ನೀರು ಹಾಕುವಾಗ ಜೊತೆಗೆ ೬-೭ ವರ್ಷದ ಮಗುವನ್ನು ಜೊತೆಗೆ ಕುಂದ್ರಿಸಿ ಇಬ್ರಿಗೆ ಹಾಕಿ ಇಬ್ರನ್ನು ಗುಡ್ಲು ಹಾಕಿ ಅದರೊಳಗೆ ಕುಂದ್ರಿಸ್ತೀವಿ. ಅವ್ರಿಗೆ ಊಟ ಮಾಡ್ಲಿಕ್ಕೆ ಬಂಡೆ ಮತ್ತು ನೀರು ಕುಡಿಯಲಿಕ್ಕೆ ಮಣ್ಣಿನ ಗಿಂಡಿ ಇಲ್ಲಂದ್ರೆ, ತೆಂಗಿನ ಚಿಪ್ಪು ಕೊಡ್ತೀವಿ. ಅದ್ರಲ್ಲೇ ಊಟ ನೀರು ಎಲ್ಲ. ಹಿಂಗೆ ಮೊದ್ಲು ಐದು ದಿನ ಕುಂದ್ರಿಸಿ ಐದನೇ ದಿನದಲ್ಲಿ ನೀರು ಹೊಯ್ದು ಊರ ಹೊರಗಡೆ ತಂಗಡೆ ಗಿಡ ದಾಟುವ ಕಾರ್ಯ (ತಂಗಡೆ ಗಿಡದಾಟುವ ಕಾರ್ಯ ಮಾಡುವ ಉದ್ದೇಶವೆಂದರೆ ಇದು ಫಲವಂತಿಕೆಯ ಸಂಕೇತ ಮುಂದೆ ಮಕ್ಕಳ ಫಲ ಲಭಿಸಲೆಂದು ಹೇಳುತ್ತಾರೆ. ಹಾಗೆ ಇದು ಮೂಲತಃ ಬುಡಕಟ್ಟುಗಳು ಕಾಡಿನಲ್ಲಿ ವಾಸಿಸುವುದರಿಂದ ಅವರು ಕಾಡಿನ ಸಂಸ್ಕೃತಿಯನ್ನು ಪ್ರತಿನಿಧಿಸುವ ಸಂಕೇತವಾಗಿದೆ.) ಮಾಡ್ತೀವಿ. ನಂತರ ಹಾಗೆ ಹದಿನಾರು ದಿವಸತನಕ ಕುಂದ್ರಿಸ್ತೀವಿ. ಎರಡು ಇಲ್ಲಂದ್ರೆ ಮೂರು ದಿನಕ್ಕೊಮ್ಮೆ ಹಸಿ ತೊಪ್ಲ ತಂದು ಒಣಗಿರು ತೊಪ್ಲನ್ನು ಜೊತೆಗೆ ಬಂಡೆ ಚಿಪ್ಪು ಸಮೇತ ಸುಡ್ತೀವಿ, ಅದನ್ನು ಕೂಡ ಊರು ಹೊರಗಡೆ ತಂಗಡೆ ಗಿಡಕ್ಕೆ ಹಾಕಿ ಸುಡೋದು ಹಿಂಗೆ ಹದಿನಾರು ದಿವಸ ತನಕ ಮಾಡ್ತೀವಿ. ಐದನೆ ದಿನ ನಂತರ ೬ನೇ ದಿನದಿಂದ ೧೬ದಿವಸ ತನಕ ಸಂಬಂಧಿಕರು ಮತ್ತು ಊರಿನ ಬಂಧು ಬಾಂದವರು ಅವ್ರಿಗೆ ಒಳ್ಳೊಳ್ಳೆ ಅಡಿಗೆ ಮಾಡಿ ಹಾಕ್ತಾರೆ. ಕಡ್ಲೆ ಬೆಲ್ಲ, ಕೂಡ ಜೊತೆಗೆ ಕೊಡ್ತಾರೆ. ಹಿಂಗೆ ಹದಿನಾರು ದಿನದಲ್ಲಿ ಸ್ನಾನ ಮಾಡ್ತಿ ಒಳಕ್ಕೆ ಕರ್ಕೊಂತೀವಿ ಆ ದಿನ ಸೋದರ ಮಾವ ಅವಳಿಗೆ ನಾಲಿಗೆ ಸುಡುತ್ತಾನೆ (ನಾಲಿಗೆ ಸುಡುವ ಉದ್ದೇಶವೆಂದರೆ ಅವಳು ಮೈಲಿಗೆಯಾಗಿರುತ್ತಾಳೆ. ನಾಲಿಗೆ ಸುಡುವ ಮೂಲಕ

ಅವಳನ್ನು ಪವಿತ್ರಳನ್ನಾಗಿಸಿಕೊಳ್ಳುತ್ತಾರೆ.) ಮತ್ತು ಆಕಳ ಗೋಮಂತ್ರ ತಂದು ಅವಳಿಗೆ ಮೈ ಮೇಲೆ ಸ್ವಲ್ಪ ಹಾಕಿ ಕುಡಿಯಲಿಕ್ಕೆ ಕೊಡ್ತಾನೆ. (ಜೊತೆಗೆ ಆಕಳಿನ ಗೋಮೂತ್ರವನ್ನು ಚಿಮ್ಮಿಕಿಸುವುದು ಇದು ಕೂಡ ಅವಳ ಮೈಲಿಗೆಯಾಗಿದ್ದಾಳೆ ಎನ್ನುವ ಉದ್ದೇಶದಿಂದ ಆಕಳಿನ ಗೋಮೂತ್ರ ಚಿಮ್ಮಿಕಿಸುತ್ತಾರೆ. ಜೊತೆ ಇದು ಪಶುಪಾಲನೆ ಸಂಸ್ಕೃತಿಯ ಪ್ರತೀಕವನ್ನು ಸೂಚಿಸುತ್ತದೆ.) ಒಂದು ಪಕ್ಷ ಮದುವೆಯಾಗಿದ್ದರೆ. ಋತುಮತಿಯ ಸುದ್ದಿ ಗಂಡನ ಮನೆಗೆ ಹಿಂದೆ ಮಡಿವಾಳನ ಮೂಲಕ ತಿಳಿಸುತಿದ್ರಂತೆ. ಈಗೇನು ಸಂಬಂಧಿಕರಲ್ಲಿ ಯಾರಾದ್ರು ಒಬ್ರು ಹೋಗಿ ತಿಳಿಸುತ್ತಾರೆ. ಹಿಂಗೆ ತಿಳಿಸಿದಾಗ ಗಂಡನ ಮನೆಯವ್ರೇ ಸಿಹಿ ಊಟ ಕಟ್ಟಿಕೊಂಡು ಹಣ್ಣು ಹಂಪಲ ಜೊತೆಗೆ ಹೊಸ ಬಟ್ಟೆಗಳನ್ನು ಸಹ ತರುತ್ತಾರೆ. ಇತ್ತೀಚಿನ ದಿನಗಳಲ್ಲಿ ಋತುಮತಿ ಶಾಸ್ತ್ರ ಹೆಂಗೆ ಮಾಡ್ತಾರಂದ್ರೆ. ಅವಳನ್ನು ಒಳಗೆ ಕರ್ಕೊಳ್ಳುವಾಗ ಅವೊತ್ತಿನ ದಿನ ರೇಡಿಯೋ ಹಾಕ್ಸಿ, ಮೇಳವನ್ನು ಮಾಡಿಸುತ್ತಾರೆ ಜೊತೆಗೆ ಒಳ್ಳೊಳ್ಳೆ ಅಡಿಗೆ ಮಾಡುತ್ತಾರೆ. ಬಡವರಂತವ್ರು ಆದ್ರೆ ಊರಿನಲ್ಲೇ ಅಥವಾ ಬೇರೆ ಊರಿನಿಂದ ಹಲಗೆ ತರಿಸಿ ಹಲಗೆಬಾರಿಸಿಕೊಂಡು ಅವಳ ಕಾರ್ಯಗಳನ್ನು ಮಾಡ್ತಾರೆ. ಹಿಂಗೆ ಋತುಮತಿಶಾಸ್ತ್ರ (ಗೊಪ್ಪದ್ಯೆಯದೆ ಶಾಸ್ತ್ರ ತೆಲುಗಿನಲ್ಲಿ) ಮಾಡ್ತಾರೆ ನೋಡ್ರಿ, ನಮ್ಮ ಜಾತಿಯೊಳಗೆ ಬೇರೆ ಬೇರೆ ಜಾತಿ ಹೆಂಗೋ ನಮಗೇನು ಜಾಸ್ತಿ ಗೊತ್ತಿಲ್ಲ."

ಸಣ್ಣೋಬಮ್ಮ ಅವರು ಋತುಮತಿಶಾಸ್ತ್ರದ ಬಗ್ಗೆ ಕೊಡುವ ಮಾಹಿತಿಯನ್ನು ಗಮನಿಸಿದರೆ ಕೆಲವು ಅಂಶಗಳು ಸ್ಪಷ್ಟವಾಗುತ್ತವೆ. ಈ ಆಚರಣೆಯು ಬಹುಪಾಲು ಕಾಡಿನ ಸಂಬಂಧವನ್ನು ಮತ್ತೆ ಮತ್ತೆ ನೆನಪಿಸುತ್ತದೆ. ಇಲ್ಲಿನ ಮಾತಿನಲ್ಲಿ ಕಾಡು ಮತ್ತು ನಾಡಿನ ಹೊಂದಾಣಿಕೆಯು ಭಿನ್ನ ಆಯಾಮ ವಿರುವುದನ್ನು ಗುರುತಿಸಬಹುದು. ಋತುಮತಿಯಾದ ಹುಡುಗಿಯನ್ನು ಮನೆ ಹೊರಗೆ ಹೊಗೆಸೊಪ್ಪಿನ ಗುಡಿಸಲು ಹಾಕಿ ಕೂಡಿಸುವುದು ತಂಗಡೆ ಗಿಡ ಮುಟ್ಟಿಸುವುದು. ಮಾವನಿಂದ ನಾಲಿಗೆ ಸುಡಿಸಿ ಗೋಮೂತ್ರ ಚಿಮ್ಮಿಕಿಸುವುದು ಇವುಗಳೆಲ್ಲವೂ ಪಶುಪಾಲನೆ ಮತ್ತು ಕಾಡಿನ ಸಂಬಂಧವನ್ನು ಅದು ಸಂಕೀರ್ಣತೆಯನ್ನು ತೋರಿಸುತ್ತವೆ. ಹುಡುಗಿಗೆ ಮದುವೆಯಾಗಿದ್ದು ಋತುಮತಿಯಾದರೆ ಮಾಡುವ ಆಚರಣೆಯ ವಿವರಕೇಳಿದರೆ ಬಾಲ್ಯವಿವಾಹದ ಲಕ್ಷಣಗಳು ಕಾಣಿಸುತ್ತವೆ. ಸಣ್ಣೋಬಮ್ಮನ ಮಾತಿನಲ್ಲಿ ಈ ಆಚರಣೆ ಬದಲಾಗುತ್ತಿರುವ ಲಕ್ಷಣಗಳಿವೆ. ಈ ಬದಲಾವಣೆ ಬಗ್ಗೆ ಅಯಮ್ಮನಲ್ಲಿ ಆತಂಕವಾಗಲಿ ದುಃಖವಾಗಲಿ ಇಲ್ಲದಿರುವುದನ್ನು ಗಮನಿಸಬಹುದು. ಶಾಮಿಯಾನ ಹಾಕಿಸುವುದು ಮೈಕ್ ಹಾಕಿಸುವುದು. ಈ ಮೂಲಕ ಋತುಮತಿ ಶಾಸ್ತ್ರ ಆಧುನಿಕ ಪರಿಕರಗಳ ಜತೆ ಬೆಸೆದುಕೊಳ್ಳುತ್ತಿರುವುದು ವೈವಿಧ್ಯತೆ ಏಕತೆಯಾಗುತ್ತಿರುವುದನ್ನು ಗಮನಿಸಬಹುದು.

ಈ ಮೇಲಿನ ಎಲ್ಲಾ ಕಾರ್ಯಗಳು ಸಹ ಇವತ್ತು ಸಮುದಾಯ ಇದೇ ರೀತಿಯಾಗಿ ಮಾಡ್ತಾ ಇದೆ. ಏನು ಬದಲಾವಣೆ ಇಲ್ಲ. ಇಂದಿಗೂ ಕೂಡ ಹಟ್ಟಿಗಳಲ್ಲಿ ಪ್ರಚಲಿತ ವಿದೆ. ಆದರೆ ಕರಿಶೆಟ್ಟಿ ರುದ್ರಪ್ಪನವರು ತಮ್ಮ ಸಂಶೋಧನ ಪ್ರಬಂಧದಲ್ಲಿ ನಾಗರಿಕತೆಗೆ ಒಳಗಾಗಿ ಮನೆಯಲ್ಲೇ ಋತುಮತಿಯಾದವಳನ್ನು

ಇರಿಸಿಕೊಂಡು ಕಾರ್ಯಗಳನ್ನು ಮಾಡ್ತಾರೆ ಎಂದಿದ್ದಾರೆ. ಆದರೆ ಅವರು ಹೇಳುವ ಪ್ರಕಾರ ಎಲ್ಲೋ ಒಂದು ಕಡೆ ಉದ್ಯೋಗಸ್ಥರ ಕುಟುಂಬದಲ್ಲಿ ಅದರಲ್ಲಿ ನಗರ ಮತ್ತು ಪಟ್ಟಣ ಅಂತ ಪ್ರದೇಶಗಳಲ್ಲಿ ಇರಬಹುದು. ಪಕ್ಕ ಹಳ್ಳಿಗಳಲ್ಲಿ ಅವರ ಹೇಳುವ ಪ್ರಕಾರ ಇಲ್ಲ. ಮನೆಯ ಹೊರಗಡೆನೇ ಇರಿಸಿಕೊಂಡು ಕಾರ್ಯಗಳನ್ನು ಮಾಡ್ತಾರೆ.

೪.೨.೧.ನಾಗರ ಪಂಚಮಿ

ಆಷಾಢ ಮಾಸ ಕಳೆದು ಶ್ರಾವಣ ಆರಂಭವಾಗುತ್ತವೆ ಪಂಚಮಿಯ ಹಬ್ಬವು ಬರುವುದು ಶ್ರಾವಣ ಶುದ್ಧ ಪಂಚಮಿಗೆ 'ನಾಗರಪಂಚಮಿ' ಎಂದು ಕರೆಯುವರು. ಇದು ಮಣ್ಣೆತ್ತು ಮತ್ತು ಗುಳ್ಳವ್ವನ ಪೂಜೆಯ ನಂತರ ಬರುವ ಮೂರನೇ ಮಣ್ಣು ಪೂಜೆಯಾಗಿದೆ. ನಾಗರಪಂಚಮಿ ಮೂರು ದಿವಸದ ಹಬ್ಬ. ಮೊದಲನೆಯದಿನ ನಾಗರ ಅಮವಾಸ್ಯೆ, ಎರಡನೆಯದಿನ ನಾಗಚವತಿ ಮೂರನೆಯ ದಿನ ನಾಗರ ಪಂಚಮಿ. ಗಣಪತಿಯ ಹೊಟ್ಟೆಯ ಪಟ್ಟಿಯಾಗಿ, ಶಿವನ ಆಭರಣವಾಗಿ ವಿಷ್ಣುವಿನ ಹಾಸಿಗೆಯಾಗಿ ಕುಂಡಲಿನೀ ಶಕ್ತಿಯ ಪ್ರತೀಕವಾಗಿ, ಭೂಮಿಯನ್ನು ಹೊತ್ತ ಆದಿಶೇಷನಾಗಿ ಭಾರತೀಯರಿಗೆಲ್ಲ ಪೂಜಾರ್ಹ ದೇವನಾಗಿದ್ದಾನೆ. ಪ್ರಾಚೀನ ಕಾಲದಲ್ಲಿ ಹಾವಿನ ಭಯಂಕರ ವಿಷವನ್ನು ಸ್ಮರಿಸಿ ಅವುಗಳಿಂದ ತೊಂದರೆ ಬಾರದಿರಲೆಂಬ ಉದ್ದೇಶದಿಂದ ಈ ಹಬ್ಬವನ್ನು ಆಚರಣೆ ಮಾಡುತ್ತಾರೆ. ಎಲ್ಲೆಲ್ಲೋ ಹಸಿರು ತುಂಬಿ ಕಂಗೊಳಿಸುವ ಮಳೆಗಾಲದಲ್ಲಿ ಬರುವ ಶ್ರಾವಣ ಮಾಸದಲ್ಲಿ ಹಾವುಗಳ ಕಾಟ ಸ್ವಲ್ಪ ಜಾಸ್ತಿ ಎಂದು ಹೇಳಬಹುದು. ಈ ವಿಷ ಜಂತುಗಳ ಬಾಧೆ ನಮಗೆ ತಟ್ಟದಿರಲಿ ಎಂಬ ಉದ್ದೇಶ ಪೂಜಾ ರೂಪದಲ್ಲಿ ಪರಿಣಮಿಸಿರಬಹುದು. ಹೀಗೆ ಪ್ರಾಚೀನ ಕಾಲದಿಂದಲೂ ಆಚರಣೆಯಲ್ಲಿ ಬಂದಿರುವ ಹಬ್ಬವನ್ನು ಸಮಾಜದಲ್ಲಿ ಎಲ್ಲಾ ಸಮುದಾಯಗಳು ಆಚರಿಸುವಂತೆ ಮ್ಯಾಸಬೇಡರು ಸಹ ಆಚರಿಸಿಕೊಂಡು ಬಂದಿದ್ದಾರೆ. ಈ ಹಬ್ಬವನ್ನು ಕುರಿತು ಕುಮ್ಮತಿಯ ಬೋರಮ್ಮ ಹೇಳುವ ವಿವರ ಹೀಗಿದೆ.

ಹೆಸರು - ಬೋರಮ್ಮ
ವಯಸ್ಸು - ೫೫ ವರ್ಷ
ವೃತ್ತಿ - ಕೂಲಿ
ಊರು - ಕುಮ್ಮತಿ
ಅಂಚೆ - ಕುಮ್ಮತಿ
ತಾಲೂಕು - ಮೊಳಕಾಲ್ಮೂರು
ಜಿಲ್ಲೆ - ಚಿತ್ರದುರ್ಗ



"ಶ್ರಾವಣ ಮಾಸ ಆರಂಭವಾಗುತ್ತಿದ್ದಂತೆಯೇ ಹಳ್ಳಿಗಳಲ್ಲಿ ಹಬ್ಬವನ್ನು ಆಚರಿಸಲು ಎಲ್ಲಾ ರೆಡಿ ಮಾಡಿಕೊಳ್ತೀವಿ. ಶ್ರಾವಣ ಮಾಸದಲ್ಲಿ ಕೆಲವರು ಸೋಮುವಾರ ಕೆಲವರು ಶುಕ್ರವಾರ ಮಾಡ್ತಾರೆ

ಆವತ್ತು ಮನೆಗಳಲ್ಲಿ ರೊಟ್ಟಿ ಮಾಡುವುದು ಕುಟ್ಟುವುದು, ಬೀಸುವುದು ಮಾಡ್ತೀವಿ ಉಂಡಿ ಕಟ್ಟುವ ಕೆಲಸದಲ್ಲಿ ಹೆಣ್ಣುಮಕ್ಕಳು ತೊಡಗಿಸಿಕೊಂಡಿರ್ತೀವಿ, ಮನೆಗಳಲ್ಲಿ ಸ್ನಾನ-ಗೀನ ಮಾಡಿ ಹೊಸಬಟ್ಟೆಗಳನ್ನು ಹಾಕಿಕೊಳ್ತೀವಿ. ಹೆಣ್ಣು ಮಕ್ಕಳು ಎಲ್ಲಾರು ಹೊಸ ಬಟ್ಟೆಗಳನ್ನು ಹಾಕಿಕೊಂಡು ಒಡವೆಗಳನ್ನು ಹಾಕಿಕೊಳ್ತಾರೆ. ನಾಗಪ್ಪನ ಎಡೆಗೆ ಎಳ್ಳಿಟ್ಟು, ತಂಬಿಟ್ಟು, ನೆಲಗಡಲೆ, ಎಳ್ಳು ಉಂಡಿ ತಯಾರಿಸಿಕೊಂಡು ಹಂಗನೂಲ ಜನಿವಾರಗಳನ್ನು ತಂದು ತಂಬಿಗೆ ಮೀಸಲು ನೀರು, ವಿಭೂತಿ ಕುಂಕುಮ ಮುಂತಾದ ಪೂಜಾ ಸಾಮಾಗ್ರಿಗಳನ್ನು ರೆಡಿಮಾಡಿಕೊಂಡು ಊರು ಮುಂದಿನ ನಾಗಪ್ಪನ ಕಟ್ಟೆಗೆ, ಕೆಲವರು ನಾಗಪ್ಪನ ಕಟ್ಟೆ ಇಲ್ಲದಿದ್ದರೆ ಊರಿನ ಸುತ್ತ ಮುತ್ತ ಉತ್ತ ಇರ್ತದಲ್ಲ ಅಲ್ಲಿಗೆ ಹೋಗಿ ಪೂಜೆ ಮಾಡಿಕೊಂಡು ಜನಿವಾರವನ್ನು ಹಾಕಿ ಎಡೆ ಇಟ್ಟು, ಹಾಲನ್ನು ಹಾಕಿ ಬರ್ತೀವಿ. ಹೊಸದಾಗಿ ಮದುವೆಯಾದ ಮದುವಣಗಿತ್ತಿಯರಂತೂ ಎಲ್ಲಿದ್ದರೂ ಸಹ ಆವತ್ತಿನ ದಿನ ಹಬ್ಬಕ್ಕೆ ಬಂದು ಉತ್ತಕ್ಕೆ ಹಾಲುಹಾಕುತ್ತಾರೆ. ನೋಡ್ರಿ ಹಿಂಗೆ ನಾಗಪ್ಪನ ಪೂಜೆಯನ್ನು ಮಾಡ್ತೀವಿ. ನಂತರ ದಿನ ಉಂಡಿಯ ಜೊತೆಗೆ ಎಳ್ಳು ಹೋಳಿಗೆ ಶೇಂಗಾ ಹೋಳಿಗೆ, ಕರ್ಚಿಕಾಯಿ ಕೂಡ ಮಾಡ್ತೀವಿ ನೋಡ್ರಿ"

ಈ ಮೇಲಿನ ಮಾಹಿತಿಯಂದ ಪ್ರಮುಖವಾಗಿ ತಿಳಿಯುವುದೇನೆಂದರೆ, ಸಾಂಸ್ಕೃತಿಕ ಹಬ್ಬಗಳನ್ನು ಆಚರಿಸುತ್ತಲೇ ಸಮುದಾಯಗಳು ತಮ್ಮ ಪರಂಪರೆಯನ್ನು ಜೀವಂತಗೊಳಿಸುತ್ತಾರೆ. ಸಾಂಸ್ಕೃತಿಕ ಶ್ರೀಮಂತಿಕೆಯಲ್ಲಿ ತುಂಬಿ ತುಳುಕುತ್ತಿರುವ ಸಮುದಾಯಗಳು ವರ್ಷಕ್ಕೆ ಒಂದು ಸಾರಿಯಾದರೂ ತವರಿಗೆ ಹೆಣ್ಣು ಮಕ್ಕಳನ್ನು ಕರೆಸಿ ಅವರ ಆಸೆ ಆಕಾಂಕ್ಷೆಗಳನ್ನು ಹಿಡೇರಿಸುತ್ತಾರೆ. ಹೊಸದಾಗಿ ಮದುವೆಯಾದ ಹೆಣ್ಣು ಮಕ್ಕಳಿಗಂತೂ ಇದೊಂದು ಫಲವಂತಿಕೆಯ ಸಂಕೇತವೆಂತಲೂ ಹೇಳುವ ವಾಡಿಕೆ ಇದೆ. ಮಾನವರಲ್ಲಿ ಉತ್ತಮ ನೆಂಟಸ್ತಿಕೆ ಮಧುರ ಬಾಂಧವ್ಯವನ್ನು ಕಲ್ಪಿಸುವ ಈ ಹಬ್ಬವನ್ನು ಇಡೀ ಕನ್ನಡಿಗರಿಗೆ ಹಿಂದಿನಿಂದಲೂ ಸಂಪ್ರದಾಯವಾಗಿ ಬಂದಿದೆ ಹೆಣ್ಣು ಮಕ್ಕಳ ಬಾಳಿನಲ್ಲಿ ಪಂಚಮಿ ಹಬ್ಬ ಒಂದು ಘಟ್ಟ ಮಾತ್ರವಲ್ಲ ನಿಜ ಜೀವನದ ಉತ್ತಮ ಸಂಸ್ಕೃತಿಯನ್ನು ಹೊತ್ತುರವ ಸಂಕೇತವೂ ಆಗಿದೆ ಎಂದು ಹೇಳಬಹುದು.

೪.೨.೨.ಹಿರಿಯರ ಹಬ್ಬ

ವ್ಯಾಸಬೇಡರು ತಮ್ಮ ಬುಡಕಟ್ಟಿನ ಸಮುದಾಯದ ಲಕ್ಷಣಗಳನ್ನು ಉಳಿಸಿಕೊಂಡು ಬಂದಿರುವುದರಿಂದ ಆಧುನಿಕ ಮತ್ತು ಪರಂಪರಾಗತ ಸಂಗತಿಗಳ ನಡುವೆ ದ್ವಂದ್ವಗಳು ಏರ್ಪಡುವುದು ಸಹಜ. ತಾನು ಮತ್ತು ತನ್ನ ಸಮುದಾಯದ ನೇತಾರರನ್ನು ಲಿಖಿತ ಮೌಖಿಕ ಪ್ರಕಾರಗಳಲ್ಲಿ ಜೀವಂತಗೊಳಿಸಿಕೊಂಡಿರುವುದನ್ನು ಇಂದಿಗೂ ನೋಡಬಹುದಾಗಿದೆ. ಹಿಂದೂ ಧರ್ಮದ ವ್ಯಾಪ್ತಿಯಲ್ಲಿಯೇ ಬುಡಕಟ್ಟು ಸಮುದಾಯಗಳು ತಮ್ಮದೇ ಆದ ಪ್ರತ್ಯೇಕತೆಯನ್ನು ಉಳಿಸಿಕೊಂಡಿದೆ. ಅದು ತಮ್ಮ ವೀರರ ಆರಾಧನೆಯಾಗಿರಬಹುದು ಸತಿಪದ್ಧತಿಯಾಗಿರಬಹುದು. ಇತರೆ ಯಾವುದೇ ಆರಾಧನ

ಲಕ್ಷಣಗಳಿರುವ ಪದ್ಧತಿ ರೂಢಿ ಸಂಪ್ರದಾಯಗಳು ವ್ಯಕ್ತಿ ನೆಲೆಯಲ್ಲಿ ಪೂಜಾರ್ಹಗೊಳ್ಳುತ್ತಿರುವುದು ಮ್ಯಾಸ ಬೇಡರ ಸಾಂಸ್ಕೃತಿಕ ಲೋಕದೃಷ್ಟಿಯ ವೈಶಿಷ್ಟ್ಯವಾಗಿದೆ. ಮ್ಯಾಸಬೇಡರು ತಮ್ಮ ಪರಂಪರಾನುಗತವಾಗಿ ಬಂದಿರುವ ಬಳುವಳಿಗಳಲ್ಲಿ ಹುಟ್ಟು ಸಾವಿನ ನಡುವೆ ಇರುವ ಬದುಕಿನ ಸಾಮರಸ್ಯಕ್ಕೊಂದು ಅರ್ಥವನ್ನು ಕಲ್ಪಿಸಿಕೊಂಡಿದ್ದಾರೆ. ಹೀಗೆ ಕಲ್ಪಿಸಿಕೊಂಡಿರುವ ಅಂಶಗಳ ಪೈಕಿ ವೀರರ ಆರಾಧನೆಯು ಒಂದು. ಇಂತಹ ವೀರರ ಆರಾಧನೆಯನ್ನು ಹಿರಿಯರ ಹಬ್ಬವೆಂದು ಅಶ್ವಿಜಮಾಸದಲ್ಲಿ ಮತ್ತು ಯುಗಾದಿಯ ಸಂದರ್ಭದಲ್ಲಿ ಆಚರಿಸುತ್ತಾರೆ. ಈ ಆಚರಣೆಯು ಕುರಿತು ಸಮುದಾಯದ ಮಾಹಿತಿದಾರರಾದ ಕಂಪಳದೇವರಹಟ್ಟಿ ರೇವಣ್ಣ ಹೇಳುವ ವಿವರ ಹೀಗಿದೆ:



ಹೆಸರು - ರೇವಣ್ಣ
ವಯಸ್ಸು - ೩೪ ವರ್ಷ
ವೃತ್ತಿ - ದೇವರಪೂಜೆ ಮತ್ತು ಕೃಷಿ
ಊರು - ಕಂಪಳದೇವರಹಟ್ಟಿ
ಅಂಚೆ - ಕಂಪಳದೇವರಹಟ್ಟಿ
ತಾಲೂಕು - ಮೊಳಕಾಲ್ಮೂರು
ಜಿಲ್ಲೆ - ಚಿತ್ರದುರ್ಗ

ನಾವು ಹಿರಿಯರ ಹಬ್ಬ ಅಂತ (ಪೆದ್ದಲು ತೆಲುಗಿನಲ್ಲಿ) ಅಶ್ವೀಜ ಮಾಸದಲ್ಲಿ ಮಾಡ್ತೀವಿ. ಆ ಮೇಲೆ ಯುಗಾದಿ ಪಾಡ್ಯದಿನ ಮಾಡ್ತೀವಿ. ಒಂದು ವರ್ಷದಲ್ಲಿ ಎರಡು ಸಲ ಮಾಡ್ತೀವಿ. ನಾವು ಈ ಹಬ್ಬ ಮಾಡ್ಬೇಕಾದ್ರೆ ಆವೊತ್ತಿನ ದಿವಸ ಮನೆಯಲ್ಲಾ ಸಾರಣೆಕೆ ಮಾಡ್ತೀವಿ. ಸಾರಣಿಕೆ ಮಾಡಿ ಮನೆಯಲ್ಲಿರುವ ಹಿಂದಿನ ಕಾಲದ ಆಯುಧಗಳು ಇರ್ತವಲ್ಲ, ಭರ್ಚಿ, ಬಿಲ್ಲು, ಬಾಣ, ಕೊಡಲಿ, ಗೊಂಡುಗೊಡಲಿ, ಮಚ್ಚು, ಕತ್ತಿ ಇವೆಲ್ಲವನ್ನೂ ತೊಳೆದು, ಒಂದು ಚೆಂಬಿನಲ್ಲಿ ನೀರು ತುಂಬಿ, ಮತ್ತೊಂದು ಮಣ್ಣಿನ ಚೆಂಬು, (ಗಿಂಡಿ) ಅಂತಾರೆ, ಕೆಲವರು ಮಡಿಕೆ ಅಂತಾರೆ. ಈ ಎರಡ್ರಲ್ಲಿ ನೀರನ್ನು ತುಂಬಿಕೊಡು ಬರಲು ಹೊಲ್ದಲ್ಲಿ ಬಾವಿಗೆ ಇಲ್ಲಂದ್ರೆ ಕೊಳವೆಗೆ ಹೋಗಿ ತುಂಬಿಕೊಡು ಹೊಲ್ದಲ್ಲಿ ಕರಿಕೆ, ತಂಗಟೆ ಗಿಡದ ಹೂವುಗಳು, ಬೇರೆ ಹೂವು ಸಿಕ್ಕರೆ ಅವುಗಳನ್ನು ಮೇಲಿಟ್ಟುಕೊಂಡು ಎರಡು ಕೈಗಳಿಂದ ಜೋಪಾನವಾಗಿ ತರ್ತೀವಿ. ನಾವು ತರೋದ್ರೊಳಗೆ ಮನೆಯಲ್ಲಿ ಒಂದು ಜಾಗದಲ್ಲಿ ಸಗಣಿಯಿಂದ ಸಾರಣಿಕೆ ಮಾಡಿ ಆ ಜಾಗದಲ್ಲಿ ಒಂದು ಸೇರು ಅಕ್ಕಿ ಹಾಕುತ್ತಾರೆ. ತಂದು ಅದ್ರ ಮೇಲೆ ಇಟ್ಟು ಪೂಜೆಗೆ ಶುರುವು ಮಾಡ್ತೀವಿ, ಜೊತೆಗೆ ಸುತ್ತು ಸಜ್ಜೆತೆನೆ, ಜೋಳದತೆನೆ, ಸೂರ್ಯಕಾಂತಿ ತೆನೆ ಸುತ್ತು ಇಡ್ತೀವಿ, ದೇವ್ರುಗಳ ಮೇಲೆ ಹೊಸಬಟ್ಟೆಗಳನ್ನು ತಂದು ಒಂದು ಸೀರೆ, ಒಂದು ಪಂಚೆಯಾಗಲಿ, ಅಂಗಿಬಟ್ಟೆಯಾಗಲಿ, ಟವೆಲಾಗಲಿ, ಯಾವಾದ್ರೇನು ಹೊಸ ಬಟ್ಟೆಗಳಾದ್ರೆ ಸಾಕು ತಂದು ಏರುಸ್ತೀವಿ. ಹಿಂಗೆ ಎಲ್ಲಾ ರೆಡಿಮಾಡಿ

ಎಲ್ಲಾ ಸಂಬಂಧಿಕರು ಬಂದ್ ಕೂಡ್ಲೇ ಪೂಜೆ ಶುರುವು ಮಾಡ್ತೀವಿ. ಪೂಜೆ ಮಾಡ್ಬೇಕಾದ್ರೆ ಬರಿಮೈಯಿಂದ ಮಾಡ್ಬೇಕು. ತಲೆಗೆ ರುಮಾಲು ಸುತ್ಬೇಕು, ಒಂದು ಚಲ್ಲಣ ಹಾಕಿರಬೇಕು. ಹಿಂಗೆ ಒಂದು ಬಾಳೆಯ ಎಲೆಯಲ್ಲಿ ಎಡೆ ಹಾಕ್ತೀವಿ, ಉಳಿದಿದ್ದ ಎಡೆಯನ್ನು ಸಾಂಬಾರು, ಮೊಸ್ರು ಸ್ವಲ್ಪ ಕಲೆಸಿ ಮುದ್ದೆಮಾಡಿ ಐದು ನೆಲ ಮುದ್ದೆಗಳು ಅಂತ ಇಡ್ತೀವಿ, ಕೆಲವ್ರು ಏಳು ಇಡ್ತಾರೆ, ನೆಲ್ದ ಮೇಲೆ ಇಟ್ಟು ಪೂಜೆ ಮುಗಿಸಿ, ಎಲ್ಲಾ ಆಯುಧಗಳಿಗೆ ಪೂಜೆ ಮಾಡಿ, ಒಂದು ತೆಂಬಿನಲ್ಲಿ ನೀರು ತಂದು ಹೊರಗಡೆಗೆ ಸೂರ್ಯನ ಕಡೆಗೆ ಮುಖಮಾಡಿ ಚೆಲ್ಲಿ, ಎಲ್ಲಾರು ಕೈ ಮುಗಿದು ನಂತರ ಹೊಳಕ್ಕೆ ಹೋಗಿ ಹಿರಿಯರದೇವ್ರುಗೆ ಕೈ ಮುಗಿದು ಮುಂದಿನ ಕಾರ್ಯ ಮಾಡ್ತೀವಿ ಬೆಳಿಗ್ಗೆ ಎದ್ದು ಎರಡು ಚೆಂಬುಗಳಲ್ಲಿ ನೀರನ್ನು ಕುರಿಹಟ್ಟಿ ಬಾಗ್ಲಿಗಾಗ್ಲಿ, ಇಲ್ಲಂದ್ರೆ ದನಗಳ ಹಟ್ಟಿ ಬಾಗ್ಲಿಗಾಗ್ಲಿ ಚೆಲ್ಲಿ ಬರ್ತೀವಿ ಇದೆ ಹಿರಿಯರ ಹಬ್ಬ.

ಕಂಪಳ ದೇವರಹಟ್ಟಿ ರೇವಣ್ಣನವರ ವಿವರವು ಮ್ಯಾಸಬೇಡರ ಸಾಂಸ್ಕೃತಿಕ ಅನನ್ಯತೆಯ ಕುರುಹುಗಳನ್ನು ಕಾಣಿಸುತ್ತದೆ. ಇಲ್ಲಿ ಹಿರಿಯರನ್ನು ನೆನೆಯುವ ಪೂಜಿಸುವ ಮೂಲಕ ತಮ್ಮ ಪರಂಪರೆಯನ್ನು ಕಟ್ಟಿಕೊಳ್ಳುವಿಕೆ ಕಾಣುತ್ತಿದೆ. 'ಬೇಟೆ' ಪರಂಪರೆಯನ್ನು ಇಲ್ಲಿ ಆಯುಧಗಳನ್ನು ಪೂಜಿಸುವ ಮೂಲಕ ಮೂಲದ ಚಹರೆ ಈಗ ಆಚರಣೆ ರೂಪದಲ್ಲಿದೆ. ಬಟ್ಟೆಯ ವಿಧಾನವೂ ಮೂಲ ಬುಡಕಟ್ಟನ್ನು ಬಿಂಬಿಸುತ್ತದೆ. ಹಿರಿಯರ ಪೂಜೆ ಮಾಡುವಾಗ ಬಟ್ಟೆ ತೊಡುವಂತಿಲ್ಲ. ಒಂದು ಚಲ್ಲಣ ಹಾಡುವ ಪದ್ಧತಿಯನ್ನು ನೋಡಬಹುದು. ನೆಲಮುದ್ದೆಗಳನ್ನು ಎಡೆ ಹಾಕುವುದು ಕೂಡ ಪಶುಪಾಲಕ ಸಂಸ್ಕೃತಿಯ ಪ್ರತೀಕ ಇಲ್ಲಿ ಬರುವ ಸೂರ್ಯನಮಸ್ಕಾರ ಕುರಿಹಟ್ಟಿ ಪೂಜೆ ಇವೆಲ್ಲ ನಿಸರ್ಗರಾಧನೆಯ ನೆನಪನ್ನು ತರುತ್ತವೆ. ಈ ಆಚರಣೆಯಲ್ಲಿ ಮಾತ್ರ ಮ್ಯಾಸಬೇಡರ ಮೂಲಕ ಸಂಸ್ಕೃತಿಯ ಕುರುಹುಗಳಿವೆ. ಆದರೆ ಈ ಕುರುಹುಗಳು ನಿತ್ಯದ ಬದುಕಲ್ಲಿ ಉಳಿದಿಲ್ಲ. ಒಂದು ಕಾಲದಲ್ಲಿ ನಿತ್ಯದ ಬದುಕಾಗಿದ್ದದ್ದು ಈಗ ಆಚರಣೆ ಮಾತ್ರವಾಗಿದೆ.

ಒಟ್ಟಾರೆಯಾಗಿ ಈ ಮೇಲಿನ ಮಾಹಿತಿಯಿಂದ ಮುಖ್ಯವಾಗಿ ವಿಶ್ಲೇಷಿಸುವುದೆಂದರೆ ಮ್ಯಾಸಬೇಡರ ತಮ್ಮ ಸಾಂಸ್ಕೃತಿಕ ವೀರರನ್ನು ಮತ್ತು ಸಮುದಾಯಕ್ಕಾಗಿ ತ್ಯಾಗ ಮಾಡಿದ ಸ್ತ್ರೀ ಮತ್ತು ಪುರುಷರನ್ನು ವರ್ಷಕ್ಕೆ ಎರಡು ಸಾರಿ ಅವರ ಆಚರಣೆಯನ್ನು ಮಾಡುವುದರ ಮುಖಾಂತರ ಅವರನ್ನು ಆ ಸಂದರ್ಭಕ್ಕಾಗಿ ಅಂದಿನ ಆಚರಣೆಗಳು ಮಾಡುವುದರ ಮುಖಾಂತರ ಜೀವಂತಗೊಳಿಸುತ್ತಾರೆ. ಪುರುಷ ಪ್ರಧಾನ ಕುಟುಂಬ ಪಶುಪಾಲನೆ, ಬೇಟೆಯ ಸಿತ್ಯಂತರಗಳನ್ನು ಮೀರಿ ಅವುಗಳ ನಡುವೆ ತಾನೊಂದು ಸಾಧನೆ ಮಾಡುವ ಕಾಯಕಕ್ಕೆ ಸಿಕ್ಕ ಮರ್ಯಾದೆಯು ಮೇಲಿನಂತಿರುತ್ತದೆ. ಹುಟ್ಟುವುದಕ್ಕೆ ಮಹತ್ವ ಕೊಡದ ಬುಡಕಟ್ಟು ಸಮುದಾಯದ ಜನರು ಬದುಕಿಗೆ, ಸಾಧನೆಗೆ ಮತ್ತು ಮೃತ್ಯುವಿಗೆ ಪ್ರಾಮುಖ್ಯತೆ ಕೊಟ್ಟಿರುವುದಕ್ಕೆ ಬೇಡರೆ ಉದಾಹರಣೆ:- ಮ್ಯಾಸಬೇಡರು ಸ್ಥಳೀಯ ವ್ಯಕ್ತಿಯನ್ನೇ ಆರಾಧಿಸುವುದು ಹೆಚ್ಚು ಅಭಿಮಾನವೋ ಅಥವಾ ಪ್ರಾದೇಶಿಕ ಭಿನ್ನತೆಯೋ ಗೊತ್ತಿಲ್ಲ. ವಾಲ್ಮೀಕಿ, ಬೇಡರ ಕಣ್ಣಪ್ಪ, ಶಬರಿ, ಏಕಲವ್ಯ,

ಮೊದಲಾದವರನ್ನು ಸ್ಮರಿಸುತ್ತಾರೆಯೇ ಹೊರತು ಆರಾಧಿಸುವಲ್ಲಿ ಉದಾಸೀನತೆಯಿದೆ. ಪವಿತ್ರಸ್ಥಳ, ವ್ಯಕ್ತಿ ಪ್ರಸಂಗದಲ್ಲಿ ಪಾಲ್ಗೊಂಡು ರಕ್ಷಿಸಿ ಕಾಪಾಡಿದ ವೀರನ ಮನೋಧರ್ಮವು ಶ್ಲಾಘನೀಯ ಆದಿಯಲ್ಲಿ ಇದನ್ನು ಧರ್ಮಕೇಂದ್ರಿತ ನೆಲೆಯಲ್ಲಿ ಗ್ರಹಿಸಿದ್ದರಿಂದ ಕ್ರಮೇಣ ಅದು ಆಧ್ಯಾತ್ಮಿಕ ಸ್ವರೂಪಕ್ಕೆ ಬಂದಿತು ಒಬ್ಬ ವ್ಯಕ್ತಿಯ ತ್ಯಾಗವು ಅವನ ಗುಣ ವಿಶೇಷತೆಯನ್ನು ಇಮ್ಮಡಿಗೊಳಿಸಿದೆ. ಸತ್ಯ ಪ್ರಾಮಾಣಿಕತೆ, ಭಾಷೆ ತಪ್ಪಿಲ್ಲದವರ ಪಾಡು ಸಹ ವೀರತ್ವದ ಸಂಕೇತ, ಹಾಗಾಗಿ ಜನಪದ ವೀರರ ಚಾರಿತ್ರಿಕ ಸಂಗತಿಗಳು ತೀರ ರೋಮಾಂಚನ ಕಾರಿಯಾಗಿವೆ ಎಂದು ಹೇಳಬಹುದು.

೪.೨.೩.ಯುಗಾದಿ

ಚೈತ್ರ ಶುದ್ಧ ಪ್ರತಿಪದೆ ದಿವಸ ಯುಗಾದಿ ಹಬ್ಬ ಬರುವುದು ಯುಗ ಎಂದರೆ ನೂತನ ವರ್ಷ ಆದಿ ಎಂದರೆ ಆರಂಭ. ಯುಗಾದಿ ಹತ್ತು ಹಲವು ಆರಂಭದ ದಿನ ಋತುರಾಜ ವಸಂತನ ಶುಭಾಗಮನ ದಿನ ವರ್ಷದ ಹೊಸ ದಿನ, ಪ್ರತಿಪದೆಯ ಹಿಂದಿನ ದಿನ ಅಮವಾಸ್ಯೆಯು ಯುಗಾದಿ ಅಮವಾಸ್ಯೆಯ ಹಿಂದಿನ ದಿನವೇ ಇಡೀ ಊರು ಮನೆ ಮಠಗಳನ್ನು ಸ್ವಚ್ಛಗೊಳಿಸಿ, ಸಿಂಗಾರಗೊಳಿಸಿರುತ್ತಾರೆ. ಎಲ್ಲ ಕಡೆಯೂ ಹಬ್ಬದ ವಾತಾವರಣ ಎದ್ದು ಕಾಣುವುದು. ಸಾಮಾನ್ಯವಾಗಿ ಸಂಜೆಗೆ ತಮ್ಮ ಇಷ್ಟಾನು ದೇವತೆಗಳಿಗೆ ಪೂಜೆ ಸಲ್ಲಿಸಲು ಸಿದ್ಧಗೊಳಿಸುತ್ತಾರೆ. ಸಜ್ಜಕದ ಹೋಳಿಗೆ ಮಾಡಿ ದೇವರಿಗೆ ಎಡೆ ಹಿಡುತ್ತಾರೆ. ಅಮವಾಸ್ಯೆ ದಿನ ಬೆಳಿಗ್ಗೆಯೇ ಗ್ರಾಮ ದೇವಗಳನ್ನು ನದಿ ಸ್ನಾನಕ್ಕೆ ಉತ್ಸವದೊಂದಿಗೆ ತೆಗೆದುಕೊಂಡು ಹೋಗುವ ಪದ್ಧತಿ ಕೆಲವು ಗ್ರಾಮಗಳಲ್ಲಿದೆ. ಮರುದಿನ ಪ್ರತಿಪದೆಯೇ ಯುಗಾದಿ ವರುಷದ ಹೊಸದಿನ ಅಂದು ಬೆಳಿಗ್ಗೆ ಉಷಃ ಕಾಲಕ್ಕೆ ಎದ್ದು ಮಂಗಳ ಸ್ನಾನ ಮಾಡಿ ಹೊಸ ಬಟ್ಟೆ ಧರಿಸಿ ಹಿರಿಯರ ಆಶೀರ್ವಾದ ಪಡೆಯುವರು. ಕುಟುಂಬದ ಪ್ರತಿಯೊಬ್ಬರೂ ತಪ್ಪದೇ ತೈಲ ಸ್ನಾನ ಮಾಡುವರು. ಸ್ನಾನಕ್ಕೆ ಕಾಯಿಸುವ ನೀರಿಗೆ ಬೇವಿನ ಎಲೆಗಳನ್ನು ಹಾಕಿ ಸ್ನಾನ ಮಾಡುವ ಪದ್ಧತಿ ಇದೆ.

ಮನೆಯನ್ನೆಲ್ಲ ಬೇವು ಹಾಗೂ ಮಾವಿನ ತೋರಣಗಳಿಂದ ಅಲಂಕರಿಸಿ ಮನೆ ಮುಂದೆ ಕೆಲವೆಡೆ ಸ್ವಚ್ಛಗೊಳಿಸುತ್ತಾರೆ. ಯುಗಾದಿ ಹಬ್ಬದ ದಿನ ಬೇವು-ಬೆಲ್ಲ ತಿನ್ನಬೇಕು ಎಂದು ಶಾಸ್ತ್ರ ಕೂಡ ಹೇಳುತ್ತಾರೆ. ಬೇವು ಬೆಲ್ಲವನ್ನು ಪರಸ್ಪರ ಒಬ್ಬರಿಗೊಬ್ಬರು ವಿನಿಮಯ ಮಾಡಿಕೊಳ್ಳುತ್ತಾರೆ. ಬೇವು ಬೆಲ್ಲವನ್ನು ಪುಟಾಣಿ ಹಿಟ್ಟಿಗೆ ಬೀಸಿದ ಸಕ್ಕರೆಯನ್ನು ಅಥವಾ ಹೆರದ ಬೆಲ್ಲವನ್ನು ಮತ್ತು ಬೇವಿನ ಹೂವುಗಳನ್ನು ಸೇರಿಸಿ ಉದುರು ಉದುರಾಗಿರುವ ಮಿಶ್ರಣ ತಯಾರಿಸುತ್ತಾರೆ. ಇನ್ನು ಕೆಲವು ಕಡೆಗಳಲ್ಲಿ ಹೊಸ ಮಣ್ಣಿನ ಮಡಿಕೆಯಲ್ಲಿ ಬೆಲ್ಲ ಬೇವಿನ ಹೂವು ಹುಣಸೆಯ ಹಣ್ಣು ಕಿವುಚಿ ಹಾಕುವರು. ಇಲ್ಲವೆ ಎಳೆ ಮಾವಿನ ಕಾಯಿಯನ್ನು ಸಣ್ಣ ಹೋಳುಗಳನ್ನು ಹಾಕುವುದು. ಇದನ್ನು ಪಾನಕದ ಹಾಗೆ ಕುಡಿಯುವರು ಕೆಲವು ಕಡೆಗಳಲ್ಲಿ ಮಿಜ್ಜಿದ ಬೆಲ್ಲಕ್ಕೆ ಬೇವಿನ ಹೂಗಳನ್ನು ಸೇರಿಸಿ ತಿನ್ನುವರು ಮನೆಯವರೆಲ್ಲ ದೇವರಿಗೆ ಪೂಜೆ ಸಲ್ಲಿಸಿ ನಮಸ್ಕರಿಸಿ ಬೇವು ಬೆಲ್ಲ ತಿನ್ನುತ್ತಾರೆ ಮತ್ತು ಎಲ್ಲಾ ಬಂಧು ಬಾಂಧವರಿಗೆ ಹಂಚುತ್ತಾರೆ.


ಯುಗಾದಿ ದಿನದಂದು ಎಲ್ಲರ ಊಟವಾದ ನಂತರ ಪಂಚಾಂಗ ಶ್ರವಣ ಮಾಡುವರು ಇದರಿಂದ ಪುಣ್ಯ ಲಭಿಸುವುದರೊಂದಿಗೆ ಶ್ರೇಷ್ಠ ಫಲ ದೊರೆಯುತ್ತದೆ. ಪಾಪ ಕಳೆದು ರೋಗ ಮುಕ್ತವಾಗಿ ಆಯುಷ್ಯ ಹೆಚ್ಚಿ ಲಕ್ಷ್ಮಿಯು ಲಭಿಸುತ್ತಾಳೆ ಎಂಬ ನಂಬಿಕೆ ಇದೆ. ಮಿತ್ರರೊಂದಿಗೆ ಕುಳಿತು ಜ್ಯೋತಿಷಿಗಳಿಂದ ಹೊಸ ವರ್ಷದ ಫಲಗಳನ್ನು ಕೇಳುವರು ವರ್ಷದ ತಮ್ಮ ತಮ್ಮ ರಾಶಿ ಭವಿಷ್ಯ ಕೇಳುವುದೂ ಉಂಟು ನಗರ ವಾಸಿಗಳು ತಮ್ಮ ವ್ಯವಹಾರೋದ್ದಿಮೆಗಳನ್ನು ಉಗಾದಿ ಹೊಸವರ್ಷದ ದಿನದಂದು ಪ್ರಾರಂಭಿಸುವರು. ಈಗಾಗಲೇ ಅಸ್ತಿತ್ವದಲ್ಲಿರುವ ವ್ಯವಹಾರೋದ್ದಿಮೆಗಳ ಲೆಕ್ಕ ಪತ್ರಗಳನ್ನು ಹಿಂದಿನ ವರ್ಷದೊಂದಿಗೆ ಮುಕ್ತಾಯಗೊಳಿಸುವರು. ನೂತನ ವರ್ಷಾರಂಭದ ದಿನದಂದು ಲೆಕ್ಕ ಪತ್ರಕ್ಕೆ ಶ್ರೀಕಾರ ಹಾಕುವರು. ವಸ್ತುಗಳನ್ನು ಉದ್ರಿ ಹೊಯ್ದು ವರ್ಷದವರೆಗೂ ಬಾಕಿ ತೀರಿಸುವುದನ್ನು ಕುರಿತು ಉಗಾದಿ ಉದ್ರಿ ಎಂಬ ಸ್ವಾರಸ್ಯಕರ ಮಾತು ಬಳಕೆಯಲ್ಲಿದೆ. ಯುಗಾದಿಯಿಂದ ಹೊಸವರ್ಷ ಹೊಸ ಲೆಕ್ಕ ಪತ್ರ ಪ್ರಾರಂಭವಾಗುವುದನ್ನು ಸೂಚಿಸುತ್ತದೆ.

ಚಂದ್ರಮಾನ ಯುಗಾದಿ ಚೈತ್ರ ಮಾಸದಿಂದ ಶುರುವಾಗುತ್ತದೆ. ಅಂದರೆ ಸೂರ್ಯನು ಮೀನದಲ್ಲಿ ಅಥವಾ ಮೇಷದಲ್ಲಿರುವಾಗ, ಈ ಕಾಲದಿಂದ ಸುಕೆ ಜಾಸ್ತಿಯಾಗಿ ಸೂರ್ಯನ ತಾಪ ದಿನೇ ದಿನೇ ಜಾಸ್ತಿಯಾಗುತ್ತದೆ. ಸೂರ್ಯನು ಭರಣಿ ನಕ್ಷತ್ರಕ್ಕೆ ಪ್ರವೇಶಿಸುತ್ತಲೇ ಅಗ್ನಿ ದೋಷ ಪ್ರಾರಂಭವಾಗುತ್ತದೆ ಎಂದು ಹೇಳುತ್ತಾರೆ. ಅಂದರೆ ಈ ಕಾಲದಿಂದ ಸೂರ್ಯನ ಶಾಖವು ಮತ್ತಷ್ಟು ಜಾಸ್ತಿಯಾಗುತ್ತದೆ. ಖಗೋಳಶಾಸ್ತ್ರದ ಪ್ರಕಾರ ಭೂಮಿಯ ಸೂರ್ಯನಿಗೆ ಅತೀ ಸಮೀಪದಲ್ಲಿರುತ್ತದೆ. ಆದ್ದರಿಂದ ಈ ಬಿಸಿಲಿನ ದಗೆ ಆಗ ಹವಾಮಾನ ಬದಲಾವಣೆಯಿಂದ ಮನುಷ್ಯನ ಶರೀರಕ್ಕೆ ಸಂಬಂಧವಾದ ಉಪದ್ರವಗಳು ಉಂಟಾಗುತ್ತವೆ. ಸಿಡುಬು ಮತ್ತಿತರ ಕಾಯಿಲೆಗಳು ಶುರುವಾಗುತ್ತವೆ. ಇಂತಹ ಉಪದ್ರವಗಳಿಗೆ ಬೇವು ಬೆಲ್ಲ ತೆಗೆದುಕೊಂಡರೆ ಇಂತಹ ರೋಗಗಳ ಭಯ ಇರುವುದಿಲ್ಲವೆಂದು ನಂಬಿಕೆ ಇದೆ. ಬೇವಿನಸೊಪ್ಪು ಕಹಿ. ಇದು ಪಿತ್ತಕೋಶದ ಮೇಲೆ ಒಳ್ಳೆ ಪ್ರಭಾವ ಬೀರುತ್ತದೆ. ಮುಂದೆ ಪಿತ್ತಕೋಶಕ್ಕೆ ಉಂಟಾಗಬಹುದಾದ ತೊಂದರೆಗಳನ್ನು ನಿವಾರಿಸಲು ಬೇವಿನಸೊಪ್ಪು ಸಹಾಯಕಾರಿಯಾಗಿದೆ.

ರೈತರು ಮನೆಗಳಲ್ಲಿ ಹಬ್ಬದ ಸಂಭ್ರಮವಂತೂ ಹೇಳತೀರದು. ಎತ್ತುಗಳ ಮೈತೊಳೆದು ಹಣೆಗೆ ಬಾಸಿಂಗ, ಹಣೆಪಟ್ಟು, ಮಗಡ, ಸರ ಹಗ್ಗಗಳಿಂದ ಅಲಂಕಾರಗೊಳಿಸುತ್ತಾರೆ. ಎತ್ತುಗಳಿಗೆ ಪೂಜೆ ಸಲ್ಲುತ್ತದೆ.

ಉಗಾದಿ ಹೊಸದಿನಾ ನೇಗಿಲ ಸಾಗಿಸೋ
ಕೂಗ್ಯಾಡಿ ಹೊಲ ಹದಮಾಡೋ ಬಿಸಲೀಗಿ
ಮಾಗಿದ ಬಣ್ಣ ಬಲುಕಸೋ

ಕಂಪಳ ತೂಕದ ಕಾರ್ಯಭಾರ ಎಂತಹ ಕಠಿಣ ಪ್ರಸಂಗದಲ್ಲೂ ಹೆಗಲಿಗೆ ಹೆಗಲ ಕೊಟ್ಟು ದುಡಿದ ಬಸವನನ್ನು ರೈತ ಎಷ್ಟು ಕೊಂಡಾಡಿದರೂ ಕಡಿಮೆಯೇ ಅದಕ್ಕೆ ಅವನಿಗೆ ಈ ಸಂದರ್ಭದಲ್ಲಿ ವಿಶೇಷ ಪೂಜೆ ಸಲ್ಲುತ್ತದೆ. ಈ ಹಬ್ಬವನ್ನು ಕುರಿತು ಸಣ್ಣ ಓಬಯ್ಯ ಹೇಳುವ ವಿವರ ಹೀಗಿದೆ:



ಹೆಸರು - ಸಣ್ಣ ಓಬಯ್ಯ

ವಯಸ್ಸು - ೬೫ ವರ್ಷ

ವೃತ್ತಿ - ಕೃಷಿ

ಊರು - ದೇವರಹಟ್ಟಿ

ಅಂಚೆ - ಅಪ್ಪಯ್ಯನಹಳ್ಳಿ

ತಾಲೂಕು - ಕೂಡ್ಲಿಗಿ

ಜಿಲ್ಲೆ - ಬಳ್ಳಾರಿ

"ಈ ಹುಣ್ಣಿಮೆ ಬರುತ್ತಿದ್ದಂತೆಯೇ ನಮ್ಮ ಮನೆಗಳಲ್ಲಿ ವಾತವರಣವೇ ಬೇರೆಯಾಗ್ತದೆ. ಎತ್ತುಗಳ ಅಲಂಕಾರಮಾಡ್ಲಿಕ್ಕೆ ಬೇರೆ ಬೇರೆ ತರಹದ ಹಗ್ಗ, ಕಣ್ಣಿ, ಮಗಡ, ಜೂಲ ಹೊಲಿಸುತ್ತೇವೆ. ಬೇರೆ ಬೇರೆ ಬಣ್ಣಗಳಲ್ಲಿ ಅವುಗಳನ್ನು ಸಿಂಗರಿಸಲು ರೆಡಿ ಮಾಡಿಕೊಳ್ತೀವಿ ನಾಳೆ ಹುಣ್ಣಿಮೆ ಅಂದ ಕೂಡ್ಲೆ ಇವತ್ತೇ ಮನೆಗಳಲ್ಲಿ ಸುಣ್ಣ-ಬಣ್ಣ ಸಗಣೆರಾಡಿ ಬಳಿದು ಸಿಂಗಾರ ಮಾಡ್ತೀವಿ. ನಮ್ಮೂರಲ್ಲಿರುವ ದೇವಸ್ಥಾನಗಳಿಗೆ ಕೂಡ ಸುಣ್ಣ ಬಣ್ಣ ಸಾರಣೆ ಮಾಡಿಸಿ ತೋರಣಕಟ್ಟಿ ಶೃಂಗಾರ ಮಾಡ್ತೀವಿ. ಪೂಜಾರಿಗಳು ಪೂಜೆ ಮಾಡ್ತಾರೆ. ಹಬ್ಬದ ದಿನ ಮುಂಜಾನೆ ಎದ್ದು ಎಲ್ಲಾರು ಎತ್ತುಗಳ ಕೊಂಬುಗಳನ್ನು ಕೆತ್ತಿ ಊರು ಮುಂದಿನ ಕೆರೆಗಳಿಗೆ, ಹಳ್ಳಕ್ಕೆ ಹೊಡೆದುಕೊಂಡು ಹೋಗಿ ಅವುಗಳನ್ನು ಮೈ ತೊಳೆದು ಹೊಸ ಹಗ್ಗ, ಮಗಡ, ಮೂಗುದಾಣಗಳನ್ನು ಹಾಕ್ತೀವಿ. ಬಣ್ಣ ಹಚ್ಚುತ್ತೀವಿ. ಮದುಮಗನನ್ನು ಹೆಂಗೆ ರೆಡಿ ಮಾಡ್ತೀವೋ ಹಾಗೆ ಬಸವನಿಗೆ ರೆಡಿಮಾಡ್ತೀವಿ. ಜೂಲವನ್ನು ಎತ್ತಿನ ಬೆನ್ನು ಮೇಲೆ ಹಾಕ್ತೀವಿ ಹಣೆಗೆ ಕುಂಕುಮವಿಟ್ಟು ಕಾಯಿ ಒಡೆದು ಕರ್ಪೂರ ಹಚ್ಚಿ ಪೂಜೆ ಮಾಡ್ತೀವಿ ಆ ಮೇಲೆ ಊರಲ್ಲಿ ಮೆರವಣಿಗೆಗೆ ತಗಂಡು ಹೋಗಲು ಸಿದ್ಧ ಮಾಡ್ತೀವಿ. ಹೆಚ್ಚು ಬೆಲೆಗೆ ತಂದಿರುವ ಎತ್ತುಗಳನ್ನು ಮೆರವಣಿಗೆಗೆ ಸಿದ್ಧ ಮಾಡ್ತೀವಿ. ಸುತ್ತೂ ಬಹಳ ಜನ ಕಲ್ತಿರ್ತಾರೆ. ಜನರ ಗದ್ದಲ, ವಾದ್ಯಗಳ ಶಬ್ದಕ್ಕೆ ಎತ್ತುಗಳು ಕೊಸರಿ ಹೋಗದಂತೆ ಬಾಯಿಗೆ ಮಗಡ ಹಾಕಿ ಎರಡು ಹಗ್ಗಗಳನ್ನು ಕಟ್ಟಿ ಹಿಡಿಕೊಳ್ತೀವಿ. ಊರಿನಲ್ಲಿ ಕೆಲವು ಓಣಿಗಳಲ್ಲಿ ಎತ್ತುಗಳನ್ನು ಮೆರವಣಿಗೆ ಮಾಡಿಕೊಂಡು ಬರ್ತೀವಿ ಸಂಜೆ ಐದು ಗಂಟೆಗೆ ಊರಿನ ಮುಂದುಗಡೆ ಊರಿನಿಂದ ಒಂದು ಇನ್ನೂರು ಮೀಟರ್ ದೂರ ಎಲ್ಲಾ ಎತ್ತುಗಳನ್ನು ಹೊಡಕೊಂಡು ಹೋಗ್ತೀವಿ. ಎಲ್ಲಾರು ಅಲ್ಲಿಗೆ ಬಂದ ಮೇಲೆ ಊರಿನ ಮುಂದೆ ಆ ಕಡೆ ಈ ಕಡೆ ಎರಡೂ ಕಡೆಗೆ ಕಂಬಳನ್ನು ಹೂಳಿಸಿ ಮಧ್ಯದಲ್ಲಿ ಹಗ್ಗದಿಂದ ಸಣ್ಣ ಬೇವಿನ ಟೊಂಗೆಗಳನ್ನು ಮಾವಿನ ತೋರಣದಲ್ಲಿ ಸೇರಿಸಿ ಮಧ್ಯ ಒಂದೇ ಒಂದು ಕೊಬ್ಬರಿ ಬಟ್ಟಲನ್ನು ಎತ್ತಿನ ಹಿಂದೆ ಓಡಿಬರುವವನಿಗೆ ಸಿಗುವಂತೆ ಕಟ್ಟಿರ್ತೀವಿ. ಎತ್ತುಗಳನ್ನು



ಸಾಲಾಗಿನಿಲ್ಲಿಸಿ ಓಡ್ಲಿಕ್ಕೆ ಬಿಡ್ತೀವಿ ಆ ಎತ್ತುಗಳ ಹಿಂದೆ ಜನ ಓಡಿ ಬರ್ತಾರೆ. ಹಿಂಗೆ ಓಡಿ ಬರಬೇಕಾದ್ರೆ ಯಾರದ್ರು ಮುಂದೆ ಬರ್ತದೋ ಅವ್ರು ಆ ಕೊಬ್ಬರಿ ಬಟ್ಲನ್ನು ಕಿತ್ಕೊಂಡು ಬರ್ತಾನೆ. ಆವಾಗ ಯಾವ ಬಣ್ಣದ ಎತ್ತು ಬರ್ತದೋ ಬಿಳಿ ಬಣ್ಣದ ಎತ್ತು ಬಂದ್ರೆ ಬಿಳಿಯ ಕಾಳು ಮುಂದು ಅಂತ ತಿಳಿತೀವಿ. ಕೆಂಪು ಬಣ್ಣದ ಎತ್ತು ಮೊದಲು ಬಂದರೆ ಮುಂಗಾರು ಬೆಳೆ ಕೆಂಪು ಕಾಳು ಚೆನ್ನಾಗಿ ಬೆಳೆಯುತ್ತದೆ ಅಂತ ಬೆಳೆಯನ್ನೆ ಈ ವರ್ಷ ಬೆಳೆಯಬೇಕು ಅಂತ ತಿಳಿಯುತ್ತೇವೆ. ಬೂದು ಬಣ್ಣದ ಎತ್ತು ಬಂದರೆ ಆ ಬಣ್ಣದ ಯಾವ್ಯಾವ ಬೆಳೆಗಳು ಬೆಳೆಯಬಹುದು ಅಂತ ತಿಳಿಯುತ್ತೇವೆ. ಅದು ಕೂಡ ಹೆಚ್ಚು ಆಸ್ತಿವಂತ್ರಾಗಿರಬೇಕು. ಚೆನ್ನಾಗಿ ಬೇಸಾಯ ಮಾಡ್ತಿರಬೇಕು. ಹಂಗಾದ್ರೆ ಮಾತ್ರ ಒಳ್ಳೆಯದು ಅಂತ ಹೇಳ್ತಾರೆ. ಅದು ನಿಜ ಕೂಡ.

ಹಿಂದೆ ಮೊದಲ ಬಂದು ಕರಿಹರಿಯುವ ಎತ್ತನ್ನೂ ಅವರ ಮನೆಯವರು ಅದನ್ನೂ ಹಿಡಿಕೊಂಡು ಆ ಬೇವಿನ ತೊಪ್ಪಲನ್ನು ಆ ಕರಿಯನ್ನು ರೈತರೆಲ್ಲ ತಗೊಂಡು ಹೋಗಿ ಅವ್ರವ್ರ ಬಿತ್ತುವ ಬೀಜಗಳ ಜೊತೆಗೆ ಸೇರಿಸ್ತಾರೆ. ಹಿಂಗೆ ಬಿತ್ತುವುದರಿಂದ ಬೆಳೆ ಹುಲುಸಾಗಿ ಬೆಳೆಯುತ್ತದೆ. ಅಂತ ಹೇಳ್ತಾರೆ. ಆ ಮೇಲೆ ಮೊದಲ ಬಂದ ಎತ್ತಿಗೆ ಎಲ್ಲಾರು ಸೇರಿಕೊಂಡು ಪೂಜೆ ಮಾಡಿ ಅದರ ಮನೆಯವರಿಗೆ ಬಹುಮಾನಕೊಡ್ತಾರೆ. ಹಿಂಗೆ ಕಾರು ಹುಣ್ಣಿಮೆ ಮಾಡ್ತೀವಿ ನೊಡಿ, ಆ ಹುಣ್ಣಿಮೆ ದಿನವೇ ಯಾವಯಾವ ಬೆಳೆಯಬೇಕು ಎಂದು ತೀರ್ಮಾನ ಮಾಡ್ತೀವಿ ನೋಡ್ರಿ.”

ಈ ಹಿಂದಿನ ಹಿರಿಯರ ಹಬ್ಬದ ಆಚರಣೆಯನ್ನು ನೋಡಿದರೆ ಅದು ಬೇಟೆಯ ಸಂಸ್ಕೃತಿಯನ್ನು ಮತ್ತು ಪಶುಪಾಲಕ ಸಂಸ್ಕೃತಿಯನ್ನು ಸೂಚಿಸುವ ಪ್ರತೀಕವನ್ನು ಬಿಂಬಿಸುತ್ತದೆ.

ಆದರೆ ದೇವರಹಟ್ಟಿಯ ಸಣ್ಣ ಓಬಯ್ಯ ಹೇಳುವ ಕಾರಹುಣ್ಣಿಮೆಯ ವಿವರವನ್ನು ನೋಡಿದರೆ ಇದು ಮ್ಯಾಸಬೇಡರ ನೆಲೆನಿಂತ, ವ್ಯವಸಾಯ ಹಂತದ ನೆನಪುಗಳನ್ನು ಹೇಳುತ್ತಿರುವುದು ವಿಶೇಷ ಕಾರಹುಣ್ಣಿಮೆ ಎತ್ತುಗಳ ಹಬ್ಬವೇ ಆಗಿರುವುದು. ಎತ್ತುಗಳನ್ನು ಮದುಮಕ್ಕಳಂತೆ ಶೃಂಗರಿಸುವುದು. ಎತ್ತುಗಳ ಸ್ಪರ್ಧೆ ಏರ್ಪಡಿಸುವುದು. ಬೆಳೆಯ ಭವಿಷ್ಯವನ್ನು ತಿಳಿಯುವುದು. ಇವುಗಳನ್ನೆಲ್ಲಾ ನೋಡಿದರೆ ಮ್ಯಾಸಬೇಡರು ಕೃಷಿ ಪರಂಪರೆಗೆ ಹೊಂದಿಕೊಳ್ಳುತ್ತಿರುವ ಲಕ್ಷಣಗಳು ಬಹಳ ಸ್ಪಷ್ಟವಾಗಿ ಗೋಚರಿಸುತ್ತವೆ. ಅಲ್ಲದೆ ಇಲ್ಲಿನ ಆಚರಣೆ ಕೇವಲ ಬೇಡರಿಗೆ ವಿಶೇಷವಾದುದಲ್ಲ. ಎಲ್ಲಾ ಕೃಷಿಯಾಧರಿತ ಸಮುದಾಯದ ಆಚರಣೆಯಾಗಿ ಕಾಣುತ್ತದೆ. ಅಂದರೆ ಬೇಡರಿಗೆ ವಿಶಿಷ್ಟವಾದ ಅನನ್ಯತೆಗಳನ್ನು ಬಿಟ್ಟುಕೊಡುತ್ತಾ ಕೃಷಿಯಾಧರಿತ ಸಮುದಾಯಗಳ ಸಾಮಾನ್ಯ ಲಕ್ಷಣಗಳತ್ತ ಚಲಿಸುತ್ತಿರುವ ಚಲನೆಯನ್ನು ಈ ಮಾತುಗಳಲ್ಲಿ ಗುರುತಿಸಲು ಸಾಧ್ಯವಿದೆ.

೪.೨.೫.ಗೌರಸಮುದ್ರದ ಮಾರಮ್ಮನ ಹಬ್ಬ

ಈ ಹಬ್ಬವನ್ನು ಕುರಿತು ಹಿರಿಯರಾದ ಗೌರ ಸಮುದ್ರದ ಪೂಜಾರಿ ಬೊಮ್ಮಯ್ಯ ಹೇಳುವ ವಿವರ ಹೀಗಿದೆ:

ಹೆಸರು - ಬೊಮ್ಮಯ್ಯ

ವಯಸ್ಸು - ೬೨ ವರ್ಷ

ವೃತ್ತಿ - ಕೃಷಿ

ಊರು - ಗೌರಸಮುದ್ರ

ಅಂಚೆ - ಗೌರಸಮುದ್ರ

ತಾಲೂಕು - ಚಳ್ಳಕೆರೆ

ಜಿಲ್ಲೆ - ಚಿತ್ರದುರ್ಗ

"ಅಕ್ಟೋಬರ್ ತಿಂಗಳ ಮೊದಲ ಮಂಗಳವಾರ ಈ ಜಾತ್ರೆಯನ್ನು ನಾವು ಮಾಡುತ್ತೇವೆ. ಚಿತ್ರದುರ್ಗ ಜಿಲ್ಲೆಯಲ್ಲಿ ನಾಯಕನಹಟ್ಟಿ ತಿಪ್ಪೇಸ್ವಾಮಿಯ ಜಾತ್ರೆಯನ್ನು ಬಿಟ್ರೆ ಹೆಚ್ಚು ಜನ ಸೇರುವ ಎರಡನೇ ಜಾತ್ರೆ ಗೌರಸಮುದ್ರದ ಮಾರಮ್ಮನ ಜಾತ್ರೆ ನೋಡ್ರಿ. ಗೌರಸಮುದ್ರಕ್ಕೆ ಒಂದು ಮೈಲಿ ದೂರದಲ್ಲಿರುವ 'ತಮ್ಮಲು' ಅಂತಹ ಇದೆ ಅಲ್ಲಿ ಈ ಜಾತ್ರೆ ಮಾಡ್ತೇವೆ. ಈ ಜಾತ್ರೆಗೆ ಸಾವಿರಾರು ಮಂದಿ ಬಂದಿರ್ತಾರೆ, ಇಲ್ಲಿಗೆ ಎಲ್ಲಾ ಜಾತಿಯವ್ರು ಬರ್ತಾರೆ ಹೆಚ್ಚು ಜನ ಅಂದ್ರೆ ನಮ್ಮ ಮ್ಯಾಸಬೇಡ್ರೇ ಬರೋದು. ಜಾತ್ರೆಯಾವತ್ತು ಅಂತ ವೊದ್ಲು ಸಾರುತ್ತಾರೆ. ಅವತ್ತೇ ಗೌರಸವುದ್ರದಲ್ಲಿ ಮತ್ತು ಸುತ್ತಮುತ್ತ್ಲಹಳ್ಳಿಯಲ್ಲಿರುವ ಬುಟ್ಟುಗಲವರು ಬುಟ್ಟುಗಲವರು ಎನ್ನುವುದು ಮ್ಯಾಸಬೇಡರಲ್ಲಿ ಬರುವ ಇದೊಂದು ಬೆಡಗು 'ಬುಟ್ಟುಗಲ' ಎನ್ನುವುದು ತೆಲುಗಿನ ಪದವಾಗಿದೆ. ಗೌರಸಮುದ್ರ ಮಾರಮ್ಮನನ್ನು ಆರಾಧನೆ ಮಾಡುತ್ತಿರುವವರು ಹಿಂದೆ 'ಪುಟ್ಟಿಯಲ್ಲಿಟ್ಟು' ಪೂಜೆ ಮಾಡುತ್ತಿದ್ದರಂತೆ ಹಾಗೆ ತಾವು ಎಲ್ಲೆಲ್ಲಿ ಸುತ್ತಾಡುತ್ತಿದ್ದರೋ ಅಲ್ಲಿಗೆ ಹೊತ್ತುಕೊಂಡು ಹೋಗುತ್ತಿರುವುದು ಪ್ರಮುಖವಾಗಿ ತಿಳಿಯಬಹುದು. ಆದ್ದರಿಂದಲೇ ಮಾರಮ್ಮನನ್ನು ಪುಟ್ಟಿಯಲ್ಲಿ ಹೊತ್ತುಕೊಂಡು ಆರಾಧನೆ ಮಾಡುವವರನ್ನೇ ಒಂದು ಬೆಡುಗಾಗಿ ಮಾಡಿಕೊಂಡಿದ್ದಾರೆ. ಅವರನ್ನೇ 'ಪುಟ್ಟುಗಲವರು' ಎಂದು ತೆಲುಗಿನಲ್ಲಿ ಕರೆದರೆ ಅದು ಬರುಬರುತ್ತ ಕಾಲ ಬದಲಾದಂತೆಲ್ಲ 'ಪುಟ್ಟುಗ' ಬದಲಿಗೆ ಬುಟ್ಟುಗ ಆಗಿದೆ. ಇಂದು ಕೂಡ ಬುಟ್ಟಗಲವರು ಎಂದು ಕರೆಯುತ್ತಾರೆ) ಈ ಬೆಡಗಿನವ್ರು, ನೆಲ, ಒಲೆ, ಎಲ್ಲಾ ಬಂದು ಸಾರಿಸಿ ಭಕ್ತಿಯಿಂದ ಏನು ಎಂಜಲು ಮಾಡ್ದೆ ಸಂಜೆಯ ವೇಳೆಗೆ ಮಾರಮ್ಮನಿಗೆ, ತೆಂಗಿನಕಾಯಿ ತಂದು ಪೂಜೆ ಮಾಡ್ತಾರೆ, ಅವತ್ತೇ ಎಲ್ಲಾ ಯಜಮಾನ್ರು ಸೇರಿ ಜಾತ್ರೆಯ ಬಗ್ಗೆ ಮಾತಾಡ್ತಾರೆ. ಮಣಿಗಾರ ಸಮುದಾಯಕ್ಕೆ ಸೇರಿದ ಒಬ್ಬ ವ್ಯಕ್ತಿ ಸಾರು ಹಾಕ್ತಾನೆ. ಇದೇ ಇಲ್ಲಿ ಮುಖ್ಯವಾಗಿರ್ತದೆ. ಏಕೆಂದ್ರೆ ಅವತ್ತು ಏನೋ ಒಂದು ವಿಶೇಷ ದಿನ ಇದ್ದಂಗೆ ಇಡೀ ವರ್ಷದಲ್ಲಿ ತಮಗಾದ ಅನ್ಯಾಯ, ಅಪಮಾನ, ನೋವನ್ನು ಊರು ಕಾರ್ಯಗೀರ್ಯಗಳಲ್ಲಿ ನಮ್ಮನ್ನು ಸಹಕರಿಸುವುದಿಲ್ಲ ಎಂದ್ರೂ ಕೂಡ ಕೇಳಬಹುದು ಎಲ್ಲಾ ಯಜಮಾನ್ರು

ಮುಂದೆ ಎಷ್ಟು ಜಮೀನ್ದಾರರಿದ್ರೂ ಕೂಡ ಅವತ್ತು ಅವರೇನಾದ್ರು ತಪ್ಪು ಮಾಡಿದ್ರೆ ತಪ್ಪು ಒಪ್ಕೊಳ್‌ತಾರೆ. ಇನ್ನೊಂದು ದಿನ ಹಾಗೇನು ಮಾಡೇನು ಎಂದು ಕೇಳಿಕೊಳ್ತಾರೆ. ಅವಾಗ ಆ ಮಣೆಗಾರ ಊರಲ್ಲೆಲ್ಲಾ ತಮಟೆ ಹೊಡೆದು ಇಂದಿಗೂ ೧೫ ದಿನಗಳ ನಂತರದಲ್ಲಿ ಬರುವ ಮಂಗಳವಾರ ದಿನ ಜಾತ್ರೆ ಎಂದು ಸಾರುತ್ತಾನೆ. ಆಗ ಸಾರಿನ ಮರುದಿನದಿಂದ ಜಾತ್ರೆಯ ಹಿಂದಿನ ದಿನದವರೆಗೂ ಬುಟ್ಟುಗಲು. ಮತ್ತು ಯರಮಂಚಿನಾಕನ ವಶಂದವರು, ಆ ಊರಿನ ಜನರು ಸ್ನಾನ ಮಾಡುವಂತಿಲ್ಲ ತಲೆ ಬಾಚುವಂತಿಲ್ಲ, ಎಣ್ಣೆಯ ಪದಾರ್ಥಗಳನ್ನು ಮಾಡುವಂತಿಲ್ಲ, ಬೇರೆ ಊರಿನಿಂದ ಬಂದವರಿಗೆ ಮನೆಗೆ ಸೇರಿಸುವುದಿಲ್ಲ. ಇಷ್ಟು ಜಾತ್ರೆಯಾಗ ಮಟ್ಟ ನಮ್ ಕಟ್ಟುಪಾಡುಗಳು ಇವೆ ನೋಡ್ರಿ.

ಪೂಜಾರಿ ಬೊಮ್ಮಯ್ಯನ ಮಾತನ್ನು ಗಮನಿಸಿದರೆ, ಗೌರಸಮುದ್ರದ ಮಾರಮ್ಮನ ಆಚರಣೆ ಮ್ಯಾಸಬೇಡರ ಮಾತೃ ಆರಾಧನೆಯ ವೈವಿಧ್ಯತೆಯನ್ನು ಬಿಂಬಿಸುತ್ತದೆ. ಅಂದರೆ ಮ್ಯಾಸ ಮಾತೃ ಆರಾಧನಾ ಪದ್ಧತಿ ಬೇಡರಲ್ಲಿ ಹೆಚ್ಚು ಪ್ರಚಲಿತವಾಗಿತ್ತು. ಅದು ಈಗಲೂ ಗೌರಸಮುದ್ರದ ಮಾರಮ್ಮನ ಜಾತ್ರೆಯಲ್ಲಿ ಆಚರಣೆಯ ರೂಪದಲ್ಲಿ ಉಳಿದು ಬಂದಿರುವುದನ್ನು ಗಮನಿಸಲು ಸಾಧ್ಯವಿದೆ. ಇಲ್ಲಿ ಬೇಡರಿಗೆ ಇರುವ ನಿಷೇಧಗಳನ್ನು, ಜಾತಿ ಸಂಘರ್ಷದ ಸೂಕ್ಷ್ಮಗಳನ್ನು ಈ ಮಾಹಿತಿಯಲ್ಲಿ ಕಾಣಬಹುದು. ಬೇಡರೆಂದರೆ ಏಕಪ್ರಕಾರವಾಗಿ ಗ್ರಹಿಸುವ ತೊಡಕನ್ನು ಈ ವಿವರ ಮುಂದಿಡುತ್ತದೆ.

೪.೨.೫.೧.ವಾಸೆಕೊಯ್ಯುವುದು

ಮಾರಮ್ಮನ ಗುಡಿಯ ಪಕ್ಕದಲ್ಲೇ ಬೊಮ್ಮದೇವರ ಗುಡಿ ಇದೆ. ಗುರುವಾರದ ದಿನ ಅಂದ್ರೆ ಸಾರು ಹಾಕಿದ ೧೦ನೇ ದಿನದಂದು ಮನೆಯನ್ನೆಲ್ಲಾ ಬಳಿಯುತ್ತಾರೆ ಮತ್ತೆ ಎಲ್ಲಾರು ಸ್ನಾನ ಮಾಡಿ ಬೊಮ್ಮದೇವ್ರ ಬಳಿಗೆ ಬರುತ್ತಾರೆ. ಬೊಮ್ಮದೇವ್ರು ಮತ್ತು ಮಾರಮ್ಮ ಅಕ್ಕ ತಮ್ಮ ಅಂತ ಹಿಂದಿನವ್ರು ಹೇಳ್ತಿದ್ರು ಈಗ್ಲೂ ಅಂಗೆ ನಡ್‌ಕೊಂಡು ಬಂದಿದೆ. ಈ ಇಬ್ಬರಿಗೂ ಸಂಬಂಧಪಟ್ಟಂತೆ ಆರಾಧನೆ ಮಾಡ್ತಾರೆ. ದೇವಸ್ಥಾನದ ಬಳಿ ಸೇರಿದ ಬುಟ್ಟುಗಲವರು ಮತ್ತು ಯರಮಂಚಿನಾಯಕನ ವಂಶದವರು ಮಾರಮ್ಮನಿಗೆ ನಮಸ್ಕರಿಸಿ ಆ ಮೇಲೆ ಬೊಮ್ಮದೇವರ ಭರಣೆಯನ್ನು ಪೂಜಾರಿಗೆ ಹೊರಿಸಿಕೊಂಡು ಬಂದು ಕುರಿ ಸಮೇತ, ಉರುಮೆ, ತಮ್ಮಟೆ ಬಡಿದುಕೊಂಡು ಅಲ್ಲಿಗೆ ಒಂದುವರೆ ಮೈಲು ಆಗ್ತದೆ. ದೇವರ್‍ಲಹಳ್ಳಿ ಅಂತ ಆ ಊರು ಹತ್ತಿರ ಲಿಂಗದ ಗುಡಿಗೆ ಹೋಗ್ತಾರೆ. ಅಲ್ಲಿ ೧೦೧ ಲಿಂಗಗಳಿವೆ ಕೋಟಿ ಲಿಂಗಗಳಿವೆ ಅಂತ ಹೇಳ್ತಾರೆ. ಆದ್ರೆ ಅವು ಒಂದು ಯಾರಿಗೆ ಕಾಣುವುದಿಲ್ಲ. ಈಗ ಅದನ್ನೇ ಪತ್ತೆ ಹಚ್ಚುವ ಕೆಲಸ ಮಾಡ್ತಾರೆ. ಆ ಗುಡಿಯ ಎಕ್ಕದ ಜಂತೆ, ತೊಲೆಗಳಿಂದ ಕಟ್ಟಿದ್ರೂ ಅಂತ ಹೇಳ್ತಾರೆ. ಇದೇ ಮಾರಮ್ಮ ಮತ್ತು ಬೊಮ್ಮನ ವಾಸಿಸುವ ಸ್ಥಳವಾಗಿತ್ತಂತೆ ಇದನ್ನೇ ರಾಯದುರ್ಗ ದೊರೆ ಹಾಳು ಮಾಡಿದ್ರಂತೆ ಅದಕ್ಕೆ ಮಾರಮ್ಮ ಉಪಾಯದಿಂದಲೇ ಆತನನ್ನು ಕೊಂದಳು ಎಂದು ಸಮುದಾಯದ

ಹಿರಿಯರು ಹೇಳ್ತಾರೆ. ಈ ಲಿಂಗದ ಗುಡಿಗೆ ಬಂದು ಸೇರಿದಾಗ ಮೊದ್ಲು ನಡೆಸುವ ಆಚರಣೆ ಅಂದ್ರೆ ಮಾರಮ್ಮನಿಗೆ ಸಂಬಂಧಪಟ್ಟಿದ್ದು, ಕರಿಕಂಬಳಿ ಗದ್ದಿಗೆಯನ್ನು ಹಾಸಿ ಅದರ ಮೇಲೆ ಎಲ್ಲಾರು ಕಾಸು ಅಂತ ಇಡ್ತಾರೆ. ಇದನ್ನು ಬುಟ್ಟುಗಲವರಲ್ಲೇ ಪೂಜಾರಿಯಾಗಿರುವವರು ತಗೊಂಡು ಹೋಗ್ತಾರೆ. ಆ ಮೇಲೆ ಎಲ್ಲೂ ಸೇರಿ ಮಾರಮ್ಮನಿಗೆ ಕೈ ಮುಗಿತಾರೆ. ಇಲ್ಲಿ ೧೦೧ ದೀಪಗಳನ್ನು ಹಚ್ತಾರೆ. ಇದಕ್ಕೆ ನಾವು ಮಾರಮ್ಮನಿಗೆ 'ನೋಮು' ಅಂತ ಕರೆಯುತ್ತಾರೆ. (ನೋಮು ಎಂದರೆ ಹರಿಕೆ, ಜನರು ತಮಗೆ ಯಾವುದೋ ಕಷ್ಟ ಬಂದಾಗ, ಅಥವಾ ತೊಂದರೆಯಾದಾಗ, ದೇವರ ಹತ್ತಿರ ಹೋಗಿ ಪೂಜೆ ಪುನಸ್ಕಾರ ಮಾಡಿ ನಮಗೆ ಈ ಕಷ್ಟ ಪರಿಹಾರವಾದರೆ ಅಥವಾ ಈ ತೊಂದರೆಯಿಂದ ಬಿಡುಗಡೆ ಮಾಡಿದರೆ. ತೆಂಗಿನ ಕಾಯಿಯೆ, ಜವಳಿ ತೆಗೆಸುವುದೋ ಅಥವಾ ಬೇಟೆ ಕೊಯ್ಯುವುದೋ ಯಾವುದಾದರೊಂದು ನಿನಗೆ ಹರಕೆ ತೀರಿಸುತ್ತೇವೆ ಎಂದು ಬೇಡಿಕೊಳ್ಳುತ್ತಾರೆ. ಇಂತಹ ಹರಕೆಗಳನ್ನು ದೇವರ ಹತ್ತಿರ ಹೋಗಿ ತೀರಿಸುವುದಕ್ಕೆ 'ನೋಮು' ಅಂತ ಕರೆಯುತ್ತಾರೆ.) 'ನೋಮು' ಎನ್ನುವುದು ತೆಲುಗು ಪದ ಕನ್ನಡದಲ್ಲಿ ಹರಕೆ ಎಂದು ಕರೆಯುತ್ತಾರೆ. ಮಾರಮ್ಮ ಪೂಜೆ ನಂತ್ರ ನಾಗರ ಹಬ್ಬ ಮಾಡ್ತಾರೆ. ಹುತ್ತಕ್ಕೆ ಹಾಲು ಹಾಕ್ತಾರೆ. ಬುಟ್ಟುಗಲವರು ಮನೆಗಳಿಂದ ತಂದ ಮೀಸಲು ಹಾಲನ್ನು ಕಲಿಸುತ್ತಾರೆ. ಎತ್ತುಗಳ ಗದ್ದಿಗೆ ಎಂದು ಮತ್ತೆ ಎರಡು ಕಂಬ್ಳಿ ಹಾಸಿ ಅದರ ಮೇಲೆ ಕಾಸು ಇಟ್ಟು ಎಲ್ಲಾರು ಕೈ ಮುಗಿತಾರೆ. ಆ ಮೇಲೆ ಯರಮಂಚಿ ನಾಯಕನ ವಂಶಸ್ಥರೇ ಕೊಟ್ಟ ಕುರಿಯನ್ನು ಆತನೆ ಕೊಡುವ ಚಾಕುವಿನಿಂದ 'ಸಿಲುಕ ನಾನು' (ಬುಟ್ಟುಗಲವರು ಬೆಡಗಿನಲ್ಲೇ ಒಂದು ಒಳ ಗುಂಪಿನವರು) ವಾಸು ಬಂಡೆ ಅಂದರೆ ದುಂಡನೆಯ ಕಲ್ಲ ಇದರ ಮೇಲೆ ಕುರಿಯ ಕುತ್ತಿಗೆಯನ್ನು ಇಟ್ಟು ಕೊಯ್ಯುತ್ತಾನೆ. ಇದನ್ನೇ ವಾಸು ಕೊಯ್ಯುವುದು ಅಂತಾರೆ. ನಂತರ ಎಲ್ಲಾರು ಮೌನವಾಗಿ ಹಿಂತಿರಿಗುತ್ತಾರೆ. ಆ ಮೇಲೆ ಅಮವಾಸ್ಯೆ ದಿನ ಮಾರೆಮ್ಮನಿಗೆ ಪೂಜೆ ಮಾಡ್ತಾರೆ. ಆದಿನ ಬೆಳಗಿನ ಹೊತು ಕೋಣವನ್ನು ಕಡಿದು ಅದರ ತಲೆ ಮೇಲೆ ಗಂಡಾದೀಪ ಹಚ್ತಾರೆ. (ಮಾರಮ್ಮನ ಜಾತ್ರೆಯ ಸಂದರ್ಭದಲ್ಲಿ ಕೋಣವನ್ನು ಕಡಿದು ಅದರ ತಲೆಯನ್ನು ಮಾರಮ್ಮನ ಗುಡಿಯ ಮುಂದೆ ಇಟ್ಟು ಅದರ ಬಾಯಿ ಒಳಗೆ ಕಾಲನ್ನು ಕಡಿದು ಅದರೊಳಗಿಡುತ್ತಾರೆ. ಆ ಮೇಲೆ ಕೋಣದ ಹೊಟ್ಟೆಯೊಳಗಿನ ನೆಣವನ್ನು ತೆಗೆದು ಕೋಣದ ತಲೆಯ ಮೇಲೆ ಇಟ್ಟು ದೀಪವನ್ನು ಹಚ್ಚುತ್ತಾರೆ. ಇದಕ್ಕೆ 'ಗಂಡಾದೀಪ' ಎಂದು ಕರೆಯುತ್ತಾರೆ.) ಇತ್ತಿತ್ಲಾಗೆ ಸರ್ಕಾರ ಏನೋನೋ ಕಾನೂನು ತಂದ್ಯೆತಂತೇಳಿ ಪೊಲೀಸ್ರು ಬರ್ತಾರೆ ಅವ್ರಿಗೆ ಗೊತ್ತಿಲ್ಲಂಗೆ ಕೋಣ ಕಡಿತೀವಿ. ಆ ಮೇಲೆ ಮಂಗಳವಾರದ ದಿನ ತುಮ್ಮಲುವಿನಲ್ಲಿ ಜಾತ್ರೆ ಸೇರುತ್ತದೆ. ಅಲ್ಲಿಗೆ ಮಾರಮ್ಮ ಖುಷಿಯಿಂದ ಹೋಗ್ತಾಳೆ. ಮಾರಮ್ಮನಿಗೆ ಇತ್ತೀಚೆಗೆ ಮೂರ್ತಿ ಮಾಡಿ ಗುಡಿಯಲ್ಲೇ ಇಟ್ಟಾರೆ, ಹಳೆಯ ಕಾಲದಿಂದ ಪುಟ್ಟಿಯಲ್ಲೇ ಮಾರಮ್ಮನ ಸಲಿಗ್ರಾಮ, ಚಿನ್ನದ ಪುಟ್ಟಿ, ಸಲಿಕೆ, ಗುದ್ದಲಿ ಇವೆ ಎಂದು ಹೇಳ್ತಾರೆ. ಅವುಗಳನ್ನೇಲ್ಲಾ ಬಟ್ಟೆಯಲ್ಲಿ

ಕಟ್ಟಿ ಇಡುತ್ತಾರೆ ಯಾಕಂದ್ರೆ ಯಾರಿಗೂ ತೋರಿಸಬಾರ್ದು ಅಂತ ಪದ್ಧತಿ ಹಿಂದಿನಿಂದಲೂ ನಡ್‌ಕೊಂಡು ಬಂದಿದೆ.

ಬಿದಿರಿನ ಪುಟ್ಟಿ ಸುತ್ತ ಹೊಸ ಕೆಂಪು ಬಟ್ಟೆಯನ್ನು ಸುತ್ತಿ ಅದಕ್ಕೆ ಬೆಳ್ಳಿಯ ಆಭರಣಗಳನ್ನು ಮುಖ ಪದ್ಮವನ್ನು ಸಿಕ್ಕಿಸುತ್ತಾರೆ. ವಡ್ಯಾಣ ಗೆಜ್ಜೆ, ನಾಗರ ಹೆಡೆ, ಕುಚ್ಚುಗಳು ಛತ್ರಿಕೆಗಳು, ಇವೆಲ್ಲಾ ಬೆಳ್ಳಿಯವೇ ಇವೆ. ಹೂವು ಹೊಂಬಾಳೆಯಿಂದ ಪುಟ್ಟಿಗೆ ಸುತ್ತ ಹಾಕಿರ್ತಾರೆ.

"ದೇವರೊರುವಣ್ಣಾಗೆ ವೀರ ಕುಮಾರಗೆ, ಕಾಶೀದಟ್ಟಿಯವರ ನಡುವೀಗೆ ಏರಿದಳೂ ರಥವಾ ದೇವರ ಹೊರಿಸ್ಯಾರೆ ವೀರ ಕುಮಾರಗೆ, ನೀಲಮ್ಮ ರಡದಾ ಮಗನೀಗೆ ಏರಿದಳೂ ರಥವಾ" ಹಿಂಗೆ ಉಪ್ಪಾರ ಜಾತಿಯವರೇ ಪೂಜಾರಿಗಳಾಗಿದ್ದು ಅವರ ತಲೆಯ ಮೇಲೆ ಮಾರಮ್ಮನ ಪಟ್ಟಿಯನ್ನು ಹೊರಿಸುತ್ತಾರೆ.

"ಅರೇನೆ ಛತ್ತರಿಗೆ ಹದಿನಾರು ಜಗಜಂಪ, ಮೇಲೆ ದುರುಗದಲಿ ಹಣುದಾರೆ ಮೇಲೇನೆ ದುರುಗದಲಿ ಹಣುದಂಥ ಛತ್ತರಿಕೆ, ತಾಯ ವೊನಿಗಲುವಾಗ ಹಿಡುದಾರೆ||"

ಹೀಗೆ ಛತ್ರಿ, ಚಾಮರಗಳೊಂದಿಗೆ, ಉರುಮೆ, ತಮ್ಮಟೆ ಮುಂತಾದ ರಣ ವಾದ್ಯಗಳ ಧ್ವನಿಯ ಮಧ್ಯೆ ಮಾರಮ್ಮ ತುಮ್ಮಲಿಗೆ ಹೋಗುತ್ತಾಳೆ. ಹಿಂದೆ ತುಮ್ಮೆಯ ಮರಗಳೇ ಹೆಚ್ಚಾದ್ದಂತೆ ಅದಕ್ಕೆ ತುಮ್ಮಲು ಪೂರ್ಣ ಜಾಗ ಆಗಿತ್ತು ಅಂತ ಹೇಳ್ತಾರೆ. ಈಟಿ, ಭರ್ಚಿ, ಕೋಲು ಇವೆಲ್ಲವುಗಳನ್ನು ಸಂಬಂಧಿಸಿದ ಬೆಡಗಿನವರು ಹಿಡಿಯುತ್ತಾರೆ. ಯರಮಂಚಿನಾಯಕ ಅಂದು ಮಾರಮ್ಮನಿಗೆ ಗೌರವಪೂರ್ವಕವಾಗಿ ಒಪ್ಪಿಸಿದ ಕೋರಿ ಆಕೆಗೆ ಗೌರವಪೂರ್ವಕವಾಗಿ ಹಿಡಿರುತ್ತಾರೆ. ವೈಭವದಿಂದ ಈಕೆ ದೇವಸ್ಥಾನದಿಂದ ಹೊರಗೆ ಅಂಗಳಕ್ಕೆ ಬಂದು ನಿಲ್ಲುತ್ತಾಳೆ. ಪಕ್ಕದ ಗುಡಿಯಿಂದ ಬೊಮ್ಮದೇವರ ಪೆಟ್ಟಿಗೆಯನ್ನು ಹೊತ್ತು ಪೂಜಾರಿಯೂ ಬಂದು ಜೊತೆ ಸೇರುತ್ತಾನೆ. ಊರಿನ ಬಾಗಿಲಿಗೆ ಬಂದಾಗ ಬಂದು ಕುರಿಯನ್ನು ನಿವಾಳಿಸಿ ಎರಡೂ ಕಡೆ ಮಾರಿಗೆ ಅಡ್ಡವಾಗಿ ಕುರಿಯನ್ನು ನಾಲ್ಕೂ ಜನ ಹಿಡಿದು ನಿಂತಿರುತ್ತಾರೆ. ಆಗ ಒಂದೇ ಏಟಿಗೆ ಮಚ್ಚಿನಿಂದ ಅದನ್ನು ಎರಡು ಭಾಗ ಮಾಡಿ ಕೊಲ್ತಾರೆ. ಆ ಮೇಲೆ ಈಕೆ ಊರಬಾಗಿಲಿಗೆ ಬರುತ್ತಾಳೆ. ಊರಮ್ಮ ಗುಡಿಯ ಮುಂದೆ ಒಂದು ಕ್ಷಣ ನಿಲ್ಲುತ್ತಾರೆ. ಅಷ್ಟೊತ್ತಿಗೆ ಮಾದಿಗರ ಕೇರಿಯಿಂದ ಮಾತಂಗಿಯಮ್ಮನನ್ನು ಹೊತ್ತ ಪೂಜಾರಿಯೂ ಬಂದು ಸೇರುತ್ತಾನೆ.

"ಹತ್ತಲಾರದ ಬೆಟ್ಟ ಹತ್ಯಾಳೆ ಮಾರಕ್ಕ ಹೊಗ್ಯಾಳೆ ಕುರಿಹಟ್ಟಿ ಗೌಡರನ ಏರಿದಳೂ ರಥವಾ ಕೂಗ್ಯಾಳೆ ಕುರಿಹಟ್ಟಿಗೌಡ ಕರಿಯಣ್ಣ, ನಾ ಧೂಳ ಮರಿ ಮುಂದಾಗಿ ಬರಬೇಕು|| ಧೂಳ ಮರಿ ಮುಂದಾಗಿ ಬಾರದಿದ್ದರೆ ನಾನು ಬಾಲಗೆ ಚಳಿ ಜ್ವರ ತರಿಸೇನಾ||"

"ಬಿತ್ತಿದ ಹೊಲದಾಗೆ ಬಿತ್ತಿರದ ಹೊಲದಾಗೆ, ಅವಳ ರಾಜ್ಯಣದ ಬಯಲಾಗೆ|| ಅವಳ ರಾಜ್ಯಣದ ಬಯಲಾಗೆ ಮಾರಕ್ಕ ಛತ್ರಿಕೆ ಸಾಲಿಟ್ಟು ನಡೆದಾಳು"

ಹಿಂಗೆ ಮಾರಕ್ಕ ಹೊಲಗದ್ದೆಗಳ ಮಧ್ಯೆ ನಡೆಯುತ್ತಾ ತುಮ್ಮಲಿಗೆ ಬರುತ್ತಾಳೆ. ಈಗೇನು ದಾರಿ ಮಾಡ್ಯಾರೆ ದಾರಿ ಮಧ್ಯೆ ಬಳೆಗಾರಜ್ಜನ ಸಮಾಧಿ ಬಳಿ ಒಂದು ಕ್ಷಣ ಇಳಿಸಿ ಪೂಜೆ ಮಾಡುತ್ತಾರೆ. ದಾರಿಯುದ್ದಕ್ಕೂ ಭಕ್ತಾದಿಗಳು ಒಪ್ಪಿಸುವ ಹರಕೆ ಒಂದೇ, ಎರಡೇ ಅಲ್ಲ ಹಲವಾರು ವಿಧಗಳು, ಜೋರಾಗಿ ಜನಗಳ ಮಧ್ಯೆ ಈ ದೇವರು ಹೊತ್ತವರು ನಡೆದು ಬರುವಾಗ ಇಲ್ಲಿ ಸೇರಿದ ಜನರು ಮಂಡಕ್ಕಿ, ದವಸ, ಬೆಲ್ಲ, ಕೋಳಿ ಎಸೆಯುತ್ತಾರೆ. ಬೆಳೆದ ಈರುಳ್ಳಿ ಗೊಂಚಲು ಗೊಂಚಲು ಕಟ್ಟಿ ಎಸೆಯುತ್ತಾರೆ. ಬಾಳೆ ಹಣ್ಣು ಹೂವಿನ ಹಾರಕೂಡ ಎಸೆಯುತ್ತಾರೆ. ದೇವಿಯು ಬರುವಾಗ ಮೇಲೆ ಒಗೆದ ಪಕ್ಷಿಗಳು ಹಾರಾಡಿದಂತೆ ಕಾಣ್ತಾವೆ. ಹಾರಬೆಲ್ಲ ನಿನಗೆ ಸೂರು ಬೆಲ್ಲನಿಗೆ ಎಂದು ಹಾಡ್ತಾರೆ. ಹಿಂಗೆ ಈಕೆ ತುಮ್ಮಲಿಗೆ ಬರ್ತಾಳೆ. ಈಗೆಲ್ಲ ಪೋಲಿಸ್ರು-ಗೀಲೀಸ್ರು ಎಲ್ಲಾರು ಬರ್ತಾರೆ ಕಂಟ್ರೋಲ್ ಮಾಡಾಕೆ ತುಮ್ಮಲಿನಲ್ಲಿ ಈ ಮಾರಮ್ಮನ ಸಮಾಧಿ ಇದೆ ಎಂದು ಹೇಳ್ತಾರೆ. ಒಂದು ಕಾಂಪೌಂಡು ಕಟ್ಟಿದ್ದಾರೆ. ಒಳಗೆ ಕಟ್ಟೆಗಳಿವೆ. ಕಾಂಪೌಂಡಿನಲ್ಲಿ ಎತ್ತರದ ಗರುಡಗಂಭವಿದೆ. ಮಾರಮ್ಮನನ್ನು ಹೊತ್ತುಕೊಂಡ ಪೂಜಾರಿ ಬಂದು ಕಾಂಪೌಂಡು ಬಾಗಿಲಿಗೆ ಬಂದು ನಿಲ್ತಾನೆ. ಇಲ್ಲಿಗೆ ಬಂದು ತಲುಪುವಾಗ ಹೋಗುವಾಗ ಅದನ್ನು ನೊಡಲೇ ಬಹಳ ಚಂದ ನೋಡ್ರಿ ಹಿರೇಹಳ್ಳಿ ಗೌರ ಸಮುದ್ರಕ್ಕೆ ೬-೭ ಮೈಲಿಗಳ ದೂರದಲ್ಲಿದೆ ಈ ಊರು. ಇಲ್ಲಿ ಮ್ಯಾಸಬೇಡರೇ ಬಹಳ ಜನ ಇದ್ದಾರೆ. ಬುಟ್ಟುಗಲವರು ಬೆಡಗಿನವರು ಜಾತ್ರೆ ದಿನ ಬೆಳಿಗ್ಗೆ ಎಲ್ಲರೂ ಒಂದೇ ಮನೆಯಲ್ಲಿ ಸೇರಿ ಮೀಸಲು ಹಾಲು ತುಂಬಿದಕುಡಿಕೆ, ಅರಿಷಿಣ ಕುಂಕುಮ, ತೆಂಗಿನ ಕಾಯಿಯನ್ನು ಒಂದು ಹೊಸ ಬಿದಿರಿನ ಪುಟ್ಟಿಯಲ್ಲಿಟ್ಟು. ಒಪ್ಪೊತ್ತಿನಿಂದ ಮನೆಯ ಸೊಸೆಗೆ ಹೊರಿಸಿಕೊಂಡು ಎಲ್ರೂ ಒಟ್ಟಾಗಿ ನಡೆದುಕೊಂಡು ಉರುಮೆ ಬಾರಿಸಿಕೊಂಡು ಗೌರಸಮುದ್ರಕ್ಕೆ ಹೊಗ್ತಾರೆ. ಅಲ್ಲಿಂದ ದೇವರನ್ನು ತುಮ್ಮಲಿಗೆ ಹೊತ್ತು ಕೊಂಡು ಹೋಗುವಾಗ ತಾವೂ ಜೊತೆಯಲ್ಲಿ ನಡೆದು ಬಂದು ತುಮ್ಮಲಿಗೆ ಸೇರ್ತಾರೆ. ಅಲ್ಲಿರುವ ಹುತ್ತಕ್ಕೆ ಪೂಜಿಸಿ ತಾವು ತಂದ ಮೀಸಲು ಹಾಲನ್ನು ಹುತ್ತದ ಮೇಲೆ ಸುರಿದು. ಅದನ್ನು ಕಲೆಸಿ ಹುತ್ತದ ಬಂಗಾರ ಎಂದು ತರುತ್ತಾರೆ. ಇದನ್ನು ತಂದ್ ಮೇಲೆ ಮಾರಮ್ಮನ ಪುಟ್ಟಿಯನ್ನು ಕಾಂಪೌಂಡೊಳಗೆ ತಗಂಡೋಗ್ತಾರೆ. ಆ ಮೇಲೆ ಕಟ್ಟೆಯ ಮೇಲೆ ಬೊಮ್ಮದೇವರು ಮತ್ತು ಮಾತಂಗಿಯೊಂದಿಗೆ ಮಾರಮ್ಮನನ್ನು ಕೂರಿಸುತ್ತಾರೆ. ಇಷ್ಪೊತ್ತಿಗೆ ನಿಡುಗಲ್ಲಿನಿಂದ ಮೀಸಲು ಬರುತ್ತದೆ. ಈಕೆ ನಿಡುಗಲ್ಲಿನಿಂದ ಬಂದವಳು ಅದೇ ಈಕೆಯ ತವರು ಎಂದು ಹೇಳ್ತಾರೆ ನಮ್ಮ ಹಿರಿಯರು.

"ಕಲ್ಲುಕಂಬ ನತ್ಯಾರೆ ದೀಪವನಚ್ಯಾರೆ ಕಲ್ಲುಕಂಬನತ್ತಿ ಇಳುದಾರೆ ಏರಿದಳೂ ರಥವಾ, ಕಲ್ಲು ಕಂಬಾನೆತ್ತಿ ಇಳುದಾರೆ ಸಿಲುಕನಾರು, ಕಾಯೊಡೆದು ಕಯ್ಯ ಮುಗದಾರ"

ಕಲ್ಲುಕಂಬ ಹತ್ತಿ ದೀಪಹಚ್ಚಿದ 'ಸಿಲುಕ ನಾನು' ಎಂಬ ಬೆಡಗಿನವನು ನಿಡುಗಲ್ಲಿನ ಮೀಸಲು ಹಿರೇಹಳ್ಳಿ ಬೇವಿನಸೀರೆ ಬಂತು ಎಂದು ಕೂಗ್ತಾರೆ, ನಂತರ ಜನರ ಪೂಜೆ ಹರಕೆಗಳು ಶುರುಮಾಡ್ತಾರೆ. ಹರಕೆಗಳು ತೀರಿಸಲು, ಭಂಡಾರ ತಂದು, ಕುರಿ, ಕೋಳಿ, ಕೋಣಗಳು ಕಡಿತಾರೆ.

"ಆ ಮೇಲೆ ಒಪ್ಪೊತ್ತಿನಾ ಊಟ ಚುಚ್ಚಿದ ಬಾಯಿ ಬೀಗ, ಚುಚ್ಚಾರೆ ಗಲ್ಲಾಕೆ ಬರುಲಾರೆ ಚುಚ್ಚಾರೆ ಗಲ್ಲಾಕೆ ಬರುಲಾರೆ ಮಾರಕ್ಕ ಒಪ್ಪಿಸಿಕೊಳ್ಳೆ ಮನದರಕೆ"

ಬರ್ತಿ ಜನರ ನಡುವೆ ಬಾಯಿಬೀಗ ಹಾಕಿಕೊಂಡು ಮಹಿಳೆ ಪ್ರದಕ್ಷಣೆ ಮಾಡಲಾಗದೆ ಅಸಾಹಾಯಕತೆಯಿಂದ ಕೆಳಲು ಮಾರಮ್ಮ ಸುಮ್ಮನೆ ಬಿಡುವವಳಲ್ಲ.

"ಒಪ್ಪಿಕೊಂಬಾಕೆ ಎತ್ತೇನೆ ಎಮ್ಮೆನೆ, ಸುತ್ತಿ 'ಬಾ' ನನ್ನ ಪುವುಳೀಯ|| ಸುತ್ತೀ ಬಾ ನನ್ನ ಪುವಳೀ ಬಾಗಿಲ ಮುಂದೆ ಚೊಚ್ಚಲಮಗನಿಗೆ ನನ್ನ ಹೆಸರಿಡೇ" ಹಿಂಗೆ ಬಾಯಿ ಬೀಗ ಹಾಕಿಕೊಂಡು ತಲೆಯ ಮೇಲೆ ಮಣ್ಣಿನ ಹಣತೆ ಹೊತ್ಕೊಂಡು ಪ್ರದಕ್ಷಣೆ ಮಾಡುವ ಹರಕೆ, ಕೈಯಲ್ಲಿ ಬೇವಿನ ಸೊಪ್ಪನ್ನು ಹಿಡಿದು ಎಲ್ಲಾರು ಬೇವಿನ ಸೀರೆ ಉಡುವ ಹರಕೆ ಎಂದು ಜಾತ್ರೆಗೆ ಸೇರಿದ ಎಲ್ಲಾರು ಕೈಮುಗಿದುಕೊಂಡು ಮಾರಮ್ಮನ ಪೌಳಿಯನ್ನು ಮೂರು ಸುತ್ತು ಸುತ್ತುತ್ತಾರೆ ಸುತ್ತಿ ಬೇವಿನ ಸೊಪ್ಪು ಕೆಳಗೆ ಹಾಕಿ ಕೈಮುಗಿದು ಹಣ್ಣು ಕಾಯಿ ಮಾಡಿಸುತ್ತಾರೆ. ಭರ್ತಿ ಜನದಾಗೆ ಕೆಲವರು ತಮ್ಮ ಗಾಡಿಗಳ ಹತ್ತಿರನೇ ಒಂದು ತಂಗಡೆ ಗಿಡಕ್ಕೆ ಪೂಜೆ ಮಾಡಿ ಕೈಮುಗಿತ್ತಾರೆ. ಬೇವಿನ ಸೀರೆ ಆದ ಮೇಲೆ ಹೊಸ ಬಟ್ಟೆಗಳನ್ನು ಹಾಕ್ಕೊಳ್ತಾರೆ. ಎರಡು ಮೂರು ಗಂಟೆಯೊಳಗೆ ಎಲ್ಲರೂ ಖಾಲಿಯಾಗ್ತಾರೆ. ರಾತ್ರಿಯಾದ ಹೊತ್ತಿಗೆ ಅಲ್ಲಿ ತುಮ್ಮಲಿನಲ್ಲಿ ಯಾರು ಇರುವುದಿಲ್ಲ. ಮಾರಮ್ಮನನ್ನು ಕೂಡ ಪೂಜಾರಿ ಹೊತ್ಕೊಂಡು ಊರಿಗೆ ಹೋಗಿ ಊರಿನಲ್ಲಿ ರಾತ್ರಿಯಲ್ಲಿ ಮೆರವಣಿಗೆ ಮಾಡ್ತಾರೆ.

ಮಾರಮ್ಮನ ಆಚರಣೆಯ ವಿವರಗಳನ್ನು ನೋಡಿದರೆ, ಇಲ್ಲಿ ಕೇವಲ ಮ್ಯಾಸ ಬೇಡರ ಆಚರಣೆಯಾಗದೆ ಇದೊಂದು ತಳಸಮುದಾಯಗಳೆಲ್ಲ ಸೇರಿ ಆಚರಿಸುವ 'ಶಕ್ತಿ ಆರಾಧನೆ'ಯಾಗಿ ಕಾಣುತ್ತದೆ. ಇಲ್ಲಿ ಕೋಣವನ್ನು ಬಲಿ ಕೊಡುವವರು ದಲಿತರು, ಹಾಗೆಯೇ ಮಾರಮ್ಮನನ್ನು ಪೂಜೆ ಮಾಡುವವರು ಉಪ್ಪಾರರು, ಈ ಆಚರಣೆಯಲ್ಲಿ ಹೆಚ್ಚು ಭಾಗವಹಿಸುವವರು ಬೇಡರು ಇಲ್ಲಿನ ಈ ವಿವರಗಳನ್ನು ನೋಡಿದರೆ ತಳಸಮುದಾಯಗಳ ಲೋಕದೃಷ್ಟಿಯ ಭಿನ್ನ ಆಯಾಮಗಳು ತಿಳಿಯತ್ತವೆ. ಅಂತೆಯೇ ಮಾತೃ ಆರಾಧನೆಯ ಮೂಲದ ಕುರುಹುಗಳನ್ನು ತಿಳಿಯಲು ಸಾಧ್ಯವಿದೆ. ಇಲ್ಲಿನ ಆಚರಣೆಯಲ್ಲಿ ಬೇಡರಿಗೆ ಪ್ರಾತಿನಿಧ್ಯ ಹೆಚ್ಚಿರುವುದನ್ನು ನೋಡಿದರೆ, ತಳಸಮುದಾಯಗಳಲ್ಲಿಯೇ ಶ್ರೇಣೀಕರಣ ಏರ್ಪಟ್ಟಿರುವುದನ್ನು ಗಮನಿಸಲು ಸಾಧ್ಯವಿದೆ. ವರ್ತಮಾನ ಭೂತಕಾಲದ ಸಂಕರಗೊಂಡ ಸ್ಥಿತಿಯನ್ನು ಈ ಆಚರಣೆಯ ಮಾಹಿತಿಯಲ್ಲಿ ಗ್ರಹಿಸಲು ಸಾಧ್ಯವಿದೆ.

೪.೨.೫.೨.ಸಿಡಿ

ಬುಧವಾರ ಸಂಜೆ ನಾಲ್ಕು ಗಂಟೆಗೆ ಮಾರಮ್ಮನಿಗೆ ಸಿಡಿಯನ್ನು ಆಡುವುದು ಪ್ರಾರಂಭವಾಗ್ತದೆ. ಸಿಡಿಗಂಬ ದೇವಸ್ಥಾನದ ಮುಂದೆ ಇರ್ತದೆ. ಬುಟ್ಟಗಲವರ ಬೆಡಗಿಗೆ ಸೇರಿದ ಕೋನಸಾಗರದಲ್ಲಿರುವ 'ಕೊಡಗಿನವರು' ಎಂಬ ಗುಂಪಿನವರು ಸಿಡಿ ಆಡ್ತಾರೆ. ದೇವಸ್ಥಾನದ ಕಟ್ಟೆಯ ಮೇಲೆ ಮಾರಮ್ಮನ

ಪೆಟ್ಟಿಗೆಯನ್ನು ಇಟ್ಟಿರುರ್ತಾರೆ. ಮೊದ್ಲು 'ಸಿಲಿಕಿನಾನು' ಬೆಡಗಿನವ್ರು ಸಿಡಿ ಆಡ್ತಿದ್ರಂತೆ ಈಗ ಕೊಡಗಿನವನ ಬೆಡಗಿನವ್ರು ಆಡ್ತಾರೆ ಕೊಡಗನಾನು ಅಂದ್ರೆ ಕೊಳಗುಳದ ಬೊಮ್ಮನ ಕುಲದವರು ಇವ್ರೆಲ್ಲಾರು ಒಂದೇ ಏನೋ ಕಾರಣಗಳಿಂದ ಬೇರೆ ಬೇರೆ ಒಳಗುಂಪುಗಳಾಗಿದ್ದಾರಂತೆ ಆದಿನ ಮಧ್ಯಾಹ್ನದ ಹೊತ್ತಿಗೆ ಉಪವಾಸವಿರುವ ಸಿಡಿ ಆಡುವವರು ಭಯಭಕ್ತಿಯಿಂದ ಆತನ ಮನೆಯವರು ದೇವಸ್ಥಾನಕ್ಕೆ ಕರ್ಕೊಂಡು ಬರ್ತಾರೆ, ಸಿಡಿ ಆಡುವುದಕ್ಕಿಂತ ಮೊದ್ಲೆ ಮೈ ಮೇಲೆ. ತಣ್ಣೀರು ಹಾಕಿಕೊಂಡು ಹೊಸ ಬಟ್ಟೆಯನ್ನು ಹಾಕಿಕೊಂಡಿರ್ತಾರೆ. ಚಲ್ಲಣ ಇಲ್ಲಂದ್ರೆ ಕಚ್ಚೆಯನ್ನು ಬಿಗಿಯಾಗಿ ಕಟ್ಟಿಕೊಂಡು ಸೊಂಟಕ್ಕೆ ಒಂದು ಕಾಸಿದಟ್ಟಿಯನ್ನು ಕಟ್ಟಿಕೊಂಡು ಈ ಬಟ್ಟೆಗೆ ಜೋಡಿಸಿದಂತೆ ಹಗ್ಗ ಸಿಡಿಮರದ ಕೊನೆಗೆ ಬಿಗಿದಿರುತ್ತಾರೆ. ಹಿಂಗೆ ಕಟ್ಟಿಕೊಂಡು ಭಂಡಾರ, ಬೇವಿನ ಸೊಪ್ಪು ಮತ್ತು ಕುಡುಗೋಲನ್ನು ಕೈಯಲ್ಲಿ ಹಿಡಿದು ದೇವಿಗೆ ಕೈ ಜೋಡಿಸಿರುವಂತೆಯೇ ಮರವನ್ನು ಎತ್ತಿ ಆತನನ್ನು ಮೇಲಕ್ಕೆ ಕಳಿಸುತ್ತಾರೆ. ಕೊರಳಿಗೆ ಹೂವಿನ ಹಾರ ಹಾಕಿರ್ತಾರೆ, ಮೂರು ಬಾರಿ ಆತನನ್ನು ಸುತ್ತಿಸಲಾಗುತ್ತದೆ. ಸಾಕಷ್ಟು ಜನ ಕೆಳಗೆ ಕೂಡಿರುತ್ತಾರೆ ಅವರ ಮೇಲೆ ಭಂಡಾರ ಚಲ್ಲುತ್ತಾ ತನ್ನ ಕೈಯಲ್ಲಿರುವ ಕುಡುಗೋಲಿನಿಂದ ಬೇವಿನ ಸೊಪ್ಪನ್ನು ಕತ್ತರಿಸಿ ಕೆಳಗೆ ಎಸೆಯುತ್ತಾ ಒಮ್ಮೊಮ್ಮೆ ಬಾಯಲ್ಲಿ ಕುಡುಗೋಲು ಬೇವಿನ ಸೊಪ್ಪು ಹಿಡಿದು ದೇವಿಗೆ ನಮಸ್ಕರಿಸುತ್ತಾ ಈತ ಭಯಭಕ್ತಿಯಿಂದ ಸಿಡಿಯಾಡ್ತಾನೆ.

ಸಿಡಿ ಆಚರಣೆಯ ಮೂಲಕ ಮಾತೃ ಆರಾಧನೆಯ 'ಉಗ್ರ' ಆಚರಣೆ, ಈ ಉಗ್ರ ಆಚರಣೆ ತಮಿಳುನಾಡು ಆಂದ್ರದಲ್ಲಿ ಇನ್ನೂ ಭೀಕರವಾಗಿದೆ. ಆದರೆ ಇಲ್ಲಿ ಅಷ್ಟು ಉಗ್ರತೆ ಇಲ್ಲವಾದರೂ, ಇದೊಂದು ಉಗ್ರ ಆಚರಣೆ ಎನ್ನುವುದರಲ್ಲಿ ಎರಡು ಮಾತಿಲ್ಲ, ಇದೂ ಸಹ ಬೇಡರ ಬೇಟೆ ಕಾಲದ ಸಂಸ್ಕೃತಿಯನ್ನು ಮತ್ತೆ ಮತ್ತೆ ಬಿಂಬಿಸುತ್ತವೆ.

ಮ್ಯಾಸಬೇಡರ ಸಾಂಸ್ಕೃತಿಕ ಸ್ಥಿತ್ಯಾಂತರಗಳು

ಯಾವುದೇ ಸಮುದಾಯ ತನ್ನ ಸಂಸ್ಕೃತಿಯನ್ನು ಕಾಲಮಾನಕ್ಕನುಗುಣವಾಗಿ ತನ್ನನ್ನು ರೂಢಿಸಿಕೊಳ್ಳಲು ಸಾವಧಾನವಾಗಿ ಗಮನಿಸುತ್ತಲೇ ಇರುತ್ತದೆ. ಬದಲಾಗುವ ಕಾಲಮಾನದ ಲಯಕ್ಕೆ ಅದು ತನ್ನನ್ನು ವಿಸ್ತರಿಸಿಕೊಳ್ಳುವ ಅಥವಾ ತನ್ನ ಸಂವೇದನೆಗಳನ್ನು ಆ ಬದಲಾದ ಲಯಕ್ಕೆ ಹೊಂದಿಸಿಕೊಳ್ಳುವ ಪ್ರಯತ್ನವನ್ನು ಸಮುದಾಯ ಯಾವತ್ತು ಜೀವಂತವಾಗಿಟ್ಟುಕೊಂಡಿರುತ್ತದೆ. ಹೀಗೆ ವಿಕಾಸ ಹೊಂದುತ್ತ ಸಂಸ್ಕೃತಿ ಬದಲಾವಣೆಯ ಎಲ್ಲ ಬಗೆಯ ಏರಿಳಿತಗಳನ್ನು ಕೈಚೆಲ್ಲಿ ಅಥವಾ ಅಸಾಹಾಯಕ ದೈನ್ಯ ಸ್ಥಿತಿಯಿಂದಲೆ ಸ್ವೀಕರಿಸುತ್ತದೆ ಎಂದು ಹೇಳಿದರೆ ತಪ್ಪಾಗುತ್ತದೆ. ಸ್ವೀಕರಣ ಮತ್ತು ಪ್ರತಿರೋಧಗಳು ಏಕಕಾಲದಲ್ಲಿ ಆ ಕೋಶದ ಒಳಗೆ ಸನ್ನದ್ಧವಾಗಿರುತ್ತದೆ. ಹೀಗೆ ಸ್ಥಿತ್ಯಂತರಕ್ಕೆ ಭಾರತದ ಸಮುದಾಯಗಳು ಮಿಶ್ರಪ್ರತಿಕ್ರಿಯೆಯ ಮೂಲಕ ಸಂವೇದಿಸಿದ್ದು ಗಮನಾರ್ಹ ಸಂಗತಿ. ಈ ಸ್ವೀಕರಣ ಮತ್ತು ಪ್ರತಿರೋಧಗಳು, ಸಮುದಾಯಗಳನ್ನು, ಬದಲಾವಣೆಗೆ ಅರ್ಥ ಪೂರ್ಣವಾಗಿ ಅನ್ವಯಿಸುವ, ಬೆಸೆಯುವ ಪ್ರಕ್ರಿಯೆಯಲ್ಲಿ

ತೊಡಗಿರುತ್ತವೆ. ಸ್ವೀಕರಿಸುವಾಗ ಸಮುದಾಯದ ಆಳದಲ್ಲಿನ ಚಾರಿತ್ರಿಕ ಹಸಿವು, ಪ್ರತಿರೋಧಿಸುವಾಗ ಕಾಡುವ ಅನನ್ಯತೆಯ ಭಯ, ಇವರೆಡೂ ಒಂದು ಸಮುದಾಯದ ಸಂಸ್ಕೃತಿ ಆಳದಲ್ಲಿ ತುಡಿತವನ್ನು ಒಂದು ಅರ್ಥಪೂರ್ಣ ಲಯಕ್ಕೆ ಹೊಂದಿಸಿವೆ. ಹೀಗೆ ಒಂದು ಸಂಸ್ಕೃತಿಯ ಸ್ಥಿತ್ಯಂತರಗಳ ಸವಾಲುಗಳನ್ನು ಸ್ವೀಕರಿಸುವಾಗ ಬೌದ್ಧಿಕವಾಗಿ ಚಿಂತಿಸುವ ಜೊತೆಗೆ ಪ್ರತಿರೋಧದ ವೈಚಾರಿಕ ದಿಟ್ಟತನವನ್ನು ಮೈಗೂಡಿಸಿಕೊಂಡಿರುತ್ತದೆ. ಸ್ವಕೀಯ ದರ್ಶನಗಳ ಜೊತೆ ತಾನು ಪಡೆದ ಅನ್ಯಜ್ಞಾನವನ್ನು ಸಂಯೋಜಿಸುವ ವಿಶಿಷ್ಟ ಗುಣ ಭಾರತದ ಬಹುಪಾಲು ಸಮುದಾಯಗಳಿಗಿದೆ.

ಸಂಸ್ಕೃತಿ ಎನ್ನುವುದು ಒಳಿತು ಮತ್ತು ಕೆಡಕುಗಳು ಸಂಭವಿಸುವ ನಿರಂತರ ಹರಿವು. ಆ ಹರಿವು ಹರಿಯುತ್ತಲೇ ಕೆಡಕುಗಳನ್ನು ಕಳಚಿ ತಿಳಿಯಾಗುತ್ತದೆ. ಇಂತಹ ಚಾರಿತ್ರಿಕ ಹರಿವಿಗೆ ಈ ರೀತಿಯ ಪರಿಷ್ಕರಣೆಯ ಗುಣ ಕಾಲದ ಒತ್ತಡದಿಂದ ಸಹಜವಾಗಿ ಎಂಬುದಾಗಿದೆ. ಹೀಗಾಗಿ ಸಂಸ್ಕೃತಿಯನ್ನು ಕಾಯ್ದುಕೊಳ್ಳಬೇಕೆನ್ನುವ ಮಾನುಷ ಪ್ರಯತ್ನ ಮತೀಯ ಅಹಂಕಾರದಿಂದ ಚೋದಿಸಲ್ಪಟ್ಟಿರುತ್ತದೆ. ಸಂಸ್ಕೃತಿ ತನ್ನಷ್ಟಕ್ಕೆ ತಾನು ಸ್ವತಂತ್ರ ಘಟಕವಲ್ಲ, ಅದು ಸಮುದಾಯದ ಅಂತಸ್ಸತ್ವ ಕಾಲದ ಒತ್ತಡಗಳು ಪ್ರಭಾವಗಳು ಹೇಗೆ ಸಮುದಾಯಗಳ ಮೇಲೆ ಬದಲಾವಣೆಗಳ ಅನಿವಾರ್ಯತೆಯನ್ನು ತರುತ್ತವೋ ಆಗೆಲ್ಲ ಸಂಸ್ಕೃತಿ ತನ್ನಷ್ಟಕ್ಕೆ ತಾನು ಸ್ಥಿತ್ಯಂತರಗಳಿಗೆ ಒಳಗಾಗುತ್ತದೆ.

ಈ ಸ್ಥಿತ್ಯಂತರಗಳಿಗೆ ಒಳಗಾಗುತ್ತಿರುವ ಬುಡಕಟ್ಟು ಸಮುದಾಯಗಳಲ್ಲಿ ಮ್ಯಾಸಬೇಡರ ಬುಡಕಟ್ಟು ಸಮುದಾಯ ಕೂಡ ಪ್ರಮುಖವಾದುದು. ಈ ಸಮುದಾಯವು ಇಂದು, ಸಂಸ್ಕೃತೀಕರಣ, ಆಧುನೀಕರಣ ಮತ್ತು ಮತಾಂತರಕ್ಕೆ ಒಳಗಾಗಿ ಬದಲಾವಣೆಯ ಲಕ್ಷಣಗಳು ಕಂಡು ಬರುತ್ತಿವೆ. ಹಾಗಾಗಿ ಇಲ್ಲಿ ಈ ಮೂರು ಪ್ರಮುಖ ಅಂಶಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ.

ಸಂಸ್ಕೃತೀಕರಣ

ಕೆಳಸ್ತರದ ಆದಿವಾಸಿ ಅಥವಾ ಬುಡಕಟ್ಟು ಸಮುದಾಯಗಳು ತಮ್ಮ ರೂಢಿ ಸಂಪ್ರದಾಯ, ಪದ್ಧತಿ, ಸಂಸ್ಕಾರ, ಕ್ರಿಯಾವಿಧಿ, ಆದರ್ಶ ಜೀವನ ವಿಧಾನಗಳನ್ನು ಮೇಲ್ಜಾತಿಯವರ ರೀತಿ ನೀತಿಗಳಿಗೆ ಅನುಗುಣವಾಗಿ ಬದಲಾಯಿಸಿಕೊಳ್ಳುವ ಪ್ರಕ್ರಿಯೆಯನ್ನು ಸಂಸ್ಕೃತೀಕರಣ ಎನ್ನುವರು. ಅಂದರೆ ಸಾಮಾಜಿಕ ಹಾಗೂ ಸಂಸ್ಕೃತಿಯ ಸಂಚಲನೆಯ ಪ್ರಕ್ರಿಯೇಯಾಗಿದೆ. ಕೆಳಜಾತಿಗಳು ತಾವು ಕಂಡ ಪ್ರಬಲ ಹಾಗೂ ಪ್ರತಿಷ್ಠಿತ ಮೇಲ್‌ಜಾತಿಗಳ ಅನುಕರಣೆಯ ಮೂಲಕ ತಮ್ಮ ಅಂತಸ್ಥನ್ನು ಹೆಚ್ಚಿಸಿಕೊಳ್ಳುವುದು. ಇಂತಹ ಪದ್ಧತಿಯನ್ನು ಅನುಸರಿಸುವ ಸಮುದಾಯಗಳಲ್ಲಿ ಮ್ಯಾಸಬೇಡರ ಸಮುದಾಯ ಒಂದಾಗಿದೆ. ಮ್ಯಾಸಬೇಡರ ಸಮುದಾಯದವರು ಇತ್ತೀಚೆಗೆ ಸಂಸ್ಕೃತೀಕರಣಗೊಳ್ಳುತ್ತಿರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಮ್ಯಾಸಬೇಡರ ಹಟ್ಟಿಗಳಲ್ಲಿ ಕಂಡು ಬಂದಿದೆ. ಮ್ಯಾಸಬೇಡರ ಹಟ್ಟಿಗಳಲ್ಲಿ ಹೆಚ್ಚಾಗಿ ಜನರು ಅಯ್ಯಪ್ಪಸ್ವಾಮಿಯನ್ನು ಆರಾಧಿಸುತ್ತಿದ್ದಾರೆ. ಅಯ್ಯಪ್ಪಸ್ವಾಮಿಯನ್ನು ಆರಾಧನೆ ಮಾಡುತ್ತಲೇ ಆತನ

ಹೆಸರಿನಲ್ಲಿ ಮಾಲೆಯನ್ನು ಹಾಕುತ್ತಾರೆ. ಈ ಮಾಲೆಯನ್ನು ಹಾಕುವುದರ ಮೂಲಕ ತಮ್ಮ ಪಾರಂಪರಿಕ ಆಹಾರ ಪದ್ಧತಿಯಾದ ಮಾಂಸಹಾರ ಮತ್ತು ಮದ್ಯಪಾನ ಮಾಡುವುದು, ಪ್ರಾಣಿಬಲಿಯನ್ನು ಕೊಡುವುದು. ಮುಂತಾದವುಗಳನ್ನು ಕೈಬಿಟ್ಟು, ಮೇಲ್ ವರ್ಗದ ರೀತಿ-ನೀತಿಗಳನ್ನು ಕ್ರಿಯಾವಿಧಿಗಳನ್ನು, ಹಾಗೂ ಜೀವನ ಕ್ರಮವನ್ನು ಅನುಸರಿಸುತ್ತಿರುವುದು ಕಂಡುಬರುತ್ತದೆ. ಕೋನಸಾಗರದಲ್ಲಿ ಶರಣಪ್ಪ ಎಂಬುವರನ್ನು ಸಂದರ್ಶನಕ್ಕೊಳಪಡಿಸಿದಾಗ ಅವರು ಹೇಳುವ ರೀತಿ ಹೀಗಿತ್ತು. ನಾನು ಅಯ್ಯಪ್ಪ ಸ್ವಾಮಿ ಮಾಲೆಯನ್ನು ಐದು ವರ್ಷಗಳಿಂದ ಹಾಕುತ್ತಾ ಬಂದಿದ್ದೇನೆ. ಜೊತೆ ನನ್ನ ಸ್ನೇಹಿತರು ನಾಲ್ಕು ಜನ ಇದ್ದಾರೆ. ಅವ್ರು ಕೂಡ ಮಾಲೆಯನ್ನು ಹಾಕುತ್ತಾರೆ. ನಾವು ಮಾಲೆಯನ್ನು ಹಾಕಿದ ಕೂಡ್ಲೆ ಮನೆಯಲ್ಲಿ ಊಟಮಾಡುವುದಿಲ್ಲ ನಾವೇ ಹೊರಗಡೆ ಮಾಡಿಕೊಳ್ತೀವಿ. ಆಗಿನಿಂದ ಮಾಂಸವನ್ನು ತಿನ್ನುವುದನ್ನು ಬಿಟ್ಟಿದ್ದೇನೆ. ಮಾಲೆ ಹಾಕಿದಾಗಿನಿಂದ ತೆಗೆಯುವವರೆಗೆ ನಮಗೆ ಹನ್ನೆರಡರಿಂದ ಹದಿನೈದು ಸಾವಿರ ಖರ್ಚು ಬರುತ್ತದೆ. ಶರಣಪ್ಪ ಹೇಳುವ ಮಾತುಗಳನ್ನು ಗಮನಿಸಿದರೆ ಇವರ ಆಹಾರ ಪದ್ಧತಿಯು ಸಂಪೂರ್ಣವಾಗಿ ಬದಲಾಗಿದಂತೆ ಕಾಣುತ್ತದೆ ಜೊತೆಗೆ ಇವರು ಸಸ್ಯಹಾರಿಗಳಾಗಿರುವುದು ಪ್ರಮುಖವಾಗಿ ಎದ್ದು ಕಾಣುತ್ತದೆ. ಹಾಗೆ ಅಯ್ಯಪ್ಪಸ್ವಾಮಿಯ ಫೋಟೋವನ್ನು ಮನೆಯಲ್ಲಿ ತಂದು ಪೂಜಿಸುತ್ತಿರುವುದು ತಿಳಿಯಬಹುದಾಗಿದೆ. ಹಾಗೆ ಕೇವಲ ಒಂದು ತಿಂಗಳಲ್ಲಿಯೇ ಹನ್ನೆರಡರಿಂದ ಹದಿನೈದು ಸಾವಿರ ಖರ್ಚುಮಾಡುತ್ತಿರುವುದು ವಿಷಾಧಕರ ಸಂಗತಿ. ಏಕೆಂದರೆ ಒಂದು ವರ್ಷದುಡಿದರೂ ಅಷ್ಟು ಹಣಗಳಿಸುವುದು ಕಷ್ಟ ಇಂತಹದರಲ್ಲಿ ಸಾಲಶೂಲ ಮಾಡಿ ಮೇಲ್ವರ್ಗದ ದೈವಗಳನ್ನು ಆಚರಿಸುತ್ತಿರುವುದು ಎದ್ದು ಕಾಣುತ್ತದೆ. ಇದೇ ಪರಂಪರೆಯನ್ನು ಇನ್ನೂ ಕೆಲವು ಮ್ಯಾಸಬೇಡರ ಹಟ್ಟಿಗಳಲ್ಲಿ ಕಂಡು ಬಂದಿದೆ.

ಹಾಗೆ ನೌಕರ ವರ್ಗದವರು ಇತ್ತೀಚೆಗೆ ಮೇಲ್ವರ್ಗದ ಸಮುದಾಯಗಳ ದೈವಾರಾಧನೆಯನ್ನು ಆರಾಧಿಸುತ್ತಿರುವುದು ಇನ್ನೊಂದು ಉದಾಹರಣೆಯನ್ನು ಇಲ್ಲಿ ನೋಡಬಹುದು. ಮ್ಯಾಸಬೇಡರ ಸಮುದಾಯದ ನೌಕರಶಾಹಿ ವರ್ಗದವರು ಇತ್ತೀಚೆಗೆ ಪಟ್ಟಣಗಳಂತಹ ಪ್ರದೇಶಗಳಲ್ಲಿ ನೆಲೆಸುತ್ತಲೇ ಸತ್ಯನಾರಾಯಣ ಪೂಜೆಯನ್ನು ಮಾಡಿಸುತ್ತಿರುವುದು ಪ್ರಮುಖವಾಗಿ ಕಂಡುಬಂದಿದೆ. ಹಿರೇಹಳ್ಳಿಯ ಕಲ್ಪನ ಪ್ರಾಥಮಿಕ ಶಾಲೆಯ ಶಿಕ್ಷಕಿ ಹಾಗೂ ಗಂಡ ಭೀಮಣ್ಣ ಐ.ಟಿ.ಐ ಕಾಲೇಜಿನ ಪ್ರಾಂಶುಪಾಲರು. ಇವರನ್ನು ವಿಚಾರಿಸಿದಾಗ ಅವರು ಈ ರೀತಿ ಹೇಳಿದರು. ನಾವು ಸತ್ಯನಾರಾಯಣ ಪೂಜೆಯನ್ನು ಮೂರು ವರ್ಷಗಳಿಂದ ಮಾಡಿಸುತ್ತೇವೆ. ಈ ಪೂಜೆಗೆ ಬ್ರಾಹ್ಮಣರು ಬರುತ್ತಾರೆ. ಈ ಪೂಜೆಗೆ ಹೆಚ್ಚು ಕಡಿಮೆ ಹದಿನೈದರಿಂದ ಹದಿನಾರು ಸಾವಿರ ಖರ್ಚಾಗುತ್ತದೆ. ಈ ಪೂಜೆ ಮಾಡಿಸಿದಾಗಿನಿಂದ ನಾವು ಮಾಂಸವನ್ನು ತಿನ್ನುವುದಿಲ್ಲ ಮತ್ತು ಆತನ ಫೋಟೋ ಕೂಡ ಮನೆಯಲ್ಲಿದೆ. ಪ್ರತಿವಾರ ಪೂಜೆ ಮಾಡ್ತೀವಿ.

ಈ ಮಾತುಗಳಲ್ಲಿ ಪ್ರಮುಖವಾಗಿ ತಿಳಿಯುವುದೇನೆಂದರೆ ಮೇಲ್ವರ್ಗದ ದೈವಾರಾಧನೆಯ ಮೂಲಕ ನಗರದಲ್ಲಿ ಬ್ರಾಹ್ಮಣರು ಪೂಜೆಗೆ ಬರುತ್ತಿರುವುದು ಹಾಗೆ ಮಾಂಸ ಆಹಾರ ತ್ಯಜಿಸಿ ಬೇಟೆಯನ್ನು

ಉಪಕಸುಬಾಗಿ ಬಿಡುತ್ತಿರುವುದು ಹಾಗೆ ಮದುವೆ ಮುಂತಾದ ಆಚರಣೆಗಳಲ್ಲಿ ಸಹನು ಬ್ರಾಹ್ಮಣರ ಪೌರತ್ಯವಹಿಸುವುದು. ಅಂದರೆ ಬ್ರಾಹ್ಮಣರೇ ಶ್ರೇಷ್ಟ ಎಂದು ಭಾವಿಸಿದ್ದಾರೆ. ಅಂದರೆ ಹೇಗೆ ಮಾನವನು ಆರ್ಥಿಕತೆಯಲ್ಲಿ ಸುಧಾರಣೆಯಾದಂತೆಲ್ಲಾ ತಮ್ಮ ರೂಢಿ ಸಂಪ್ರದಾಯ ಆಹಾರ ಪದ್ಧತಿಯನ್ನು ತನಗೆ ಅರಿವಿಲ್ಲದೆ ಬಿಡುತ್ತಿರುವುದು ಪ್ರಮುಖವಾಗಿ ಕಂಡು ಬರುತ್ತದೆ. ಇದೇ ರೀತಿ ಹೊಸಮನೆಯ ಕಟ್ಟಿ ಗೃಹಪ್ರವೇಶಕ್ಕೆ ಹಾಗೂ ಮದುವೆಯಂತ ಸಂದರ್ಭದಲ್ಲಿ ನಗರಗಳಲ್ಲಿ ವಾಸಿಸುವಂತಹವರು ಹೆಚ್ಚು ಬ್ರಾಹ್ಮಣರನ್ನೇ ಪೂಜೆ ಪುನಃಸ್ಕಾರಗಳಿಗೆ ಕರೆಯುತ್ತಾರೆ. ಇತ್ತೀಚೆಗೆ ಇಂತಹ ಪರಂಪರೆ ಜಾಸ್ತಿಯಾಗುತ್ತದಿದೆ.

ಸಂಸ್ಕೃತೀಕರಣದ ಪ್ರಮಾಣ ಬೇಡರಲ್ಲಿ ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿರುವವರಲ್ಲಿ ಹೆಚ್ಚಾಗಿದೆ. ಅದು ಸಹಜವೂ ಕೂಡ. ತಮ್ಮ ಆರ್ಥಿಕ ಸ್ಥಿತಿಗತಿಗನುಗುಣವಾಗಿ ತಮ್ಮ ಜೀವನ ವಿಧಾನವನ್ನು ಬದಲಾಯಿಸಿಕೊಳ್ಳುತ್ತಾರೆ. ಇಂತಹ ಒತ್ತಡವೇ ಸಂಸ್ಕೃತೀಕರಣಕ್ಕೆ ಕಾರಣವಾಗಿದೆ. ನಾನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಲಿಂಗಾಯಿತರು ಹೆಚ್ಚಿರುವ ಕಡಿಮೆ ಪ್ರಮಾಣದ ಬೇಡರಿರುವ ಕೂಡ್ಲಿಗಿ ತಾಲೂಕಿನ ಜೋಳದ ಕೂಡ್ಲಿಗಿ, ಹಾರಕನಾಳು, ಹಿರೇವಡೇರ ಹಳ್ಳಿ, ನಡುಮಾವಿನಹಳ್ಳಿ ಮುಂತಾದ ಹಳ್ಳಿಗಳಲ್ಲಿ ಬೇಡರು ಲಿಂಗಾಯತರ ಆಚರಣೆ, ಪರಂಪರೆಯನ್ನು ಅನುಸರಿಸುತ್ತಿದ್ದಾರೆ. ಕೆಲವರು ಮಾಂಸಹಾರವನ್ನು ತ್ಯಜಿಸಿದ್ದಾರೆ. ಇಲ್ಲಿ ಲಿಂಗಾಯತರನ್ನು ಅನುಸರಿಸಬೇಕೆಂಬ ಒತ್ತಡ ಕೆಲಸಮಾಡದೆ. ಬಹುಸಂಖ್ಯಾತರ ಜತೆಗಿನ ಹೊಂದಾಣಿಕೆಯ ಬದುಕೇ ಹೀಗೆ ಪರಿವರ್ತಿಸಿದೆ. ಇದೊಂದು ಸಹಜವಾಗಿ ನಡೆಯುತ್ತಿರುವ ಸಂಸ್ಕೃತೀಕರಣ ಎಂತಲೂ ಕರೆಯಬಹುದು.

ಆಧುನೀಕರಣ

ಆಧುನೀಕರಣ ಸಾಮಾಜಿಕ ಚಲನೆಯ ಪ್ರಕ್ರಿಯೆಯಾಗಿದೆ. ಇದಕ್ಕೆ ಹಲವಾರು ಆಯಾಮಗಳಿವೆ. ಸಮಾಜದ ವಿವಿಧ ಹಂತದಲ್ಲಿ ಇದರ ಬಳಕೆಯಾಗುತ್ತದೆ. ವೈಯಕ್ತಿಕವಾಗಿ, ಸಾಮೂಹಿಕವಾಗಿ ಹಾಗೂ ಸಾಮಾಜಿಕವಾಗಿ ಪಸರಿಸಿದೆ. ಅಲ್ಲದೆ ಆರ್ಥಿಕ, ರಾಜಕೀಯ, ತಾಂತ್ರಿಕ, ಶಿಕ್ಷಣ ಹಾಗೂ ಆಡಳಿತ ಮುಂತಾದವುಗಳಲ್ಲಿ ಆಧುನೀಕರಣ ಹಬ್ಬಿದೆ. ಮಾನವನ ಒಳಿತ, ವೈಜ್ಞಾನಿಕ ನಿಲುವು, ಸಕರಾತ್ಮಕ ವಿಚಾರಧಾರೆ, ಹಾಗೂ ವಸ್ತು ಪ್ರಾಧಾನ್ಯ ನಿಲುವಿನ ಜೀವನ ಕ್ರಮವನ್ನು ಪ್ರತಿನಿಧಿಸುವ ಒಂದು ಪ್ರಕ್ರಿಯೆಯಾಗಿದೆ. ಇದು ಮೂಢನಂಬಿಕೆಗಳನ್ನು ಸರಿಸಿ ಕಾರಣಗಳನ್ನು ಮನಗಂಡು ಪರಿಣಾಮಗಳನ್ನು ಚಿಂತಿಸಿ ಒಳಿತು ಕೆಡಕುಗಳನ್ನು ಅವಲೋಕಿಸಿ, ತನ್ನ ಸಾಮರ್ಥ್ಯದ ಮೇಲೆ ವಿಶ್ವಾಸಗೈದು, ಸುಸಂಸ್ಕೃತ ನಾಗರೀಕ ಜೀವನಕ್ಕೆ ನೀಡುವ ಪ್ರಕ್ರಿಯೆಯೇ ಆಧುನೀಕರಣವಾಗಿದೆ.

ಆಧುನೀಕರಣದಿಂದ ಇಂದು ಬುಡಕಟ್ಟು ಸಮುದಾಯವಾದ ಮ್ಯಾಸಬೇಡರು ತನ್ನ ಆದಿಮ ಕಾಲಕ್ಕೆ ಹೋಲಿಸಿಕೊಂಡರೆ ಇಂದು ಬದಲಾಗಿರುವ ಲಕ್ಷಣಗಳು ಕಂಡುಬರುತ್ತಿವೆ. ಮೊದಲನೆಯದಾಗಿ ಹಿಂದೆ ಕಾಡಿನ ಅಂಚಿನಲ್ಲಿ ಕಾಡುಗಳಲ್ಲಿ ವಾಸಿಸುತ್ತಿರುವ ಸಮುದಾಯ ಇಂದು ಕಾಡುಗಳನ್ನು ಹೊರತು

ಪಡಿಸಿ ಪ್ರತ್ಯೇಕವಾದ ಹಟ್ಟಿಗಳನ್ನು ಕಟ್ಟಿಕೊಂಡು ಜೀವಿಸುತ್ತಿದ್ದಾರೆ. ಜೊತೆಗೆ ಇತರೆ ಸಮುದಾಯಗಳೊಂದಿಗೆ ಬೆರೆತು ಕೊಡುಕೊಳ್ಳುವಿಕೆ ಸಂಬಂಧಗಳನ್ನು ಬೆಳೆಸಿಕೊಂಡಿರುವುದು ಪ್ರಮುಖವಾಗಿ ಕಂಡು ಬರುತ್ತಿದೆ. ಕೆಲವು ಹಟ್ಟಿಗಳಲ್ಲಿ ಬರೇ ಮ್ಯಾಸಬೇಡರಲ್ಲದೆ ಇತರೆ ಸಮುದಾಯಗಳೊಂದಿಗೆ ವಾಸಿಸುವುದು ಕಂಡುಬರುತ್ತದೆ. ಅಂತಹ ಹಟ್ಟಿಗಳಲ್ಲಿ ಪರಸ್ಪರ ಸಹಕಾರದಿಂದ ಬಾಳುತ್ತಾರೆ. ಅವರೊಂದಿಗೆ ಅಣ್ಣ, ತಮ್ಮಂದಿರು, ಅಕ್ಕತಂಗಿಯರು ಮಾವ-ಅಳಿ, ಚಿಕ್ಕಪ್ಪ-ದೊಡ್ಡಪ್ಪ, ಅತ್ತೆ-ಸೊಸೆ, ಎಂಬ ಬಾಂಧವ್ಯವನ್ನು, ಲಂಬಾಣಿ, ಕುರುಬ, ಲಿಂಗಾಯಿತ, ಗೊಲ್ಲ, ಹರಿಜನ, ಮುಸ್ಲಿಂ ಮುಂತಾದವರೊಂದಿಗೆ ಇಂತಹ ಬಾಂದವ್ಯವನ್ನು ಬೆಳೆಸಿಕೊಂಡರಲ್ಲದೆ ಜೊತೆಗೆ ಕೆಲವರು ಅನ್ಯಸಮುದಾಯಗಳ ಭಾಷೆಗಳನ್ನು ಕಲಿತಿದ್ದಾರೆ. ಲಂಬಾಣಿ, ಮುಸ್ಲಿಂರ ಜೊತೆಗೆ ಸಂಬಂಧವಲ್ಲದೆ ಅವರ ಭಾಷೆ ಕಲಿತಿದ್ದಾರೆ.

ಕೃಷಿ ಪದ್ಧತಿಯಲ್ಲೂ ಬದಲಾವಣೆಯ ಲಕ್ಷಣಗಳು ಕಂಡುಬರುತ್ತಿವೆ. ಹಿಂದೆ ರೈತನು ಉಳುಮೆ ಮಾಡಲು ವಾರಗಟ್ಟಲೆ ಎತ್ತುಗಳನ್ನು ಬಳಸಿಕೊಂಡು ಉಳುಮೆ ಮಾಡುತ್ತಿದ್ದ ಹಾಗೆ ಬಿತ್ತನೆ ಮತ್ತು ಕೊಯ್ಲು ಕೊಯ್ಯುವ ಸಂದರ್ಭದಲ್ಲಿ ಹತ್ತು ಅಥವಾ ಹನ್ನೆರಡು ಜನ ಮಹಿಳೆಯರು ಮತ್ತು ಐದಾರು ಜನ ಪುರುಷರು ಹದಿನೈದು ದಿನಗಟ್ಟಲೆ ಮಾಡುತ್ತ ತನ್ನ ಹೊಟ್ಟೆಯನ್ನು ತುಂಬಿಸಿಕೊಳ್ಳುತ್ತಿದ್ದರು ಇದರಿಂದ ಹತ್ತಾರು ಕುಟುಂಬಗಳು ಬದುಕುತ್ತಿದ್ದವು. ಆದರೆ ಇಂದು ಆಧುನೀಕರಣದ ಪ್ರಭಾವದಿಂದಾಗಿ ಯಾಂತ್ರೀಕರಣ ಮಯವಾಗಿದೆ. ವಿವಿಧ ಬಗೆಯ ಯಂತ್ರಗಳು ಬಂದು ಉಳುಮೆ ಮಾಡುವುದು. ಬಿತ್ತನೆ ಮಾಡುವುದು ಕೊಯ್ಲು ಕೊಯ್ಯುವುದು ನಾಚಿ ಮಾಡುವುದು ಮುಂತಾದ ಕೆಲಸವನ್ನೆಲ್ಲ ಯಂತ್ರ ಮಾಡುತ್ತಿದೆ. ಹಿಂದೆ ಒಕ್ಕಲು ತುಳಿಸುವುದುದನ್ನು ವಾರಗಟ್ಟಲೆ ಮಾಡುತ್ತ ಅದರ ಮೂಲಕ ತಮ್ಮ ದಣಿವನ್ನು ಮರೆಯ ಹಾಡುಗಳನ್ನು ಹಾಡುತ್ತಿದ್ದರು. ಆದರೆ ಇಂದು ಮಿಷನ್ ಬಂದಿದ್ದರಿಂದ ಒಂದೇ ದಿನದಲ್ಲಿ ಮುಗಿಸಿಕೊಂಡು ತಮ್ಮ ಕಾಳು ಕಡಿಗಳನ್ನು ಮನೆಗೆ ಸೇರಿಸಿಕೊಳ್ಳುತ್ತಾರೆ. ಹಾಗೆ ಬರಗಾಲದಂತ ಸಂದರ್ಭದಲ್ಲಿ ಜನರಿಗಾಗಿ ಕೆರೆ, ಕುಂಟೆ, ರಸ್ತೆ ಮುಂತಾದವುಗಳ ಮಣ್ಣಿನ ಕೆಲಸಕ್ಕೆ ಜನರನ್ನು ಉಪಯೋಗಿಸಿಕೊಳ್ಳುತ್ತಿದ್ದರು ಆದರೆ ಇಂದು ಕೇವಲ ಒಂದು ಜೇಸಿಬಿ ಯಂತ್ರ ಮಾಡಿ ಮುಗಿಸುತ್ತದೆ. ಎರಡನೆಯದಾಗಿ ಆಧುನೀಕರಣದಿಂದ ಶಿಕ್ಷಣ ಪಡೆಯುತ್ತಿದ್ದಾರೆ. ಶಿಕ್ಷಣ ಹಿಂದೆ ಕೇವಲ ಮೇಲ್ವರ್ಗ ಮೇಲ್ಜಾತಿಗಳಿಗೆ ಮಾತ್ರ ಸೀಮಿತವಾಗಿತ್ತು. ಮುಕ್ತವಾದ ವ್ಯವಸ್ಥೆ ಇರಲಿಲ್ಲ, ಬ್ರಿಟೀಷರ ಅವಧಿಯ ನಂತರ ಆಧುನೀಕರಣ ಪ್ರಾರಂಭವಾಗಿ, ಜಾತಿ, ವರ್ಗ, ಬೇಧ, ಭಾವವಿಲ್ಲದೆ. ಸಮಾನತೆ ಮತ್ತು ಮಾನವೀಯತೆಯ ಮೌಲ್ಯದ ಗುಣಗಳನ್ನು ಬೆಳೆಸಿಕೊಂಡಿದ್ದಾರೆ. ಕಾಲ ಬದಲಾದಂತೆಲ್ಲಾ ಮಂದಗತಿಯಿಂದ ತೀವ್ರದೆಡೆಗೆ ಈ ಪ್ರಕ್ರಿಯೆ ಸಾಗುತ್ತ ಜರುಗಿತ್ತು ಇಂತಹ ಸಂದರ್ಭದಲ್ಲಿ ಶಿಕ್ಷಣವನ್ನು ಪಡೆಯುತ್ತಿರುವ ಮ್ಯಾಸಬೇಡರ ಬುಡಕಟ್ಟು. ಇಂದು ಪ್ರಗತಿಯತ್ತ ಸಾಗುವ ಲಕ್ಷಣಗಳು ಕಂಡು ಬರುತ್ತಿವೆ. ಪ್ರಸ್ತುತ ಸರ್ಕಾರ ವಿವಿಧ ಸೌಲಭ್ಯಗಳನ್ನು ಒದಗಿಸುವುದರಿಂದ ಪ್ರತಿಯೊಂದು ಕುಟುಂಬವು ತಮ್ಮ ಮಕ್ಕಳನ್ನು

ಶಾಲೆಗಳಿಗೆ ಕಳಿಸುತ್ತಿದ್ದಾರೆ. ಉಚಿತ ಪಠ್ಯಪುಸ್ತಕ, ಬಟ್ಟೆ, ಊಟದ ವ್ಯವಸ್ಥೆ ಇರುವುದರಿಂದ ಶಿಕ್ಷಣಕ್ಕೆ ಆದ್ಯತೆ ನೀಡುತ್ತಿದ್ದಾರೆ. ಇಂದಿನ ಯುವಕ ಯುವತಿಯರು ಶಿಕ್ಷಣಕಲಿತು ಸರ್ಕಾರಿ ಉದ್ಯೋಗದಲ್ಲಿ ತೊಡಗಿಸಿಕೊಂಡಿದ್ದಾರೆ. ಇದರಿಂದ ಹಟ್ಟಿಯಲ್ಲಿರುವ ವಾತಾವರಣವನ್ನು ಉದ್ಯೋಗದಲ್ಲಿ ತೊಡಗಿಸಿಕೊಂಡವರು ಬದಲಾಯಿಸಲು ಪ್ರಯತ್ನಿಸುತ್ತಾರೆ. ಜೊತೆಗೆ ನಗರದ ಸಂಸ್ಕೃತಿಯನ್ನು ಹಟ್ಟಿಗಳಲ್ಲಿ ಬೆಳೆಸಲು ಪ್ರಯತ್ನಿಸುತ್ತಾರೆ. ಶಿಕ್ಷಣದಿಂದ ಕೇವಲ ಒಂದು ಉಪಯೋಗವಲ್ಲದೆ ಹಲವಾರು ಉಪಯೋಗಗಳುಂಟಾಗುತ್ತವೆ. ಹಾಗೆ ಆರ್ಥಿಕ, ರಾಜಕೀಯ, ಸ್ಥಿತಿಗತಿಯನ್ನು ಸುಧಾರಿಸಲು ಶಿಕ್ಷಣ ಅತ್ಯಗತ್ಯವಾಗಿ ಬೇಕಾಗಿರುವಂತದ್ದಾಗಿರುತ್ತದೆ. ಜೊತೆಗೆ ಇಂದಿನ ಮಹಿಳೆಯರು ಪ್ರಜ್ಞಾವಂತರಾಗಿ ತಮ್ಮ ಆರ್ಥಿಕತೆಗೆ ಅನುಸಾರಕ್ಕಾಗಿ ಸ್ತ್ರೀ ಶಕ್ತಿ ಸಂಘಗಳನ್ನು ಕಟ್ಟಿಕೊಂಡು ಆರ್ಥಿಕತೆಯನ್ನು ಸುಧಾರಿಸಿಕೊಳ್ಳುತ್ತ. ಬ್ಯಾಂಕುಗಳ ಮೂಲಕ ವ್ಯವಹಾರ ಮಾಡಲು ಮುಂದಾಗುತ್ತಾರೆ. ಇದರಿಂದ ಸಮುದಾಯದ ಮಹಿಳೆಯರಲ್ಲಿಯೂ ಆತ್ಮವಿಶ್ವಾಸದ ಮನೋಭಾವನೆಯನ್ನು ಬೆಳೆಯಲು ಸಹಕಾರಿಯಾಗುತ್ತದೆ ಎಂದು ಹೇಳಬಹುದು. ಮೂರನೆಯದಾಗಿ ಆಧುನೀಕರಣ ಪ್ರಭಾವದಿಂದಾಗಿ ಇಂದು ಮ್ಯಾಸಬೇಡರ ಹಟ್ಟಿಗಳಲ್ಲಿ ಪತ್ರಿಕೆ, ರೇಡಿಯೋ, ದೂರದರ್ಶನ ಮುಂತಾದವುಗಳ ಪ್ರಭಾವವಾಗಿದೆ. ಗುಡಿಸಲು ಮನೆಗಳಿದ್ದರೂ ಕೆಲವರು ಟಿ.ವಿಯನ್ನು ತಂದು ನೋಡುವ ಪರಂಪರೆಯನ್ನು ಬೆಳೆಸಿಕೊಂಡಿದ್ದಾರೆ. ಇದರೊಂದಿಗೆ ಹೊರಜಗತ್ತಿನಲ್ಲಿ ನಡೆಯುವ ವಿಷಯಗಳೆಲ್ಲವೂ ಗೊತ್ತಾಗುತ್ತದೆ. ಕೆಲವು ಮ್ಯಾಸಬೇಡರ ಹಟ್ಟಿಗಳಿಗೆ ಸಾರಿಗೆ ಸಂಪರ್ಕವಿರಲಿಲ್ಲ. ಇಂತಹ ಸಂಪರ್ಕವಿಲ್ಲದ ಹಟ್ಟಿಗಳಲ್ಲಿ ತುಂಬಾ ಕಷ್ಟಕರವಾಗಿತ್ತು. ಈಗ ಸಾರಿಗೆ ಸಂಪರ್ಕವಾಗಿದೆ. ಸುಲಭವಾಗಿ ಆರೋಗ್ಯಕೇಂದ್ರಕ್ಕೆ ತಲುಪಲು ಅನುಕೂಲಕರವಾಗಿದೆ.

ನಾಲ್ಕನೆಯದಾಗಿ ಸಾರ್ವತ್ರಿಕ ಕಾನೂನು ಇಂದು ಬಹುತೇಕ ಸಮುದಾಯಗಳಿಗೆ ಸಾರ್ವತ್ರಿಕ ಕಾನೂನಿನಿಂದ ಅನುಕೂಲಕರವಾಗಿದೆ. ಹಿಂದೆ ಸಮಾಜದಲ್ಲಿ ನಡೆಯುತ್ತಿರುವ ದಬ್ಬಾಳಿಕೆ, ದೌರ್ಜನ್ಯ, ಮಹಿಳೆಯರಿಗಾಗುವ ಶೋಷಣೆ ಮುಂತಾದವುಗಳ ಪ್ರಭಾವ ತುಂಬಾ ಕಡಿಮೆಯಾಗಿದೆ ಯಾಕೆಂದರೆ ಇಂತಹ ಕೃತ್ಯವೆಸಗುವವರನ್ನು ಪೋಲೀಸ್ ವ್ಯವಸ್ಥೆಯು ಶಿಕ್ಷೆಗೆ ಒಳಪಡಿಸುತ್ತಿದ್ದರಿಂದ ಬಹುತೇಕ ಇಂತಹ ಪ್ರಕರಣಗಳು ಕಡಿಮೆಯಾಗುತ್ತಿವೆ ಎಂದು ಹೇಳಬಹುದು.

ಒಟ್ಟಾರೆಯಾಗಿ ಆಧುನೀಕರಣ ಪ್ರಭಾವದಿಂದಾಗಿ ಸಾಂಸ್ಕೃತಿಕ ಆಚರಣೆಗಳಲ್ಲಿ ಬದಲಾವಣೆಯ ಲಕ್ಷಣಗಳು ಕಂಡುಬರುತ್ತಿವೆ. ಮದುವೆ ಮುಂಜಿಯಂತಹ ಸಂದರ್ಭದಲ್ಲಿ ಊಟದ ವ್ಯವಸ್ಥೆಯು ಬದಲಾಗಿದೆ. ಹಾಗೆ ಚಪ್ಪರ ಹಾಕುವ ಪರಂಪರೆಯಿದ್ದರೂ ಅದು ಕೇವಲ ನೆಪವಾಗಿ ಚಿಕ್ಕದಾಗಿ ಹಾಕುತ್ತಾರೆ. ಜೊತೆಗೆ ಶಾಮಿಯಾನ, ರೇಡಿಯೋ, ಸೀರಿಯಲ್ ಮುಂತಾದವುಗಳನ್ನು ಹಾಕುವುದರ ಮೂಲಕ ಸಂಭ್ರಮಿಸುತ್ತಾರೆ. ಇನ್ನೂ ಮುಂತಾದ ಸಾಂಸ್ಕೃತಿಕ ಆಚರಣೆಗಳಲ್ಲಿ ಬದಲಾವಣೆಯನ್ನು ಕಾಣುತ್ತೇವೆ. ಈ ಬದಲಾವಣೆಗೆ ಕಾರಣ ಆಧುನೀಕರಣ ಎಂದು ಹೇಳಬಹುದು.

ಆಧುನಿಕ ಸೌಲಭ್ಯಗಳು ದೊರೆತು ಬೇಡ ಸಮುದಾಯ ಬದಲಾದಂತೆ ಕಂಡರೂ ಆರ್ಥಿಕ ದೃಷ್ಟಿಕೋನದಿಂದ ನೋಡಿದರೆ ತೀರ ಸಂಕಷ್ಟದ ಸ್ಥಿತಿ ಇರುವುದನ್ನು ಗಮನಿಸಬಹುದು. ಬೇಡರಲ್ಲಿ ಕೃಷಿಯಾಧರಿತ ಹಳ್ಳಿಯ ಬಡವರು ಆಧುನಿಕತೆಯನ್ನು ಶಾಪವೆಂದು ಭಾವಿಸಿದರೆ ಇದೇ ಸಮುದಾಯದ ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿರುವವರಿಗೆ ಆಧುನಿಕತೆ ವರವಾಗಿ ಪರಿಣಮಿಸಿದೆ ಎಲ್ಲವನ್ನೂ ಕೊಂಡುಕೊಳ್ಳುವ ಕೊಳ್ಳುಬಾಕ ಸಂಸ್ಕೃತಿಗೆ ಅನಿವಾರ್ಯವಾಗಿ ಒಗ್ಗಿಕೊಳ್ಳಲೇಬೇಕಾಗಿರುವುದರಿಂದ ಬೇಡ ಸಮುದಾಯದ ಬಹುಪಾಲು ಕೃಷಿಯಾಧರಿತ ಬಡತನ ರೇಖೆಯಲ್ಲಿರುವವರಿಗೆ ಆರ್ಥಿಕ ಅಸಮಾನತೆ ಹೆಚ್ಚಾಗುತ್ತಿದೆ. ಬದುಕಿನ ನಿರ್ವಹಣೆಯ ವೆಚ್ಚ ದುಡಿಮೆಯ ವೆಚ್ಚಕ್ಕಿಂತ ಹೆಚ್ಚಾಗಿದೆ. ಇದು ಆಧುನಿಕತೆಯು ಉಂಟುಮಾಡಿದ ಬಹುದೊಡ್ಡ ಕಂದಕವಾಗಿದೆ.

ಆಧುನಿಕತೆಯ ಮೋಹಕ್ಕೆ ಸಿಕ್ಕ ಬೇಡ ಸಮುದಾಯದ ಯುವ ಜನಾಂಗ ನಗರದತ್ತ ಉದ್ಯೋಗ ಅರಸಿ ಹೊರಟಿದ್ದಾರೆ. ಕೂಡ್ಲಿಗಿ ತಾಲೂಕಿನ, ಹೊಸಳ್ಳಿ ಜೋಗಿಹಳ್ಳಿ ಸುತ್ತಮುತ್ತಲ ಹಳ್ಳಿಗಳಲ್ಲಿ ಕ್ಷೇತ್ರಕಾರ್ಯ ಮಾಡಿದಾಗ ಮೂರು ನೂರಕ್ಕೂ ಹೆಚ್ಚು ಹುಡುಗರು ಬೆಂಗಳೂರಿಗೆ ದುಡಿಯಲ್ಲಿಕ್ಕೆ ಹೋಗಿರುವುದು ತಿಳಿಯಿತು. ಅಂದರೆ ಬೇಡರ ಹಟ್ಟಿಗಳಲ್ಲಿ ಇಂದು ಯುವಕರೇ ಕಾಣದಂತಾಗಿದೆ. ಇವರಲ್ಲಿ ಬಹುಪಾಲು ಯುವಕರು ದುಶ್ಚಟಗಳಿಗೆ ಬಲಿಯಾಗಿ, ತೀರಾ ಬೇಜವಬ್ದಾರಿ ಬದುಕು ನಡೆಸುತ್ತಾರೆ. ಇಂಥವರು ಮತ್ತೆ ಹಳ್ಳಿಗೆ ಬಂದರೂ ಕೃಷಿಯನ್ನು ಮಾಡದೆ ಸೋಮಾರಿಗಳಾಗುತ್ತಾರೆ. ಈ ಸಮಸ್ಯೆ ಕೇವಲ ಬೇಡ ಸಮುದಾಯವೊಂದಕ್ಕಲ್ಲದೆ ಎಲ್ಲಾ ಕೆಳಸಮುದಾಯಗಳ ಸ್ಥಿತಿಯೂ ಆಗಿದೆ.

ಹೀಗೆ ಆಧುನಿಕತೆ ಸಕಾರಾತ್ಮಕ ಪರಿಣಾಮ ಬೀರಿದ್ದಕ್ಕಿಂತ ನಕಾರಾತ್ಮಕ ಪರಿಣಾಮವನ್ನು ಬೀರಿದ್ದೇ ಹೆಚ್ಚು. ಆಧುನಿಕತೆ ಸೃಷ್ಟಿಸಿ ಮಾರುಕಟ್ಟೆ ವ್ಯವಸ್ಥೆಯ ಹೊರಗಿರುವ ಎಲ್ಲಾ ಸಮುದಾಯಗಳಿಗೂ ಆಧುನಿಕತೆಯೊಂದು ಶಾಪವೇ ಆಗಿದೆ.

ಅನ್ಯ ಧರ್ಮದ ಆರಾಧನೆ

ಮ್ಯಾಸಬೇಡರು ಪ್ರಸ್ತುತ ಸಂದರ್ಭದಲ್ಲಿ ಮೊಹರಂ ಹಬ್ಬವನ್ನಂತೂ ಹೆಚ್ಚು ಸಂಭ್ರಮದಿಂದ ಆಚರಿಸುವವರು. ಮ್ಯಾಸಬೇಡರು ಕೆಲವು ಹಟ್ಟಿಗಳಲ್ಲಿ ಮೊಹರಂ ಎಂದರೆ ಗೊತ್ತಿಲ್ಲ ಕೆಲವರು ಗೊತ್ತಿದ್ದರೂ ಅದು ಮುಸ್ಲಿಂರ ಹಬ್ಬ ಅಂತಕೂಡ ನಿರಾಕರಿಸುತ್ತಿದ್ದಾರೆ. ಸಾಮಾನ್ಯವಾಗಿ ಬರೇ ಮ್ಯಾಸಬೇಡರೇ ವಾಸಿಸುವ ಹಟ್ಟಿಗಳನ್ನು ಹೊರತು ಪಡಿಸಿದರೆ, ಉಳಿದ ಎಲ್ಲಾ ಸಮುದಾಯದವರಿಂದ ಕೂಡಿರುವಂತಹ ಊರುಗಳಲ್ಲಿ ಮೊಹರಂ ಹಬ್ಬವನ್ನು ಆಚರಿಸುವುದರಲ್ಲಿ ಮುಂದಾಳತ್ವವನ್ನು ಇವರೇ ವಹಿಸಿರುವಂತೆ ಕಾಣುತ್ತದೆ. ಗುದ್ದಿಲಿ ಪೂಜೆ ಮಾಡಿದಾಗಿನಿಂದ ಹಿಡಿದು ಹಬ್ಬ ಮುಗಿಯುವ ತನಕ ಇವರದೇ ಮೇಲುಗೈ ಎನ್ನಬಹುದು. ಈ ಹಬ್ಬಕ್ಕೆಂದೆ ಯುವಕರು ಹೊಸಹೊಸ ಬಟ್ಟೆಗಳನ್ನು ಹಾಕಿಕೊಳ್ಳುತ್ತಾರೆ. ರಾತ್ರಿಯಲ್ಲ ಕುಣಿಯುತ್ತಾರೆ. ಕುಣಿಯಲಿಕ್ಕೆ ಹಾಡುಗಳನ್ನು ಮುಂಚಿಯೇ ಪ್ರಾಕ್ಟೀಸ್ ಮಾಡುತ್ತಾರೆ. ಸುಮಾರು ಹದಿನೈದು ಇಪ್ಪತ್ತು

ದಿನಗಳ ಕಾಲ ವಾಲ್ಮೀಕಿಯ ಓಣಿಗಳಲ್ಲಿ ಸಂಭ್ರಮವೋ ಸಂಭ್ರಮ ಇರುತ್ತದೆ, ಎಲ್ಲಾ ಸಮುದಾಯಗಳೊಂದಿಗೆ ಬೆರೆತು ಮಾಡುವ ಈ ಹಬ್ಬ ವಾದ್ದರಿಂದ ಹೆಚ್ಚು ವಿಜೃಂಭಣೆಯಿಂದ ಇರುತ್ತದೆ. ಈ ಹಬ್ಬದ ಅಗ್ನಿಕುಂಡಕ್ಕೆ ಗಾಡಿಗಳ ಮೂಲಕ ದೊಡ್ಡ ದೊಡ್ಡ ಮರಗಳನ್ನು ಕಡಿದು ತರುವವರು ಇವರೇ ಮತ್ತು ಇವರ ಮುಂದಾಳತ್ವದಲ್ಲಿ ಆದರೆ ಸ್ವತಃ ಈ ಸಮುದಾಯದ ಹಬ್ಬಗಳನ್ನು ಈ ರೀತಿ ಮಾಡುವುದಿಲ್ಲ. ಈ ಹಬ್ಬವನ್ನು ಆಚರಿಸುವ ಪ್ರಮುಖ ಹಳ್ಳಿಗಳೆಂದರೆ, ಕಮಲಾಪುರ, ಹುರುಳಿಹಾಳ್,ತಾಯಕನಹಳ್ಳಿ, ಹೂಡೆಂ, ಲೋರೆಕೆರೆ, ಹಿರೇಹಳ್ಳಿ, ಗುಡೇಕೋಟೆ, ಪಾಪಿನಾಯಕನಹಳ್ಳಿ, ಕೋನಸಾಗರ, ಹೊಸಹಳ್ಳಿ, ಬೆಕ್ಕೋಬನಹಳ್ಳಿ, ಬ.ಜಿ.ಕೆರೆ, ಇನ್ನು ಮುಂತಾದ ಹಳ್ಳಿಗಳನ್ನು ನೋಡಬಹುದು.

ಮೊಹರಂನಲ್ಲಿ ಬೇಡರು ಬೇಡರಕಣ್ಣಪ್ಪನ ವೇಷ ಹಾಕುವ ಪದ್ಧತಿ ಈ ಭಾಗದಲ್ಲಿದೆ. ಈ ವೇಷದ ಬಗ್ಗೆ ಇರುವ ಕಥನವಂತೂ ತುಂಬಾ ಕುತೂಹಲಕಾರಿಯಾಗಿದೆ. ಮೊಹಮದನ ಮೊಮ್ಮಕ್ಕಳನ್ನು ಸೈತಾನನ ಕಡೆಯವರು ಬೆನ್ನಟ್ಟಿಬಂದಾಗ, ಅವರು ಇರಾಕ್ ಇರಾನ್‌ನ ಕರ್ಬಲಾ ಪ್ರದೇಶದಿಂದ ಓಡಿಬರುತ್ತಾರಂತೆ. ಹೀಗೆ ಮೊಹಮದ್ ಪೈಗಂಬರ್ ಮೊಮ್ಮಗನ ಪ್ರಾಣಭಯದಿಂದ ಓಡಿ ಬರುವಾಗ ಬೇಟೆ ಆಡುತ್ತಿದ್ದ ಬೇಡನೊಬ್ಬ ಆ ಮಗುವನ್ನು ಎತ್ತಿಕೊಂಡು, ಆ ಮಗುವನ್ನು ಬೆನ್ನಿಗೆ ಕಟ್ಟಿಕೊಂಡು ಬೆನ್ನಟ್ಟಿ ಬಂದಿದ್ದ, ಸೈತಾನನ ಕಡೆಯ ಅಧರ್ಮಿಯರನ್ನು ಕೊಂದನಂತೆ ಹಾಗಾಗಿ ಮುಸ್ಲಿಂ ಬಾಲಕನನ್ನು ಬೇಡನೊಬ್ಬ ರಕ್ಷಿಸಿರುವುದರಿಂದ, ಅದರ ನೆನಪಿಗಾಗಿ ಮೊಹರಂನಲ್ಲಿ ಈಗಲೂ ಬೇಡರ ಕಣ್ಣಪ್ಪನ ವೇಷ ಧರಿಸಿ ಕುಣಿಯುವ ಪದ್ಧತಿ ಇರುವುದನ್ನು ನೋಡಬಹುದು.

ಹೈದರಾಬಾದ್ ಕರ್ನಾಟಕದ ರಾಯಚೂರು ಭಾಗದಲ್ಲಿ ಬೇಡರ ರಾಜಕೀಯ ನೇತರರಾದ ದೊರೆಗಳೇ ಮೊಹರಾಂ ಹಬ್ಬಕ್ಕೆ ಚಾಲನೆ ನೀಡುವುದು, ಮೊದಲ ಪೂಜೆ ದೊರೆಗಳ ಮನೆಯಿಂದ ಹೊರಡುವುದನ್ನು ನೋಡಬಹುದು. ಮೊಹರಂನಲ್ಲಿ ಬೇಡ ಸಮುದಾಯದ ಪಾಲ್ಗೊಳ್ಳುವುದನ್ನು ನೋಡಿದರೆ, ಧಾರ್ಮಿಕ ಸಾಮರಸ್ಯಕ್ಕೆ, ಜಾತಿ ಸಾಮರಸ್ಯಕ್ಕೆ ಈ ಸಮುದಾಯ ತನಗೆ ಗೊತ್ತಿಲ್ಲದೆ ಮಿಡಿಯುತ್ತಿದೆ ಅನ್ನಿಸುತ್ತಿದೆತ್ತಿದೊಂದು ಉತ್ತಮ ಬೆಳವಣಿಗೆ ಬೇಡರಿಗೆ ವಿಶಿಷ್ಟ ಅನ್ನುವ ಆಚರಣೆ ಅನನ್ಯತೆ ಆಗುವಂತೆ ಜಾತಿಯತೆಯನ್ನು ಬೆಳೆಸುವ ಅಪಾಯವನ್ನು ಇಲ್ಲದಿಲ್ಲ. ಈ ದೃಷ್ಟಿಯಿಂದ ಬೇಡ ಸಮುದಾಯದ 'ಮೊಹರಂ' ಆಚರಣೆಯ ಪಾಲ್ಗೊಳ್ಳುವಿಕೆಗೆ ಮಹತ್ವವಿದೆ.

ಮತಾಂತರ

ಮತಾಂತರ ಇಂದು ಭಾರತದಲ್ಲಿ ಭುಗಿಲೆದ್ದಿರುವ ವಿಚಾರ. ಒಂದು ಬಗೆಯಲ್ಲಿ ಸಾಮಾಜಿಕ ಪಿಡುಗು ಎನ್ನುವ ಮಟ್ಟಿಗೆ ತನ್ನ ಕರಾಳ ಹಸ್ತವನ್ನು ಚಾಚಿ ಎಲ್ಲೆ ಮೀರಿ ಮುಂದುವರೆಯುತ್ತದೆ. ಸಂವಿಧಾನಾತ್ಮಕ ಭಾರತದಲ್ಲಿ ಇಚ್ಛಾ ಪೂರ್ವಕ ಮತಾಂತರವಿದ್ದರೂ ಇಂದು ಎಷ್ಟೋ ಬಗೆಯ

ಮತಾಂತರಗಳು ಇಚ್ಛೆಯಿದ್ದು ನಡೆದರೂ ಒಂದು ಮತಕ್ಕೂ ಇನ್ನೊಂದು ಮತಕ್ಕೆ ದಿನೇ ದಿನೇ ದ್ವೇಷದ ಕಿಚ್ಚನ್ನು ಹಬ್ಬಿಸುತ್ತಿವೆ. ಒಂದು ದೃಷ್ಟಿಯಲ್ಲಿ ಜೀವ ಜೀವದ ಮತ ಮತದ ನಡುವೆಯೂ ಭಾವನಾತ್ಮಕ ಸಂಬಂಧ ಬೆಸುಗೆಗೆ ಸಹಕಾರಿಯಾಗುತ್ತಿದ್ದರೂ ಅದು ಇಂದಿನ ಕಾಲದಲ್ಲಿ ಸದುಪಯೋಗ ಗೊಳ್ಳುತ್ತಿರುವುದೇ ವಿರಳವೆನ್ನಬಹುದು.

ಏಕೆಂದರೆ ಸ್ವಾರ್ಥಹಿತಾಶಕ್ತಿಗಳಿಗನುಗುಣವಾಗಿ ಜನರು ಇಂದು ಮತಾಂತರವನ್ನು ತಮ್ಮ ಸ್ವಾರ್ಥದ ಬಾಹುಗಳಿಂದ ಸೆಳೆದು ಕೊಳ್ಳುತ್ತಿದ್ದಾರೆಯೇ ಹೊರತು ಅದರ ಒಳ್ಳೆಯ ಅಂಶಗಳತ್ತ ದೃಷ್ಟಿಹರಿಸುವ ಮನಸ್ಸು ಮಾಡುತ್ತಿಲ್ಲ. ಆದ್ದರಿಂದ ಮತಾಂತರಗಳು ಇಂದಿನ ಭಾರತಕ್ಕೆ ಒಂದು ರೀತಿಯಲ್ಲಿ ನುಂಗಲಾರದ ತುತ್ತಾಗಿ ಪರಿಣಮಿಸಿದ್ದು ಉಪಯೋಗಕ್ಕಿಂತ ದುರುಪಯೋಗಕ್ಕೆ ಒಳಪಟ್ಟು ಜೀವನದ ಹತಾಶೆಗೆ, ನೋವಿಗೆ ಕಾರಣವಾಗುತ್ತಿರುವುದನ್ನು ಕಂಡಾಗ ಇದು ಎಷ್ಟರ ಮಟ್ಟಿಗೆ ಸಮಂಜಸ ಎಂಬ ಪ್ರಶ್ನೆ ಮೂಡುತ್ತದೆ.

ಇಂದು ಮತಾಂತರವನ್ನು ಒಂದು ಪಿಡುಗು ಎಂದು ಯೋಚನೆ ಮಾಡ ಹೊರಟರೆ ಅದು ಮಾನವನ ಒಂದು ಕೊರತೆಯಾಗಿ ಕಾಣುತ್ತದೆ. ಅದನ್ನೇ ಸಮಾಜಕ್ಕೆ ಹಿತಕಾರಿ ಎಂದು ಗುರುತಿಸ ಹೊರಟರೆ ಮನುಷ್ಯನ ಎಚ್ಚತ್ತಿರುವ ಅರಿವು ಹಾಗೂ ಭಾವನಾತ್ಮಕ ಬೆಸುಗೆಗೆ ಸಾಕ್ಷಿಯಾಗಿ ಕಾಣುತ್ತದೆ. ಹೀಗಿರಬೇಕಾದಲ್ಲಿ ಮತಾಂತರವೆಂಬುದು ಒಂದು ಪಿಡುಗು ಎಂದೇ ತೆಗೆದುಕೊಂಡು ಅದರ ಬಗ್ಗೆ ವಸ್ತುನಿಷ್ಟವಾಗಿ ಚಿಂತಿಸುವುದಾದರೆ ಧರ್ಮಗಳ ಮೇಲಾಗುವ ಹಾಗೂ ಆಗುತ್ತಿರುವ ದುಷ್ಪರಿಣಾಮದ ಅಂಶಗಳನ್ನು ಕಂಡುಕೊಳ್ಳಬಹುದು.

ಮತಾಂತರ ಹಾವಳಿಯು ನಿನ್ನೆ ಅಥವಾ ಇಂದಿನದಲ್ಲ. ಕರ್ನಾಟಕದಲ್ಲಿ ಇದು ಏಳನೇ ಶತಮಾನಕ್ಕಿಂತೂ ಮುಂಚೆ ಬೇರೂರಿತ್ತು ಎಂಬುದಾಗಿ ಕೆಲವು ದಾಖಲೆಗಳಿಂದ ತಿಳಿದುಬರುತ್ತಿದೆ. ಹಾಗೆ ಸ್ವತಂತ್ರ ಪೂರ್ವದಲ್ಲಿಯೇ ಇದರ ಪ್ರಭಾವ ಹೆಚ್ಚಾಗಿತ್ತು. ಹಿಂದೆ ಪರದೇಶದ ಆಕ್ರಮಣಕಾರರು ದೇಶದ ಮೇಲೆ ದಂಡೆತ್ತಿ ಬಂದು ವಶಪಡಿಸಿಕೊಂಡಾಗ ಬಲತ್ಕಾರವಾಗಿ ಮತಾಂತರ ಮಾಡಿಸುತ್ತಿದ್ದರು ಎಂಬುದಕ್ಕೆ ದಾಖಲೆಗಳಿವೆ. ಈ ಪರಂಪರೆಯು ಇತ್ತೀಚೆಗೆ ಹೆಚ್ಚಾಗುತ್ತಿರುವ ಲಕ್ಷಣಗಳು ಕಂಡುಬರುತ್ತಿವೆ. ಈಗ ಕರ್ನಾಟಕದಲ್ಲಿರುವ ಬಿ.ಜೆ.ಪಿ ಸರ್ಕಾರ ಕೋಮುಸಾಮರಸ್ಯಕ್ಕಿಂತ, ಕೋಮುಗಲಭೆಗೆ ಹೆಚ್ಚು ಒಲವು ತೋರುತ್ತಿದೆ. ಈಚೆಗೆ ಕರ್ನಾಟಕದಲ್ಲಾದ ಚರ್ಚಿನ ಮೇಲಿನ ದಾಳಿ ಇದಕ್ಕೆ ಉದಾಹರಣೆ.

ಪ್ರಸ್ತುತ ಸಂದರ್ಭದಲ್ಲಿ ಎಲ್ಲಾ ತಳ ಸಮುದಾಯಗಳು ಹೆಚ್ಚು ಏಸುಕ್ರಿಸ್ತನನ್ನು ಆರಾಧ್ಯ ದೈವವನ್ನಾಗಿ ಆಚರಿಸುತ್ತಿದ್ದಾರೆ. ಹಿಂದೂ ದೈವಗಳೆಲ್ಲವನ್ನು ಸಂಪೂರ್ಣವಾಗಿ ನಿರಾಕರಿಸಿದ ಕೆಲವು ಜನರು ಹೊರ ಧರ್ಮದ ದೈವದ ಆರಾಧನೆಯಲ್ಲಿ ನಿರತರಾಗಿದ್ದಾರೆ. ಅಂತವರಲ್ಲಿ ಮ್ಯಾಸಬೇಡರ ಸಮುದಾಯವು ಸಹ ಪ್ರಮುಖವಾಗಿದೆ. ಕರ್ನಾಟಕದಲ್ಲಿ ಸುಮಾರು ಜಿಲ್ಲೆಯಲ್ಲಿ ವಾಸಿಸುತ್ತಿರುವ ಈ ಸಮುದಾಯ

ಜನಸಂಖ್ಯೆಯಲ್ಲಿ ಮೂರನೆ ಸ್ಥಾನದಲ್ಲಿದೆ ಎಂಬುದು ಅಂಕಿ ಅಂಶಗಳಿಂದ ತಿಳಿದು ಬರುತ್ತದೆ. ಅದರಲ್ಲಿ ಚಿತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಹೆಚ್ಚಾಗಿ ವಾಸಿಸುತ್ತಿರುವ ಇವರ ಕೆಲವು ಕುಟುಂಬಗಳು ಸಂಪೂರ್ಣವಾಗಿ ತಮ್ಮ ಮೂಲ ಸಾಂಸ್ಕೃತಿಕ ದೈವಗಳನ್ನು ತೊರೆದು ಏಸುಕ್ರಿಸ್ತನ ಆರಾಧಕರಾಗಿದ್ದಾರೆ. ಬಳ್ಳಾರಿ ಜಿಲ್ಲೆಯಲ್ಲಿ ಅದರಲ್ಲಿ ಚಿಕ್ಕಜೋಗಿಹಳ್ಳಿಯಲ್ಲಿ ಆರೇಳು ವರ್ಷಗಳಿಂದ ಏಸುಕ್ರಿಸ್ತನ ಚರ್ಚೊಂದನ್ನು ಕಟ್ಟಿದ್ದಾರೆ. ಈ ಚರ್ಚ್‌ಗೆ ಆ ಭಾಗದ ಸುತ್ತ ಮುತ್ತಲಿನ ಹಳ್ಳಿಗಳಲ್ಲಿ ವಾಸಿಸುತ್ತಿರುವ ಬೇಡರು ಪ್ರತಿಯೊಂದು ಹಳ್ಳಿಗಳಲ್ಲಿ ಕೆಲವು ಕುಟುಂಬಗಳು ಏಸುಕ್ರಿಸ್ತನ ಆರಾಧಕರಾಗಿದ್ದಾರೆ. ಸಮುದಾಯದ ಜನರನ್ನು ಸಂದರ್ಶ ಮಾಡಿ ವಿಚಾರಿಸಿದ್ದಾಗ ನಾವು ಬಹಳ ತೊಂದರೆಯಲ್ಲಿದ್ವಿ ನಮಗೆ ಶಾಂತಿಯೇ ಇರಲಿಲ್ಲ ಹಲವಾರು ರೋಗ ರುಜಿನಗಳಿಂದ ಬಳಲಿ ಎಲ್ಲಾ ಆಸ್ಪತ್ರೆಗಳು ತಿರುಗಿ ಸಾವಿರಾರು ಗಟ್ಟಲೆ ಹಣ ಖರ್ಚುಮಾಡಿ ಇಲ್ಲಿಗೆ ಬಂದೀವೆ. ಇಲ್ಲಿಗೆ ಬಂದಾಗಿನಿಂದ ನಮಗೆ ಮನಸ್ಸಿಗೆ ನೆಮ್ಮದಿಯಾಗಿದೆ. ಎಲ್ಲಾ ರೋಗಗಳಿಂದ ಮುಕ್ತಿ ಹೊಂದಿದ್ದೇವೆ ದೆವ್ವ ಭೂತಗಳಂತೂ ನಮ್ಮಿಂದ ಸಂಪೂರ್ಣವಾಗಿ ದೂರವಾಗಿ ಮಾಟಮಂತ್ರಗಳಿಂದ ಮುಕ್ತಿ ಹೊಂದಿದ್ದೇವೆ. ಅವುಗಳ ಕಾಟವೇ ನಮಗೆ ಜಾಸ್ತಿಯಾಗಿತ್ತು ಅದಕ್ಕಾಗಿ ಇಲ್ಲಿಗೆ ಬಂದಿದ್ದೇವೆ ಎಂದು ಹೇಳುತ್ತಾರೆ. ಇಲ್ಲಿ ಸ್ಥಳೀಯ ಜನರೇ ಇಲ್ಲಿಗೆ ಬರುವ ಏಸುವಿನ ಭಕ್ತಾದಿಗಳು ಕೊಟ್ಟ ಕಾಣಿಕೆಯಿಂದ ಈ ಚರ್ಚನ್ನು ಕಟ್ಟಿದ್ದಾರೆ ಎಂದು ಹೇಳುತ್ತಿದ್ದಾರೆ. ಸ್ವತಃ ಸಮುದಾಯದ ಏಸುವಿನ ಭಕ್ತಳಾದ ಕಂಪಳ ದೇವರಹಟ್ಟಿ ಸೂರಮ್ಮನು ಯಾಕೆ ಹೊರಧರ್ಮಗಳ ದೇವರ ಆರಾಧನೆ ಮಾಡ್ಲಿಕ್ಕೆ ಕಾರಣವೇನು ಎಂಬುದಕ್ಕೆ ವಿವರ ಈ ಕೆಳಗಿನಂತಿದೆ:

ನಾವು ಈ ಏಸುಸ್ವಾಮಿಗೆ ಬಂದು ಈ ಕ್ರಿಸ್‌ಮಸ್ ಹಬ್ಬಬಂದ್ರೆ ನಾಲ್ಕು ವರ್ಷಗಳಾಗ್ತಾವೆ. ಅದಕ್ಕಿಂತ ಮೊದ್ಲು ನಾನು ಸಾಯೋ ಸ್ಥಿತಿಯಲ್ಲಿದ್ದೆ ಕರ್ನಾಟಕದಾಗ ಎಲ್ಲಾ ಆಸ್ಪತ್ರೆಗಳು ತಿರುಗಿ ದಣಿದಿದ್ವಿ ೮೦ ರಿಂದ ೯೦ ಸಾವಿರ ಗಟ್ಲೆ ಬರೇ ಆಸ್ಪತ್ರೆಗೆ ಖರ್ಚುಮಾಡಿ ದೇವರು, ದಿಂಡ್ರು, ಮಾಟ, ಮಂತ್ರ, ತಂತ್ರ, ಏನೆಲ್ಲ ಮಾಡಿದ್ರೂ ಸಹ ಮೇಲಾಗ್ಲಿಲ್ಲ ಮನೆಯಲ್ಲಿ ಯಾವಾಗ್ಲೂ ಬರೇ ಜಗಳ ಸಮಾಧಾನ ಇರುತ್ತಿರಲಿಲ್ಲ ನನ್ನ ಗಂಡ ಕೂಡ ಸರಿಯಾಗಿ ಮಾತಾಡ್‌ಸ್ತಿರಲಿಲ್ಲ ಅವರಿಗೆ ಕೂಡ ನನ್ನ ಬಗ್ಗೆ ಬೇಸರ ವೆನಿಸಿತ್ತು ಇಷ್ಟು ದುಡ್ಡು ಇಟ್ರು ಕೂಡ ಮೇಲಾಗ್ಲಿಲ್ಲಂತ ವಟವಟ ಅಂತಿದ್ದ ಏನ್ ಬ್ಯಾನೆ ಬಂದೈತೆ ಏನೋ ಆ ದೇವರಿಗೆ ಗೊತ್ತು ಅಂತ ತಿರುಗ್‌ತಿದ್ದ ಹಿಂಗೆ ಒಂದು ದಿನ ಶರಣಮ್ಮ ಅಂತ ನಮ್ ಸಂಬಂಧಿಕರು ಅವರು ಈಗ ಬಳ್ಳಾರಿಯಲ್ಲೇ ಸೆಟ್ಲಾಗಿದ್ದಾರೆ. ಆಯಮ್ಮ ನನಗೆ ಹೇಳಿದ್ಲು ನೋಡಮ್ಮ ನಿನಗೆ ಯಾವ ಕಾಯಿಲೆ ಕಸ್ಯಾರೆ ಇರ್ಲಿ ನಾನು ಬಳ್ಳಾರಿಗೆ ಚರ್ಚ್‌ಗೆ ಕರ್ಕೊಂಡು ಹೋಗ್ತಿನಿ ಬಾ ಭಾನುವಾರ ಅಲ್ಲಿ ಎಂತೆಂಥ ಕಾಯಿಲೆ ಬಂದರಿಗೆಲ್ಲ ಮೇಲಾಗಿದೆ ಕ್ಯಾನ್ಸರ್ ಏಡ್ಸ್ ಅಂತ ಕಾಯಿಲೆ ಕೂಡ ವಾಸಿಯಾಗಿದೆ ನಮ್ ಪಾಡೇನು ಚರ್ಚ್‌ಗೆ ಬಾ ಎರಡು ಮೂರು ವಾರ ಬಂದ್‌ಬಿಡು ಆ ಮೇಲೆ ನಿನಗೆ ಗೊತ್ತಾಗ್ತದೆ ಅಂದ್ಲು ಅದಕ್ಕೆ ನಾನು ಏಸುಸ್ವಾಮಿ ಮೊದ್ಲು ಬಳ್ಳಾರಿಗೆ ಹೋದೆ ಅಲ್ಲಿ ಎಲ್ಲಾರು

ನನ್ನಂತ ಕಾಯಿಲೆ ಬಂದಂತವರೇ ಬಂದು ವಾಸಿಯಾಗಿವೆ ಅಂತ ಬಂದವ್ರು ಹೇಳಿದ್ರು. ಒಂದುವಾರ ಪಾಸ್ಟ್ರಗೆ ಪರಿಚಯ ಮಾಡ್ಸಿದ್ರು ನಾನು ಹೇಳ್ದೆ ಸ್ವಾಮಿ ನನಗೆ ಹಿಂಗೈತೆ ಎಲ್ಲಿ ಮೇಲಾಗಿಲ್ಲ ಅಂತ ಹೇಳಿದೆ. ಆವಾಗ ಭಾನುವಾರ ಪ್ರೇಯರ್ ಮುಗಿದ ಮೇಲೆ ನನಗೆ ಬೇರೆ ಕುಂದ್ರಿಸಿ ಪ್ರೇಯರ್ ಮಾಡಿದ. ಎಣ್ಣೆಯನ್ನು ಪ್ರೇಯರ್ ಮಾಡಿಕೊಟ್ಟ ನಿನಗೇನಾದ್ರು ತೊಂದರೆ ಯಾದ್ರೆ ಈ ಎಣ್ಣೆ ಹಚ್ಚಿಕೋ ಎಂದು ಹೇಳಿದ ಇನ್ನೊಂದು ವಾರ ಹೋದೆ ಸ್ವಲ್ಪ ಮೇಲಾಗಿತ್ತು ಆವಾಗ ಪಾಸ್ಟ್ರು ಹೇಳಿದ್ರು ನಿನಗೆ ಬಳ್ಳಾರಿ ದೂರ ಆಗ್ತೈತೆ ಅಲ್ಲೇ ಚಿಕ್ಕಜೋಗಿಹಳ್ಳಿ ಇದೆಯಲ್ಲ ಅಲ್ಲಿ ಕೂಡ ನಮ್ದು ಚರ್ಚ್ ಇದೆ ಅಲ್ಲಿ ಜಯಣ್ಣ ಪಾಸ್ಟ್ರು ಅಂತ ಇದ್ದಾರೆ ಅಲ್ಲಿಗೆ ಹೋಗು ಅಂತ ಹೇಳಿದ್ರು ಆಗ ನಾನು ಮುಂದಿನ ವಾರ ಚಿಕ್ಕಜೋಗಿಹಳ್ಳಿಗೆ ಹೋದೆ ಅಲ್ಲಿ ಭಾನುವಾರದಂದು ಶಾಲೆಯ ಹತ್ತಿರ ಹದಿನೈದು ಇಪ್ಪತ್ತು ಜನ ಸೇರಿ ಪ್ರೇಯರ್ ಮಾಡ್ತಿದ್ರು ನಾನು ಹೋಗಿ ಅಲ್ಲಿ ಪ್ರೇಯರ್‌ಗೆ ಕುಂತ್ಕೊಂಡೆ ಪ್ರೇಯರ್ ಮುಗಿದ್ ಮೇಲೆ ಜಯಣ್ಣ ಪಾಸ್ಟ್ರಗೆ ಹೇಳಿದೆ. ಹಿಂಗೆ ಬಳ್ಳಾರಿ ಹೋಗಿದ್ವಿ ಸರ್ ಅಂತ. ಅವ್ರು ನನ್ನ ಕಾಯಿಲೆ ಬಗ್ಗೆ ಎಲ್ಲಾ ಕೇಳಿದ್ರು ನಾನು ಎಲ್ಲಾ ಪರಿಸ್ಥಿತಿ ಹೇಳಿದೆ ಎಲ್ಲೆಲ್ಲಿ ಹೋಗಿದ್ವಿ ಎಷ್ಟು ಖರ್ಚುಮಾಡಿದ್ವಿ ಅಂತ ಹೇಳಿದೆ. ಆಯಿತಮ್ಮ ಪ್ರತಿ ಭಾನುವಾರ ತಪ್ಪದೇ ಬರಬೇಕು ಶುಕ್ರವಾರ ನಿಮಗೆ ಅನುಕೂಲವಾದ್ರೆ ಬರ್ರಿ ಇಲ್ಲಂದ್ರೆ ಭಾನುವಾರ ಒಂದೇ ಬಂದ್ ಬಿಡಮ್ಮ ಅಂತ ಹೇಳಿದ್ರು. ಆವಾಗಿನಿಂದ ನಾನು ಚರ್ಚ್‌ಗೆ ಹೋಗ್ತಿದ್ವೀನಿ ಹಿಂಗೆ ಎಂಟತ್ತು ವಾರ ಹೋದ್ ಮೇಲೆ ಊರು ಹೊರಗಡೆ ಜಾಗ ಫ್ರೀ ಕೊಟ್ಟಿದ್ರಂತೆ ಅಲ್ಲಿ ಚರ್ಚ್ ಕಟ್ಟಿದ್ದಾರೆ. ಅದು ಬರೆ ಜನರೇ ಕಾಣಿಕೆ ಕೊಟ್ಟಂತ ದುಡ್ಡಲ್ಲೇ ಕಟ್ಟಿ ಪೂರ್ತಿ ಮುಗಿಸಿದ್ದಾರೆ. ಈಗ ಅಲ್ಲಿಗೆ ನೂರಾರು ಜನ ಬರ್ತಾರೆ ನನಗೆ ಅಲ್ಲಿಗೆ ಹೋದಾಗಿನಿಂದ ಎಲ್ಲ ಕಾಯಿಲೆ ಮೇಲಾಯಿತು. ಈಗ ಏನು ತೊಂದ್ರೆ ಇಲ್ಲ. ನಮಗೆ ಮನೆಯಲ್ಲಿ ಎಲ್ಲಾ ಚೆನ್ನಾಗಿ ಆಗ್ತಿದೆ. ಅಲ್ಲಿಗೆ ಹೊದಾಗಿನಿಂದ ತುಂಬಾ ಒಳ್ಳೆಯದಾಗಿದೆ. ನಮ್ ಕುರಿಗಳು, ಎತ್ತುಗಳು ಕೂಡ ಇವೆ, ಅವಕ್ಕೇನಾದ್ರು ತೊಂದ್ರೆಯಾದ್ರೆ ಏಸುಸ್ವಾಮಿನ ನೆನೆಸಿಕೊಂಡು ಪ್ರೇಯರ್ ಮಾಡ್ತೀನಿ ಮೇಲಾಗಿ ಬಿಡ್ತದೆ. ನಾವು ಪ್ರತಿ ಭಾನುವಾರ ಬೆಳಿಗ್ಗೆ ನಮ್ಮೂರಾಗೆ ಎಂಟುವರೆಗೆ ಬಿಡ್ತೀವಿ ಜೋಗಿ ಹಳ್ಳಿಗೆ ಹತ್ತು ಗಂಟೆಗೆ ಹೋಗ್ತೀವಿ ಅಲ್ಲಿ ೧೦:೩೦ಕ್ಕೆ ಪ್ರೇಯರ್ ಶುರುವು ಮಾಡ್ತೀವಿ. ಅಷ್ಟೊತ್ತಿಗೆ ಎಲ್ಲಾರು ಬಂದಿರ್ತಾರೆ. ೨ ಗಂಟೆಗೆ ಪ್ರೇಯರ್ ಮುಗಿಸುತ್ತಾರೆ. ೧೦:೩೦ ರಿಂದ ಒಂದುವರೆ ತನಕ ಪ್ರೇಯರ್ ಮುಗಿಸಿ ಅರ್ಧಗಂಟೆಯಲ್ಲಿ ಸಾಕ್ಷಿಗಳು ಹೇಳುವವರು ಹೇಳ್ತಾರೆ.

ನಾನು ನನ್ನ ಮಗನಿಗೆ ಆರಾಮಿದ್ದಿಲ್ಲ ಜ್ವರ ಬಂದಿದ್ದು ಆಗ ಏಸು ಸ್ವಾಮಿನ ನೆನೆಸಿಕೊಂಡು ಪ್ರೇಯರ್ ಮಾಡಿ ಎಣ್ಣೆ ಹಚ್ಚಿಕೊಂಡೆ. ನನಗೆ ಮೇಲಾಗಿದೆ ಅಂತ ಒಬ್ಬೊಬ್ರೇ ಸಾಕ್ಷಿಗಳು ಹೇಳ್ತಾರೆ. ಇನ್ನೊಬ್ರು ಅಜ್ಜಿನ ಚಿನ್ನಹಳ್ಳಿಯವರು ಒಬ್ರು ಹೇಳಿದ್ರು ಅವರ ಮಗ ಜೈಲಿಗೆ ಹೋಗಿ ಬಹಳ ದಿನ ಆಗಿದ್ದಂತೆ ಎಷ್ಟು ಹೋರಾಡಿದ್ರು ಬೇಲಾಡ್ರು ಸಹ ಸಿಕ್ಕಿದಿಲ್ಲಂತೆ ಈ ಏಸು ಸ್ವಾಮಿಗೆ ಐದು ವಾರದಿಂದ

ಬಂದ್ವೀ ಏಸು ಸ್ವಾಮಿನ ಬೇಡಿಕೊಂಡ್ವಿ ನನ್ನ ಮಗನನ್ನು ಬಿಡುಗಡೆ ಮಾಡು ಅಂತ, ಏಸುಸ್ವಾಮಿ ನನ್ನ ಮಗನನ್ನು ಬಿಡುಗಡೆ ಮಾಡಿದ್ದಾನೆ ಮಗ ಮನೆಗೆ ಬಂದಾನೆ ಅಂತ ಸಾಕ್ಷಿ ಹೇಳಿದ್ರು. ನನ್ನ ಮಗಳಿಗೆ ಬಹಳ ದಿನದಿಂದ್ಲೂ ಕಣ್ಣು ಕಾಣ್ತಿದ್ದಿಲ್ಲ ಏಸು ಸ್ವಾಮಿಗೆ ಬಂದು ನಾಲ್ಕುವಾರ ಆಯಿತು ಜಯಣ್ಣ ಪಾಸ್ಟ್ರು ಹತ್ತಿರ ಬಂದು ಹೇಳಿ ಪ್ರಯರ್ ಮಾಡ್ಸಿದ್ವಿ ಚರ್ಚ್‌ಗೆ ಪ್ರತಿವಾರ ಬರ್ತೀವಿ ಈಗ ಕಣ್ಣು ಕಾಣುಸ್ತಿದಾವೆ. ಏಸು ಸ್ವಾಮಿ ನಮಗೆ ಒಳ್ಳೆಯದು ಮಾಡಿದ್ದಾನೆ. ಹಿಂಗೆ ವಾರಕ್ಕೆ ೧೫ರಿಂದ ೨೦ ಜನ ಸಾಕ್ಷಿಗಳು ಹೇಳ್ತಾರೆ. ಸಾಕ್ಷಿ ಹೇಳಿದ ಮೇಲೆ ಒಂದು ಕೈ ಚೀಲದಲ್ಲಿ ಎಲ್ಲಾರು ಕಾಣಿಕೆ ಕೊಡ್ತೀವಿ ಕಾಣಿಕೆ ಕೊಡಬೇಕಾದ್ರೆ ಅದು ಯಾರಿಗೆ ಕಾಣಂಗಿಲ್ಲ. ಅದಕ್ಕೆ ಕೈ ಮುಚ್ಚಿಕೊಂಡು ಕೈ ಚೀಲದೊಳಗೆ ಹಾಕಬೇಕು ಕಾಣಿಕೆಯನ್ನು ನೋಡ್ರಿ ಅಲ್ಲಿಗೆ ಬರೋರೆಲ್ಲ ಬರೇ ಬಡವರು, ಕಾಯಿಲೆ ಕಸ್ಯಾರೆ ಇರುವವರು, ದೆವ್ವಗಳು ಬಡಿದವರು ಬರ್ತಾರೆ, ಮಾಟಮಂತ್ರ ಮಾಡ್ತಿರುವಂತವರು ಬರ್ತಾರೆ ಎಂತೆಂಥ ಕಾಯಿಲೆಗಳು ಬಂದವರು ಬರ್ತಾರೆ ಹೊಟ್ಟೆಯಲ್ಲಿ ಗಡ್ಡೆ ಇದ್ದಂತವರು ಬರ್ತಾರೆ ಈಗ ಅಲ್ಲಿ ಮುನ್ನೂರರಿಂದ ನಾಲ್ಕು ನೂರು ಜನ ಬರ್ತಾರೆ ಸುತ್ತಮುತ್ತ್ಲ ಹಳ್ಳಿಗಳ ಜನವಂತೂ ಅಲ್ಲಿ ತುಂಬಿರ್ತಾರೆ. ನಾವು ನೋಡ್ರಿ ಏಸುಸ್ವಾಮಿಗೆ ಹೋದಾಗಿನಿಂದ ಯಾವ ದೇವ್ರು ದಿಂಡ್ರು ಎಲ್ಲಾ ಬಿಟ್ವಿ. ಒಟ್ಟು ನಮ್ ದೇವರುಗಳಿಗೆ ಪೂಜೆ ಗೀಜೆ ಮಾಡಿದ ಪ್ರಸಾರದ ಕೂಡ ತಿನ್ನಂಗಿಲ್ಲ. ದೇವ್ರಿಗೆ ಕಡಿದ ಬ್ಯಾಟೆ ಕೂಡ ಮುಟ್ಟಂಗಿಲ್ಲ. ನೋಡ್ರಿ ನಮಗೆ ಯಾವ ದೇವ್ರಾದ್ರೇನು ದಿಂಡ್ರಾದ್ರೇನು ಒಳ್ಳೆಯದು ಮಾಡಿದ್ರೆ ಸಾಕು. ಅದಕ್ಕೆ ನಾವು ಏಸು ಸ್ವಾಮಿಯನ್ನು ಬಿಡಂಗಿಲ್ಲ ನೋಡ್ರಿ. ಈ ಸಮುದಾಯದ ಇನ್ನೊಬ್ಬ ಏಸುಸ್ವಾಮಿ ಭಕ್ತಳಾದ ಶರಣಮ್ಮ ಹೇಳುವ ವಿವರ ಈ ಕೆಳಗಿನಂತಿದೆ:

ನನ್ನ ಹೆಸರು ಶರಣಮ್ಮ ನಾನು ಬಳ್ಳಾರಿಗೆ ಚರ್ಚ್‌ಗೆ ಹೋಗ್ತಿನಿ, ನಾನು ಹದಿನೈದು ವರ್ಷಗಳಿಂದ ಬಳ್ಳಾರಿಯಲ್ಲೇ ರೈಸ್‌ಮಿಲ್‌ನಲ್ಲಿ ಕೆಲ್ಸ ಮಾಡಿಕೊಂಡು ಸ್ವಲ್ಪ ಜಾಗ ತಗಂಡು ಮನೆಯನ್ನು ಮಾಡಿಕೊಂಡಿದ್ದೀನಿ. ನಾವು ಬಹಾಳ ಬಡವ್ರು, ನನ್ನ ಗಂಡ ನನ್ನನ್ನು ಬಿಟ್ಟು ಬೇರೆ ಮದ್ವೆಯಾಗಿದ್ದಾನೆ. ನಾನು ನಮ್ ತಂದೆ ತಾಯಿಯವರ ಜೊತೆ ಇದ್ದೀನಿ ಮನೆಯಲ್ಲಿ ಎಲ್ಲಾ ಜವಾಬ್ದಾರಿ ನನ್ನದು. ನಮ್ ತಂಗಿಯರೆಲ್ಲ ಬಹಳ ಜನ ಇದ್ರು ಅದಕ್ಕೆ ಅವರಿಗೆಲ್ಲ ದೊಡ್ಡವರಮಾಡಿ ಮದ್ವೆ ಮಾಡಿ ಕೊಟ್ರೆ ಅವ್ರು ಕೂಡ ನನ್ನಜೊತೆ ಇಲ್ಲೇ ಕೆಲ್ಸಕ್ಕೆ ಬರ್ತಾರೆ ಹಿಂಗೆ ಕೆಲ್ಸ ಮಾಡಿಕೊಂಡು ತಮ್ಮನ ಮದ್ವೆ ಸಹ ಮಾಡಿದೆ. ತಮ್ಮ ಆಟೋ ಡ್ರೈವರ್ ಇನ್ನೊಬ್ಬ ತಮ್ಮಗೆ ಆರಾಮಿದ್ದಿಲ್ಲ ಅವನಿಗೆ ತಲೆಯಲ್ಲಿ ನೀರಿದ್ದಂತೆ ಅವನ್ನು ತಗಿಸ್ಲಿಕ್ಕೆ ಬೆಂಗಳೂರಿಗೆ ಹೋದ್ವಿ ಸಾಲ ಶೂಲ ಮಾಡಿ ತಗಿಸಿಕೊಂಡು ಬಂದ್ವಿ ೨೦ ಸಾವಿರ ಸಾಲ ಆಗಿತ್ತು. ನನಗೆ ಸಾಲದ ಚಿಂತೆ ಆಸ್ಪತ್ರೆಗೆ ಹೋದ್ರೆ ಡಾಕ್ಟ್ರು ನೀವು ಎಲ್ಲಿ ತೋರಿಸಬೇಡಿ ದುಡ್ಡು ಖರ್ಚು ಮಾಡಿಕೋ ಬೇಡಮ್ಮ ನೀವು ಇನ್ನೂ ಮೂರುತಿಂಗಳು ಬದುಕ್ತೀಯಾ ನಿನಗೆ ಕ್ಯಾನ್ಸರ್ ಇದೆ ಅಂತೇಳಿದ್ರು. ಹಿಂಗೆ ಒಂದು ಕಡೆ ಕಾಯಿಲೆ ರೋಗ ಇನ್ನೊಂದು ಕಡೆ ಸಾಲದ ಬಾದೆಯಿಂದ ಸಾಕಾಗಿ ಹೋಗಿತ್ತು.

ಒಂದು ದಿನ ಹಿಂಗೆ ಮಿಲ್‌ನಲ್ಲಿ ಕೆಲ್ಸಕ್ಕೆ ಹೋದಾಗ ಒಬ್ರು ನನ್ನ ಜೊತೆಗೆ ಕೆಲ್ಸಕ್ಕೆ ಬರ್ತಾರೆ ಅವರು ಯಾಕೆ ಹಿಂಗೆ ಸೊರಗಿದಿಯಾ ಶರಣಮ್ಮ ನಿನಗೆ ಏನಾಗಿದೆ ಹೇಳು ಅಂತ ಕೇಳಿದಳು. ನಾನು ಹಿಂಗೆ ನನಗೆ ಕ್ಯಾನ್ಸರ್ ಬಂದಿದಂತೆ ಅದಕ್ಕೆ ನಾನು ಇನ್ನು ಮೂರು ತಿಂಗಳು ಬದುಕ್ತೀನಿ ಅಂತ ಹೇಳಿದ್ದಾರೆ ಡಾಕ್ಟ್ರು. ಮೂರು ತಿಂಗಳು ಹೇಳಿದ್ರು ಆಗ್ಲೆ ಒಂದು ತಿಂಗಳು ಆಗಿದೆ ಅಂತೇಳಿದೆ. ಆಗ ಶಾಂತಮ್ಮ ಹೇಳಿದಳು ನೋಡಮ್ಮ ನಿನಗೆ ಏನು ಕಾಯಿಲೆ ಇಲ್ಲ ಏಸುಸ್ವಾಮಿ ಹತ್ರ ಹೋಗು ಎಂತೆಂಥ ಕಾಯಿಲೆ ಬಂದವರೆಲ್ಲ ಮೇಲಾಗಿದೆ ಅಂತ ಹೇಳಿದ್ರು. ಏಡ್ಸ್ ಬಂದವರೆಲ್ಲ ಕಡಿಮೆಯಾಗಿದೆ ಅಂತ ಬರ್ತಿದ್ದಾರೆ ಅದಕ್ಕೆ ನಾಳೆ ಭಾನುವಾರ ಚರ್ಚಿಗೆ ಬಾ ನಾನು ಕರ್ಕೊಂಡು ಹೋಗ್ತೀನಿ ಅಂತ ಹೇಳಿದಳು. ನಾನು ಭಾನುವಾರ ಚರ್ಚ್‌ಗೆ ಹೋದೆ ಅಲ್ಲಿ ಬೆಳಿಗ್ಗೆಯಿಂದ ಮದ್ಯಾಹ್ನ ತನಕ ಪ್ರೇಯರ್ ಮಾಡಿಕೊಂಡು ಎರಡು ಗಂಟೆಗೆ ಮುಗಿತು. ಪ್ರೆಯರ್ ಮುಗಿದ್ ಮೇಲೆ ಪಾಸ್ಟ್ರುಗೆ ಭೇಟಿಯಾದೆ. ಅವ್ರತ್ರ ನನ್ನ ಪರಿಸ್ಥಿತಿ ಹೇಳಿದೆ ಹಿಂಗಿದೆ ಸಾರ್ ಅಂತ, ಅವ್ರು ಅದಕ್ಕೆ ಹೇಳಿದ್ರು ನೀನು ಹೆದರುಬೇಡಮ್ಮ ಸುಮ್ಮನೆ ಚರ್ಚ್‌ಗೆ ಬಾ ಪ್ರತಿಭಾನುವಾರ ತಪ್ಪಿಸಬೇಡ ಅಂತೇಳಿದ್ರು ಆವಾಗಿನಿಂದ ನಾನು ಚರ್ಚ್‌ಗೆ ಹೋಗ್ಲಿಕ್ಕೆ ಶುರುವು ಮಾಡಿದೆ. ವಾರದಾಗ ಎರಡು ದಿನ ಶುಕ್ರವಾರ ಮತ್ತು ಭಾನುವಾರ ಹೋಗ್ತಿದ್ದೆ ಈಗ ಬರೇ ಭಾನುವಾರ ಮಾತ್ರ ಹೋಗ್ತಿನಿ ಹಿಂಗೆ ಚರ್ಚ್‌ಗೆ ಹೋದಂಗೆಲ್ಲ ನನಗೆ ಕಾಯಿಲೆ ಗಿಯಿಲೆ ಎಲ್ಲಾ ಮಾಯವಾಯಿತು ನೋಡ್ರಿ ಮೂರು ತಿಂಗಳಲ್ಲ ಆರು ತಿಂಗಳು ಕಳೆದ್ರು ನಾನು ಸಾಯಲಿಲ್ಲ. ಈಗ ನಾನು ಏಳೆಂಟು ವರ್ಷಗಳಿಂದ ಚರ್ಚ್‌ಗೆ ಹೋಗೊದು ಬಿಟ್ಟಿಲ್ಲ. ಆವಾಗಿನಿಂದ ನನಗೆ ಎಲ್ಲಾ ಒಳ್ಳೆಯದಾಗಿದೆ. ಏನು ತೊಂದರೆ ಇಲ್ಲ ಸಾಲಗಾರರು ದಿನಾ ಬಂದು ಕೇಳುವವರು ನೀನು ಯಾವಾಗ ಅನುಕೂಲ ಆಗ್ತದೋ ಆವಾಗ ಕೊಡಮ್ಮ ಅಂತೇಳಿದ್ರು ನನಗೆ ಆಶ್ಚರ್ಯವಾಯಿತು. ನಾವು ನೋಡ್ರಿ ದಿನ ಬೆಳಿಗ್ಗೆ ೪:೩೦ಕ್ಕೆ ಎದ್ದು ಮುಖತೊಳ್‌ಕೊಂಡು ಪ್ರಯರ್ ಮಾಡ್ತೀವಿ. ಸಂಜೆಗೆ ೭:೩೦ಕ್ಕೆ ಪ್ರಯರ್ ಮಾಡ್ತೀವಿ ದಿನಾಲು ಮಾಡ್ತೀವಿ ಒಂದು ದಿನ ತಪ್ಪಂಗಿಲ್ಲ ನೋಡ್ರಿ. ಈಗ ನಮ್ಮೂರಾಗೆ ಹದಿನೈದು ಇಪ್ಪತ್ತು ಮನೆ ಏಸುಸ್ವಾಮಿಗೆ ನಡೆದುಕೊಳ್ಳುತ್ತಾರೆ. ನೋಡ್ರಿ, ಏಸು ಸ್ವಾಮಿ ದೊಡ್ಡವನು ಈ ದೇವ್ರು ಮುಂದೆ ಯಾದೇವ್ರು ಅಲ್ಲ ನೋಡ್ರಿ, ಅದಕ್ಕೆ ಆತನೆ ನಮ್ಮ ದೇವರು ಈಗೀಗ ನಾವು ಆ ದೇವರು ಬಿಟ್ಟು ಯಾವ ದೇವ್ರನ್ನು ಪೂಜೆ ಗೀಜೆ ಮಾಡಲ್ಲ. ನಿಜವಾದ ದೇವ್ರು ಆತ ಅಂತ ಹೇಳ್ತಿನಿ ಹೌದು ನಿಜವಾದ ದೇವ್ರು ಆತನಾಗಿರುವನು.

ಈ ಮೇಲಿನ ಮಾಹಿತಿಯಿಂದ ಪ್ರಮುಖವಾಗಿ ತಿಳಿಯುವುದೇನೆಂದರೆ ಎಲ್ಲಾ ಹಿಂದೂ ದೈವಗಳು ದೇವರುಗಳಲ್ಲ, ಏಸು ಒಬ್ಬನೇ ನಿಜವಾದ ದೇವರು ಈ ಜಗತ್ತೆ ಆತನಿಂದಲೇ ಸೃಷ್ಟಿಯಾದುದ್ದು ದೇವರು ಇರುವುದು ಒಬ್ಬನೇ ಆತನೇ ಏಸು ಕ್ರಿಸ್ತ ಎಂದು ಹೇಳಿದ್ದಾರೆ. ಜನರೂ ಸಹ ಅದೇ ರೀತಿಯಾಗಿ ನಂಬಿದ್ದಾರೆ. ಇಲ್ಲಿ ಇರುವ ಪದ್ಧತಿಯೂ ಎಲ್ಲ ಹಿಂದೂ ದೈವಗಳಲ್ಲಿ ಕಂಡುಬರುವುದಿಲ್ಲ. ಏಕೆಂದರೆ

ಹಿಂದೂ ದೈವಗಳಲ್ಲಿ ಎಲ್ಲಿಯೂ ಸಾಮಾನ್ಯ ಜನರಿಂದ ಹರಕೆಗಳನ್ನು ಹೇಳಿಸುವುದಿಲ್ಲ. ತಮ್ಮ ಹರಕೆಗಳಿಗೆ ದೇವರು ಪ್ರತಿಫಲ ಕೊಟ್ಟಿದ್ದಾನೆ ಎಂದು ಹೇಳುತ್ತಾರೆ. ಭಾನುವಾರ ಮತ್ತು ಶುಕ್ರವಾರ ಪ್ರಾರ್ಥನೆ ಮುಗಿದ ಕೂಡಲೇ ಕನಿಷ್ಠ ೧೫ರಿಂದ ೨೦ ಜನರು ಹರಕೆಗಳನ್ನು ಹೇಳುತ್ತಾರೆ. ಅವು ಈ ಕೆಳಗಿನಂತಿವೆ.

ನನಗೆ ಹೊಟ್ಟೆಯಲ್ಲಿ ಗಡ್ಡೆ ಇತ್ತು ನಾನು ಎಲ್ಲಾ ಆಸ್ಪತ್ರೆಗಳು, ಮಾಟ, ಮಂತ್ರಗಳ ತಾಯಿತಗಳನ್ನು, ಎಲ್ಲಾ ಮಾಡಿದ್ದೆ ನನಗೆ ಉಷಾರಾಗಿದ್ದಿಲ್ಲ ಏಸುಸ್ವಾಮಿಗೆ ಬಂದು ನಾಲ್ಕೈದು ವಾರಗಳಾಯಿತು ನನಗೆ ಉಷಾರಾಗಿದೆ ಎಂದು ಹೇಳುತ್ತಾರೆ. ಹಾಗೆ ನನಗೆ ದೆವ್ವಗಳ ಕಾಟ ಜಾಸ್ತಿ ಇತ್ತು ಎಲ್ಲಾ ದೇವರ ಹತ್ತಿರ ಹೋಗಿ ಬಂದೆ ನನಗೆ ಆರಾಮಾಗಿದ್ದಿಲ್ಲ ಈಗ ಅರಾಮಾಗಿದೆ. ನನಗೆ ಕಣ್ಣೇ ಕಾಣ್ತಿದ್ದಿಲ್ಲ ಏಸು ಸ್ವಾಮಿಗೆ ನಾಲ್ಕು ವಾರದಿಂದ ಬಂದು ಪ್ರೆಯರ್ ಮಾಡಿದೆ ನನಗೆ ಈಗ ಕಣ್ಣು ಕಾಣ್ತಾವೆ. ನನಗೆ ಎಂಟತ್ತು ವರ್ಷಗಳಿಂದ ಮಕ್ಳಾಗಿದ್ದಿಲ್ಲ ಎರಡು ವರ್ಷದಿಂದ ಏಸುಸ್ವಾಮಿಗೆ ಬರ್ತಾ ಇದ್ದೀನಿ ಈಗ ಒಂದು ಗಂಡುಮಗು ಆಗಿದೆ. ಈ ರೀತಿ ಪ್ರತಿಯೊಬ್ಬರೂ ಸಹ ತಮ್ಮ ಸಾಕ್ಷಿಗಳನ್ನು ಬಹಿರಂಗವಾಗಿ ಚರ್ಚ್‌ನಲ್ಲಿ ಹೇಳುತ್ತಾರೆ. ಸುಮಾರು ಮೂನ್ನೂರೈವತ್ತರಿಂದ ನಾಲ್ಕುನೂರು ಜನ ಈ ಚರ್ಚ್‌ಗೆ ಬರುತ್ತಾರೆ. ಅದರಲ್ಲಿ ಬರೇ ತಳ ಸಮುದಾಯದ ಜನರು. ಅದರಲ್ಲಿ ಹೆಚ್ಚಿನ ಜನ ಮಹಿಳೆಯರಿದ್ದಾರೆ ಮತ್ತು ಪ್ರತಿದಿನ ಬೆಳಗ್ಗೆ ಸಂಜೆಗೆ ಪ್ರಯರ್ ಮಾಡುವುದು ಕಡ್ಡಾಯವಾಗಿದೆ. ಈ ರೀತಿಯಾಗಿ ಮ್ಯಾಸಬೇಡರು ತಮ್ಮ ಸಂಸ್ಕೃತಿಯ ದೈವಗಳನ್ನು ತೋರೆದು ಹೊಸ ದೈವಗಳ ಮೊರೆಹೋಗುತ್ತಿದ್ದಾರೆ.

೪.೪. ಮ್ಯಾಸಬೇಡರ ಸಮುದಾಯದ ಸಾಂಸ್ಕೃತಿಕ ವೀರರು

ವೀರರ ಪೂಜೆ ಇಂದಿನದಲ್ಲ, ಆದಿಮ ಕಾಲದಿಂದಲೇ ನಡೆದುಕೊಂಡು ಬಂದಿದೆ. ವೀರರನ್ನು ಪೂಜಿಸುವುದು, ಆರಾಧಿಸುವುದು, ಅವರ ಕತೆಗಳನ್ನು ಕೇಳುವುದು ನಮ್ಮ ದೇಶದಲ್ಲಿ ಪ್ರಾಚೀನ ಕಾಲದಿಂದಲೇ ಇದೆ. ದಕ್ಷಿಣ ಕನ್ನಡದಲ್ಲಿ ಪ್ರಚಲಿತವಾಗಿರುವ ಭೂತಾರಾಧನೆ ವೀರ ಪೂಜೆಯೇ ಆಗಿದೆ. ಕೋಟಿ-ಚೆನ್ನಯ್ಯ, ಬೊಬ್ಬರ್ಯ ಮೊದಲಾದ ವೀರರನ್ನು ಕುರಿತು ಪಾಡ್ದನಗಳು ಮೃತವೀರರ ಕುರಿತ ಗುಣಗಾನ, ಸಾಹಸದ ವರ್ಣನೆಗಳೇ ಆಗಿವೆ. ನಂಜುಂಡ ಕವಿಯ ಕುಮಾರಾಮನ ಕತೆ ಕನ್ನಡದ ಒಂದು ಶ್ರೇಷ್ಠ ವೀರ ಕಾವ್ಯ.

ದ್ರಾವಿಡರ ಸಂಸ್ಕೃತಿಯಲ್ಲಿ ಪೂರ್ವಜರ ಆರಾಧನೆಗೆ ಮಹತ್ವ ಪೂರ್ಣವಾದ ಸ್ಥಾನವಿದೆ. ಹಿಂಸಾತ್ಮಕವಾಗಿಯೇ, ಆಕಸ್ಮಿಕವಾಗಿಯೇ, ಆ ಕಾಲದಲ್ಲಿ ಗತಿಸಿದ ಗಂಡಸರು, ಹೆಂಗಸರು ವೀರರು ಕೆಲವೊಮ್ಮೆ ದುಷ್ಟರೂ ಈ ತೆರನಾದ ಆರಾಧನೆಗೆ ಪಾತ್ರರಾಗಿದ್ದಾರೆ. ಸಮುದಾಯದ ಮುಖ್ಯಸ್ಥರು, ಹಿರಿಯರು, ನಾಯಕರು, ವೀರರು ಮುಂತಾದ ಲೌಕಿಕ ಜೀವನದಲ್ಲಿ ಪ್ರಭಾವಶಾಲಿಗಳಾಗಿರುವ ವ್ಯಕ್ತಿಗಳು ಸತ್ತನಂತರವೂ ತಮ್ಮ ಪ್ರಭಾವವನ್ನು ಉಳಿಸಿಕೊಳ್ಳುತ್ತಾರೆ. ಅವರ ಭೌತಿಕ ದೇಹ ನಶಿಸಿಹೋಗಿದ್ದರೂ, ಅವರ ಆತ್ಮ ಬದುಕಿರುವ ನಮಗೆ ಒಳ್ಳೆಯದನ್ನೋ ಕೆಟ್ಟದ್ದನ್ನೋ ಮಾಡುವ ಶಕ್ತಿಯನ್ನು ಪಡೆದಿದೆ

ಎಂಬ ನಂಬಿಕೆ, ಸತ್ತ ಹಿರಿಯರನ್ನು ಮುಂದಿನ ಪೀಳಿಗೆಯವರು ಸ್ಮರಿಸಬೇಕು ಎಂಬ ಭಯಮಿಶ್ರಿತ ಕೃತಜ್ಞತಾ ಭಾವ ಮತ್ತೆ ತಮ್ಮ ಮನೆಯಲ್ಲೇ ಪುನರ್ಜನ್ಮವೆತ್ತಿ ಬರುತ್ತಾರೆ ಎಂಬ ಭಾವನೆಯೇ ಅವರನ್ನು ಆರಾಧಿಸುವಂತೆ ಮಾಡಿದೆ.

ದ್ರಾವಿಡ ಸಂಸ್ಕೃತಿಯಲ್ಲಿ ಪ್ರತಿವರ್ಷ ಹಿರಿಯರನ್ನು ನೆನೆಯುವ ಹಬ್ಬವನ್ನು ಹಿರೇರ ಹಬ್ಬ ಎಂಬ ಹೆಸರಿನಿಂದ ಆಚರಿಸುತ್ತಾರೆ. ಅಂದು ತಮ್ಮ ಮನೆತನದ ಹಿರಿಯರ ಸಮಾಧಿಗಳಿಗೆ ಹೋಗಿ ಹಣ್ಣು ಕಾಯಿ ಒಡೆದು ಪೂಜೆ ಮಾಡಿಕೊಂಡು ಹೊಸಬಟ್ಟೆಗಳನ್ನು ಅವರ ಸಮಾಧಿಯ ಬಳಿ ತೆಗೆದುಕೊಂಡು ಹೋಗಿ, ಸಮಾಧಿಯ ಮೇಲೆ ಇಟ್ಟು ಹಿರಿಯರಿಗೆ ಅರ್ಪಿಸುವ ಶಾಸ್ತ್ರ ಮಾಡುತ್ತಾರೆ. ಇದನ್ನು ಬಟ್ಟೆ ಏರಿಸುವುದು ಎನ್ನುತ್ತಾರೆ. ಅಲ್ಲಿಂದ ಬಂದು ತೀರ್ಥಕಾಯಿ ಮಾಡಿಕೊಂಡು ಮನೆಗೆ ಬರುತ್ತಾರೆ. ಮನೆಯಲ್ಲಿ ಎರಡು ಚೆಂಬುಗಳನ್ನು ಇಟ್ಟು ಒಂದಕ್ಕೆ ರೂಮಾಲು ಇನ್ನೊಂದಕ್ಕೆ ಸೀರೆಯನ್ನು ಸುತ್ತಿ ಹಿರಿಯರ ಪ್ರಾತಿನಿಧಿಕ ಸಂಕೇತವನ್ನು ಸೃಷ್ಟಿಸುತ್ತಾರೆ. ನಂತರ ಮಾಡಿದ ಸಿಹಿ ಅಡಿಗೆಯನ್ನು ಅರ್ಪಿಸಿ ಸಮಾಧಿಯಿಂದ ತಂದ ತೀರ್ಥಕಾಯಿಯನ್ನು ಒಡೆದು ಮನೆಯ ಎಲ್ಲರೂ ಪೂಜಿಸುತ್ತಾರೆ. ಹೀಗೆ ಅವರನ್ನು ಆರಾಧಿಸದಿದ್ದರೆ ಅತೃಪ್ತಗೊಂಡ ಅವರ ಆತ್ಮಗಳು ಬದುಕಿರುವ ನಮಗೆ ಯಾವ ತೊಂದರೆಗಯನ್ನು ಉಂಟು ಮಾಡುತ್ತಾರೆ ಎಂಬ ಭಯವೇ ಆರಾಧನೆಯ ಮೂಲವಾಗಿರುವಂತಿದೆ. ಹೀಗೆ ಆದರ್ಶಗಳಿಗೋಸ್ಕರ ತಮ್ಮನ್ನು ತೆತ್ತು ಕೊಂಡವರು ಕ್ರಮೇಣ ಒಂದು ಉನ್ನತ ಸ್ಥಾನಕ್ಕೆ ಏರಿ ನಂತರ ದೈವಗಳೆಂದು ಪರಿಗಣಿಸಿದ್ದಾರೆ. ನಮ್ಮ ದೇಶದಲ್ಲಿ ಮನೆ ದೇವರು, ಕುಲ ದೇವರು, ಗ್ರಾಮದೇವರು ಎಂದೂ ಜನ ಪೂಜೆ ಮಾಡುವುದನ್ನು ನೋಡಿದರೆ ಈ ದೇವರುಗಳು ಒಂದೊಂದು ಕಲ್ಪನೆಯ ಹಿನ್ನೆಲೆಯಲ್ಲಿ ಹೊರಹೊಮ್ಮಿರುವುದು ಗೋಚರವಾಗುತ್ತದೆ. ಒಂದೊಂದು ಸಣ್ಣ ಗುಂಪಿಗೂ ಒಬ್ಬ ದೇವರಿರುವುದನ್ನು ಭಾರತೀಯ ಸಮಾಜದಲ್ಲಿ ಇಂದಿಗೂ ನೋಡುತ್ತೇವೆ. ಹೀಗೆ ಗುಂಪಿನವರಿಗೆ ದೇವರುಗಳಾದವರು ಪ್ರಾಯಶಃ ಆಯಾ ಗುಂಪಿನ ಯಾವುದೋ ಕಾಲದ ಮುಖಂಡರಿದ್ದು, ಅಂದಿನ ಗುಂಪಿನ ಮೇಲೆ ಅವರು ಉಂಟು ಮಾಡಿದ ಪ್ರಭಾವದ ಕುರುಹುಗಳನ್ನು ಮುಂದಿನವರು ಪುರಾಣ ಮಾಡಿ ಕತೆ ಮಾಡಿ ಬರೆದಿರುತ್ತಾರೆ. ಹೀಗೆ ಆಯಾ ಗುಂಪಿನ ಆಯಾ ಸಮುದಾಯದ ಸಾಂಸ್ಕೃತಿಕ ವೀರರು ರೂಪುಗೊಂಡಿರುತ್ತಾರೆ.

ಒಬ್ಬ ಯೋಧ ಅಥವಾ ಒಬ್ಬ ವೀರ ತನ್ನ ವಾಸ್ತವ ಬದುಕಿನಲ್ಲಿ ಅಸಾಮಾನ್ಯವಾದ ರೀತಿಯಲ್ಲಿ ಧೈರ್ಯ ಸಾಹಸಗಳನ್ನು ಪ್ರದರ್ಶಿಸಿ ಅಸಹಜವಾದ ಮರಣವನ್ನು ಹೊಂದಿದಾಗ, ಅಕಾಲ ಮರಣವನ್ನು ಹೊಂದಿದಾಗ ಅಥವಾ ಕೊಲೆಯಾದಾಗ ಅವನು ನಡೆಸಿದ ಹೋರಾಟ, ಪ್ರತಿಭಟನೆಗಳಿಂದ ಜನಮನದಲ್ಲಿ ಇವನ ಬಗ್ಗೆ ಗೌರವ, ಅನುಕಂಪ ಮೂಡಿ ಅದೇ ಅವರ ಆರಾಧನೆಗೆ ದಾರಿಯಾಗುತ್ತದೆ. ಹೀಗೆ ಆರಾಧನೆ ಮಾಡಿಕೊಂಡು ಬಂದಿರುವ ತಳಸಮುದಾಯಗಳು ಒಂದೊಂದು ಸಮುದಾಯಕ್ಕೆ ಒಬ್ಬೊಬ್ಬರಂತೆ ಆರಾಧಿಸುತ್ತಾ ಬಂದಿದ್ದಾರೆ. ಅಂಥವರಲ್ಲಿ ಮಾದೇಶ್ವರ, ಮಂಟೇಸ್ವಾಮಿ, ಮೈಲಾರಲಿಂಗ, ಜುಂಜಪ್ಪ,

ಸಿರಿ, ಎಲ್ಲಮ್ಮ, ನಂತೆಯೇ ಮ್ಯಾಸಬೇಡರ ಸಮುದಾಯದಲ್ಲಿಯೂ ಸಹ ಕೆಲವು ಪ್ರಮುಖ ವೀರರು ಹುಟ್ಟಿಕೊಂಡಿದ್ದಾರೆ ಮತ್ತು ಅವರನ್ನು ಆರಾಧಿಸುತ್ತಿದ್ದಾರೆ. ಅಂತವರೆಂದರೆ, ಗಾದರಿಪಾಲನಾಯಕ, ತಿಪ್ಪೇಸ್ವಾಮಿ, ದಡ್ಡುಸೂರನಾಯಕ, ಕಂಪಳರಂಗಸ್ವಾಮಿ, ಕೊರಿಮಂಚನಾಯಕ, ಪಾಪನಾಯಕ, ಎರಗಯ್ಯ ಇನ್ನು ಮುಂತಾದವರನ್ನು ಸಾಂಸ್ಕೃತಿಕ ವೀರರೆಂದು ಆರಾಧಿಸುತ್ತಿದ್ದಾರೆ. ಅವರ ವಿವರ ಈ ಕೆಳಗಿನಂತಿವೆ.

ಕಂಪಳ ರಂಗಸ್ವಾಮಿ

ಮ್ಯಾಸಬೇಡರು ಆರಾಧಿಸುವ ಸಾಂಸ್ಕೃತಿಕ ನಾಯಕರಲ್ಲಿ ಕಂಪಳ ರಂಗಸ್ವಾಮಿ ಪ್ರಮುಖನು, ಕಂಪಳ ರಂಗನು ವಿಷ್ಣುವಿನ ಪ್ರತಿರೂಪವಾಗಿ ಕಂಡುಬರುತ್ತಾನೆ. ರಂಗ ಎಂಬುದೇ ಆತನ ನಿಜನಾಮ. ಈ ನಿಜನಾಮಕ್ಕೆ ಕಂಪಳ ಸೇರಿ 'ಕಂಪಳ ರಂಗ' ಎಂದಾಗಿದೆ. 'ಕಂಪಳ' ಎಂದರೆ ಗುಂಪು ಎಂಬರ್ಥ. ಮ್ಯಾಸಬೇಡರು ಮೂಲತಃ ವಲಸಿಗರಾಗಿದ್ದು ಗುಂಪು ಗುಂಪಾಗಿ ಅಲೆಮಾರಿ ಜೀವನ ನಡೆಸುತ್ತಿದ್ದರು. ಈ ಅಲೆಮಾರಿಗಳಲ್ಲಿ ಹಲವು ಬೆಡಗುಗಳು ಹಲವು ದೈವಗಳನ್ನು ಹೊಂದಿರುವುದೇ ಬೇಡ ಗಂಪಳವಾಗಿದೆ. ಈಗಲೂ ಬೇಡಗಂಪಳ ಎಂಬ ಹೆಸರು ಪ್ರಚಲಿತದಲ್ಲಿದೆ. ಹೀಗೆ ಕಂಪಳದವರು ರಂಗನನ್ನು ಅಂದರೆ ವಿಷ್ಣುವ ನನ್ನು ತಮ್ಮವನನ್ನಾಗಿ ಮಾಡಿಕೊಡಿರುವುದು ಸ್ಪಷ್ಟ. ಮಧ್ಯಕಾಲೀನ ಬೇಡರ ಬದುಕಿನಲ್ಲಿ ಶ್ರೀ ವೈಷ್ಣವ ಧರ್ಮ ಪ್ರವೇಶ ಪಡೆದ ಸಂಗತಿ ಪ್ರಮುಖವಾಗಿ ತಿಳಿದುಬರುತ್ತದೆ. ಆ ಸಂದರ್ಭಕ್ಕೆ ರಂಗ ಬೇಡ ಗಂಪಳದ ಜೊತೆ ಜೊತೆಗೆ ಸಮೀಕರಣಗೊಂಡು ಕಂಪಳರಂಗನಾಗಿರುವುದು ಸ್ಪಷ್ಟ.

ಕಂಪಳರಂಗಸ್ವಾಮಿ ಪ್ರಮುಖವಾಗಿ ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲೂಕಿನ ಕಂಪಳ ದೇವರಹಟ್ಟಿ ಎಂಬ ಪ್ರದೇಶದಲ್ಲಿ ನೆಲೆಸಿರುವುದು ಕಂಡು ಬರುತ್ತದೆ. ಇಲ್ಲಿ ಬಿಟ್ಟರೆ ಮತ್ತೆಲ್ಲಿ ಈತನ ದೇವಸ್ಥಾನಗಳಿಲ್ಲ, ಈ ಕಂಪಳ ದೇವರಹಟ್ಟಿ ಎಲ್ಲಾ ಮ್ಯಾಸಮಂಡಲದವರಿಗೆ ಪ್ರಮುಖವಾದ ಸ್ಥಳ. ಈ ದೈವವನ್ನು ಪ್ರಮುಖವಾಗಿ ಮ್ಯಾಸಬೇಡರಲ್ಲಿ ಬರುವ ಎರಡು ಬೆಡಗಿನವರು ಅಂದರೆ ಮಂದ್ಲಾರು ಮತ್ತು ಎನುಮ್ಲಾರು ಆರಾಧನೆ ಮಾಡುತ್ತಾರೆ. ಈ ಎರಡು ಬೆಡಗುಗಳು ಕೂಡ ನೆಂಟರು ಮತ್ತು ಬಂಟರು ಪರಸ್ಪರ ವಿರೋಧ ಬೆಡಗುಗಳು ಮ್ಯಾಸಬೇಡರಲ್ಲಿ ಬರುವ ಮುಖ್ಯ ಬೆಡಗುಗಳು. ಇವುಗಳ ಒಳಗೆ ಹಲವಾರು ಒಳಬೆಡಗುಗಳು ಬರುತ್ತವೆ.

ಈತನ ದೇವಸ್ಥಾನ ಮೂಲತಃ ಕಾಂಸಿ ಹುಲ್ಲು ಮತ್ತು ಲಕ್ಕಿ ಬರಲು ನಿಂದ ಕಟ್ಟಿರ್ತಕ್ಕಂತ ನೆಲಗುಡಿಸಲುಗಳಾಗಿರುತ್ತವೆ. ಈ ಗುಡಿಸಲು ಸುತ್ತ ಲಕ್ಕೆ ಬರಲಿನಿಂದ ಪೌಳಿಯನ್ನು ಕಟ್ಟಿರುತ್ತಾರೆ. ಲಕ್ಕಿ ಬರಲು ವಿಷ್ಣುವಿಗೆ ಪ್ರಿಯವಾದ ಸಸ್ಯವರ್ಗ, ಲಕ್ಕಿಬರಲಿನ ಗುಡಿಯಲ್ಲಿ ಸ್ಥಾಪನೆಯಾಗುವ ದೇವರು ಕಂಪಳ ರಂಗ. ಈ ಗುಡಿಸಲು ಮತ್ತು ಪೌಳಿಯು ಬುಡಕಟ್ಟು ಸಂಸ್ಕೃತಿಯ ಪ್ರತೀಕ ಅಂದರೆ ಬುಡಕಟ್ಟುಗಳು ಮೂಲತಃ ಅಲೆಮಾರಿಗಳಾಗಿದ್ದರಿಂದ ಒಂದು ಕಡೆ ನೆಲೆ ನಿಲ್ಲಲು ಈ ಪೌಳಿಯನ್ನು ಕಟ್ಟಿರಬೇಕು. ಫೆಬ್ರವರಿ ತಿಂಗಳ ಮೊದಲವಾರದಲ್ಲಿ ಇಲ್ಲಿ ಜಾತ್ರೆಯನ್ನು ಮಾಡುತ್ತಾರೆ. ದೀಪಾವಳಿಯ ಸಂದರ್ಭದಲ್ಲಿ

ಗುಗ್ಗರಿಹಬ್ಬ ಅಂತ ಮಾಡುತ್ತಾರೆ. ಆ ಸಂದರ್ಭದಲ್ಲಿ ಗುಗ್ಗರಿ ಹಬ್ಬದಲ್ಲಿ ಹೊಸಧಾನ್ಯವಾದ ಹುರುಳಿ ಮತ್ತು ಜೋಳ ಇದರೊಂದಿಗೆ ಬಾಳೆಹಣ್ಣು ಮತ್ತು ಬೆಲ್ಲವನ್ನು. ಈ ಸಮುದಾಯದವರು ಬೆಳೆದಂತಹ ಧಾನ್ಯಗಳನ್ನು ಸಹ ಮೊದಲು ದೇವರಿಗೆ ಅರ್ಪಿಸಿ ನಂತರ ಅವುಗಳನ್ನು ಬಳಸುತ್ತಾರೆ. ಈ ಹುರುಳಿ ಮತ್ತು ಜೋಳ ಕೃಷಿ ಸಂಸ್ಕೃತಿಯ ಪ್ರತೀಕವನ್ನು ಸೂಚಿಸುತ್ತದೆ.

ಈ ಜಾತ್ರೆಯಲ್ಲಿ ಕಂಪಳ ದೇವರಹಟ್ಟಿ ಮ್ಯಾಸಬೇಡರು ವಿಷ್ಣು ದೇವತೆ ಸಂಬಂಧದ ಜಾತ್ರೆಯಲ್ಲಿ ಪ್ರಮುಖಪಾತ್ರ ವಹಿಸುವವರು ದಾಸಪಂಥದ ಬೆಡಗಿನವರು, ಕಂಪಳ ರಂಗ ಗುಡಿಯಿಂದ ಸುಮಾರು ಅರ್ಧಫರ್ಲಾಂಗ್ ದೂರಕ್ಕೆ ಪಾಪನಾಯಕ ದೇವರು ಜಗಳೂರಿನಿಂದ ಬಂದು ನೆಲೆಗೊಂಡಿರುತ್ತರೆ. ಈ ಎರಡು ದೇವರುಗಳನ್ನು ಬಿಟ್ಟರೆ ಅಲ್ಲಿ ಮುಖ್ಯವಾಗಿ ಕಾಣಿಸಿಕೊಳ್ಳುವುದು ದೇವರಿಗೆ ಬಿಟ್ಟ ದೇವರೆತ್ತುಗಳು. ಈ ಜಾತ್ರೆಯಲ್ಲಿ ಮೊದಲನೆಯದಿನ ಕಂಪಳ ರಂಗನೊಂದಿಗೆ ಇತರೆ ದೇವರುಗಳು ಹಾಗೂ ಬೇಡಗಂಪಳವು ಸೇರುತ್ತದೆ. ಆಯಾ ಬೆಡಗಿನವರು ಪ್ರತ್ಯೇಕವಾಗಿ ಪೌಳಿಯತರಹ ಕಟ್ಟಿಕೊಂಡು ರಾತ್ರಿಯೆಲ್ಲ ದಾಸೋಹ ಮಾಡುತ್ತಾರೆ. ಮತ್ತು ರಾತ್ರಿ ಹನ್ನೊಂದು ಗಂಟೆಗೆ ದಾಸಪಂಥದವರು ಪ್ರಮುಖ ಪಾತ್ರವಹಿಸುತ್ತಾರೆ. ಬಂದಂತಹ ಜನರೆಲ್ಲ ದೇವರ ಹೆಸರಿನಲ್ಲಿ ಎಣ್ಣೆಯನ್ನು ದಾಸರಿಗೆ ಹೊಯ್ಯುತ್ತಾರೆ. ದಾಸರ ಬೆಡಗಿನ ಜನ ಬೆಂಕಿ ಹೊತ್ತ ಪಂಜುಗಳನ್ನು ಬಾಯಲ್ಲಿ ನುಂಗಿ ಆರಿಸುವರು. ಈ ಜಾತ್ರೆಯ ಆಚರಣೆಯಲ್ಲಿ ದಾಸರದೇ ಪ್ರಮುಖ ಪಾತ್ರಗಳನ್ನು ಶಂಕು, ಜಾಗಟೆ ಜಾತ್ರೆಯಲ್ಲಿ ಬಳಸುವರು. ರಾತ್ರಿ ಸುಮಾರು ಹನ್ನೆರಡು ಘಂಟೆಯ ಹೊತ್ತಿಗೆ ಈ ಪಂಜಿನ ಕವಾಯತವನ್ನು ನಡೆಸುವರು ದೇವರ ಮುಂದೆ ಉರಿಯುವ ದೀವಟಿಗೆಯಿಂದ ಪಂಜು ಹಚ್ಚಿಕೊಂಡು ಜನ ಸಮೂಹದತ್ತ ಓಡಿಬರುವರು. ಹಾಗೆ ಹೀಗೆ ಓಡುತ್ತ ಆವೇಶಭರಿತರಾಗಿ ಉರಿಯುವ ಪಂಜನ್ನು ಬಾಯಿಗಿಟ್ಟುಕೊಳ್ಳಲು ಅದು ಬಾಯೊಳಗೇ ಆರಿ ಹೋಗುವುದು. ಈ ಪಂಜಿನ ಆಚರಣೆ ಬಹುಶಃ ಆದಿಮ ಸಂಸ್ಕೃತಿಯ ಪ್ರತೀಕ, ಆದಿಮ ಕಾಲದಲ್ಲಿ ರಾತ್ರಿ ಹೊತ್ತು ಕತ್ತಲಿನಲ್ಲಿ ಬೆಳಕಿನ ಸಹಾಯಕ್ಕಾಗಿಯೇ ಈ ಪಂಜಿನ ಆಚರಣೆ ಹುಟ್ಟಿಕೊಂಡಿರಬೇಕು ಎಂದೆನಿಸುತ್ತದೆ.ಇನ್ನೊಂದು ಮುಖ್ಯವಾಗಿ ಅಲಗು ಆಯುವುದು ಪ್ರಮುಖವಾಗಿ ಕಂಡು ಬರುತ್ತದೆ. ಅಲಗು ಶಿವನನ್ನು ಒಲಿಸಿಕೊಳ್ಳಲಿಕ್ಕೆ ಅಲಗು ಸೇವೆ ಪ್ರಮುಖದ್ದಾಗಿರಬೇಕು ಅಂದರೆ ಶೈವಧರ್ಮದ ಪ್ರತೀಕವನ್ನು ಸೂಚಿಸುತ್ತದೆ.

ಕೊನೆಯದಿನ ಎತ್ತುಗಳನ್ನು ಓಡಿಸುವುದು. ಶನಿವಾರದಂದು ನಾಲ್ಕು ಗಂಟೆಗೆ ಈ ಕಾರ್ಯಕ್ರಮವಿರುತ್ತದೆ. ಎತ್ತುಗಳನ್ನು ಓಡಿಸುವ ಮೊದಲು ಕುದುರೆ ಬಂದು ಹೋಗುತ್ತದೆ. ಅಂದರೆ ಕುದುರೆ ಶಿವನವಾಹನ ಮತ್ತು ಮೊದಲು ಮಾನವನು ವಾಹನವನ್ನಾಗಿ ಪಳಗಿಸಿಕೊಂಡಿದ್ದು ಕುದುರೆಯನ್ನು ಮಾತ್ರ ಹಾಗಾಗಿ ಇದು ಕೂಡ ಆದಿಮ ಸಂಸ್ಕೃತಿಯ ಪ್ರತೀಕವನ್ನು ಸೂಚಿಸುತ್ತದೆ. ಕುದುರೆ ಹೋದ ಮೇಲೆ ಎತ್ತುಗಳನ್ನು ಮೂರು ಸಾರಿ ಪಾಪನಾಯಕನ ದೇವಸ್ಥಾನದಿಂದ ಕಂಪಳರಂಗ ದೇವಸ್ಥಾನದವರೆಗೆ

ಓಡಿಸುತ್ತಾರೆ. ಈತರಹ ದೇವರಿಗೆ ಬಿಟ್ಟ ಎತ್ತುಗಳನ್ನು ಓಡಿಸುವುದು ಪಶುಪಾಲನೆಯ ಸಂಸ್ಕೃತಿಯನ್ನು ಸೂಚಿಸುತ್ತದೆ. ಮತ್ತು ಆ ವರ್ಷದಲ್ಲಿ ಬೆಳೆಯುವ ಬೆಳೆಯನ್ನು ಸಹ ಎತ್ತುಗಳು ಓಡಿಸುವುದರ ಮೂಲಕ ತಿಳಿಯುತ್ತಾರೆ. ಎತ್ತುಗಳನ್ನು ಓಡಿಸುವಾಗ ಬಿಳಿ ಎತ್ತು ಮುಂದೆ ಬಂದರೆ ಹತ್ತಿ ಬೆಳೆ ಚೆನ್ನಾಗಿ ಬರುತ್ತದೆ ಹೀಗೆ ಆಯಾ ಎತ್ತಿನ ಬಣ್ಣದ ಆಧಾರದ ಮೇಲೆ ಆ ವರ್ಷದ ಫಸಲನ್ನು ಗುರುತಿಸುವ ಒಂದು ನಂಬಿಕೆ ಜನಸಾಮಾನ್ಯರಲ್ಲಿ ಈಗಲೂ ಇದೆ. ಕಂಪಳ ರಂಗ ಸ್ವಾಮಿಯ ಆರಾಧನೆಯನ್ನು ಕೇವಲ ಮ್ಯಾಸಬೇಡರು ಮಾತ್ರವಲ್ಲದೆ ಇತರೆ ಸಮುದಾಯದವರು ಸಹ ಮಾಡುತ್ತಾರೆ. ಮುಖ್ಯವಾಗಿ ಈತನನ್ನು ಆರಾಧಿಸುವವರು ಯಾರು ಕೂಡ ತಿರುಪತಿಗೆ ಹೋಗುವುದಿಲ್ಲ. ಕಂಪಳರಂಗಸ್ವಾಮಿಯೇ ತಿರುಪತಿ ವೆಂಕಟೇಶ ಎಂದು ಭಾವಿಸಿದ್ದಾರೆ. ಹಾಗಾಗಿ ತಿರುಪತಿಗೆ ಯಾರು ಹೋಗುವುದಿಲ್ಲ ಹೋದರೆ ಒಳ್ಳೆಯದಾಗುವುದಿಲ್ಲ ಎಂಬ ನಂಬಿಕೆ ಇವರಲ್ಲಿ ಬೇರೂರಿದಂತಿದೆ.

ಜಗಳೂರು ಪಾಪನಾಯಕ

ಮ್ಯಾಸಬೇಡರ ಸಾಂಸ್ಕೃತಿಕ ವೀರರಲ್ಲಿ ಪಾಪನಾಯಕನ ಪಾತ್ರ ಅಪಾರವಾದುದು. ಈತನನ್ನು ಜಗಳೂಪಾಪಜ್ಜ, ಪಾಪೇದೇವರು, ಪರದೇಶಿ ಪಾಪಯ್ಯ, ಪಾಪಿನಾಯಕ, ಸೂರ್ಯ ದೇವ ಪಾಪನಾಯಕ, ನೋರೇಲುಪಾಪಯ್ಯ, ಜೋಗಯ್ಯ ಮುಂತಾದ ಹೆಸರುಗಳಿಂದ ಕರೆಸಿಕೊಳ್ಳುವ ಈತ ಮ್ಯಾಸಬೇಡರ ಬುಡಕಟ್ಟು ವೀರ. ಇಂದು ಈತನೊಬ್ಬ ಆರಾಧ್ಯ ದೇವರಾಗಿರುವುದು ಗಮನಾರ್ಹ. ಈತನು ಒಬ್ಬ ಪಸುಪಾಲಕನಾಗಿ ತನ್ನ ಸಾಂಸ್ಕೃತಿಕ ಬದುಕಿನೊಂದಿಗೆ ಆಧ್ಯಾತ್ಮಿಕ ರಂಗವನ್ನು ಪ್ರವೇಶಿಸಿದ ಮಹಾವೀರ. ಈತನ ದೇವಾಲಯಗಳು ದಾವಣಗೆರೆ ಜಿಲ್ಲೆ ಜಗಳೂರು ತಾಲೂಕು ಕೇಂದ್ರದಿಂದ ಉತ್ತರಕ್ಕಿರುವ ಕೆರೆಯ ಕೋಡಿಯ ಹತ್ತಿರ ಈತನ ದೇವಾಲಯವಿದೆ. ಹಾಗೇ ಚಿತ್ರದುರ್ಗ ಜಿಲ್ಲೆಯ ಚಳಕೆರೆ ತಾಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಗೋರ್ಲಕಟ್ಟೆ ಹತ್ತಿರ ದೇವಾಲಯವಿದೆ. ಒಂದು ದೇವಾಲಯ, ಇನ್ನೊಂದು ಸಮಾಧಿ ಅಂತ ಈ ಸಮುದಾಯದವರು ಹೇಳುತ್ತಾರೆ.

ಈತನ ತಂದೆ ಕೋರ್ಲಮಲ್ಲಿನಾಯಕ ತಾಯಿ ಬಾಳೆಪಟ್ಟಮ್ಮ. ಈತನು ಹುಟ್ಟುವಾಗಲೆ ಮುಂಗಾಲು ಮುಂದಾಗಿ ಹುಟ್ಟಿದರಿಂದ ಮತ್ತು ತಾಯಿಯ ಹೊಟ್ಟೆಯಲ್ಲಿಯೇ ತಂದೆಯ ಜೊತೆಗೆ ಮಾತನಾಡಿದ್ದರಿಂದ ಇವನು ವಿಚಿತ್ರ ಸ್ವಭಾವದ ಮಗುವೆಂದು ಕಾಡಿನಲ್ಲಿ ಬಿಟ್ಟು ಹೋಗಿದ್ದರು ಎಂದು ಸಮುದಾಯದ ಹಿರಿಯ ಮುದಿಯಪ್ಪನು ಹೇಳಿದ ಮಾಹಿತಿ ಪ್ರಕಾರ ತಿಳಿದು ಬರುತ್ತದೆ. ಕಾಡಿನಲ್ಲಿದ್ದ ಪರದೇಶಿ ಮಗುವಿಗೆ ಶಿವ ಪಾರ್ವತಿಯರು ಅನಾಥಮಗುವೆಂದುಭಾವಿಸಿ ನಾಮಕರಣ ಮಾಡಿದರು. ಪರದೇಶಿ ಪಾಪಯ್ಯ ಹೋಗಿ ಸೂರ್ಯ ದೈವ ಪಾಪನಾಯಕ ಎಂದು ಹೆಸರನ್ನು ಇಟ್ಟುಕೊಂಡು ಬೆಳೆಯುತ್ತಲೇ ದನಕಾಯುತ್ತಾ ಊರೂರು ಅಲೆಯುತ್ತಾ ಕಾಡುಪ್ರಾಣಿ, ಹಾವುಗಳ ಜೊತೆ ಆಟವಾಡುತ್ತಿದ್ದ, ನನ್ನಿವಾಳ ಗೋರ್ಲಕಟ್ಟೆ ಪರಿಸರದಲ್ಲಿ ದನಕಾಯುವಾಗ ಒಂದು ಹುತ್ತ, ಅದರ ಮೇಲೆ ಮಂಗಾರೆ ಗಿಡಗಳ ಪೊದೆ

ಇತ್ತು. ದನಕಾಯಲು ಕೋಲನ್ನು ಮಾಡಿಕೊಳ್ಳಲು ಮುಂಗಾರೆ ಗಿಡದ ಬುಡವನ್ನೇ ಕಿತ್ತುಹಾಕಿದ. ಹುತ್ತದಲ್ಲಿದ್ದ ಸರ್ಪರಾಜ ಅನೇಕ ವರ್ಷಗಳಿಂದ ಹುತ್ತದಲ್ಲಿದ್ದು ಈ ಮರದ ಬೇರುಗಳು ಹಾವನ್ನು ಬಂಧಿಸಿದವು. ಆ ನೋವು, ಬಂಧನದಿಂದ ಬಿಡಿಸಿದ ಪಾಪನಾಯಕನನ್ನು ಮೆಚ್ಚಿಕೊಂಡು ತನ್ನ ಬಳಿಯಿದ್ದ ಬಲಮುರಿಶಂಖು, ನಾಗಮುರಿಬೆತ್ತ, ಕೋರಿ ನಿಶಾನಿಯನ್ನು ಪಾಪನಾಯಕನಿಗೆ ಕೊಟ್ಟಿತು.

ಹೀಗೆ ಬೆಳೆದು ದೊಡ್ಡವನಾಗುತ್ತಲೇ ದನಕಾಯುವಾಗ ದುಡ್ಡನ್ನು ಒಂದೊಂದು ಪೈಸೆ ರೂಪದಲ್ಲಿ ಸಂಗ್ರಹಿಸಿಟ್ಟಿದ್ದ ಇಟ್ಟಿದ್ದ ಎಂದು ತಿಳಿದುಬರುತ್ತದೆ. ಒಮ್ಮೆ ಗೊಂದಲದಲ್ಲಿ ಗೊಲ್ಲರು ತಿರುಪತಿ ಯಾತ್ರೆಗೆ ಅಕ್ಕಿ, ಎಣ್ಣೆ, ದೀಪ, ತುಪ್ಪ ಹಾಲು ಎತ್ತುಕೊಂಡು ಹೋಗುತ್ತಿದ್ದ ಅವರನ್ನು ಪಾಪನಾಯಕ ಹಿಂಬಾಲಿಸಿಕೊಂಡು ಹೋಗುತ್ತಿದ್ದ. ಅವರನ್ನು ಪಾಪನಾಯಕ ಹಿಂಬಾಲಿಸಿ ಕೇಳಿದಾಗ ಪಾಪನಾಯಕನನ್ನು ಬಾಲಕನೆಂದು ತಾತ್ಸಾರಮಾಡಿದರು. ಆದರೂ ನಾನು ತಿರುಪತಿಗೆ ಹೋಗಬೇಕೆಂದು ಅವರ ಜೊತೆಗೆ ಹೋದವನು ಅವರಿಗಿಂತ ಮೊದಲೇ ತಿರುಪತಿಯಲ್ಲಿ ಪ್ರತ್ಯಕ್ಷನಾಗಿ ಉಂಡೆಕೊಟ್ಟು, ದೇವರದರ್ಶನ ಪಡೆದು ಬಂದನು. ಹೀಗೆ ಮರಳಿ ಬರುವಾಗ ತಂದೆ ತಾಯಿಯ ದರ್ಶನವಾಗುತ್ತದೆ. ಈತ ಲಂಗೋಟಿ, ಕಂಬಳಿ, ರುಮಾಲುಸುತ್ತಿ, ಕೈಯಲ್ಲಿ ಕೋಲು ಹಿಡಿದಿದ್ದ ತನ್ನ ಹಿರಿಮೆಯನ್ನು ಕಂಡು ಅನೇಕರು ಬೆರಗಾದರು, ಈ ಸಂದರ್ಭದಲ್ಲಿ ತನ್ನ ಅತ್ತೆಗೆ ಕಿರುಕುಳ ನೀಡುತ್ತಿದ್ದ ಕ್ಯಾಸಪ್ಪರದ ಕ್ಯಾಸಯ್ಯನಿಗೆ ಬುದ್ಧಿ ಹೇಳಿ ಅತ್ತೆಯನ್ನು ಗಂಡನ ಮನೆಗೆ ಬಿಟ್ಟು ಬಂದ. ಅಂದು ಪಂಚಾಯ್ತಿಯಲ್ಲಿ ಜಾಮೀನುದಾರನಾಗಿದ್ದ ಗಳಗಂಟೆ ಗಾದಶೆಟ್ಟಿಯು ಜೊತೆಗಿದ್ದ, ಹೀಗೆ ತನ್ನ ಅಪ್ರತಿಮ ಪವಾಡ ಪ್ರತಿಭೆಯಿಂದ ಜನಮನಗೆದ್ದು ದೈವನಾದನು.

ಜಗಳೂರು ಪಾಪನಾಯಕನ ಏಳಿಗೆಯನ್ನು ಕಂಡು ಬೆರಗಾದ ಜಗಳೂರಿನ ಪಾಳೆಯಗಾರ ಜಗಪತಿರಾಯನು ತನ್ನ ಆಸ್ಥಾನಕ್ಕೆ ನಾಯಕನನ್ನು ಕರೆಸಿಕೊಂಡ. ನಿನ್ನ ಬಳಿ ಇರುವ ಮುತ್ತಿನ ಕಾಲು ಪೆಂಡೆ, ಮುಕ್ಕಡ ಅಲುಗು, ಬಲಮುರಿಶಂಖು ಮೊದಲಾದವನ್ನು ಕೊಡಲು ತಿಳಿಸಿದ್ದ, ಇದನ್ನು ಜಗಳೂರು ಪಾಪನಾಯಕ ವಿರೋಧಿಸಿದ ಅರಸನ ದುರ್ವರ್ತನೆ ಹಿಡಿಸದೆ ಹೊರಟ ಜಗಪತಿರಾಯ ಈ ಪವಾಡ ಪುರುಷನನ್ನು ಕೊಲ್ಲಿರೆಂದು ಆಜ್ಞೆಮಾಡಿದ. ಆಸ್ಥಾನದಿಂದ ಕಂದಕಕ್ಕೆ ಬಂದು ನಂತರ ಜಗಿಯುವಷ್ಟರಲ್ಲಿ ಕಾಲನ್ನು ಕಡಿದರು. ಹೀಗೆ ನೋವಿನಿಂದಲೇ ಕೆರೆಯ ದಂಡೆಯ ಮೇಲೆ ಸಮಾಧಿಯಾದನು.

ಸಾಮಾನ್ಯ ಪಶುಪಾಲಕನಾಗಿ ಅಸಮಾನ್ಯ ಸ್ಥಾನ ಪಡೆದು ಜನಪದರ ಮೂಲಕ ಸಾಂಸ್ಕೃತಿಕ ವೀರನಾಗಿ ಆಧ್ಯಾತ್ಮಿಕ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿದ್ದು ಜಗಳೂರು ಪಾಪನಾಯಕನ ವಿಶೇಷವಾಗಿದೆ. ಈತನನ್ನು ತಮ್ಮ ಆರಾಧ್ಯ ದೈವವೆಂದು ನಂಬಿರುವ ಈತನ ಅನುಯಾಯಿಗಳು ಚಳ್ಳಕೆರೆ, ಮೊಳಕಾಲ್ಮೂರು, ಹಿರಿಯೂರು, ಹೊಳಲ್ಕೆರೆ, ದಾವಣಗೆರೆ ಜಿಲ್ಲೆಯ ಹರಪನಹಳ್ಳಿ, ಹೊಸಪೇಟೆ, ಸಂಡೂರು, ಕೂಡ್ಲಿಗಿ, ಹಗರಿಬೊಮ್ಮನಹಳ್ಳಿ ಇನ್ನೂ ಮುಂತಾದ ಸ್ಥಳಗಳಲ್ಲಿ ಈತನ ಭಕ್ತಾದಿಗಳಿದ್ದಾರೆ. ಕಂಪಳ, ದೇವರಹಟ್ಟಿ,

ಗೋರ್ಲ್ನಕಟ್ಟೆ, ಪಾಪನಾಯಕನಹಳ್ಳಿ, ದಶಮಾಪುರ ಮುಂತಾದ ಸ್ಥಳಗಳಲ್ಲಿ ಈತನ ಕುರುಹುಗಳಿವೆ ಎಂದು ಈಗಾಗಲೇ ಸಂಗ್ರಹಗೊಂಡ ಕೃತಿಗಳಿಂದ ತಿಳಿದು ಬರುತ್ತದೆ.

ಕಾಡಿನ ಸಂಸ್ಕೃತಿ ಮತ್ತು ನಾಡಿನ ಸಂಸ್ಕೃತಿಯ ಸಂಘರ್ಷ ಪ್ರಮುಖವಾಗಿ ಎದ್ದುಕಾಣುತ್ತದೆ. ಹಾಗೆ ಇಲ್ಲಿ ರಾಜ ಪ್ರಭುತ್ವ ಮತ್ತು ಸಾಮಾನ್ಯರ ನಡುವಿನ ಸಂಘರ್ಷ ಪ್ರಮುಖವಾಗಿ ತಿಳಿಯಬಹುದಾಗಿದೆ. ಬೇಟೆ ಸಂಸ್ಕೃತಿ, ಪಶುಪಾಲನೆ ಸಂಸ್ಕೃತಿ ಮತ್ತು ಕೃಷಿ ಸಂಸ್ಕೃತಿಯನ್ನು ಸಮುದಾಯಕ್ಕೆ ಪರಿಚಯಿಸಿ ಕೊಡುವುದರಲ್ಲಿ ಈತನ ಪಾತ್ರ ಅಪಾರವಾದುದು. ಹಾಗಾಗಿ ಈತನು ಒಬ್ಬ ಸಾಂಸ್ಕೃತಿಕ ದೈವನಾಗಿ ಸಮುದಾಯದಲ್ಲಿ ಉಳಿಸಿಕೊಂಡಿರಬೇಕು. ಬುಡಕಟ್ಟು ಸಮುದಾಯದಲ್ಲಿ ಜನಿಸಿದ ಈತನು ಇತರೆ ನಾಗರಿಕ ಸಮುದಾಯಗಳಿಂದಲೇ ಮೇಲಾದ ಪ್ರಶಂಸೆಗೆ ಒಳಗಾದವರು ಪಾಪನಾಯಕ, ತಿರುಪತಿಯಾತ್ರೆ ಮಾಡಿದ್ದು ಮೊಟ್ಟ ಮೊದಲ ಉದಾಹಣೆಯಾಗಿದೆ. ಸಸ್ಯ, ಪಶುಗಳು, ಕಾಡುಪ್ರಾಣಿಗಳು ಮತ್ತು ಸರಿಸೃಪ ವರ್ಗಕ್ಕೆ ಸೇರಿದ ಹಾವಿನ ಜೊತೆಗೆ ಪಾಪನಾಯಕ ಸಂಬಂಧ ಹೊಂದಿರುವಂತಹದು ಮಹತ್ವದ ವಿಚಾರವಾಗಿದೆ.

ಶೈವ ಮತ್ತು ವೈಷ್ಣವ ನಡುವೆ ಸೌಹಾರ್ದತೆಗೆ ಈತ ಕಾರಣನಾಗಿದ್ದ. ಯಾಕೆಂದರೆ ಶೈವ ಪಂಥಕ್ಕೆ ಸೇರಿದ್ದು, ವೈಷ್ಣವನಾದ ತಿರುಪತಿ ವೆಂಕಟೇಶ್ವರನ ದರ್ಶನದಿಂದ ಪವಾಡ ಪುರುಷನಾದ. ತನ್ನ ಪವಾಡಗಳ ಮೂಲಕವೇ ಒಡೆದು ಹೋದ ಕುಟುಂಬಗಳನ್ನು ಒಂದು ಗೂಡುವಂತೆ ಮಾಡುತ್ತಾನೆ ಮತ್ತು ಕಾಡುಗೊಲ್ಲರಿಗೂ ಹಾಗೂ ಮ್ಯಾಸಬೇಡರಿಗೂ ಬಾಂಧವ್ಯ ಬೆಳೆಸುವುದರಲ್ಲಿ ಪ್ರಮುಖ ಪಾತ್ರವಹಿಸುತ್ತಾನೆ.

ಜಗಳೂರು ಪಟ್ಟಣದಲ್ಲಿ ಕೋಟೆ, ಕಂದಕ, ಪಾದಕಟ್ಟೆ, ಗದ್ದಿಗೆ, ತಪಸ್ಸಿನ ಸ್ಥಳಗಳು ಇತರ ಅವಶೇಷಗಳಿವೆ. ಜಗಳೂರಜ್ಜನು ತಪಸ್ಸು ಮಾಡಿದ್ದು ಎಂದು ಹೇಳಲಾಗುವ ದೇವಾಲಯವಿದೆ. ಇಂದಿಗೂ ಹಬ್ಬ ಜಾತ್ರೆಗಳು ಜರುಗುತ್ತವೆ. ಆಗಾಗ ಬೇಟೆ ಕಡಿದು ಪರುವು ನಡೆಯುವುದು. ಇಲ್ಲಿ ಬೇಟೆ ಕಡಿದರೆ ಮೊದಲು ಮೊಣಕಾಲು ಕಡಿದು ಬೇಟೆಯನ್ನು ಮೂರು ಹೆಜ್ಜೆ ನಡೆಸಿ ನಂತರ ತಲೆ ಕಡಿಯುತ್ತಾರೆ. ಈ ಸನ್ನಿವೇಶ ಜಗಳೂರು ಪಾಪನಾಯಕನ ಸಾವಿನ ಸಂಕೇತವನ್ನು ಸೂಚಿಸುತ್ತದೆ.

ಜಗಳೂರಜ್ಜನ ದೇವಾಲಯವನ್ನು ಆಧುನಿಕವಾಗಿ ಕಟ್ಟಿಸಿದ್ದು ದೇಗುಲವು ಸಂಸ್ಕೃತಿಯ ಸೌಂದರ್ಯಕ್ಕೆ ಪ್ರತೀಕದಂತಿದೆ. ಇತರೆಡೆಗಳಲ್ಲಿ ಈತನ ದೇವಾಲಯ ಗುಡಿಗಳಿವೆ ಅಲ್ಲದೆ ಈತನ ಅನುಯಾಯಿಗಳಿದ್ದಾರೆ. ಹಾಗೆಯೇ ಬೇಡರು ಮಾತ್ರವಲ್ಲದೆ ಬೇರೆ ಬೇರೆ ಸಮುದಾಯದವರು ಈತನನ್ನು ಪೂಜಿಸುತ್ತಾರೆ. ಜಗಳೂರಿನಲ್ಲಿ ಈತನ ದೇವಸ್ಥಾನದ ಬಳಿ ಬಿಡುವಿನ ವೇಳೆಯಲ್ಲಿ ಜವಳಿತಗಿಸುವ ಪರಂಪರೆ ಬೆಳೆಸಿಕೊಂಡು ಬಂದಿದ್ದಾರೆ. ಕೊನೆಗೆ ಜಗಳೂರು ಪಾಪನಾಯಕ ಕ್ರೂರ ಅರಸನಿಂದ ದುರಂತ ಸಾವನ್ನಪ್ಪುತ್ತಾನೆ.

ಒಟ್ಟಾರೆಯಾಗಿ ಪಾಪನಾಯಕನು ಮಾನವೀಯತೆಯನ್ನು, ಅಹಿಂಸೆಯನ್ನು, ಹಾಗೆಯೇ ಅರಾಜಕತೆ, ಹಿಂಸೆ ಕೊಲೆ, ಸುಲಿಗೆ, ಅನಾಗರಿಕತೆಯನ್ನು ವಿರೋಧಿಸುತ್ತಾನೆ. ನಾಗರೀಕ ಸಮಾಜದಲ್ಲಿ ಸರ್ವರಿಗೂ

ಅನುಕೂಲವಾಗುವಂಥ ಸ್ಥಿತಿಗತಿಯನ್ನುಂಟು ಮಾಡಿದ್ದಾನೆ. ಜನಪದ ಕಾಳಜಿಯುಳ್ಳವನು ಶೋಷಿತರಪರವಾಗಿಯೇ ಇದ್ದು ಸಾಂಸ್ಕೃತಿಕವಾಗಿ ಸಮುದಾಯವನ್ನು ಉತ್ತಮ ಮಾರ್ಗದಲ್ಲಿ ಕೊಂಡೊಯ್ಯುವವನು ಆಗಿದ್ದನೆಂಬುದು ತಿಳಿದು ಬರುತ್ತದೆ.

ನಾಯಯಯನಹಟ್ಟಿ ತಿಪ್ಪೇಸ್ವಾಮಿ

ಮ್ಯಾಸಬೇಡರ ಸಾಂಸ್ಕೃತಿಕ ನಾಯಕರಲ್ಲಿ ತಿಪ್ಪೇಸ್ವಾಮಿ ಒಬ್ಬ. ಮ್ಯಾಸಬೇಡರ ಸಮುದಾಯದ ಆರಾಧ್ಯ ದೈವನಾಗಿದ್ದು ಈತನ ಸಮಾಧಿ ಸ್ಥಳ ಎಂದು ಹೇಳಲಾಗುವ ಹೊರಮಠ ಮುಸ್ಲಿಂ ವಾಸ್ತುಶಿಲ್ಪ, ಮಾಂಸ ಎಡೆಕೊಡುವ ಪದ್ಧತಿ, ಮ್ಯಾಸಬೇಡರ ಕುಲದ ಪೂಜಾರಿ, ಕೊಬ್ಬರಿ ಸುಡುವುದು ಇತ್ಯಾದಿಗಳೆಲ್ಲ ಈತನ ಬದುಕು ಸಂಕೀರ್ಣವಾದುದು ಎಂಬುದನ್ನು ಸೂಚಿಸುತ್ತವೆ. ಶೈವನಾಥ ಸಿದ್ಧನಾಗಿದ್ದ ಈತನು ನಾಯಕನಹಟ್ಟಿ ಸುತ್ತಮುತ್ತಲಿನ ಭಾಗದಲ್ಲಿ ಏಳುಕೆರೆ ಮತ್ತು ಪುರಗಳು ಕಟ್ಟಿಸುವುದರ ಮೂಲಕ ಮ್ಯಾಸಬೇಡರನ್ನು ಒಂದೆಡೆ ನೆಲೆ ನಿಲ್ಲುವಂತೆ ಮಾಡಲು ಪ್ರಯತ್ನಿಸುತ್ತನೆ. ಆ ಮೂಲಕ ಅವರ ಜೀವನ ಪದ್ಧತಿ ಬದಲಾವಣೆ ಗೊಳ್ಳುವಂತೆ ಮಾಡಿದ್ದಾನೆ. ಅದಕ್ಕಾಗಿ ಅವರ ಆಹಾರ ಪದ್ಧತಿಯನ್ನು ಒಪ್ಪಿಕೊಳ್ಳುವುದರ ಮೂಲಕ ಮ್ಯಾಸಬೇಡರನ್ನೇ ಪೂಜಾರಿಯಾಗಿ ಸ್ವೀಕರಿಸಿದ್ದಾನೆ. ತಿಪ್ಪೆಯ ಮೇಲಿನ ಪ್ರಸಂಗ ಹರಳಯ್ಯನ ಮನೆಯ ಊಟದ ಪ್ರಸಂಗ ಮಾಂಸಹಾರ ಪದ್ಧತಿ, ತನ್ನ ಸುತ್ತಮುತ್ತಲಿನ ಸ್ಥಳಗಳನ್ನೇ ಪವಿತ್ರೀಕರಿಸುವುದು ಇತ್ಯಾದಿ ಕೀಳೆಂದು ಪರಿಗಣಿಸಲ್ಪಟ್ಟ ಸಂಗತಿಗಳನ್ನು ಆತ ಮೌಲೀಕರಿಸುತ್ತಾನೆ.

ನಾಯಕನಹಟ್ಟಿಯು ಮ್ಯಾಸಬೇಡರ ೧೨ ಪೆಟ್ಟಿಗೆ ದೇವರುಗಳ ಪ್ರಮುಖ ಸ್ಥಳವಾಗಿದೆ. ಶ್ರೀಶೈಲದ ಕಡೆಯಿಂದ ಬಂದು ವಾಸಮಾಡುತ್ತಿರುವ ಮ್ಯಾಸಬೇಡರಿಗೆ ತಿಪ್ಪೇಸ್ವಾಮಿ ಕುಲದೈವವಾಗಿ ಆರಾಧನೆಗೊಳ್ಳುತ್ತಿದ್ದಾನೆ. ಈತನಿಗೆ ಸಂಬಂಧಿಸಿದಂತೆ ನಮಗೆ ಲಿಖಿತವಾದ ಮಾಹಿತಿಗಳು ದೊರೆಯುವುದಿಲ್ಲ. ಆದರೆ ತಿಪ್ಪೇಸ್ವಾಮಿಯ ಜೀವನದ ಬಗೆಗಿನ ಮೌಖಿಕ ವಿವರಗಳು ಈತನು ಬದುಕಿದ್ದ ಪರಿಸರ ಬಗೆಗೆ ಮಾಹಿತಿಯನ್ನು ಕೊಡುತ್ತವೆ. ಈತನು ಸುತ್ತಾಡಿದ ಹಲವಾರು ಸ್ಥಳಗಳು, ಮಠಗಳು ಸಮುದಾಯದ ಮಿತ್‌ಗಳು ಈತನ ಕಾಲದ ಕುರಿತು ಮಾಹಿತಿಗಳನ್ನು ಕೊಡುತ್ತವೆ. ಈತನ ಸಂಬಂಧವಾದ ಆಚರಿಸುವ ಹರಕೆ, ಸಂಪ್ರದಾಯ ಆಚರಣೆಗಳು, ನಂಬಿಕೆಗಳು ಈತನೊಬ್ಬ ಐತಿಹಾಸಿಕ ವ್ಯಕ್ತಿಯಾಗಿದ್ದನೆಂದೂ ತನ್ನ ಹಲವಾರು ಸಾಮಾಜಿಕ ಕಾರ್ಯಗಳಿಂದ ಅಂದು ಸಮುದಾಯದ ಬಹುಮುಖ್ಯ ಆಧಾರವಾಗಿದ್ದನೆಂದು ತಿಳಿಸುತ್ತವೆ.

ಪಂಚಗಣಾಧೀಶ್ವರರಲ್ಲಿ ಒಬ್ಬನಾದ ನಾಯಕನಹಟ್ಟಿತಿಪ್ಪೇಸ್ವಾಮಿಯ ಜೀವನ ಆಚರಣೆಗಳನ್ನು ಗಮನಿಸಿದರೆ ಈತನು ಶೈವ ನಾಥಸಿದ್ಧನಾಗಿದ್ದ ಎಂಬುದು ತಿಳಿದುಬರುತ್ತದೆ. ಈಗಲೂ ಈತನ ಜಾತ್ರೆಯಲ್ಲಿ ನಾನಾ ರಾಜ್ಯಗಳಿಂದ ಬಂದು ಸೇರುವ ಸಾಧುಗಳು, ಅಲ್ಲಿ ಮಾರಾಟವಾಗುವ ಭಂಗಿ, ಸುರೆ ಮುಂತಾದುವೆಲ್ಲ

ಈತನು ಸಿದ್ಧ ಪಂಥದವನೆಂಬುದನ್ನು ಸ್ಪಷ್ಟ ಪಡಿಸುತ್ತವೆ. ತನ್ನ ಹಲವಾರು ಪವಾಡಗಳ ಮೂಲಕ ಕೀಳೆಂದು ಪರಿಗಣಿಸಲ್ಪಟ್ಟವುಗಳನ್ನು ಮೌಲೀಕರಿಸುವ, ಅಪ್ರತಿಷ್ಠವಾದವುಗಳನ್ನು ಪ್ರತಿಷ್ಠಗೊಳಿಸುವ ಕ್ರಿಯೆಯನ್ನು ತಿಪ್ಪೇಸ್ವಾಮಿ ಮಾಡಿದ್ದಾನೆ. ಇದು ಸಿದ್ಧಪರಂಪರೆಯ ಲಕ್ಷಣ ತಿಪ್ಪೇಸ್ವಾಮಿಯ ಈ ಮುಂದಿನ ಪವಾಡಗಳನ್ನು ಗಮನಿಸಿದರೆ ಈತನು ಸಿದ್ಧ ಪಂಥದವನಾಗಿದ್ದನೆಂಬುದು ಸ್ಪಷ್ಟವಾಗುತ್ತದೆ.

ಜನ ಸಮುದಾಯದಲ್ಲಿರುವ ನಂಬಿಕೆಯ ಪ್ರಕಾರ ತಿಪ್ಪೇಸ್ವಾಮಿ ಬಾಗಳಿಂದ ನಿಡುಗಲ್ಲಿಗೆ ಬರುತ್ತಾನೆ. ನಿಡುಗಲ್ಲು ದೊರೆಗಳು ಕೃಷಿ ಭೂಮಿಗಾಗಿ ಕಾಲುವೆಗಳನ್ನು ತೆಗೆಸುತ್ತಿದ್ದು ಅಲ್ಲಿ ಕೂಲಿಯಾಳುಗಳೊಂದಿಗೆ ಸಂಘರ್ಷಕ್ಕಿಳಿಯುತ್ತಾನೆ. ಅವರು ಕಳ್ಳಿ ಹಾಲನ್ನು ಕುಡಿಸುತ್ತಾರೆ. ತಾವೇ ತೋಡಿದ ಕಾಲುವೆಯಲ್ಲಿ ತಿಪ್ಪೇಸ್ವಾಮಿಯನ್ನು ಮುಚ್ಚಿಹಾಕುತ್ತಾರೆ. ಕೂಲಿಯಾಳುಗಳು ಊರುಸೇರುವದೊಳಗೆ ಅಲ್ಲಿ ಪ್ರತ್ಯಕ್ಷನಾಗುತ್ತಾನೆ. ಇದು ತಿಪ್ಪೇಸ್ವಾಮಿಗೆ ಸಾಧ್ಯವಾಗಿದ್ದು ಆತ ಸಿದ್ಧಪಂಥದ ಸಾಧಕನಾಗಿರುವುದರಿಂದಲೇ ಏಕೆಂದರೆ ಸಿದ್ಧ ಪಂಥದಲ್ಲಿ ಯೌಗಿಕ ವಿದ್ಯೆಗೆ ಅಪಾರವಾದ ಮಹತ್ವವಿದೆ. ಯೋಗ ನೈಪುಣ್ಯದಿಂದ ಫರ್ಹಾ (ಸಮಾಧಿ) ಸ್ಥಿತಿಗೆ ಹೋಗುವುದು ಸಾಧ್ಯವಿದೆ.

ನಿಡುಗಲ್ಲಿನಿಂದ ರಾಯದುರ್ಗಕ್ಕೆ ಬಂದ ತಿಪ್ಪೇಸ್ವಾಮಿ ಅಲ್ಲಿ ಕೆಂಪಯ್ಯನ ವೈಭವದ ಮೆರವಣಿಗೆ ಹೋಗುತ್ತಿರುವುದನ್ನು ನೋಡುತ್ತಾನೆ. ತಿಪ್ಪೆಯ ಮೇಲೆ ಹುಚ್ಚನಂತೆ ನಿಂತು ಆತನ ಆಡಂಬರವನ್ನು ಹಾಸ್ಯಮಾಡುತ್ತಾನೆ. ಇದರಿಂದ ಪ್ರತಿಷ್ಠಿತ ಎನಿಸಿಕೊಳ್ಳುವ ಜೀವನದ ಬಗ್ಗೆ ಕೆಂಪಯ್ಯ ತಿರಸ್ಕಾರ ಹೊಂದಿ ಬದಲಾಗುತ್ತಾನೆ. ಈ ರೀತಿ ತಿಪ್ಪೆಯ ಮೇಲೆ ನಿಂತು ಪವಾಡ ಮಾಡಿದ್ದಕ್ಕಾಗಿಯೇ 'ತಿಪ್ಪೇಸ್ವಾಮಿ' ಎನ್ನುವ ಹೆಸರು ಬಂತು ಎಂದು ನಾಯಕನಹಟ್ಟಿ ಭಾಗದಲ್ಲಿರುವ ಜನರು ಹೇಳುತ್ತಾರೆ. ವೈದಿಕ ಸಮುದಾಯದಲ್ಲಿ ಕೀಳೆಂದು ಭಾವಿಸಲ್ಪಟ್ಟ ತಿಪ್ಪೆಯ ಮೇಲೆ ನಿಂತು ಆಡಂಬರದ ಮೆರವಣಿಗೆಯನ್ನು ವಿರೋಧಿಸುವುದು ಏನನ್ನು ಸೂಚಿಸುತ್ತದೆ? ಈತನ ಹುಚ್ಚುತನ ಯಾವುದರ ಸಂಕೇತ?

ತಿಪ್ಪೇ ತಿಪ್ಪೆಂದರೆ ತಿಪ್ಪೇಯ ತಿರುಪಣ್ಣ
ತಿಪ್ಪೇ ಮೇಲಿಪ್ಪೆ ಮರನುಟ್ಟಿ | ತಿಪ್ಪೇಸ್ವಾಮಿ
ತಾವೊಳ್ಳೆದೆಂದು ನೆಲೆನಿಂತು ||

(ಡಾ.ಕೃಷ್ಣಮೂರ್ತಿಹನೂರು, ಪು.೨೮೦: ೧೯೯೩)

ಈ ಪದ್ಯದಲ್ಲಿ ತಿಪ್ಪೇಸ್ವಾಮಿ ತಿಪ್ಪತಾವೊಳ್ಳೆದೆಂದು ನೆಲೆನಿಂತ ಬಗ್ಗೆ ಉಲ್ಲೇಖವಿದೆ. ಇದು ಏನನ್ನು ಸೂಚಿಸುತ್ತದೆಂದರೆ ಸಾಮಾನ್ಯವಾಗಿ ಸಿದ್ಧಪಂಥದ ಯೋಗಿಗಳು ವೈದಿಕ ವಿರೋಧಿ ಅಂಶಗಳನ್ನು ತಮ್ಮ ಜೀವನದಲ್ಲಿ ಹಠದಿಂದ ಮೌಲೀಕರಿಸುವ ಪ್ರಯತ್ನ ಮಾಡುತ್ತಾರೆ. ತಿಪ್ಪೇಸ್ವಾಮಿ ಜೀವನದಲ್ಲಿ ಬರುವ ತಿಪ್ಪೆ, ಮಾಂಸ, ಭಂಗಿ ಇವೆಲ್ಲವುಗಳೂ ಪ್ರತಿಷ್ಠಿತ ಎನಿಸಿಕೊಳ್ಳುವ ವೈದಿಕ ಧರ್ಮ ವಿರೋಧಿಸುವಂತಹವುಗಳಾಗಿವೆ.

ಪಲ್ಲಕ್ಕಿಯ ಮೆರವಣಿಗೆ ಆಡಂಬರ ಇವೆಲ್ಲವುಗಳನ್ನು ಕೆಂಪಯ್ಯ ರೂಢಿಸಿಕೊಳ್ಳುತ್ತಿದ್ದ ವೈದಿಕ ಸಂಸ್ಕೃತಿಯ ಪ್ರತೀಕವಾಗಿದ್ದು, ಅದನ್ನು ಅತ್ಯಂತ ನಿಕೃಷ್ಟ ಎನಿಸಿಕೊಳ್ಳುವ 'ತಿಪ್ಪೆಯ' ಮೇಲೆ ನಿಂತು ವಿರೋಧಿಸುವ ಮೂಲಕ ಆತನಿಗೆ ಬುದ್ಧಿಕಲಿಸುತ್ತಾನೆ. ಇದು ಸಿದ್ಧ ಪಂಥದ ಪ್ರತೀಕವಾಗಿದ್ದು ಈ ಪರಂಪರೆಯಲ್ಲಿನ ಸಿದ್ಧರು ಸಾಮಾನ್ಯವಾಗಿ ಕೆಳವರ್ಗದಿಂದ ಬಂದವರಾಗಿದ್ದು ತಮ್ಮ ಜೀವನದಲ್ಲಿ ಕಂಡುಬರುವ ಸಾಮಾನ್ಯ ವಿಷಯಗಳಿಂದಲೇ ಪ್ರತಿಷ್ಠಿತ ಎನಿಸಿಕೊಳ್ಳುವ ಅಂಶಗಳನ್ನು ವಿರೋಧಿಸುತ್ತಾರೆ. ಅದಕ್ಕಾಗಿ ಅವರು ನಿತ್ಯಬದುಕಿನಲ್ಲಿ ಕೀಳೆಂದು ತುಚ್ಚೀಕರಿಸಲ್ಪಟ್ಟ ಅಂಶಗಳನ್ನು ತೆಗೆದುಕೊಳ್ಳುತ್ತಾರೆ. ತಿಪ್ಪೇಸ್ವಾಮಿ ಜೀವನದಲ್ಲಿ ಬರುವ ತಿಪ್ಪೆ, ಮಾಂಸ ಇವೆಲ್ಲವುಗಳನ್ನು ಅಪ್ರತಿಷ್ಠಿತವಾದವುಗಳನ್ನು ಮೌಲೀಕರಿಸುವ ಸಂಕೇತವಾಗುತ್ತವೆ. ಇದಕ್ಕೆ ಮುಖ್ಯವಾಗಿ ಸಿದ್ಧ ಪಂಥದಲ್ಲಿನ ಯೋಗಿಗಳು ಹೆಚ್ಚಾಗಿ ನಿಮ್ನ ವರ್ಗದಿಂದ ಬಂದವರಾಗಿರುವುದು ಕಾರಣವಾಗಿದೆ. ಕೀಳನ್ನು ಮೌಲೀಕರಿಸುವ ಇಲ್ಲವೆ ಪ್ರತಿಷ್ಠಿತ ಎನಿಸಿಕೊಳ್ಳುವ ಮೌಲ್ಯಗಳನ್ನು ಒಡೆಯುವ ತಿಪ್ಪೇಸ್ವಾಮಿಯ ಆತನ ಜೀವನದಲ್ಲಿ ಹಲವಾರು ಬಾರಿ ಪವಾಡಗಳೊಂದಿಗೆ ಕಂಡು ಬರುತ್ತಾನೆ.

ನಾಯಕನಹಟ್ಟಿಯ ದೊರೆ ಬೋಡಿಮಲ್ಲಪ್ಪನಾಯಕ ಏಳುಕೆರೆ ಏಳುಪುರಗಳನ್ನು ಕಟ್ಟುವಲ್ಲಿ ತಿಪ್ಪೇಸ್ವಾಮಿಯು ನೆರವಾಗುತ್ತಾನೆ. ಈ ಕೆಲಸಗಳನ್ನು ಮುಗಿಸಿ ದೊರೆ ತಿಪ್ಪೇಸ್ವಾಮಿಗೆ ಎಪ್ಪತ್ತೇಳು ಬಿರುದಾವಳಿಗಳನ್ನು ಅರ್ಪಿಸಿ ಕಾಶಿವಿಶ್ವನಾಥ, ರಾಮೇಶ್ವರಕ್ಕೆ ಹೋಗಬೇಕೆಂದು ಇಚ್ಛೆ ವ್ಯಕ್ತಪಡಿಸುತ್ತಾನೆ. ಆಗ ತಿಪ್ಪೇಸ್ವಾಮಿ ದೊರೆ ಹಾಗೂ ಪರಿವಾರದವರನ್ನು ಹಿರೇಕೆರೆಯ ತೂಬಿನ ಹತ್ತಿರ ಕರೆದುಕೊಂಡು ಬಂದು ಹರದಾರಿದೂರ ಹೋಗಿ, ಪೂರ್ವಕ್ಕೆ ಮಠಕಾಣುವುದು ಅಲ್ಲಿರುವುದೇ ಕಾಶಿವಿಶ್ವನಾಥ. ಅಲ್ಲಿಂದ ದಕ್ಷಿಣಕ್ಕೆ ಲಿಂಗವಿದೆ. ಇವುಗಳ ದರ್ಶನ ಪಡೆದರೆ ಕಾಶಿ ರಾಮೇಶ್ವರಗಳ ದರ್ಶನ ಪಡೆದಂತಾಗುತ್ತದೆ ಎಂದು ಹೇಳುತ್ತಾನೆ. (ಚಂದ್ರಶೇಖರ ವಿ. ದಾವಣಗೆರೆ, ಪು.೨೫.೨೦೦೨) ಆ ಮೂಲಕ ಪ್ರತಿಷ್ಠಿತ ಎನ್ನುವ ತೀರ್ಥಕ್ಷೇತ್ರಗಳನ್ನು ನಿರಾಕರಿಸಿ ತನ್ನ ನೆಲವನ್ನೇ ಪವಿತ್ರೀಕರಿಸುತ್ತಾನೆ.

ಮತ್ತೊಮ್ಮೆ ಹಲವಾರು ಜನ ತೀರ್ಥಕ್ಷೇತ್ರಕ್ಕೆ ಹೊರಟಾಗ ಅವರಲ್ಲಿ ಒಬ್ಬನಿಗೆ ಮಣ್ಣಿನ ಮಡಿಕೆಯ ಚೂರೊಂದನ್ನು ಕೊಟ್ಟು ಉಡುದಾರಕ್ಕೆ ಕಟ್ಟಿಕೊಳ್ಳಲು ಹೇಳುತ್ತಾನೆ. ಅವರೆಲ್ಲ ತೀರ್ಥಕ್ಷೇತ್ರಗಳನ್ನು ಸಂದರ್ಶಿಸಿ ಮರಳಿ ಬಂದಾಗ ಮಡಿಕೆ ಚೂರು ಬದಲಾವಣೆ ಆಗದಿದ್ದುದನ್ನು ಕಂಡು ಬರೀ ನೀರಿನಲ್ಲಿ ಮುಳುಗಿದರೆ, ಕಾಶಿ ರಾಮೇಶ್ವರಗಳಿಗೆ ಕೈ ಮುಗಿದರೆ ಮಾತ್ರ ಯಾವುದೇ ಬದಲಾವಣೆ ಆಗಲಾರದು ಬದಲಾವಣೆ ಅಂತರಂಗದಲ್ಲಿ ಸಂಭವಿಸಬೇಕಿದೆ ಎಂದು ಎಲ್ಲರನ್ನು ಕರೆದುಕೊಂಡು ತಾವೇ ನಿರ್ಮಿಸಿದ ಕಾಶೀಪುರದ ಕಾಲುವೆಯಲ್ಲಿ ಆ ಮಡಿಕೆಯ ಚೂರನ್ನು ಅದ್ದಿ ತೆಗೆದಾಗ ಆ ಮಡಿಕೆ ಚೂರು ಬಂಗಾರವಾಗುತ್ತದೆ. (ಅದೇ ಪು.೨೬)

ಈ ಮೇಲಿನ ಎರಡು ಪವಾಡಗಳು ಸ್ಥಳೀಯತೆಯನ್ನು ಮೌಲೀಕರಿಸುವ ಪ್ರಯತ್ನದಿಂದ ಕೂಡಿದವುಗಳಾಗಿವೆ. ತಿಪ್ಪೇಸ್ವಾಮಿ ತನ್ನ ಜೀವನದಲ್ಲಿನ ಈ ತರಹದ ಪವಾಡಗಳ ಮೂಲಕ ಸಾಮಾನ್ಯ ಜನಜೀವನಕ್ಕೆ ಹತ್ತಿರವಾಗುವ ಹಾಗೂ ಅವರ ಬದುಕಿನ ಸಾಮಾನ್ಯ ಅಂಶಗಳನ್ನು ಮೌಲೀಕರಿಸುವ ಮೂಲಕ ಸಮುದಾಯದಲ್ಲಿ ಬದುಕುವ ಚೈತನ್ಯವನ್ನು ಉತ್ಸಾಹವನ್ನು ವಿಶ್ವಾಸವನ್ನು ತುಂಬುತ್ತಿದ್ದಾನೆ.

ತಿಪ್ಪೇಸ್ವಾಮಿ ನಾಯಕನ ಹಟ್ಟಿಗೆ ಬರುವಾಗ ಕತ್ತಲಾಗಿದ್ದರಿಂದ ಫಣಿಯಪ್ಪ ತನ್ನಲ್ಲಿರುವ ಕೊಬ್ಬರಿ ಸುಟ್ಟು ಬೆಳಕು ಮಾಡಿ ದಾರಿಕಾಣುವಂತ ಮಾಡುತ್ತಾನೆ. ಇದರ ನೆನಪಿಗೆ ಈಗಲೂ ಜಾತ್ರೆಯ ಸಂದರ್ಭದಲ್ಲಿ ಕೊಬ್ಬರಿಯನ್ನು ಸುಡಲಾಗುತ್ತದೆ. ಈ ರೀತಿ ಉತ್ಸವಗಳಲ್ಲಿ ಬೆಳಕನ್ನು ಆರಾಧಿಸುವುದು ನಾಥಸಿದ್ಧರ ಸಂಕೇತವಾಗಿದೆ.

ತಿಪ್ಪೇಸ್ವಾಮಿಯನ್ನು ಶೈವ ನಾಥಸಿದ್ಧನೆನ್ನಲು ಅಕ್ಷಯ ಬುತ್ತಿ ಪವಾಡ, ಸತ್ತೆಮ್ಮೆ ಬದುಕಿಸಿ ಹಾಲುಕರೆಯುವುದು ವಡೇವಿಗೆ ಅಕ್ಷಯ ಶಕ್ತಿ ನೀಡುವ ಪವಾಡ ಸಾಕ್ಷಿಯಾಗಿದೆ. ಫಣಿಯಪ್ಪನ ಜೊತೆ ರಾಯದುರ್ಗದಿಂದ ನಾಯಕನಹಟ್ಟಿಗೆ ಬರುವಾಗ ಬಿಳಿನೀರಿನ ಚಿಲುಮೆ ಹತ್ತಿರ ಊಟಕ್ಕೆ ಕುಳಿತು ಕೊಳ್ಳುತ್ತಾರೆ. ಸ್ವಲ್ಪವೇ ಇದ್ದ ಬುತ್ತಿ ಇವರಿಬ್ಬರು ಊಟ ಮಾಡಿದರೂ ತಿಪ್ಪೇಸ್ವಾಮಿ ಪವಾಡಶಕ್ತಿಯಿಂದ ಇನ್ನು ಹಾಗೆ ಉಳಿಯುತ್ತದೆ.

ಈ ರೀತಿಯಲ್ಲಿ ಬುತ್ತಿ ಅಕ್ಷಯವಾಗುವುದರ ಪವಾಡ ಮಾಡಿದ ಬಿಳಿನೀರಿನ ಚಿಲುಮೆ ಎನ್ನುವ ಸ್ಥಳ ಮೊಳಕಾಲ್ಮೂರು ತಾಲೂಕು ಕೊಂಡ್ಲಹಳ್ಳಿಯಿಂದ ಪೂರ್ವದಲ್ಲಿ ಒಂದು ಕಿಲೋಮಿಟರ್ ದೂರದಲ್ಲಿದೆ. ಇಲ್ಲೊಂದು ತಿಪ್ಪೇಸ್ವಾಮಿಯ ದೇವಸ್ಥಾನವೂ ಇದೆ. ಈ ರೀತಿ ಅಕ್ಷಯ ಬುತ್ತಿಯ ಪವಾಡ ಮಾಡಿದ ನೆನಪಿಗಾಗಿ ಈಗಲೂ ತಿಪ್ಪೇಸ್ವಾಮಿಯ ಮಾಲೆ ಹಾಕುವವರು ಅಕ್ಷಯ ಬುತ್ತಿಯನ್ನು ಕಟ್ಟಿ ತಿಪ್ಪೇಸ್ವಾಮಿಗೆ ಅರ್ಪಿಸುತ್ತಾರೆ.

ಫಣಿಯಪ್ಪನ ಮನೆಯಲ್ಲಿ ಉಳಿದುಕೊಂಡಿದ್ದ ತಿಪ್ಪೇಸ್ವಾಮಿಯನ್ನು ಭೇಟಿ ಮಾಡಲು ಸಾಕಷ್ಟು ಜನರು ಬರುತ್ತಿದ್ದರು ಹಾಗೆ ಬಂದವರಿಗೆ ಊಟೋಪಚಾರಕ್ಕಾಗಿ ಫಣಿಯಪ್ಪನ ಮನೆಯಲ್ಲಿನ ವಡೇವಿಗೆ ಅಕ್ಷಯಶಕ್ತಿಯನ್ನು ನೀಡಿದ್ದನೆಂದು ಕಥನಗಳಿಂದ ತಿಳಿದು ಬರುತ್ತದೆ. ತಿಪ್ಪೇಸ್ವಾಮಿಯಲ್ಲಿ ಇದೆ ಎಂದು ಹೇಳಲಾಗುವ ಈ ಅಕ್ಷಯ ಶಕ್ತಿ ನೀಡುವ ಪವಾಡ ಸಾಮಾನ್ಯವಾಗಿ ಎಲ್ಲ ಧಾರ್ಮಿಕ ಸಂತರಲ್ಲೂ ಕಂಡುಬರುತ್ತದೆ. ಫಣಿಯಪ್ಪನ ಮನೆಯಲ್ಲಿ ಉಳಿದುಕೊಂಡಿದ್ದ ತಿಪ್ಪೇಸ್ವಾಮಿ ಅವರ ಮನೆಯಲ್ಲಿ ಎಲ್ಲರೊಂದಿಗೆ ಕೆಲಸ ಮಾಡುತ್ತಿದ್ದ ಚಿತ್ರಣವೂ ತಿಳಿದು ಬರುತ್ತದೆ. ಇದನ್ನು ನೋಡಿದರೆ ತನ್ನ ಕೆಲಸದ ಮೂಲಕ ಅವರು ಆರ್ಥಿಕವಾಗಿ ಪ್ರಬಲರಾಗಲು ಈತ ಕಾರಣನಾಗಿರಬೇಕು. ಏಕೆಂದರೆ ತಿಪ್ಪೇಸ್ವಾಮಿ ಬಿಟ್ಟು ಹೋದ ನಂತರದಲ್ಲಿ ಫಣಿಯಪ್ಪನ ಕುಟುಂಬಕ್ಕೆ ಬಡತನ ಬರುತ್ತದೆಂದು ತಿಳಿದು ಬರುತ್ತದೆ. ತಿಪ್ಪೇಸ್ವಾಮಿಯನ್ನು ಇವರು ಧಿಕ್ಕರಿಸಿದ್ದಕ್ಕೆ ಕಾರಣ ಆತ ಹರಳಯ್ಯನ ಮನೆಯಲ್ಲಿ ಪೂಜೆ

ಮಾಡುತ್ತಿದ್ದನೆಂಬುದಾಗಿದೆ. ಒಮ್ಮೆ ಫಣೆಯಪ್ಪನೊಂದಿಗೆ ಹೊಲದಲ್ಲಿ ಕೆಲಸ ಮಾಡುತ್ತಿರುವಾಗ ಬಾನಿ ಹರಿಯುತ್ತದೆ. ಆಗ ತಿಪ್ಪೇಸ್ವಾಮಿಯನ್ನು ಮನೆಗೆ ಕಳುಹಿಸಿದ ಫಣೆಯಪ್ಪ ಅದನ್ನು ಹೋಲಿಸಿಕೊಂಡು ಬರದಿರಲು ಮಾದಿಗರ ಮನೆಗೆ ಹೋಗುತ್ತಾನೆ. ಇಲ್ಲಿ ಮಾದಿಗರ ಮನೆಯಲ್ಲಿ ತಿಪ್ಪೇಸ್ವಾಮಿ ಪೂಜೆಗೆ ಕೂತಿರುತ್ತಾನೆ. ನಂಜಾದ ಮನೆಯಲ್ಲಿ ಕೂತಿರುವ ತಿಪ್ಪೇಸ್ವಾಮಿಯ ವಿಷಯ ತಿಳಿದು ಮನೆಗೆ ಹೋಗಿ ಹೆಂಡತಿಗೆ ಕೋಪದಿಂದ ಹೇಳುತ್ತಾನೆ.

ಮಾದೀಗ ಮನಿಯಾಗೆ ಸಿವು ಪೂಜೆ ಮಾಡುತ್ತಿದ್ದ
ಸಿವು ಪೂಜೆಗೆ ನೀನು ಕರಿಬ್ಯಾಡ-ನಮ್ಮೀಗೆ
ತಕ್ಕಾದ ಸಿವುನಲ್ಲ ಅವನೀಗ

ತಿಪ್ಪೇಸ್ವಾಮಿಯನ್ನು ಮಾದಿಗರ ಮನೆಯಲ್ಲಿ ಪೂಜೆಗೆ ಕೂತಿದ್ದನ್ನು ಆಕ್ಷೇಪಿಸಿದ ಫಣೆಯಪ್ಪನನ್ನು ಕಂಡು ಆತನ ಹೆಂಡತಿ ಮಾಳಮ್ಮ

ಅಯ್ಯೊ ನಾನು ಸಾಮಿ ಎಂತ ಮಾತಾಡುತೀಯ
ಒಳಗೆ ಸಿವುಪೂಜೆಗೆ (ಐದಾರೆ) ಕುಂತವ್ರೆ ಏಸಿವನೆ
ಎಂತಾನೆ ನುಡಿಯ ನುಡಿತ್ತೀಯೋ

ಎಂದು ತಮ್ಮ ಮನೆಯಲ್ಲಿಯೇ ತಿಪ್ಪೇಸ್ವಾಮಿ ಶಿವಪೂಜೆಗೆ ಕೂತಿರುವುದನ್ನು ಹೇಳುತ್ತಾಳೆ. ತಿಪ್ಪೇಸ್ವಾಮಿಯ ಈ ಪವಾಡ ಶಕ್ತಿಯನ್ನು ಅರಿಯದ ಫಣೆಯಪ್ಪನು ಅಚ್ಚರಿ ವ್ಯಕ್ತ ಪಡಿಸುತ್ತಾನೆ. ಅಷ್ಟೋತ್ತಿಗಾಗಲೇ ಅವರ ಕೊಟ್ಟಿಗೆಯಲ್ಲಿದ್ದ ಎಮ್ಮೆ ಸತ್ತು ಹೋಗುತ್ತದೆ. ಇದರಿಂದ ತನ್ನ ತಪ್ಪಿನ ಅರಿವಾಗಿ ಫಣೆಯಪ್ಪ ತಿಪ್ಪೇಸ್ವಾಮಿಯಲ್ಲಿ ಕ್ಷಮೆ ಬೇಡುತ್ತಾನೆ. ಆಗ

ಫಣೆಯಪ್ಪ ಎಂತಾ ಮಾತು ನೀ ಆಡಿದ್ದೋ
ಎಲ್ಲರಿಗೆ ನಾನು ಮೆಲ್ಲಾಕೆ ಬಗುತ ಫಣೆಯಪ್ಪ
ನಿನ್ನ ಮನಿಯಲ್ಲಿ ಇರಲಾರೆ
ರುದ್ರಾನ ತಿಪ್ಪಯ್ಯ ಈವಾಗ ಅವನಲ್ಲಿ
ಸತ್ತೆಮ್ಮೆ ಹಾಲು ಕರೆದು ಪಾಯಸ ಮಾಡಿ
ಸುತ್ತೇಳ ಮಠಕೆ ಎಡಿಮಾಡಿ

ತಿಪ್ಪೇಸ್ವಾಮಿ ಸತ್ತೆಮ್ಮೆಯ ಹಾಲನ್ನು ಕರೆದು ಎಡಮಾಡಿದ ಏಳು ಮಠಗಳೆಂದರೆ, ಹಿರೇಮಠ, ಗೌರಿಮಠ, ಬಿಟ್ಟಬಂಡೀಮಠ, ಕಲ್ಲಪ್ಪದೇವರಮಠ, ಬಾಳೆಹಳ್ಳಿಮಠ, ನಂದಿಕೋಲುಮಠ, ಭಿಕ್ಷಾವರ್ತಿಮಠ (ಚಂದ್ರಶೇಖರ.ವಿ, ದಾವಣಗೆರೆ, ಪು-೫೫, ೨೦೦೧)

ನಾಥಸಿದ್ಧರಲ್ಲಿ ಕಂಡುಬರುವ ಮುಖ್ಯವಾದ ಲಕ್ಷಣವೆಂದರೆ ಅವರಲ್ಲಿರುವ ಯೌಗಿಕ ಶಕ್ತಿ ಮತ್ತು ವೈದ್ಯಶಕ್ತಿ. ಯೌಗಿಕ ಶಕ್ತಿಯಿಂದ ಸಿದ್ಧರು ನೂರಾರು ವರ್ಷ ಬದುಕುತ್ತಿದ್ದರು. ವೈಧ್ಯಶಕ್ತಿಯ ಮೂಲಕ

ರೋಗಗಳನ್ನು ವಾಸಿ ಮಾಡುವ ಸತ್ತವರನ್ನು ಬದುಕಿಸುವ, ಸಂತಾನಫಲ ಕೊಡುವ, ಮಿತ್‌ಗಳು ಪ್ರಚಲಿತದಲ್ಲಿವೆ. ವೈಚಾರಿಕವಾಗಿ ಆಲೋಚಿಸಿದರೆ ತಿಪ್ಪೇಸ್ವಾಮಿಯು ವಡೇವಿಗೆ ಅಕ್ಷಯ ಶಕ್ತಿ ಕೊಡುವುದಾಗಲಿ, ಅಕ್ಷಯ ಬುತ್ತಿ ಪವಾಡವಾಗಲಿ, ಸತ್ತೆಮ್ಮೆ ಹಾಲು ಕರೆಯುವುದಾಗಲಿ, ಕಟ್ಟುಕತೆಗಳೆಂದು ಹೇಳಬಹುದು. ಈ ಪ್ರಶ್ನೆ ಇರುವುದು ಈ ರೀತಿಯ ಕತೆಗಳನ್ನು ಸಮುದಾಯಗಳು ಯಾಕೆ ಸೃಷ್ಟಿಸಿದರು? ಎನ್ನುವ ಬಗ್ಗೆ ನಾಯಕನಹಟ್ಟಿ ಭಾಗದಲ್ಲಿನ ಆರ್ಥಿಕ, ಸಾಮಾಜಿಕ ಸ್ಥಿತಿಗತಿಗಳು ಇದಕ್ಕೆ ಕಾರಣ. ಮಳೆ ಬೆಳೆಯಿಲ್ಲದೆ ಬಯಲು ಸೀಮೆಯಲ್ಲಿರುವ ನಾಯಕನಹಟ್ಟಿಯ ಜನ ಬಡತನ ಅನುಭವಿಸುವವರು. ಸಾಮಾಜಿಕವಾಗಿ ಜಾತಿಪದ್ಧತಿ ವ್ಯವಸ್ಥೆಯ ಮಧ್ಯೆ ಬದುಕಿರುವವರು ತಿಪ್ಪೇಸ್ವಾಮಿಯ ವಡೇವಿಗೆ ಅಕ್ಷಯ ಶಕ್ತಿ ನೀಡುವುದು, ಅಕ್ಷಯ ಬುತ್ತಿ ಪವಾಡ, ಹರಳಯ್ಯನ ಮನೆಯಲ್ಲಿ ಶಿವಪೂಜೆ ಇವುಗಳನ್ನು ಈ ಹಿನ್ನೆಲೆಯಲ್ಲಿಯೇ ಗಮನಿಸಬೇಕು. ಸ್ವಂತ ಶಕ್ತಿಯಿಂದ ಸಾಧಿಸಲಾಗದ ಅದೆಷ್ಟೋ ಆಸೆಗಳನ್ನು ಸುಮುದಾಯಗಳು, ಸಂತರನ್ನು ಸುತ್ತ ಕಟ್ಟುವ ಮೂಲಕ ಈಡೇರಿಸಿಕೊಳ್ಳುತ್ತಿರುತ್ತವೆ. ವಾಸ್ತವದಲ್ಲಿ ತಿಪ್ಪೇಸ್ವಾಮಿ ಮಾಡಿರುವ ಕೆಲಸ ಕಾರ್ಯಗಳು ಅವರಿಗೆ ಪ್ರೇರಕವಾಗಿರುತ್ತವೆ. ವಾಸ್ತವ ಘಟನೆಗಳಿಗೆ ಸೃಜನಶೀಲತೆಯ ಮೂಲಕ ಮೆರುಗನ್ನು ನೀಡಿ ಸಮುದಾಯಗಳು ಹಾಡುಗಳನ್ನು, ಕತೆಗಳನ್ನು, ಆಚರಣೆಗಳನ್ನು ಸೃಷ್ಟಿಸಿಕೊಳ್ಳುತ್ತವೆ. ಆ ಮೂಲಕ ಸಂತನನ್ನು ಆತನ ಕಾರ್ಯಗಳನ್ನು ನೆನಪಿಟ್ಟುಕೊಂಡು ಪ್ರಸ್ತುತ ಬದುಕಿನಲ್ಲಿ ಬದುಕುವ ಚೈತನ್ಯವನ್ನು ಪಡೆಯುತ್ತಿರುತ್ತವೆ. ಶೈವನಾಥ ಸಿದ್ಧನಾದ ತಿಪ್ಪೇಸ್ವಾಮಿಯ ಜೀವನ ನಾಯಕನಹಟ್ಟಿ ಸುತ್ತಮುತ್ತಲಿನ ಬದುಕನ್ನು ಹೇಗೆ ಸ್ಥಿತ್ಯಂತರಗಳಿಸಿದನು? ಎನ್ನುವ ಕುರಿತು ಈ ಭಾಗದ ಸಮುದಾಯದ ಆರಾಧ್ಯದೈವವಾಗಿ ಈತ ಜನಪ್ರಿಯನಾಗಿದ್ದಾನೆ.

೪.೪.೫. ಕೋರಿ ಯರ್ರಮಂಚನಾಯಕ

ಯರ್ರಮಂಚನಾಯಕ ಮ್ಯಾಸಬೇಡ ಸಮುದಾಯದ ಪ್ರಮುಖ ಸಾಂಸ್ಕೃತಿಕ ವೀರ ಪಶುಪಾಲನೆಗಾಗಿ ಸಮುದಾಯ ಸಾಂಸ್ಕೃತಿಕ ಚಹರೆಗಾಗಿ ಹೋರಾಡಿ ವೀರ ಮರಣವನ್ನಪ್ಪಿದ ವೀರ. ಕೋರಿ ಅನ್ನುವುದು ಈತನ ವೃತ್ತಿಯನ್ನು ಗುರುತಿಸುವ ಹಿನ್ನೆಲೆಯಲ್ಲಿ ಬಳಕೆ ಆಗುತ್ತಿರುವ 'ಕೋರಿ' ಎಂದರೆ 'ಕಂಬಳಿ' ಎಂದರ್ಥ ಕಂಬಳಿ ಪಶುಪಾಲಕರಿಗೆ ಸದಾ ಹೆಗಲ ಮೇಲೆ ಇರುತ್ತಿತ್ತು. ಹೀಗಾಗಿ ಅವನ ಹೆಸರು ಹಿಂದೆ ಕೋರಿ ಅನ್ನುವ ಪದ ಸೇರಿಕೊಂಡಿದೆ. ಈತ ನಾಯಕನಹಟ್ಟಿಯ ಪಾಳೆಗಾರರ ವಂಶಕ್ಕೆ ಸೇರಿದ ವ್ಯಕ್ತಿ. ಹಟ್ಟಿ ಪಾಳೆಪಟ್ಟನ್ನು ಕಟ್ಟಿದ ಕಾಕಳ ನಾಯಕನಗಿಂತಲೂ ಹಿರಿಯ. ಈ ಹಿರಿತನದ ಕಾರಣದಿಂದಲೇ ಅವನಿಗೆ ಮನೆದೈವವಾದ. ಕಾಡ್ಲಕುಂಟ (ಇಂದಿನ ಖುದಾಪುರ) ಬೈರವನಿಗೆ (ಬೋರೆ ದೇವರು) ಮೊದಲು ವಾಸೆ ಕೊಯ್ಯುವ 'ಹಕ್ಕು ಪ್ರಾಪ್ತವಾಗಿತ್ತು'. ವಾಸೆ ಎಂದರೆ 'ಅಚ್ಚ ಕೆಂಪು,' ಇಲ್ಲವೆ 'ಕಪ್ಪ ಬಣ್ಣ' ಎನ್ನುವ ಅರ್ಥಗಳು ಇವೆ. 'ಪೋತರಾಜರೆಂದು ಕರೆಸಿಕೊಳ್ಳುವ ಪೂಜಾರಿವರ್ಗವು ಪೋತವನ್ನು 'ಬಾಯಿಬತ'ದಲ್ಲಿ (ಬಾಯಿಗೆ ಬಟ್ಟೆಕಟ್ಟಿಕೊಂಡು) ಸೂರ್ಯೋದಯಕ್ಕೆ ಮುನ್ನವೇ ಅಂಗಾತ ಮಲಗಿಸಿ

ಚೂರಿಯಿಂದ ಕತ್ತು ಕೊಯ್ಯುತ್ತಾರೆ. ಇದು ಒಂದು ರೀತಿಯಲ್ಲಿ 'ನೆಲಗಾವು' ಪ್ರಕ್ರಿಯೆಯನ್ನೆ ಹೋಲುತ್ತದೆ. ಹೆಣ್ಣು ದೇವತೆಗಳಿಗೆ ನಡೆಯುವ ಬಲಿಯನ್ನು 'ಗಾವು' ಎಂದು ಕರೆದರೆ ಗಂಡು ದೇವರುಗಳಿಗೆ ಬಲಿ ನೀಡುವ ವಿಧಾನವನ್ನು 'ವಾಸೆ' ಎಂದು ಕರೆದಿದ್ದಾರೆ. 'ವಾಸೆ' ಪ್ರಾಣಿಯ ಮಾಂಸವನ್ನು ಅಣ್ಣ ತಮ್ಮಂದಿರಿಗೆ ಬಿಟ್ಟರೆ ಬೇರೆಯಾರಿಗೂ ಒಂದು ತುಂಡನ್ನು ಕೂಡ ಕೊಡುವುದಿಲ್ಲ. ಇದನ್ನು 'ಬಂಗಾರದ ತುಂಡು' ಎನ್ನುತ್ತಾರೆ. ಊಟವಾದ ನಂತರ ಮೂಳೆಗಳನ್ನು ಬಿಸಾಡುವುದಿಲ್ಲ. ನಾಯಿ-ನರಿಗಳು ಮುಟ್ಟಿ ಅಪವಿತ್ರಗೊಳಿಸುತ್ತವೆ ಎನ್ನುವ ನಂಬಿಕೆ ಇವರದು. ಹಗಾಗಿ ಒಂದು ಗುಂಡಿಯನ್ನು ತೆಗೆದು ಅದರಲ್ಲಿ ಹೂತುಬಿಡುತ್ತಾರೆ. ಮ್ಯಾಸಬೇಡರಲ್ಲಿ ಇದೊಂದು ಪವಿತ್ರ ಸಂಪ್ರದಾಯದ ಆಚರಣೆಯಾಗಿ ಜೀವಂತವಾಗಿದೆ.

ಇವರು ಬೈರವನನ್ನು 'ಉದ್ಭವ ದೇವರು' ಎಂದು ಕರೆಯುತ್ತಾರೆ. ನೆಲದಿಂದ ಮೇಲಕ್ಕೆ ಒರಟೊರಟಾದ ಕಲ್ಲೊಂದು ಎದ್ದಿದ್ದು ಅದು ಲಿಂಗಾಕಾರವನ್ನು ಹೋಲುತ್ತದೆ. ಪಶುಪಾಲಕರು ತಮ್ಮ ದನಗಳನ್ನು ಇಲ್ಲಿ ಮಲಗಿಸಿದಾಗ, ದನಗಾಹಿಗಳು ಎತ್ತುಗಳಿಗೆ ವತ್ತುತ್ತದೆ ಎಂದು ಕಲ್ಲುಚಿಪ್ಪು ಎಗರಿಸಿದರು. ಆಗ ಕನಸಿನಲ್ಲಿ ಭೈರವ ಬಂದು ನಾನಿಲ್ಲಿ ಒಡಮೂಡಿದ್ದೇನೆ ಎಂದು ಹೇಳಿದಾಗ ಇವರು ಆ ಕಲ್ಲನ್ನು ದೇವರನ್ನಾಗಿ ಮಾಡಿಕೊಂಡರು. ಇಲ್ಲಿ ಅನೇಕ ಆಚರಣೆಗಳು ನಡೆಯುತ್ತವೆ. ಈ ದೇವರಿಗೆ ವಾಸೆಕೊಯ್ಯಲು ಆಚರಣೆ ನಡೆಯುತ್ತದೆ. ಹಿಂದೆಯರಮಂಚನಾಯಕರ ಕೆಂಪು ಹೋತವನ್ನು ಹಿಂದಿಕ್ಕಿ ತನ್ನ ಕಪ್ಪು ಹೋತವನ್ನು ವಾಸೆ ಕೊಯ್ದನಂತೆ. ಯರಮಂಚನಾಯಕ ಈ ಪ್ರಥಮ ಹಕ್ಕನ್ನು ಉಲ್ಲಂಘಿಸಿದಕ್ಕೆ ಒಂದು ಕಾರಣವೂ ಇತ್ತು. ಯರಮಂಚನಾಯಕನಿಗೆ ಕೊಳಗಲು ಬೊಮ್ಮ ಎಂಬ ಭಾಮೈದುನನಿದ್ದ, ಅವನು ದರ್ಪ ದೌರ್ಜನ್ಯಗಳಿಂದ ಮೆರೆಯುತ್ತಿದ್ದ. ಮ್ಯಾಸ ಮಂಡಲದಲ್ಲಿ 'ರಜಸ್ಸು' ಆದ ಪ್ರತಿ ಕನ್ಯೆಯನ್ನು ಆತನಿಗೆ ಅರ್ಪಿಸಬೇಕಿತ್ತು. ಜೊತೆಗೆ ತಮ್ಮ ಪಶುಗಳೊಂದಿಗೆ ತಂದ ಹನ್ನೆರಡು ಪೆಟ್ಟಿಗೆ ದೇವರುಗಳನ್ನು ತೆಗೆದುಕೊಂಡು ಹೋಗಿ ನರಕದ ಕೋಟೆಯೊಳಗೆ ಇಟ್ಟು, ಅವುಗಳಿಗೆ ಪೂಜೆ ಇಲ್ಲದಂತೆ ಮಾಡಿದ್ದ. ಇವನ ಕಾಟದಿಂದ ಇಡೀ ಮ್ಯಾಸಮಂಡಲವೇ ಬೇಸತ್ತು ಹೋಗಿತ್ತು. ಯರ್ರಮಂಚನಾಯಕನು ಇವನನ್ನು ನಿಯಂತ್ರಿಸಲಿಲ್ಲ, ಸಡಿಲಬಿಟ್ಟಿದ್ದ, ಇದರಿಂದ ಒಳಗೊಳಗೇ ಕುದಿಯುತ್ತಿದ್ದ ಮ್ಯಾಸಬೇಡರ ಹಿರಿಯರು ಕಾಕಳನಾಯಕನಿಗೆ ಕುಮ್ಮಕ್ಕು ಕೊಟ್ಟು ಯರ್ರಮಂಚನಾಯಕನ ಪ್ರಥಮ ವಾಸೆ ಹಕ್ಕನ್ನು ಉಲ್ಲಂಘಿಸುವಂತೆ ಮಾಡಿದ್ದರು. ನಂತರ ಬಂದ ಯರ್ರಮಂಚನಾಯಕ ವಾಸೆ ಆಗಿ ಹೋಗಿರುವುದನ್ನು ನೋಡಿ ತನಗೆ ಅವಮಾನವಾಯಿತೆಂದು ಕೊಂಡ ಒಂದೇ ಕಾಯಿ ಒಂದೇ ಕೆಂಪು ಹೋತ ಒಬ್ಬನೇ ಹುಡುಗನನ್ನು ಬಳಸಿ ಏಳು ಬಾರಿ ವಾಸೆ ಕೊಯ್ದು ಪ್ರತಿಬಾರಿ ವಾಸೆ ಕೊಯ್ದಾಗಲೂ ಹೋತು ಬದುಕಿ ಬರುತ್ತಿತ್ತು. ಒಡೆದ ಕಾಯಿ ಕೂಡಿಕೊಳ್ಳುತ್ತಿತ್ತು, ಸತ್ತ ಹುಡುಗ ಬದುಕುತ್ತಿದ್ದ. ಹೀಗೆ ಪವಾಡ ಮಾಡಿ ಮೆರೆದು ಯರ್ರಮಂಚನಾಯಕ ತನ್ನ ಸತ್ಯ ತೋರಿಸಿದ. ಈ ಪವಾಡಗಳು ಸಮುದಾಯದ ಹಿರಿಯರನ್ನು ತನ್ನತ್ತಿರ ಗಮನ ಸೆಳೆದುಕೊಳ್ಳುವುದಕ್ಕೆ ಪ್ರಮುಖ ಆಕರಗಳಾದವು.

ಅಷ್ಟರಲ್ಲಿ ಇಡೀ ಮ್ಯಾಸಮಂಡಲ ಕೊಳಗಲ ಬೊಮ್ಮನ ನಿಗ್ರಹಕ್ಕೆ ಬೋರೇ ದೇವರ ಮೊರೆ ಬಿತ್ತು. ಬೋಸೆರಂಗನ ಒಕ್ಕಲಿನವನೊಬ್ಬನು ಬೊಮ್ಮನ ನರಕದ ಕೋಟೆ ಹೊಕ್ಕು ಹನ್ನೆರಡು ಪೆಟ್ಟಿಗೆ ದೇವರುಗಳನ್ನು ಬೋರೆ ದೇವರ ಸನ್ನಿಧಿಗೆ ತಂದು ಒಪ್ಪಿಸಿದ ಇದರ ಹಿಂದೆಯೇ ಬೊಮ್ಮನ ಸಾವಿನ ಸುದ್ದಿಯೂ ಬಂತು. ವಾಸೆಯಲ್ಲಿ ಉಂಟಾದ ಅವಮಾನದಿಂದ ಒಳಗೊಳಗೆ ಕುದಿಯುತ್ತಿದ್ದ ಯರ್ರಮಂಚನಾಯಕ ಇನ್ನೂ ಈ ಮ್ಯಾಸಮಂಡಲದಲ್ಲಿ ಇರಬಾರದೆಂದು ಹನ್ನೆರಡು ಪೆಟ್ಟಿಗೆ ದೇವರುಗಳಲ್ಲಿ ಒಂದಾದ "ಪೆದ್ದ ತಿರುಮಲ" 'ದೇವರ'ನ್ನು ತೆಗೆದುಕೊಂಡು ವೇದಾವತಿ ನದಿಯತ್ತ ಹೊರಟ. ಈ ಸುದ್ದಿ ತಿಳಿದ ಆ ಭಾಗದ ಮ್ಯಾಸಮಂಡಲದವರು ಯರ್ರಮಂಚನಾಯಕನನ್ನು ಊರು ನಾಯಕ ಕುಲದೊಳಗೆ ಸೇರಿ ಬಿಡ್ತಾನೆ ಎಂದು ಹೆದರಿ ಅವನನ್ನೇ ನಾಯಕನನ್ನಾಗಿ ಸ್ವೀಕರಿಸುವುದಾಗಿ ಹೇಳಿದರು.

ಗೌರಸಮುದ್ರ (ಐವೋಜಿ ಮಠ) ಬೇಡರೆಡ್ಡಿಹಳ್ಳಿ, ಬುಕ್ಕಾಂಬೂದಿ ಮುಂತಾಗಿ ಈ ಭಾಗದಲ್ಲಿದ್ದ ಮ್ಯಾಸರಿಗೂ ಕಾಕಳನಾಯಕನ ನಾಯಕತ್ವದ ಅಧೀನದಲ್ಲಿದ್ದ ಮ್ಯಾಸರಿಗೂ ಅಂದಿನಿಂದ 'ತರಿಮರ' ಕಡಿಯಿತು. ಯರ್ರಮಂಚನಾಯಕ ತಂದ ತಿರುಮಲ ದೇವರು ಬೇಡರೆಡ್ಡಿಹಳ್ಳಿಯಲ್ಲಿ ನೆಲೆಸಿತು. ವಿಭೂತಿ ಪುರುಷನಾಗಿದ್ದ ಶರಣ ಯರ್ರಮಂಚನಾಯಕ 'ಒಂದೇ ನೀತಿಗೆ ಕುಲಗೋತ್ರ ಭೇದವಿಲ್ಲದೆ ಎಲ್ಲರನ್ನು ಒಂದೇ 'ಮೊಕ್ಕು' (ನಮಸ್ಕಾರ) ಮುಗಿಸ್ತಿನಿ' ಎಂದು ಪ್ರತಿಜ್ಞೆಮಾಡಿದ ಗೌರಸಮುದ್ರ ತುಮ್ಮಲಿನಲ್ಲಿರುವ ಹುತ್ತದ ರೂಪದ ಮಾರಿದೇವತೆಗೆ ಪೌಳಿ ಕಟ್ಟಿಸಿ 'ದೀಪಸ್ತಂಭ ನೆಡಿಸಿದ' ಜೊತೆಗೆ ಮಾರಿ ಜಾತ್ರೆ ಮಾಡಿಸಿ 'ಜ್ಯೋತಿ' ಹೊತ್ತಿಸಿ ಎಲ್ಲರೂ ಕೈ ಮುಗಿಯುವಂತೆ ಮಾಡಿ ತನ್ನ ಮಹಿಮೆಯನ್ನು ಮೆರೆದ ವಾಸೆ ಕೊಯ್ದಾಗ ಮಾಡುವ 'ಸೂರ್ಯನ ಮೊಕ್ಕು' ಆಚರಣೆಯ ಮೂಲಕ ಮ್ಯಾಸರು ಯರ್ರಮಂಚನಾಯಕನಿಗೆ ಗೌರವ ತೋರಿಸಿದರು. ಈಗ ಗೌರಸಂದ್ರ ಗಡ್ಡೆಯನ್ನು ಯರ್ರಮಂಚನಾಯಕ ಗಡ್ಡೆ (ಪ್ರದೇಶ) ಎಂದು ಕರೆಯಲಾಗುತ್ತದೆ. ಯರಮಂಚನಾಯಕ ಮತ್ತು ಅವನ ತಮ್ಮ ಯರ್ರಗೊಡ್ಲಯ್ಯ ಅವರು ಚಳ್ಳಕೆರೆ ತಾಲ್ಲೂಕಿನ ಓಬನಹಳ್ಳಿಯ ಸಮಾಧಿ ಒಕ್ಕರು ಎಂದು ಹೇಳುತ್ತಾರೆ. ಈಗ ಇಲ್ಲಿ ಇರುವ ಗುಡಿಯಲ್ಲಿ ಬಾಗಿಲು ಹಾಕಿಕೊಂಡೇ ಪೂಜೆ ಮಾಡುತ್ತಾರೆ. ಈ ಪ್ರದೇಶದಲ್ಲಿರುವ ಯರ್ರಮಂಚನಾಯಕನ ಒಕ್ಕಲಿನವರು ತಮ್ಮ ಮದುವೆಗಳಲ್ಲಿ ಕಳಸ ಹಿಡಿಯುವುದಿಲ್ಲ. ತಾಳಿ ಕಟ್ಟುವುದಿಲ್ಲ 'ಮಣಿ' ಮಾತ್ರ ಕಟ್ಟುತ್ತಾರೆ. ಕಾಲ ಬೆರಳಿಗೆ 'ಮಿಂಚು' ಹಾಕುವುದಿಲ್ಲ. ಕಾಕಳನಾಯಕನ ಒಕ್ಕಲಿನವರು ಇವರಿಗೆ ಸಹೋದರ ಸಂಬಂಧಿಗಳೇ ಯಾದರೂ 'ತರಿಮರ' ಕಡಿದದ್ದರಿಂದ ಬೇರೆ ಸಂಪ್ರದಾಯವನ್ನೇ ಹಿಡಿದರು. ಈ ಸಾಂಸ್ಕೃತಿಕ ವೀರನ ಸಂದರ್ಭಗಳ ಬೇಡಸಮುದಾಯಗಳು ಛಿದ್ರವಾಗುವುದಕ್ಕೆ ಕಾರಣವಾಗಿವೆ. ಅಣ್ಣ ತಮ್ಮಂದಿರ ಜಗಳ ಹೀಗೆ ಬುಡಕಟ್ಟಿನ ಒಡಕಿಗೆ ಕಾರಣವಾಗಬಲ್ಲದೆಂಬುದಕ್ಕೆ ಇದು ಒಳ್ಳೆಯ ನಿದರ್ಶನವಾಗಿದೆ.

ಗಾದ್ರಿಪಾಲನಾಯಕ

ಮ್ಯಾಸಬೇಡರ ಸಮುದಾಯದಲ್ಲಿ ಹೆಚ್ಚು ಜನಪ್ರಿಯನಾಗಿರುವ ನಾಯಕರಲ್ಲಿ ಗಾದ್ರಿಪಾಲನಾಯಕ ಒಬ್ಬನು. ಇತನು ಒಬ್ಬ ಪಶುಪಾಲಕ. ಇವನ ಪೂರ್ವಜರು ತಲೆಮಾರುಗಳಿಂದ ಸೆವೆಸಿದ ಪಶುಪಾಲನೆಯಲ್ಲಿ

ಇವನು ಸಹ ಮುಂದುವರೆಸಿದನು. ಹಾಗಾಗಿ ಮ್ಯಾಸಬೇಡರ ಸಮುದಾಯ ತಾವು ಆರಾಧಿಸುವ ಸಾಂಸ್ಕೃತಿಕ ನಾಯಕರ ಮೂಲಕ ತಮ್ಮ ಚರಿತ್ರೆಯನ್ನು ಕಟ್ಟಿಕೊಡುತ್ತಾರೆ. ಏಕಕಾಲದಲ್ಲಿ ಅವರು ಆರಾಧಿಸುವ ನಾಯಕನ ಬಗೆಗಿರುವ ಗತಕಾಲದ ಚಾರಿತ್ರಿಕ ಸಂಗತಿಗಳೇ ವರ್ತಮಾನದ ಬೇಡ ಸಮುದಾಯದ ಚಾರಿತ್ರಿಕ ಅಂಶಗಳು ಆಗಿರುತ್ತವೆ. ಅಥವಾ ಸಮುದಾಯ ಹಾಗೆ ಭಾವಿಸುತ್ತದೆ. ಹೀಗೆ ಮ್ಯಾಸಬೇಡರ ಸಮುದಾಯ ಆರಾಧಿಸುವ ಪ್ರಭಾವಿ ನಾಯಕರಲ್ಲಿ ಒಬ್ಬನಾದ ಗಾದ್ರಿಪಾಲನಾಯಕನ ಮೂಲಕ ಮ್ಯಾಸಬೇಡರ ಒಳಗೇ ಒಂದು ಪಂಥ ಚಾಲನೆಗೊಳ್ಳುತ್ತಿರುವುದನ್ನು ನೋಡಬಹುದು.

ಗಾದ್ರಿಪಾಲನಾಯಕ ಮ್ಯಾಸಬೇಡರ ಮೂಲ ಪುರುಷ ಎಂದು ನಂಬಿಕೆಯಿದೆ. ಗಾದರಿ ಎನ್ನುವುದು ಒಂದು ಭೂ ಪ್ರದೇಶವನ್ನು ಗುರುತಿಸುವಂತಹದ್ದು. ಅರೆ ಮಲೆನಾಡಿನ ಕಿರುಬೇಡ ಪ್ರದೇಶವೆಂತಲೂ, ಗಾದರಿಘಟ್ಟ, ಗಾದರಿಗುಡ್ಡ, ಗಾದರಿಮೆಲ್ಲೈ ಈ ಸ್ಥಳಗಳಲ್ಲಿ ಪಶುಪಾಲನೆ ಮಾಡಿದ ಎನ್ನುವ ಕಾರಣಕ್ಕೆ ಗಾದರಿ ಪಾಲನಾಯಕ ಎಂಬ ಹೆಸರು ಬಂದಿರಬಹುದಾಗಿದೆ. ಈ ಒಂದು ಭೌಗೋಳಿಕ ಪ್ರದೇಶದಲ್ಲಿ ಈಗಲೂ ವಾಸಿಸುವ ಬೇಡ ಸಮುದಾಯ ಗಾದರಿಪಾಲನಾಯಕನನ್ನು ಪ್ರತಿನಿಧಿಸುತ್ತಾರೆ. ಹಾಗಾಗಿ ಗಾದರಿ ಎನ್ನವುದು ಗುಣವಾಚಕ ಹೆಸರು, ಗಾದರಿ ಮದಕರಿ, ಗಾದರಿ ಹೆಬ್ಬುಲಿಯ ಎನ್ನವ ಪದಬಳಕೆಯನ್ನು ನೋಡಬಹುದು. ಗಾದರಿಪಾಲನಾಯಕನನ್ನು ಹೊಯ್ಸಳ ಜೊತೆಗೂ ಸಂಬಂಧ ಬೆಸೆಯುವುದಿದೆ.

ಗಾದರಿಪಾಲನಾಯಕನ ಬಗ್ಗೆ ಶಾಸನ ವೀರಗಲ್ಲು ಮಾಸ್ತಿ ಕಲ್ಲುಗಳು ದೊರೆಯುತ್ತವೆ. ಹಾಗೆಯೇ ಸಮುದಾಯದ ಮೌಖಿಕ ಪರಂಪರೆಯಲ್ಲೂ ಸಹ ಉಳಿದಿದ್ದಾರೆ. ಗಾದ್ರಿಪಾಲನಾಯಕ ಮುಖ್ಯವಾಗಿ ಶೌರ್ಯ ಸಹಾಸಗಳನ್ನು ಪ್ರತಿನಿಧಿಸುತ್ತಾನೆ. ಈತನನ್ನು ಆರಾಧಿಸುವ ಮ್ಯಾಸಬೇಡರ ಸಮುದಾಯ ಈ ಬಗ್ಗೆ ಶೌರ್ಯ ಕಲ್ಪನೆ ಉಳಿದು ಬಂದಿರುವುದು ನೋಡಬಹುದು. ಇವತ್ತು ವಾಲ್ಮೀಕಿ ಯುವಕ ಸಂಘಗಳಲ್ಲಿ ಗಾದ್ರಿಪಾಲನಾಯನ ಹೆಸರು ಕಾಣುತ್ತದೆ. ಇಂತಹ ಶೌರ್ಯವನ್ನು ಆರೋಪಿಸಿಕೊಂಡೇ ಬೇಡರು ಕೋಮುಗಲಭೆಗಳಲ್ಲಿ ಭಾಗಿಯಾಗಿರುವುದನ್ನು ನೋಡಬಹುದು. ಉದಾಹರಣೆಗೆ ಬೇಡರ ಶೌರ್ಯಸಾಹಸ ಎನ್ನುವ ಅತಿಯಾದ ಆತ್ಮವಿಶ್ವಾಸವೇ ಇತರೆ ಸಮುದಾಯಗಳೊಂದಿಗೆ ಸ್ಪರ್ದೆಯನ್ನು ಹುಟ್ಟಿಸುವಂತಿದೆ.

ಗಾದ್ರಿಪಾಲನಾಯಕ ಪ್ರತಿನಿಧಿಸುವುದು ಪಶುಪಾಲನೆಯನ್ನು. ಆದರೆ ಮ್ಯಾಸಬೇಡರು ಕಡಿಮೆ ಪ್ರಮಾಣದಲ್ಲಿ ಪಶುಪಾಲನೆ ಮಾಡುತ್ತಾರಾದರೂ, ಅನೇಕರು ಪಶುಪಾಲನೆಯಿಂದ ಹೊರ ಬಂದಿದ್ದಾರೆ. ಹಾಗಾಗಿ ಸಮುದಾಯದ ನಾಯಕನು ಒಬ್ಬ ಪ್ರತಿನಿಧಿಸುವ ವೃತ್ತಿ, ಅನುಕರಣೆಗಿಂತ ಗುಣದ ಅನುಕರಣೆ ಸಮುದಾಯದಲ್ಲಿ ಹೆಚ್ಚು ಉಳಿದಂತೆ ಕಾಣುತ್ತದೆ.

ಗಾದ್ರಿಪಾಲನಾಯಕ ಪ್ರತಿನಿಧಿಸುವ ಸ್ಥಳಗಳಲ್ಲಿ ಪ್ರಮುಖವಾದ ಸ್ಥಳವೆಂದರೆ ಗಂಡಿಗಟ್ಟೆ. ಅದು ಪ್ರಧಾನ ಸ್ಥಳವಾದರೆ, ಉಪಶಾಖೆಗಳು ಹಲವಾರು. ಚನ್ನಬಸಯ್ಯನಹಟ್ಟಿ, ರಾಮಸಾಗರ, ಬಿ.ಜಿ.ಕೆರೆ, ಮೊಗಲಹಳ್ಳಿ, ಮ್ಯಾಸರಹಟ್ಟಿ, ಪೂಜಾರಹಳ್ಳಿ, ಸವಾರಮ್ಮನಹಳ್ಳಿ, ಕುಮತಿ, ಹುಲಿಕೆರೆ ಕರ್ನಾರಹಟ್ಟಿ,

ಡಿ.ಸಿದ್ಧಾಪುರ, ಕಮಲಾಪುರ ಮೊದಲಾದ ಸ್ಥಳಗಳಲ್ಲಿ ಈತನ ದೇವಾಲಯಗಳಿವೆ. ಹಾಗೆ ಗಾದ್ರಿಪಾಲನಾಯಕನ ಜೊತೆಜೊತೆಗೆ ಬದುಕುತ್ತಿರುವ ಅನುಭವವನ್ನು ಈಗಲೂ ಹೇಳುತ್ತಿದ್ದರು.

ಮ್ಯಾಸಬೇಡರಲ್ಲಿ ಗಾದ್ರಿಪಾಲನಾಯಕನನ್ನು ಅನುಸರಿಸುವ ಪಂಥ ಮಂದಲ ಬೆಡಗಿನವರು. ಇವರು ವಿಶೇಷವಾಗಿ ಗಾದ್ರಿಪಾಲನಾಯಕನ ಪಂಥವನ್ನು ಮುಂದುವರೆಸಿಕೊಂಡು ಬರುತ್ತಿದ್ದಾರೆ. ಮಂದಲ ಬೆಡಗಿನವರು ಆಚರಿಸುವ ಹಬ್ಬಗಳಂತೂ ವಿಶೇಷವಾಗಿರುತ್ತವೆ. ಹಬ್ಬಗಳನ್ನು ಆಚರಿಸುವುದರ ಮೂಲಕ ಇವರು ಸಾಮಾಜಿಕ ಕಳಕಳಿಯ ಮೇರೆಗೆ ಇವನ ಬಗೆಗೆ ಮಾತನಾಡುತ್ತಾರೆ. ದೀಪಾವಳಿ ಮತ್ತು ಗುಗ್ಗರಿಹಬ್ಬ ಪ್ರಮುಖ ಹಬ್ಬಗಳು. ಈ ಹಬ್ಬಗಳಲ್ಲಿ ಆತನನ್ನು ಭಕ್ತಾದಿಗಳು ಆರಾಧಿಸುವುದರ ಮೂಲಕ ಅಂದಿನ ಸಂದರ್ಭಕ್ಕೆ ಆತನನ್ನು ಜೀವಂತಗೊಳಿಸುತ್ತಾರೆ. ಹಾಗೆ ವರ್ತಮಾನದಲ್ಲಿ ಕಥನಗಳನ್ನು ಹಾಡುತ್ತಾರೆ.

ಗಾದ್ರಿಪಾಲನಾಯಕನ ಬಗ್ಗೆ ಇಲ್ಲಿಯವರೆಗೆ ಮ್ಯಾಸಬೇಡರ ಅಧ್ಯಯನಗಳಲ್ಲಿ ಸಿಗುವ ಪಠ್ಯ ಆಚರಣಾಲೋಕಗಳಿಗಿಂತ ಹಲವು ಪಠ್ಯಗಳು ಸಮುದಾಯದ ಒಳಗೆ ಕಾಣುತ್ತವೆ. ವಿಚಿತ್ರ ಎಂದರೆ ಬೇಡರ ಒಂದೊಂದು ಹಟ್ಟಿಯೂ ಸಹ ಗಾದ್ರಿಪಾಲನಾಯಕನ ಬಗ್ಗೆ ಕಟ್ಟಿಕೊಂಡ ಭಾವನಾತ್ಮಕ ಜಗತ್ತು ಇದೆ. ಈಗಲೂ ಆತನ ಹೆಸರನ್ನು, ಹುಟ್ಟುವ ಮಕ್ಕಳಿಗೆ ಇಡುತ್ತಿರುವುದು ಕಂಡುಬರುತ್ತದೆ. ಗಾದ್ರಮ್ಮ ಗಾದ್ರಯ್ಯ, ಗಾದಪ್ಪ, ಗಾದಿಲಿಂಗ ಎಂದು ಹೆಸರು ಕರೆಯುತ್ತಾರೆ. ಹಾಗೆಯೇ ಇವರು ಬಳಸುವ ವಾಹನಗಳಿಗೆ (ಕಾರು, ಬೈಕ್, ಟ್ರಾಕ್ಟರಿ ಮುಂತಾದವು) ಗಾದ್ರಿಪಾಲನಾಯಕನ ಹೆಸರಿಡುತ್ತಾರೆ. ಮ್ಯಾಸಬೇಡರ ಮನೆಗಳು ಕೂಡ, ಗಾದ್ರಿಪಾಲನಿವಾಸ, ನಿಲಯ ಎಂದು ಹೆಸರಿಡುತ್ತಾರೆ. ಮನೆಮನೆಗಳಲ್ಲಿ ಗಾದ್ರಿ ಪಾಲನಾಯಕನ ಗುಡಿಯ ಪೋಟೋಗಳು ಆರಾಧನೆಗೆ ಒಳಗಾಗುತ್ತವೆ. ಹೀಗೆ ಗಾದ್ರಿಪಾಲನಾಯಕನ ನೆನಪು ಸಮುದಾಯದ ಹಲವಾರು ಆಯಾಮಗಳಲ್ಲಿ ವ್ಯಕ್ತವಾಗುತ್ತದೆ. ಅದು ಕೇವಲ ನೆನಪಾಗಿರದೆ ಚೈತನ್ಯದಾಯಕ ಶಕ್ತಿಯೂ ಆಗಿ ಪರಿವರ್ತನೆಗೊಂಡಿದೆ.

ಗಾದ್ರಿಪಾಲನಾಯಕನ ಆರಾಧನೆ ಕೇವಲ ಮ್ಯಾಸಬೇಡರು ಮಾತ್ರವಲ್ಲದೇ. ಇತರೆ ಸಮುದಾಯದವರೂ ಆರಾಧಿಸುತ್ತಾರೆ. ಒಟ್ಟಾರೆಯಾಗಿ ಆಯಾ ಊರಿನಲ್ಲಿ ವಾಸಿಸುವ ಜಾತಿಯವರೆಲ್ಲ ಆರಾಧಿಸುತ್ತಿರುವುದು ಪ್ರಮುಖವಾಗಿ ಕಂಡುಬರುತ್ತಿದೆ. ಒಟ್ಟಾರೆಯಾಗಿ ಗಾದ್ರಿಪಾಲನಾಯಕ ಸಾಂಸ್ಕೃತಿಕ ನಾಯಕ, ದೈವವಾಗಿ ಸಮುದಾಯಕ್ಕೆ ಆಧಾರವಾಗಿದ್ದಾನೆ.

ದಡ್ಡಿಸೂರನಾಯಕ

ದಡ್ಡಿಸೂರನಾಯಕ ಮ್ಯಾಸಬೇಡರ ಸಾಂಸ್ಕೃತಿಕ ನಾಯಕರಲ್ಲಿ ಈತನು ಒಬ್ಬ. ಇವನು ತಮ್ಮ ಪೂರ್ವಜರಂತೆ ಪಶುಪಾಲನೆಯನ್ನೇ ಮುಂದುವರೆಸಿಕೊಂಡು ಬಂದಿರುವಂತವನು. ದೇವರಿಗೆ ಬಿಡುವ ಪಶುಗಳನ್ನು ಕಾಯುತ್ತಲೇ ಅವುಗಳ ಪಾಲನೆ ಪೋಷಣೆಯಲ್ಲಿ ಈತನದ್ದೇ ಪ್ರಮುಖ ಪಾತ್ರವಾಗಿರಬೇಕು. ಹಾಗೆ ಪಶುಪಾಲನೆ ವೃತ್ತಿಯನ್ನು ಮ್ಯಾಸಬೇಡರ ಸಮುದಾಯಕ್ಕೆ ತೋರಿಸಿಕೊಟ್ಟವರಲ್ಲಿ ಇವನ ಪಾತ್ರ ಅಪಾರವಾದುದೆಂದು ಸಮುದಾಯದ ಮಾಹಿತಿದಾರ ಪ್ರಕಾಶ್‌ರವರಿಂದ ತಿಳಿದು ಬಂದಿದೆ.

ದಡ್ಡಿಸೂರನಾಯಕ ಒಂದು ಹೆಣ್ಣಿನ ಜೊತೆಗೆ ಅನೈತಿಕ ಸಂಬಂಧದಿಂದ ಬುಡಕಟ್ಟಿನಿಂದ ಬಹಿಷ್ಕಾರಕ್ಕೆ ಗುರಿಯಾಗಿರುವುದು ಪ್ರಮುಖವಾಗಿ ತಿಳಿದುಬರುತ್ತದೆ. ಇಲ್ಲಿ ಬಹುಮುಖ್ಯವಾಗಿ ತಿಳಿಯುವುದೇನೆಂದರೆ ಹೇಗೆ ಸಮುದಾಯ ಅಂದಿನ ಕಾಲದಲ್ಲಿ ನೈತಿಕತೆಯಿಂದ, ಮಾನವೀಯತೆಯಿಂದ ಬದುಕಿರಬಹುದು ಎಂಬುದು ಗೊತ್ತಾಗುತ್ತದೆ. ಯಾಕೆಂದರೆ ಇವನು ಪಶುಪಾಲಕನಾಗಿದ್ದರೂ ಸಹ ಸಮುದಾಯದ ನಿಷ್ಠೆಯನ್ನು ಯೋಚಿಸದೆ ಹಾಗೆ ಗಲಗಂಟಿ ಗಾಜ(ದಿ)ನಾಯಕ ತನ್ನ ಹೆಂಡತಿಯನ್ನು ಸಾಯಿಸಿದ್ದಕ್ಕಾಗಿ ಯುದ್ಧಮಾಡಿದರೂ ಅವನನ್ನು ಸೋಲಿನ ಕೊನೆಗೆ ಏಕಾಂಗಿಯಾಗಿರುವುದು ಪ್ರಮುಖವಾಗಿ ತಿಳಿಯಬಹುದಾಗಿದೆ. ಹಾಗಾಗಿ ಬಹಿಷ್ಕೃತನಾದ ಸೂರನಾಯಕ ಮತ್ತು ಆತನ ದೇವರ ಎತ್ತುಗಳನ್ನು ಹೊಡೆದು ಕೊಂಡು ಕಂಪಳದೊಂದಿಗೆ ಹಿರಿಯನಾದವನು ಬಂದು ನೆಲಸಿದ್ದರಿಂದ 'ಹಿರೇಹಳ್ಳಿ'ಯಾಯಿತು. ಹೀಗೆ ಅವನ ಕೊನೆಯದಿನಗಳನ್ನು ಇಲ್ಲಿಯೇ ಕಳೆದು ಅವಿವಾಹಿತನಾಗಿ ತೀರಿಕೊಂಡ ನಂತೆ ಅವನ ಹಿಂಬಾಲಕರು ಅವನಿಗೆ ಗುಡಿಕಟ್ಟು 'ದೇವರು' ಮಾಡಿಕೊಂಡರು.

ಅಂದಿನಿಂದಲೇ ಈತನನ್ನು ಆರಾಧನೆ ಮಾಡುತ್ತಿರುವುದು 'ಎದ್ದುಲವಾರು' ಎಂಬ ಬೆಡಗು (ಎತ್ತುಗಳನ್ನು ಕಾಯುವವರಿಗೆ ತೆಲುಗಿನಲ್ಲಿ ಎದ್ದುಲವಾರು ಅಥವಾ ಎದ್ದಾರು ಅಂತ ಕರೆಯುತ್ತಾರೆ.) ಈ ಬೆಡಗಿನವರು ಈತನನ್ನು ಆರಾಧಿಸುತ್ತಿದ್ದಾರೆ. ಈ ಬೆಡಗಿನವರು ಹೆಚ್ಚಾಗಿ ಚಳ್ಳಕೆರೆ, ಮೊಳಕಾಲ್ಮೂರು, ಕೂಡ್ಲಿಗಿ, ತಾಲೂಕುಗಳಲ್ಲಿ ಹೆಚ್ಚಾಗಿ ನೆಲೆಸಿರುವುದು ಕಂಡುಬರುತ್ತದೆ. ಆದರೆ ಈ ದೇವರನ್ನು ಆರಾಧನೆ ಮಾಡುತ್ತಿರುವವರು ಯಾರು ಕೂಡ ನೋಡಿಲ್ಲ. ಪೂಜಾರಿಯೇ ಕಣ್ಣಿಗೆ ಬಟ್ಟೆಯನ್ನು ಕಟ್ಟಿಕೊಂಡು ಪೂಜೆ ಮಾಡುತ್ತಾನೆ ಅಂತ ಸಮುದಾಯದವರು ಹೇಳುತ್ತಿದ್ದಾರೆ. ಯಾಕೆಂದರೆ ಸೂರನಾಯಕ ಅಂದರೆ ಅವನು ಸೂರ್ಯ ಆಗಿರುವುದರಿಂದ ನೋಡಿದರೆ ಕಣ್ಣು ಹೋಗುತ್ತವೆ ಎಂಬ ನಂಬಿಕೆ ಇದೆ. ಅಂತ ಹೇಳುತ್ತಾರೆ. ಆದರೆ ಅದು ಅಷ್ಟು ಸಮಂಜಸ ಅನಿಸಲ್ಲ ಯಾಕೆಂದರೆ ಯಾವಾಗೋ ಒಂದು ಕಾಲದಲ್ಲಿ ನಡೆದಂತ ಘಟನೆಯನ್ನು ಈಗಲೂ ಪಾರಂಪರಿಕವಾಗಿ ಮುಂದುವರೆಸಿಕೊಂಡು ಬಂದಿರುವುದು ಒಪ್ಪಲಾರದಂತಹ ಸನ್ನಿವೇಶ ಎಂದು ಹೇಳಬಹುದು.

ಈತನನ್ನು ಆರಾಧಿಸುವ ಅಥವಾ ಪೂಜಿಸುವ ಪೂಜಾರಿ ವೈಶಿಷ್ಟ್ಯವೆಂದರೆ ಕಾವಿ, ರುದ್ರಾಕ್ಷಿಯನ್ನು ಹಾಕಿರುತ್ತಾನೆ. ಈ ಕಾವಿ, ರುದ್ರಾಕ್ಷಿಯು ಶೈವ ಧರ್ಮದ ಸಂಕೇತ. ಮೂಲತಃ ಇವರು ಶೈವರಾಗಿದ್ದಿರಬೇಕು ಎಂದೆನಿಸುತ್ತದೆ. ಹಾಗೆ ಇಲ್ಲಿ ಆಚರಿಸುವಂತ ಆಚರಣೆಗಳಲ್ಲಿ 'ಗುಗ್ಗರಿಹಬ್ಬ' ಮಾಡುತ್ತಾರೆ. ಇದು ಕೃಷಿ ಪರಂಪರೆಯ ಪ್ರತೀಕವನ್ನು ಸೂಚಿಸುತ್ತದೆ. ಈ ಹಬ್ಬವನ್ನು ಮಾಡುವುದರ ಮೂಲಕ ಪ್ರತೀವರ್ಷ ಹೊಸ ದವಸ ಧಾನ್ಯಗಳ ಬೆಳೆಗಳನ್ನು ಬಳಸದೇ ಮೊದಲು ದೇವರಿಗೆ 'ಅರ್ಪಿಸಿ' ನಂತರ ಅವುಗಳನ್ನು ಬಳಸುತ್ತಾರೆ. ಹಾಗೆ ಜನವರಿ ತಿಂಗಳ ಕೊನೆಗೆ ಜಾತ್ರೆಯನ್ನು ಮಾಡುತ್ತಾರೆ. ಈ ಜಾತ್ರೆಯಲ್ಲಿ ಸಹ ಬಾಳೆಹಣ್ಣು, ತೆಂಗಿನಕಾಯಿ, ಜೊತೆಗೆ ಮಣೇವು ಸ್ಪರ್ಧೆ ನಡೆಯುತ್ತದೆ. ವಿಶೇಷತೆ ಎಂದರೆ ಲೆಕ್ಕಿ ಬರಲಿನಿಂದ 'ಪದಿ'ಯನ್ನು ಕಟ್ಟಿರುತ್ತಾರೆ. ಈ ಲೆಕ್ಕಿಬರಲು ವಿಷ್ಣುವಿಗೆ ಪ್ರಿಯವಾದ ಸಸ್ಯವರ್ಗ. ಹಾಗಾಗಿ

ಆಗಿನ ಕಾಲದಿಂದಲೇ ಇದು ಮುಂದುವರೆದು ಕೊಂಡುಬಂದಿರಬಹುದು. ಕರ್ನಾಟಕದ ಅನೇಕ ಬುಡಕಟ್ಟು ಜನಾಂಗದ ಮೇಲೆ ಮೊದಲು ಪ್ರಭಾವ ಬೀರಿರುವುದು ಶೈವಧರ್ಮ ನಂತರದಲ್ಲಿ ವೈಷ್ಣವ ಧರ್ಮ ಕಾಲಿಟ್ಟಿದೆ. ಈ ಜಾತ್ರೆಯ ಸಂದರ್ಭದಲ್ಲಿ ಎತ್ತುಗಳನ್ನು ಎರಡುನೂರು ಮೀಟರ್ ದೂರದಿಂದ ಪದಿ ಕಡೆಗೆ ಓಡಿಸುತ್ತಾರೆ. ಓಡಿಸುವ ಸಮಯದಲ್ಲಿ ಬಾಳೆಹಣ್ಣು, ಬೆಲ್ಲವನ್ನು ಎಸೆಯುತ್ತಾರೆ. ಈ ಎಸೆದ ಬಾಳೆಹಣ್ಣು ಮತ್ತು ಬೆಲ್ಲ ಮಣ್ಣಿನ ಮೇಲೆ ಬಿದ್ದಿರುವಂತಹದ್ದನ್ನು 'ಪ್ರಸಾದ' ಅಂತ ಆರಿಸಿಕೊಂಡು ತಿನ್ನುತ್ತಾರೆ. ಈ ಎತ್ತುಗಳನ್ನು ಓಡಿಸಿದರೆ ಜಾತ್ರೆ ಮುಗಿದಂಗೆ. ಎತ್ತುಗಳು ಹಾಕಿರುವ ಸಗಣಿಯನ್ನು ಸಹ ಯಾರು ತುಳಿಯುವುದಿಲ್ಲ. ಹಾಕಿರುವ ಸಗಣಿಯನ್ನು ತಂದು ಒಂದು ಹತ್ತಿರ ಹಾಕಿ ಸುಟ್ಟು ಅದನ್ನು ಭಟ್ಟು, ಭಂಡಾರ ಅಂತ ಹಚ್ಚಿಕೊಳ್ಳುತ್ತಾರೆ.

ಒಟ್ಟಾರೆಯಾಗಿ ಒಂದು ಸಮುದಾಯ ಆದಿಮ ಕಾಲದಿಂದಲೇ ಆಚರಿಸಿಕೊಂಡು ಬಂದಂತಹ ಸಂಪ್ರದಾಯ ಆಚರಣೆಗಳನ್ನು ವಂಶಪರಂಪರೆಯಾಗಿ ಮುಂದುವರೆಸುತ್ತ ಈ ಆಚರಣೆಗಳು ಮಾಡುವುದರ ಮುಖಾಂತರ ಅಂದಿನ ಸಂದರ್ಭಕ್ಕೆ ಹಾಡುಗಳನ್ನು ಹಾಡುತ್ತಲೇ ಅವರನ್ನು ಜೀವಂತಗೊಳಿಸುತ್ತಾರೆ. ಒಂದು ಸಮುದಾಯಕ್ಕೆ ಪಶುಪಾಲನೆ ಎಂಬ ವೃತ್ತಿಯನ್ನು ತೋರಿಸಿಕೊಟ್ಟಿದ್ದರಿಂದ, ಹಾಗೆ ದುಷ್ಟರನ್ನು ಸಂಹಾರ ಮಾಡಿ ಸಮುದಾಯವನ್ನು ರಕ್ಷಿಸಿದ್ದರಿಂದ, ಅಂತಹ ವ್ಯಕ್ತಿಯನ್ನು ದೈವವನ್ನಾಗಿ ಆರಾಧನೆ ಮಾಡಿಕೊಂಡು ಬಂದಿರುವುದು ಪ್ರಮುಖವಾಗಿ ತಿಳಿಯಬಹುದಾಗಿದೆ.

ಕಿಲಾರಿ

ದೇವರ ಎತ್ತುಗಳನ್ನು ಕಾಯುವ ಇವನು ದೇವರಿಗೆ ಬಿಡುವ ಪಶುಗಳನ್ನು ಕಾಯುತ್ತಾನೆ. ಇವನು ಮೊಣಕಾಲಿನವರೆಗೂ ಚಲ್ಲಣವನ್ನು ಧರಿಸಿರುತ್ತಾನೆ. ತಲೆಗೆ ಬಿಳಿಯ ರುಮಾಲು ಸುತ್ತಿರುತ್ತಾನೆ. ಸೊಂಟಕ್ಕೆ ಪಟ್ಟೆದಟ್ಟಿಯನ್ನು (ಕಾಸಿದಟ್ಟಿ) ಕಟ್ಟಿರುತ್ತಾನೆ. ಬರಿಮೈಯಲ್ಲಿ ಇರುತ್ತಾನೆ. ಹೆಗಲ ಮೇಲೆ ಅಥವಾ ಕೈಯಲ್ಲಿ 'ದಂಡ' (ಕೋಲು)ವನ್ನು ಹಿಡಿದಿರುತ್ತಾನೆ. ಹಗಲು, ರಾತ್ರಿ, ಬಿಸಿಲು, ಚಳಿ, ಮಳೆಗಾಳಿ ಎಂದು ತಿಳಿಯದೆ ಸದಾ ದೇವರ ಎತ್ತುಗಳ ಗೂಡಿನಲ್ಲೇ ಇರುತ್ತಾನೆ. ಇವನು ಸಂಸಾರಿಕನಾಗಿರುತ್ತಾನೆ. ಊರಿನ ಹಟ್ಟಿಯೊಳಗಿರುವ ತನ್ನ ಸಂಸಾರದ ಸದಸ್ಯರನ್ನು ಆಗಿಂದಾಗೆ ಭೇಟಿಯಾಗಿ ಬರುತ್ತಾನೆ. ತನ್ನ ಹೊಟ್ಟೆ ಪಾಡಿಗಾಗಿ ಭಕ್ತಾದಿಗಳ ಮೇಲೆ ಹೋಗಿ ತನ್ನ ಸಂಸಾರಕ್ಕೆ ಬೇಕಾದ ಹಿಟ್ಟು, ಬಟ್ಟೆ ಭರಗೆ ಹಣ ಸಂಗ್ರಹಿಸಿಕೊಂಡು ಬಂದು ಕೊಡುತ್ತಾನೆ. ಜೊತೆಗೆ ಕುರಿಮೇಕೆಗಳನ್ನು ಸಹ ಕೊಡುತ್ತಾರೆ. ಅವುಗಳನ್ನು ದೇವರ ಎತ್ತುಗಳ ಜೊತೆಗೆ ಸಾಕುತ್ತಾನೆ. ಕಿಲಾರಿಯ ಹೆಂಡತಿಯರು ಕೂಡ ಬಿಳಿಯ ಸೀರೆಯನ್ನು ಮಾತ್ರ ಧರಿಸಬೇಕು. ಕುಪ್ಪಸವನ್ನು ಹಾಕುವಂತಿಲ್ಲ ಕಿಲಾರಿ ಮನೆಯ ಹೆಣ್ಣು ಮಕ್ಕಳು ವಾರದ ದಿನ ಆಯಾ ದೇವರ ವಾರ ದಿನದಂದು ಮಾತ್ರ (ಮುತ್ತೈಗಳ) 'ನಿಧಿ'ಯ ಬಳಿ ಹೋಗಬೇಕು ಬೇರೆ ದಿನಗಳಲ್ಲಿ ಹೋಗುವಂತಿಲ್ಲ.

ದೇವರ ಹತ್ತಿರ ಅಥವಾ ಮುತ್ತೈಗಳ ಹತ್ತಿರ ಏನಾದ್ರೂ ದಾಸೋಹ ಮಾಡಿದರೆ ಮಣ್ಣಿನ ಮಡಿಕೆ ಕುಡಿಕೆಗಳನ್ನು ಮಾತ್ರ ಬಳಸಬೇಕು. ಬೇರೆ ತರಹದ ಕಂಚು, ಸಿಲವರ, ಸ್ಟೀಲು ಪಾತ್ರೆಗಳನ್ನು ಬಳಸುವಂತಿಲ್ಲ, ದೇವರ ಎತ್ತುಗಳು ಪ್ರತಿಯೊಂದು ದೇವರಿಗೆ ಬೇರೆ ಬೇರೆಯಾಗಿರುತ್ತದೆ. ಉದಾ:- ಹಿರೇಹಳ್ಳಿಯ ದಡ್ಲ ಸೂರನಾಯಕನ ಎತ್ತುಗಳೇ ಬೇರೆ ಹಾಲಸಾಗದರ ಬೊಮ್ಮದೇವರ ಎತ್ತುಗಳೇ ಬೇರೆ, ಮುತ್ತಿಗಾರನಹಳ್ಳಿಯ, ಮುತ್ತೈಗಳ ಎತ್ತುಗಳೇ ಬೇರೆ, ಮೀಂಚೇರಿಯ ಗಾದರಿ ಪಾಲನಾಯಕನ ಎತ್ತುಗಳೇ ಬೇರೆ, ಜಗಳೂರಜ್ಜ, ಪಾಪನಾಯಕನ ಎತ್ತುಗಳೇ ಬೇರೆ, ಕಾಟಯ್ಯ, ಚಿತ್ತಯ್ಯ, ಬಂಗಾರು ದೇವರು ಆಯಾ ಬೆಡಗಿಗೆ ಸಂಬಂಧಪಟ್ಟಂತೆ ಆಯಾ ದೇವರ ಎತ್ತುಗಳೇ ಬೇರೆ ಬೇರೆಯಾಗಿರುತ್ತವೆ. ಈ ಎಲ್ಲಾ ದೇವರಿಗೂ ಕೂಡ ಪ್ರತ್ಯೇಕವಾದ ಕಿಲಾರಿಗಳೇ ಇರುತ್ತಾರೆ. ಅವುಗಳ ಹಟ್ಟಿಗಳು ಮತ್ತು ಜಾತ್ರೆಗಳೇ ಬೇರೆ ಬೇರೆ ಸಂದರ್ಭದಲ್ಲಿ ನಡೆಯುತ್ತವೆ.

ದೇವರಿಗೆ ಬಿಟ್ಟ ಕೆಲವು ಬಸವಗಳು, ಕಾಡುಗೊಲ್ಲರ ಜುಂಜಪ್ಪನ ಬಸವಗಳಂತೆ ಅಲೆಮಾರಿಗಳಾಗಿ ಹಟ್ಟಿಗಳಲ್ಲೇ ನೆಲೆನಿಂತು ಬಿಡುವುದುಂಟು. ಆಗ ಹಟ್ಟಿಯ ಜನವೇ ಹಿಟ್ಟು, ಅಕ್ಕಿ, ಕಾಳು, ಕೊಟ್ಟು ಸಾಕುತ್ತಾರೆ. ಹಟ್ಟಿಯಲ್ಲಿ ಮಲಗಲು ಬಂದವರು ಒಂದು ರಾತ್ರಿ ಎತ್ತುಗಳ ಹಟ್ಟಿಯಲ್ಲಿ ನಿದ್ದೆ ಮಾಡಿ ಬೆಳಿಗ್ಗೆ ಎದ್ದು ಕಾಸು ಮೀಸಲು ಒಪ್ಪಿಸುತ್ತಾರೆ. ಭಕ್ತರು ತಂದ ಬತ್ತೇವು ನಿಂದ ಕಿಲಾಗಿರಗಳೇ ಅಡಿಗೆ ಮಾಡಿ ಬಡಿಸುತ್ತಾರೆ. ಹಸುಗಳಿಂದ ಕರೆದ ಹಾಲು ಮೊಸರನ್ನು ಜ್ವಾಳದ ಅನ್ನ ಇತ್ತೀಚೆಗೆ ಅಕ್ಕಿಯ ಅನ್ನದ ಜೊತೆಗೆ ಬೆರೆಸಿ ಬಿಡಿಸುತ್ತಾರೆ. ಅಗತ್ಯಕ್ಕಿಂತ ಹೆಚ್ಚಿನ ಹಾಲನ್ನು ಕರೆಯುವುದಿಲ್ಲ. ಏಕೆಂದರೆ ಉಳಿದ ಹಾಲನ್ನು ಮಾರುವಂತಿಲ್ಲ ಮತ್ತು ಹಟ್ಟಿಯಿಂದ ಹೊರ ಜನಕ್ಕಾಗಲಿ ಅಥವಾ ತಮ್ಮ ಮನೆ ಬಳಕೆಗಾಗಲಿ ಬಳಸುವಂತಿಲ್ಲ, ಹೆಚ್ಚುವರಿ ಹಾಲನ್ನು ಕರುಗಳಿಗೆ ಬಿಡುತ್ತಾರೆ. ದೇವರಿಗೆ ಬಿಡುವ ಎತ್ತು, ಹಸುಗಳನ್ನು ಭಕ್ತಾದಿಗಳೇ ಬಿಟ್ಟಿರುತ್ತಾರೆ. ಅವುಗನ್ನು ಯಾರು ಬಡಿಯುವಂತಿಲ್ಲ ಅವು ಎಲ್ಲಿ ಬೇಕಾದ್ರೂ ಹೋಗಬಹುದು. ಹೊಸದಾಗಿ ಬಿಟ್ಟ ಹುಟ್ಟುವ ಹಸು ಕರುಗಳಿಗೆ ಗಂಡಾದರೆ ಬಾಲದ ಅಕ್ಕಪಕ್ಕ ಎರಡೂ ಕುಂಡೆಗಳ ಮೇಲೆ ಒಂದು ಕಡೆ ಸೂರ್ಯನ ಗುರುತು ಮತ್ತೊಂದು ಕಡೆ ಚಂದ್ರನ ಗುರುತು ಹಾಕಿರುತ್ತಾರೆ ಇಲ್ಲಂದ್ರೆ ತ್ರಿಶೂಲ, ಸೂರ್ಯರ ಮುದ್ರೆಯನ್ನು ಹಾಕುತ್ತಾರೆ. ಕಬ್ಬಿಣದ ಸಾಲಾಕೆಯಿಂದ ಕಾಯಿಸಿ ಹಾಕಿದಾಗ ಗಾಯವಾದರೂ ಗಾಯವಾದ ಮೇಲೆ ಮುದ್ರೆಗಳು ಎದ್ದು ಕಾಣುತ್ತದೆ. ಹೆಣ್ಣಾಕಳು ಆದರೆ ಬಲಕಿವಿಯನ್ನು ಮೂರು ನಾಲ್ಕು ಸೀಳುಗಳು ಆಗುವಂತೆ ಕೊಯ್ಯುತ್ತಾರೆ.

ದೇವರ ಎತ್ತುಗಳ ಸಗಣಿ ಗೊಬ್ಬರವನ್ನು ಯಾರಿಗೂ ಮಾರುವಂತಿಲ್ಲ ಮತ್ತು ಅವರ ಹೊಲಕ್ಕಾದರೂ ಹಾಕುವಂತಿಲ್ಲ. ಅದರ ಗೊಬ್ಬರವನ್ನು ಒಣಗಿದಾಗ ಒಂದು ರಾಶಿಗೆ ಹಾಕುತ್ತಾರೆ. ಅದು ಪುಡಿಯಾಗಿ ಮಣ್ಣಾಗುತ್ತದೆ. ಕೆಲವರು ಒಣಗಿದ ಗೊಬ್ಬರವನ್ನು ಸುಟ್ಟುಬೂದಿಯಾದಾಗ ಭಂಡಾರವೆಂದು ಒಂದು ಹತ್ತಿರ ಕಲೆ ಹಾಕುತ್ತಾರೆ. ಭಕ್ತಾದಿಗಳು ಆ ಭಂಡಾರವನ್ನು ಕೆಲವರು ಹಚ್ಚಿಕೊಳ್ಳುತ್ತಾರೆ. ಕೆಲವರು ಮನೆಯಲ್ಲಿ ತಗಂಡೋಗಿ ಇಟ್ಟುಕೊಳ್ಳುತ್ತಾರೆ. ಅಗತ್ಯವಾಗಿ ಬೇಕೆನಿಸಿದಾಗ. ಯಾರಿಗಾದ್ರೂ ಉಷಾರಿಲ್ಲದಾಗ ಭಂಡಾರವನ್ನು ತಿನ್ನುತ್ತಾರೆ. ಮತ್ತು ಭೂಮಿಗೆ ಹಾಕಿದ್ರೆ ವ್ಯವಸಾಯ ಮಾಡುವಾಗ

ಕಾಲಿನಿಂದ ತುಳಿಯುತ್ತಾರೆ, ಹಾಗೆ ಅಂಟು ಮುಟ್ಟಾದವರು ಹೊಲಕ್ಕೆ ಹೋಗುತ್ತಾರೆ, ಅದರಿಂದ ಒಳ್ಳೆಯದಾಗುವುದಿಲ್ಲವೆಂದು ನಂಬಿಕೆ ಕೂಡ ಇದೆ.

ಆದರೆ ಇತ್ತೀಚಿನ ದಿನಗಳಲ್ಲಿ ಗೊಬ್ಬರವನ್ನು ಸಹ ಹೊರಗಡೆ ಮಾರಟ ಮಾಡುತ್ತಾರೆ. ಅದರಿಂದ ಹಣ ಸಂಪಾದಿಸುತ್ತಾರೆ. ಹರಕೆ ಮಾಡಿಕೊಂಡವರು 'ಬ್ಯಾಟೆ' ಕುರಿ ಮತ್ತು ಮೇಕೆ ಕೊಟ್ಟು ಹೋಗುತ್ತಾರೆ. ಮುತ್ತೈಗಳ ಹಟ್ಟಿಯನ್ನು ದೇವಸ್ಥಾನವೆಂದು ಭಾವಿಸಿದ್ದರಿಂದ ಸಾಕಷ್ಟು ಜನರು ಜವಳಿಕೂಡ ಅಲ್ಲೇ ತೆಗಿಸುತ್ತಾರೆ.

ಉದಿ-ಪದಿ

ಮ್ಯಾಸಬೇಡರು ಪ್ರತಿಯೊಂದು ದೇವರ ಎತ್ತುಗಳ ಜಾತ್ರೆಗಳು ಪ್ರಾರಂಭವಾಗುವುದು ಪುಷ್ಯ ಮಾಸದಲ್ಲಿ ಅದು ಮೊದಲು ಹಿರೇಹಳ್ಳಿಯ ದಡ್ಡಿ ಅಥವಾ ದಡ್ಡಿ ಸೂರನಾಯಕನ ಜಾತ್ರೆಯ ನಂತರ ಇತರೇ ಎಲ್ಲಾ ಕಡೆ ಮ್ಯಾಸಮಂಡಲಗಳಲ್ಲಿ ಜಾತ್ರೆಗಳು ಪ್ರಾರಂಭವಾಗುತ್ತವೆ. ಈ ಜಾತ್ರೆಗಳಲ್ಲಿ ವಿಶೇಷ ಎಂದರೆ ಉದಿ-ಪದಿ ಅಂತ ಸೊಪ್ಪಿನಿಂದ (ಲೆಕ್ಕಿಲೇಸೊಪ್ಪು ಮತ್ತು ಬಂದ್ರೆ ಸೊಪ್ಪು) ಕಟ್ಟಿರುತ್ತಾರೆ. ಅಲ್ಲಿ ಮ್ಯಾಸಮಂಡಲದ ಪ್ರತಿಯೊಂದು ಸಾಂಸ್ಕೃತಿಕ ಕಾರ್ಯಕ್ರಮಗಳು ಅಲ್ಲೇ ನಡೆಯುತ್ತವೆ ಮತ್ತು ಎತ್ತುಗಳನ್ನು ಮೂರು ಅಥವಾ ಐದುಸಾರಿ ಓಡಿಸುವುದು ಕೂಡ ಉದಿ-ಪದಿ ಕಡೆಗೆ. ಹೋಡಿಸಿ ಅಲ್ಲೇ ನಿಲ್ಲಿಸುತ್ತಾರೆ. ಹಾಗೆ ರಾತ್ರಿಯೆಲ್ಲ ದಾಸೋಹ ಮಾಡುವುದು ಅಲ್ಲೇ ಹಾಗೆ ದಾಸೋಹವನ್ನು ಎಲ್ಲಾ ಭಕ್ತಾದಿಗಳು ಅಲ್ಲೇ ಮಾಡಿ 'ನೋಮು' ಅಂತ ತೀರಿಸುತ್ತಾರೆ. ಈ ಉದಿ-ಪದಿ ಊರ ಹೊರಗಡೆ ಆಯಾ ಕಟ್ಟಿನ ಸ್ಥಳದಲ್ಲಿ ಹಾಕಿರುತ್ತಾರೆ. ಹೀಗೆ ಅತ್ಯಂತ ಭವ್ಯ ಪಶುಪಾಲಕ ಪರಂಪರೆಯನ್ನು ಹೊಂದಿರುವ ಭಾರತದಲ್ಲಿ ಪಶುಗಳ ರಕ್ಷಣೆಗಾಗಿ ಪ್ರಾಣವನ್ನೇ ಮುಡುಪಾಗಿಟ್ಟಿರುವ ಹೋರಾಡಿದ ವೀರರ ಸ್ಮರಣೆಗಾಗಿ ಕಲ್ಲುಗಳನ್ನು ಸ್ಥಾಪಿಸಿ ಶಾಸನಗಳನ್ನು ಬರೆಯಿಸಿರುವುದನ್ನು ಕಾಣಬಹುದು.

ಗುಗ್ಗರಿಹಬ್ಬ

ಮ್ಯಾಸಮಂಡಲಕ್ಕೆ ಸೇರಿದ ಎಲ್ಲರೂ ತಮ್ಮ ತಮ್ಮ ದೇವಸ್ಥಾನಗಳ ಬಳಿ ಹನ್ನೆರಡು ಪೆಟ್ಟಿಗೆ ದೇವರುಗಳ ಹೆಸರಿನಲ್ಲಿ ನಡೆಸುವ ಹಬ್ಬ 'ತಾವು ಬೆಳೆದ ಹುರುಳಿ, ಅಲಸಂದೆ, ಎಸರು, ಹೀಗೆ ಗುಗ್ಗರಿಗೆ ಒಳಸಬಹುದಾದ ದ್ವಿದಳ ಧಾನ್ಯಗಳನ್ನು ತಮ್ಮ ತಮ್ಮ ದೇವರುಗಳಿಗೆ ಗುಗ್ಗರಿಯ 'ಎಡೆ' ಮಾಡಿ ನೈವೇಧ್ಯ ಮಾಡುವವರೆಗೆ ಬಳಸುವಂತಿಲ್ಲ. ಇದನ್ನು ಕಟ್ಟುನಿಟ್ಟಾಗಿ ಅನುಸರಿಸುತ್ತಾರೆ. ಗುಗ್ಗರಿಗೆ ಬಳಸುವ 'ಕಾಳು' (ಧಾನ್ಯ) ಕೇಂದಿತ್ರ ಹಬ್ಬ ಇದಾಗಿರುವುದರಿಂದ ಇದನ್ನು ಕಾಳ ಹಬ್ಬ ಎಂದು ಕರೆಯುತ್ತಾರೆ. ಈ ಹಬ್ಬದಲ್ಲಿ ಸರ್ವೇಸಾಮಾನ್ಯವಾಗಿ ಬಳಸುವ ಧಾನ್ಯ ಹುರುಳಿ, ಹಾಗಾಗಿ ಈ ಹಬ್ಬಕ್ಕೆ ಹೆಚ್ಚಿನ ಮಹತ್ವವಿದೆ. ಮತ್ತು ಮ್ಯಾಸಬೇಡರು ಹುರುಳಿಯನ್ನು ಪಾವಿತ್ರ್ಯತೆ ಎಂದು ತಿಳಿಯುತ್ತಾರೆ. ಈ ಹಬ್ಬಕ್ಕೆ ಉದಿ ಪದಿ ಅತ್ಯಂತ ಮಹತ್ವದ್ದು ಹೀಗಾಗಿ ಈ ಸಮುದಾಯದ ಎಲ್ಲಾ ಕೋಮಿನವರು ಬರುತ್ತಾರೆ. ಕುಲಸಾವಿರದವರು ಸೇರಿ ನಡೆಸುವ ಹಬ್ಬ ಇದಾಗಿದೆ.

ಅಡಿಟಿಪ್ಪಣಿ

೧. ಕೃಷ್ಣಮೂರ್ತಿ ಹನೂರು, ಮ್ಯಾಸಬೇಡರ ಸಂಸ್ಕೃತಿ, ಪು-೨೮೦ : ೧೯೯೩

೨. ಚಂದ್ರಶೇಖರ ವಿ.ದಾವಣಗೆರೆ, ಕಾಯಕಯೋಗಿ, ಶ್ರೀಗುರುತಿಪ್ಪೇರುದ್ರಸ್ವಾಮಿ ಟ್ರಸ್ಟ್ ದೇವಸ್ಥಾನ ಸಮಿತಿ, ದಾವಣಗೆರೆ, ಪು-೨೫ : ೨೦೦೦

೩. ಅದೇ ಕೃತಿ, ಪು-೨೬

೪. ಅದೇ ಕೃತಿ, ಪು-೫೫

* * *

ಅಧ್ಯಾಯ - ಐದು

ಮ್ಯಾಸಬೇಡರ ಸಾಮಾಜಿಕ ಕಥನ

೫.೧ ಕುಟುಂಬ ಪದ್ಧತಿ

೫.೨ ವಸತಿ

೫.೩ ಆಹಾರ ಪದ್ಧತಿ

೫.೪ ಉಡುಗೆ ತೊಡುಗೆ

೫.೫ ಮದುವೆ

೫.೬ ಶವಸಂಸ್ಕಾರ

೫.೭ ವೈಧ್ಯ ಪದ್ಧತಿ

೫.೮ ನಂಬಿಕೆಗಳು

೫.೯ ಕಟ್ಟೆಮನೆ ನ್ಯಾಯಪದ್ಧತಿ

ಅಧ್ಯಾಯ - ಐದು

ಮ್ಯಾಸಬೇಡರ ಸಾಮಾಜಿಕ ಕಥನ

ಬುಡಕಟ್ಟು ಸಮುದಾಯವಾದ ಮ್ಯಾಸಬೇಡರು ಕೂಡ ತಮ್ಮ ಜನತೆಗೆ ತಮ್ಮದೇ ಆದ ಸಾಮಾಜಿಕ ವ್ಯವಸ್ಥೆಯೊಂದನ್ನು ರೂಪಿಸಿಕೊಟ್ಟಿದ್ದಾರೆ. ರೀತಿ ನೀತಿಗಳನ್ನು ರೂಢಿಸಿಕೊಂಡಿದ್ದಾರೆ. ನ್ಯಾಯ ನಿರ್ಣಯಗಳನ್ನು ಕಲ್ಪಿಸಿಕೊಟ್ಟಿದ್ದಾರೆ. ತಳ ಸಮುದಾಯಗಳ ಸಮಸ್ಯೆ, ತಕರಾರು ಇಕ್ಕಟ್ಟಿನ ಪರಿಸ್ಥಿತಿ, ಸಂಸಾರದ ತೊಡಕು, ಒಬ್ಬರಿಗೆ ಅನ್ಯಾಯವಾದಾಗ ಮಾರ್ಗೋಪಾಯಗಳನ್ನು ತಿಳಿಹೇಳುವುದು ಹೀಗೆ ಮ್ಯಾಸಬೇಡರಲ್ಲೂ ಕೂಡ ಒಂದು ಒಳಾಡಳಿತ ವ್ಯವಸ್ಥೆ ಇದೆ.[1] ಈ ಸಮುದಾಯದಲ್ಲಿ ಪಿತೃ ಪ್ರಧಾನ ಕುಟುಂಬ ವ್ಯವಸ್ಥೆಯೇ ಇದ್ದರೂ ಸಹ ಇವರ ಕುಟುಂಬಗಳಲ್ಲಿ ಹೆಣ್ಣು ಮಗುವಿನ ಜನನ ಬಹಳ ಸಂತೋಷವನ್ನು ಉಂಟುಮಾಡುತ್ತವೆ. ಶಕ್ತಿ ದೇವತೆಯ ಪ್ರತಿರೂಪವೆಂದು ಓಲೈಸುತ್ತಾರೆ. ಮೊದಲನೆಯ ಮಗು ಗಂಡಾದರಂತೂ ಹಬ್ಬವೇ ಆಚರಿಸುತ್ತಾರೆ. ವಯೋಬೇದವಿಲ್ಲದೆ ಕುಟುಂಬದ ಎಲ್ಲರೂ ಸಂತೋಷ ಸಂಭ್ರಮಗೊಳ್ಳುತ್ತಾರೆ. ಪ್ರಾಚೀನ ಸಾಂಸ್ಕೃತಿಯಲ್ಲಿ ಪ್ರತಿಯೊಂದು ಬುಡಕಟ್ಟಿಗೂ ತನ್ನ ಕುಲದ ಪಾವಿತ್ರ್ಯತೆಯನ್ನು ಕಾಪಾಡಿಕೊಳ್ಳುವುದು ಬಹು ಮುಖ್ಯವಾದದ್ದೆಂದು ತೋರುತ್ತದೆ. ಅದಕ್ಕಾಗಿಯೇ ಹಲವಾರು ಕಟ್ಟು-ಕಟ್ಟಳೆಗಳನ್ನು ಕುಲದ ಹಿರಿಯರು ವಿಧಿಸಿದ್ದಾರೆ. (ಕೃಷ್ಣಮೂರ್ತಿ ಹನೂರು, ಪು-೭೫, ೧೯೯೩)

ಈ ಹಿನ್ನಲೆಯಲ್ಲಿ ಬುಡಕಟ್ಟುಗಳು ಒಂದು ಪ್ರದೇಶದಲ್ಲಿ ಬಾಳುವ ತನ್ನ ಕುಲದವರ ಕಟ್ಟಳೆಗಳನ್ನು ನೋಡಿಕೊಳ್ಳುವಂತೆ ಸಾಮಾಜಿಕವಾಗಿಯೂ ಕುಲದ ಪ್ರತಿಯೊಬ್ಬ ಸದಸ್ಯನೂ ನ್ಯಾಯದ ಬಗೆಗೂ ಆಸ್ಥೆವಹಿಸಬೇಕೆಂಬುದನ್ನು ಮನಗಾಣುವಂತೆ ತಿಳಿಯಪಡಿಸಿದ್ದರು. ಅವರದೇ ಆದ ಸಾಮಾಜಿಕ ಕಟ್ಟು ಪಾಡುಗಳನ್ನು ಸಾಮಾಜಿಕ ನ್ಯಾಯದ ವ್ಯವಸ್ಥೆಯ ರೂಪುರೇಷೆಯನ್ನು ಹಾಕಿಕೊಟ್ಟಿದ್ದರು. ಆದರೆ ಇಂದು ಅವೆಲ್ಲಾ ಅಚ್ಚುಕಟ್ಟುನಿಟ್ಟಾಗಿ ಚಾಲನೆಯಲ್ಲಿಲ್ಲ, ಅವರ ಆ ವ್ಯವಸ್ಥೆ ಸಡಿಲಗೊಂಡು ಅತಂತ್ರ ಸ್ಥಿತಿಯನ್ನು

ತಲುಪಿದೆ. ಆದರೂ ಹಿಂದಿದ್ದ ವ್ಯವಸ್ಥೆಯ ವಿವರಗಳನ್ನು ಈಗ ಬದುಕುಳಿದಿರುವ ಹಿರಿಯ ವಕ್ತೃಗಳಿಂದ ಕೇಳಿ ಸಂಗ್ರಹ ರೂಪದಲ್ಲಿ ವಿವೇಚಿಸಲಾಗಿದೆ. ಏನೆಲ್ಲಾ ಬದಲಾವಣೆಗಳಾಗಿದ್ದರೂ ತಮಗರಿವಿಲ್ಲದೆಯೇ ಕೆಲವು ಕಟ್ಟು ಪಾಡುಗಳನ್ನು ಚಾಚೂತಪ್ಪದೆ ಅನುಸರಿಸಿಕೊಂಡು ಹೋಗುತ್ತಿದ್ದಾರೆ.

ಮ್ಯಾಸಬೇಡರ ಜೀವನ ವಿಧಾನ ಮತ್ತು ಸಾಮಾಜಿಕ ವ್ಯವಸ್ಥೆಯು ಸರಳ ಸಮಾಜದ ಲಕ್ಷಣಗಳನ್ನು ಹೊಂದಿರುತ್ತದೆ. ಹಟ್ಟಿಗಳಲ್ಲಿ ವಾಸಿಸುತ್ತಿದ್ದ ಇವರ ಸಮುದಾಯವು ಒಂದೆಡೆ ಸ್ಥಿರವಾಗಿ ನೆಲೆ ನಿಂತ ಮೇಲೆ ವಸತಿ ವ್ಯವಸ್ಥೆಯನ್ನು ರೂಢಿಸಿಕೊಂಡಿರುವುದು ಕಂಡು ಬರುತ್ತದೆ. ಜಟಿಲವಾದ ಸಾಮಾಜಿಕ ವ್ಯವಸ್ಥೆ ಇಲ್ಲಿ ಕಂಡು ಬರುವುದಿಲ್ಲ. ಏಕಪತ್ನಿತ್ವ ಸಾಮಾನ್ಯವಾದ ಅಂಶ ಪತ್ನಿಯು ತಾನು ಕಟ್ಟಿಕೊಂಡವನಿಂದ ಏನಾದ್ರು ತೊಂದರೆ ಅನುಭವಿಸಿದಾಗ ಅಥವಾ ವಿಚ್ಛೇದನ ಪಡೆದಾಗ ತಂದೆ ತಾಯಿಯವರೊಡನೆ ಬದುಕಲು ಅವಕಾಶವಿದೆ. ತಂದೆಯೇ ಕುಟುಂಬದ ಮುಖ್ಯಸ್ಥ ಬೇರೆಲ್ಲಾ ಸಾಮಾಜಿಕ ಪರಿಸರಗಳಲ್ಲಿ ಬದುಕಿದರೂ ಈ ಸಮುದಾಯ ಯಾರದೇ ಆಡಳಿತಕ್ಕೆ ಒಳಗಾಗದೇ ಬದುಕಿರುವುದರಿಂದ ಇವರ ಸಾಮಾಜಿಕ ವ್ಯವಸ್ಥೆಯಲ್ಲಿ ವಿಶಿಷ್ಟತೆ ಇದೆ. ಯಾವುದೇ ಕಾರಣಕ್ಕೂ ತಮ್ಮ ಸಾಮಾಜಿಕ ವ್ಯವಸ್ಥೆಯನ್ನು ಬದಲಾಯಿಸಿಕೊಳ್ಳುವ ಮಟ್ಟಿಗೆ ಇತರರ ಪ್ರಭಾವಕ್ಕೆ ಒಳಗಾಗುವುದಿಲ್ಲ.

೫.೧. ಕುಟುಂಬ ಪದ್ಧತಿ

ಸಾಮಾಜಿಕ ವ್ಯವಸ್ಥೆಯ ಒಂದು ಮುಖ್ಯ ಆಧಾರಸ್ಥಂಭವೆನಿಸಿದ್ದ ಅವಿಭಕ್ತ ಕುಟುಂಬ ಇಂದು ಸಾಕಷ್ಟು ಪರಿವರ್ತನೆಗೆ ಒಳಗಾಗಿದೆ. ವಿಸ್ತೃತ ಕುಟುಂಬ, ಬೃಹತ್ ಗೃಹ, ಸಮಷ್ಟಿ ಕುಟುಂಬ ಸಂಯುಕ್ತ ಕುಟುಂಬ ಇತ್ಯಾದಿ ಹಲವಾರು ಹೆಸರುಗಳಿಂದ ಪ್ರಸಿದ್ಧವಾಗಿದ್ದ ಕುಟುಂಬ ಸಮಾಜಕ್ಕೆ ಸಾಕಷ್ಟು ಭದ್ರತೆಯನ್ನು ಒದಗಿಸಿತ್ತು. ಆದರೆ ಇಂದು ಹಲವಾರು ಪ್ರಭಾವಗಳಿಂದಾಗಿ ಅದರ ರಚನೆ, ಕಾರ್ಯಗಳಲ್ಲಿ ಪರಿವರ್ತನೆಯನ್ನು ಗಮನಿಸಬಹುದು. ಈ ಪರಿವರ್ತನೆಯನ್ನು ಗಮನಿಸುವ ಮುಂಚೆ ಅವಿಭಕ್ತ ಕುಟುಂಬದ ಸ್ಪಷ್ಟ ಪರಿಚಯ ಅಗತ್ಯ.

೫.೧.೧.ಅವಿಭಕ್ತ ಕುಟುಂಬ

ಸಾಮಾನ್ಯವಾಗಿ ಈಗ ಈ ಸಮುದಾಯದಲ್ಲಿ ವಿಭಕ್ತ ಕುಟುಂಬಗಳೇ ಹೆಚ್ಚು ಅವಿಭಕ್ತ ಕುಟುಂಬಗಳು ಕಡಿಮೆಯಾಗಿವೆ. ಆದರೆ ಹಿಂದೆ ಹೆಚ್ಚು ಅವಿಭಕ್ತ ಕುಟುಂಬಗಳೇ ಹೆಚ್ಚು ಇದ್ದವು ಎಂದು ಸಮುದಾಯದವರೇ ಹೇಳುವ ಮಾಹಿತಿಯ ಪ್ರಕಾರ ಕಾಲಬದಲಾದಂತೆಲ್ಲ ಸಮುದಾಯದಲ್ಲಿ ಕುಟುಂಬ ಪದ್ಧತಿಗಳು ಒಡೆಯುತ್ತವೆ. ಅವಿಭಕ್ತ ಕುಟುಂಬ ಪದ್ಧತಿಯಲ್ಲಿ ಚಿಕ್ಕಪ್ಪ, ದೊಡಪ್ಪ, ಅಜ್ಜ, ಅಜ್ಜಿ, ಮಾವ, ಅತ್ತೆ ಇವರ ಮಕ್ಕಳು ಹೀಗೆ ಹೆಚ್ಚು ಮಂದಿ ಇರುತ್ತಾರೆ. ವಾಸಿಸಲು ಗುಡಿಸಲು ಮನೆಗಳು ಮತ್ತು ಕೆಲವು ಹಳೆಯ ತಲೆಮಾರಿನ ಮನೆಗಳಿರುತ್ತವೆ. ಇವರದು ಪಿತೃ ಪ್ರಧಾನ ಕುಟುಂಬವಾದ್ದರಿಂದ ಮನೆಯಲ್ಲಿ ಹಿರಿಯನಾದವನು ಅಜ್ಜ ಹೇಳಿದಂತೆ ಕಾರ್ಯಗಳನ್ನು ನಡೆಸುತ್ತಿದ್ದರು. ಕುಟುಂಬದಲ್ಲಿ

ದುಡಿದದ್ದೆಲ್ಲವನ್ನು ಯಜಮಾನನಿಗೆ ಒಪ್ಪಿಸಬೇಕು. ಆತ ಕುಟುಂಬದ ಜವಾಬ್ದಾರಿ ಹೋರುತ್ತಾನೆ. ಕೂಲಿ ಅಥವಾ ಬೇರಾವುದೇ ಕೆಲಸದ ಹಣವನ್ನು ಯಜಮಾನನಿಗೆ ಒಪ್ಪಿಸಬೇಕು. ಮ್ಯಾಸಬೇಡರು ಮೂಲತಃ ಬೇಟೆಯ ನಂತರ ಅಲ್ಪ ಸ್ವಲ್ಪ ಕೃಷಿಯನ್ನು ಅವಲಂಭಿಸಿದ್ದಾರೆ. ಅಲ್ಲದೆ ಹೆಚ್ಚಾಗಿ ಮಣ್ಣು ಹಾಗೂ ತೋಟಗಳಲ್ಲಿ ಮಾಡುವ ಕೆಲಸ ಗಂಡು ಮಕ್ಕಳು ಬೇರೆ ಬೇರೆ ಕೂಲಿ ಕೆಲಸಗಳಲ್ಲಿ ತೊಡಗಿರುತ್ತಾರೆ. ಹೆಣ್ಣು ಗಂಡುಗಳು ಸಮಪಾಲು ದುಡಿಯಬೇಕು. ಕೂಲಿಯಿಂದ ಬಂದ ಹಣ ಯಜಮಾನನಿಗೆ ಒಪ್ಪಿಸಬೇಕಿತ್ತು. ಆತ ಧಾರ್ಮಿಕ ಕಾರ್ಯಗಳಿಗಾಗಿ ದಿನನಿತ್ಯದ ಹಣದಲ್ಲಿ ಉಳಿತಾಯ ಮಾಡಿ ಉಳಿದಿದ್ದನ್ನು ಕುಟುಂಬ ಪೋಷಣೆಗಾಗಿ ವ್ಯಯಿಸುತ್ತಿದ್ದ.

ಒಟ್ಟಾರೆಯಾಗಿ ಹಿಂದೆ ಯಜಮಾನನಿಗೆ ಹೆಚ್ಚಿನ ಜವಾಬ್ದಾರಿಯಾಗಿರುತ್ತಿತ್ತು. ಕೆಲಸವನ್ನು ಯಜಮಾನನೇ ಹಂಚಿ ಹಾಕುತ್ತಿದ್ದ ಅದರಂತೆ ಮನೆಯ ಸದಸ್ಯರು ಅನುಸರಿಸುತ್ತಿದ್ದರು. ಈ ರೀತಿಯ ಅವಿಭಕ್ತ ಕುಟುಂಬಗಳಿದ್ದು ಮ್ಯಾಸಬೇಡರು ದನಗಳನ್ನು ಎಮ್ಮೆಗಳನ್ನು ಸಾಕುತ್ತಿದ್ದರು. ಅದಕ್ಕಾಗಿ ಮನೆಯ ಪಕ್ಕದಲ್ಲಿ ದನದಹಟ್ಟಿಗಳನ್ನು ಕಟ್ಟಿರುತ್ತಿದ್ದರು. ಈಗ ಅವಿಭಕ್ತ ಕುಟುಂಬಗಳನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಮಾಹಿತಿದಾರರು ಹೇಳುವ ಪ್ರಕಾರ ಸಂಪೂರ್ಣನಾಶವಾಗಿವೆ. ಆದರೆ ಕುಟುಂಬದವರು ಒಂದೇ ಕಡೆ ಗುಡಿಸಲುಗಳನ್ನು ಕಟ್ಟಿಕೊಂಡು ವಾಸಿಸುತ್ತಿದ್ದಾರೆ, ಇಂಥವರನ್ನು ಈಗಲೂ ಕಾಣಬಹುದು. ವಿಭಕ್ತ ಕುಟುಂಬದವರು ಒಂದು ಗುಡಿಸಲಿನಲ್ಲಿ ಅಡಿಗೆ ಮಾಡುತ್ತಾರೆ. ಊಟಕ್ಕೆ ಕುಟುಂಬದ ಸದಸ್ಯರೆಲ್ಲರೂ ಕೂಡುತ್ತಾರೆ. ಕುಟುಂಬದ ಎಲ್ಲ ಹೆಂಗಸರೂ ಕೂಡಿಯೇ ಕೆಲಸ ಮಾಡುತ್ತಾರೆ. ಊಟದ ನಂತರ ಪ್ರತ್ಯೇಕ ಮಲಗುವ ಗುಡಿಸಲಿನಲ್ಲಿ ವಾಸಿಸುತ್ತಾರೆ. ಧಾರ್ಮಿಕ ಕಾರ್ಯಗಳನ್ನು ನಡೆಸಲು ಪ್ರತ್ಯೇಕವಾದ ಒಂದು ಕೋಣೆಯಿರುತ್ತದೆ. ಅದು ಬೇರೆ ಗುಡಿಸಲಿಗಿಂತ ಭಿನ್ನವಾಗಿರುತ್ತವೆ. ದೊಡ್ಡ ಕೋಣೆಯೊಂದಿದ್ದು ಅದಕ್ಕೆ ಕಾಂಸಿಹುಲ್ಲಿನಿಂದ ಬಾದೆಯಿಂದ ಕಟ್ಟಿಕೊಂಡಿರುತ್ತಾರೆ. ಸುತ್ತಲೂ ಕೂಡ ಲಕ್ಕಿಯ ಬರ್ಲುಗಳಿಂದ ಕಟ್ಟಿರುತ್ತಾರೆ. ಈಗ ಕೂಡ ಕೆಲವು ಆಧುನಿಕರಣಗೊಂಡು ಕಲ್ಲುಮಣ್ಣು, ಇಟ್ಟಿಗೆಯಿಂದ ಕಟ್ಟಿರುವುದು ಕಂಡುಬರುತ್ತಿದೆ.

ಇನ್ನು ಮನೆಯಲ್ಲಿ ಸಣ್ಣ ಪುಟ್ಟ ಜಗಳಗಳಾದರೆ ಯಜಮಾನ ಬಗೆಹರಿಸುತ್ತಿರುತ್ತಾರೆ. ಕುಟುಂಬವನ್ನು ಒಡೆಯಲು ಬಿಡುತ್ತಿರಲಿಲ್ಲ. ಅದು ಯಜಮಾನನ ಬುದ್ಧಿವಂತಿಕೆಯನ್ನು ಅವಲಂಭಿಸಿರುತ್ತಿತ್ತು. ಹಿಂದೆ ಪ್ರತ್ಯೇಕವಾದ ಮಲಗುವ ಕೋಣೆಯಲ್ಲಿ ಕುಟುಂಬದ ಸದಸ್ಯರೇ 'ಚಹಾ' ಮಾಡಿಕೊಳ್ಳುತ್ತಿದ್ದರು. ಯಜಮಾನನಿಂದ ಅದಕ್ಕೆ ಬೇಕಾದ ಸಾಮಾಗ್ರಿಯನ್ನು ಪಡೆಯಬೇಕಿತ್ತು. ಒಟ್ಟಾರೆಯಾಗಿ ಎಲ್ಲಾ ಜವಾಬ್ದಾರಿ ಯಜಮಾನರದೇ ಆಗಿರುತ್ತಿತ್ತು.

೫.೧.೨.ವಿಭಕ್ತ ಕುಟುಂಬ

ಇತ್ತೀಚೆಗೆ ನಾವು ಕಾಣುವುದು ಎಲ್ಲ ಜನರಂತೆಯೇ ವಿಭಕ್ತವಾದ ಸಣ್ಣ ಕುಟುಂಬಗಳನ್ನು. ಅವಿಭಕ್ತ ಕುಟುಂಬದಲ್ಲಿ ಸದಸ್ಯನಿಗೆ ಪೂರ್ಣಸ್ವಾತಂತ್ರ್ಯಯಾವ ಸಂದರ್ಭದಲ್ಲಿ ಇರುತ್ತಿರಲಿಲ್ಲ, ದುಡಿಮೆಗೆ

ತಕ್ಕ ತೃಪ್ತಿ ಇರುತ್ತಿರಲಿಲ್ಲ. ಕೆಲಸದ ಸಂದರ್ಭದಲ್ಲಿ ಸದಸ್ಯ ಮನೆಯಲ್ಲಿ ಇರುವುದನ್ನು ಯಜಮಾನ ಒಪ್ಪುತ್ತಿರಲಿಲ್ಲ. ಕೌಟುಂಬಿಕ ಕಲಹಗಳು ಆಗಾಗ ಆಗುತ್ತಿತ್ತು. ಇಂಥ ಹತ್ತು ಹಲವಾರು ಕಾರಣಗಳಿಂದ ದೊಡ್ಡ ಕುಟುಂಬ ಚಿಕ್ಕ ಕುಟುಂಬಗಳಾಗಲು ಕಾರಣವಾಯಿತು. ಚಿಕ್ಕ ಕುಟುಂಬದಲ್ಲಿ ಅಜ್ಜಿ, ಅಜ್ಜ, ತಂದೆ, ತಾಯಿ ಮಕ್ಕಳು ಇರುತ್ತಾರೆ. ಜೊತೆಯಲ್ಲಿ ಪಿತೃ ಪ್ರಧಾನ ಕುಟುಂಬವಾದ್ದರಿಂದ ಮನೆಯ ಯಜಮಾನರಾಗಿ ಅಜ್ಜ ಅಜ್ಜಿಯರು ಇರುತ್ತಾರೆ. ಮನೆಯ ಹಿರಿಯ ಮಗನು ಕಾರ್ಯನಿರ್ವಹಿಸುವ ಕುಟುಂಬ ಪೋಷಣೆ ಮಾಡಲು ಜವಾಬ್ದಾರನಾಗಿರುತ್ತಾನೆ. ಆದರೆ ಧಾರ್ಮಿಕ ಕಾರ್ಯಗಳನ್ನು ನಡೆಸಲು ಮನೆಯ ಹಿರಿಯರಾದ ಅಜ್ಜ ಅಜ್ಜಿಯರೇ ಪ್ರಧಾನರೆನಿಸುತ್ತಾರೆ. ಇಂಥ ವಿಭಕ್ತ ಕುಟುಂಬದ ಮನೆ ಸರಳವಾಗಿರುತ್ತದೆ. ಗುಡಿಸಲಾದರೆ ಒಳಗಡೆ ಅಡಿಗೆ ಕೋಣೆ ಮತ್ತು ಹಜಾರ, ಅದರ ಮಧ್ಯದಲ್ಲಿ ಭಂಡಾರದ ಕಂಬವಿರುತ್ತದೆ. ಹಂಚಿನ ಮನೆಯಾದರೆ ಮುಂದಿನ ಹಜಾರ, ಮಲಗುವ ಕೋಣೆ, ಅಡಿಗೆ ಕೋಣೆ, ದೇವರ ಕೋಣೆ, ಬಚ್ಚಲು ಕೋಣೆ ಮತ್ತು ಹಿಂದುಗಡೆ ಹಟ್ಟಿ ಇರುತ್ತದೆ. ಇಂತಹ ಮನೆಗಳಲ್ಲಿ ಐದರಿಂದ ಹತ್ತು ಜನಗಳು ಮಲಗಲು ಅನುಕೂಲವಿರುತ್ತದೆ. ಇಂಥ ಮನೆಗಳನ್ನು ಚಿತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಕಾಣಬಹುದು. ಆದರೆ ಗುಡಿಸಲಿನಲ್ಲಿಯೇ ಹೆಚ್ಚು ಮಂದಿ ಬೇಡರು ಚಿಕ್ಕ ಕುಟುಂಬ ಹೊಂದಿ ವಾಸಿಸುತ್ತಿದ್ದಾರೆ. ಮನೆಯ ಹೊರಗೆ ಚಿಕ್ಕ ಗುಡಿಸಲಿದ್ದು ಅಲ್ಲಿ ಮುಟ್ಟಾದವರು ಮಲಗುತ್ತಾರೆ. ಕೆಲವರು ಮನೆಯ ಹೊರಗಡೆ ಮಲಗುತ್ತಾರೆ. ಮಲಗಲು ಚಾಪೆ ಮತ್ತು ಗೋಣಿ ಚೀಲಗಳನ್ನು ಬಳಸುತ್ತಾರೆ. ಕೆಲವರು ಕಂಬಳಿ ಹಾಕಿಕೊಂಡು ಮಲಗುತ್ತಾರೆ. ಗುಡಿಸಲಿನಲ್ಲಿ ಗಂಡಹೆಂಡಿರು ಮಲಗಲು ಪ್ರತ್ಯೇಕ ಅಡ್ಡಗೋಡೆ ಹಾಕಿ ಅದಕ್ಕೆ ಬಿದಿರಿನ ಚಾಪೆಕಟ್ಟಿ ಕೆಲವರು ಲೆಕ್ಕಿಲಿಯ ಬರಲನ್ನು ನೇಯ್ದು ಮರೆ ಮಾಡಿರುತ್ತಾರೆ. ಹಾಗೆಯೆ ಪಕ್ಕದಲ್ಲಿ ಕುರಿಮೇಕೆಗಳ ಹಟ್ಟಿ ಮತ್ತು ದನಗಳ ಹಟ್ಟಿಯನ್ನು ಕಟ್ಟಿಕೊಂಡಿರುತ್ತಾರೆ. ಗುಡಿಸಲಿಗೆ ಬಾಗಿಲನ್ನು ಮುಚ್ಚಲು ಕಟ್ಟಿಗೆಯಿಂದ ಮಾಡಿದ ತಟ್ಟಿಗಳಿರುತ್ತವೆ. ಗುಡಿಸಲು ಬಾಗಿಲು ಕಿರಿದಾಗಿದ್ದು ಎಲ್ಲರೂ ಬಗ್ಗಿ ಒಳಗೆ ಹೋಗುವಂತಿರುತ್ತವೆ. ಮಳೆ ಗಾಳಿಯಿಂದ ರಕ್ಷಿಸಲು ಈ ರೀತಿ ಗುಡಿಸಲುಗಳನ್ನು ಮಾಡಿಕೊಂಡಿರುತ್ತಾರೆ. ಈ ರೀತಿ ವಿಭಕ್ತ ಕುಟುಂಬದ ರಕ್ಷಣೆಗಾಗಿ ಪ್ರತಿಗುಡಿಸಲಿನಲ್ಲಿ ಮುಟ್ಟಾದ ಹೆಂಗಸರು ಮಲಗುವ ಕೋಣೆಬಿಟ್ಟು ಒಂದು 'ತಡೆ' ಯನ್ನು ಆಚಾರಿಯಿಂದ ಅಥವಾ ಮಂತ್ರವಾದಿಯಿಂದ ತೆಗೆದುಕೊಂಡು ಬಂದು ಕಟ್ಟಿರುತ್ತಾರೆ.

ಈ ಮಂತ್ರ ಕಾಯಿ ಸಿಪ್ಪೆಯ ಸಹಿತವಿದ್ದು ಅದರ ಒಳಗೆ ತೂತುಮಾಡಿ ಮಂತ್ರವಾದಿ ಕಟ್ಟಿರುತ್ತಾನೆ. ಸಾಮಾನ್ಯವಾಗಿ ಎಲ್ಲ ಮ್ಯಾಸಬೇಡರು ಮನೆಯಲ್ಲಿ ಇದನ್ನು ಕಾಣಬಹುದು. ತೆಂಗಿನ ಕಾಯಿಯನ್ನು ಮರದಿಂದ ಕೆಳಕೆ ಹಾಕದೆ ಹತ್ತಿ ತರಬೇಕು. ಹಳೆಯ ಮರದಿಂದ ಕಾಯಿಯನ್ನು ಕೀಳಬೇಕು. ಗುಡಿಸಲು ಮದ್ಯದ ಅಥವಾ ಕಂಬದ ತುದಿಯಲ್ಲಿ ದೇವರ ಭಂಡಾರವಿರುತ್ತದೆ. ಆದ್ದರಿಂದ ಮನೆಯ ಒಳಗೆ ಅಶುದ್ಧ ಮಾಡಬಾರದು. ಮಾಂಸದ ಅಡಿಗೆ ಮಾಡುವಾಗ ಹಟ್ಟಿಯಲ್ಲಿ ಅದನ್ನು ಶುದ್ಧಗೊಳಿಸಿ ತಂದು

ಅಡಿಗೆ ಮನೆಯ ಪ್ರತ್ಯೇಕ ಕೋಣೆಯಲ್ಲಿ ಪದಾರ್ಥ ಮಾಡುತ್ತಾರೆ. ಇದಕ್ಕೆ ಕಾರಣ ದೇವರದ ಭಂಡಾರ ಅಥವಾ ಮನೆಗೆ ಕಟ್ಟು ಕಟ್ಟಿದ್ದೇವೆ, ಶಾಂತಿ ಮಾಡಿಸಿದ್ದೇವೆ ಎಂದು ನಂಬಿಕೆ. ಮಾಂಸದ ಊಟ ಮಾಡಿದವರು ದೇವರ ಭಂಡಾರದ ಕಂಬವನ್ನು ಮುಟ್ಟುವುದಿಲ್ಲ. ಸಾಮಾನ್ಯವಾಗಿ ಮಕ್ಕಳನ್ನು ಬಿಟ್ಟರೆ ಕುಟುಂಬದ ಎಲ್ಲರೂ ದುಡಿಯಬೇಕು. ಗಂಡು-ಹೆಣ್ಣುಗಳು ಒಟ್ಟಿಗೆ ಕೂಲಿಗೆ ಹೋಗಬೇಕು. ಅಜ್ಜ-ಅಜ್ಜಿಯರಿದ್ದರೆ ಮನೆಗೆಲಸದಲ್ಲಿ ನಿರತರಾಗಿರುತ್ತಾರೆ. ಮನೆಗೆ ಬೇಕಾದ ತರಕಾರಿಗಳನ್ನು ಬೆಳೆಯುತ್ತಾರೆ. ಇದರಿಂದ ಕುಟುಂಬದ ಆದಾಯ ಸ್ತ್ರೀ-ಪುರುಷ ಇಬ್ಬರ ದುಡಿಮೆಯಿಂದ ಹೆಚ್ಚುತ್ತದೆ. ಕುಟುಂಬದಲ್ಲಿ ಸ್ತ್ರೀ ದುಡಿಮೆ ಮಾಡುವುದರಿಂದ ಮಾತ್ರ ಪ್ರಮುಖಳಾಗುತ್ತಾಳೆ. ಹಾಗಾಗಿ ಇವರ ಕೌಟುಂಬಿಕ ಸೌಹಾರ್ದ ದುಡಿಮೆಯ ಹಾಗೂ ಗಳಿಕೆಯ ನೆಲೆಯಲ್ಲಿ ಇರುತ್ತವೆ. ಅಜ್ಜ-ಅಜ್ಜಿಯರು ದುಡಿಯಲು ಶಕ್ತರಲ್ಲವಾದರೆ, ಮಕ್ಕಳು ಹೇಳಿದಂತೆ ಕೇಳಿಕೊಂಡು ಇರುತ್ತಾರೆ. ಮನೆಯಲ್ಲಿ ಐದರಿಂದ ಆರು ವರ್ಷ ಕಳೆದ ಮಕ್ಕಳು ಹಾಗೂ ಬಿಡುವಿದ್ದಾಗ ಹೆಂಗಸರು ಬೀಡಿ ಕಟ್ಟುತ್ತಾರೆ. ಗಂಡಸರು ಬೇರೆ ಕೆಲಸಗಳಲ್ಲಿ ತೊಡಗಿಸಿಕೊಂಡಿರುತ್ತಾರೆ. ಹಿಂದಿನ ಗ್ರಾಮೀಣ ಸಮಾಜದಲ್ಲಿ ಪ್ರಾಥಮಿಕ ಘಟಕವೆನಿಸಿದ್ದ ಅವಿಭಕ್ತ ಕುಟುಂಬ ವಿಶಿಷ್ಟ ಸೇವೆಯನ್ನು ಸಲ್ಲಿಸಿದ್ದುಂಟು. ಬಾಲ್ಯ ವಿವಾಹ ಪದ್ಧತಿ ಪ್ರಚಲಿತವಿದ್ದ ಕಾಲದಲ್ಲಿ ಅಂತಹ ಎಳೆಯ ವಯಸ್ಸಿನ ದಂಪತಿಗಳು ಸ್ವತಃ ದುಡಿಯುವ ಶಕ್ತಿಯನ್ನು ಪಡೆಯವವರೆಗೂ ಅವಿಭಕ್ತ ಕುಟುಂಬ ಆಶ್ರಯವನ್ನು ನೀಡಿತ್ತು. ವೈದ್ಯಕೀಯ ಸೌಲಭ್ಯ ದುರ್ಲಭವೆನಿಸಿದ್ದ ಗ್ರಾಮೀಣ ಸಮಾಜದಲ್ಲಿ, ಕಾಯಿಲೆ, ಹೆರಿಗೆ ಇತ್ಯಾದಿ ಸಮಯಗಳಲ್ಲಿ ಶುಶ್ರೂಷ ಸೇವೆ ಅವಶ್ಯವೆನಿಸಿದ್ದವರಿಗೆ ಕುಟುಂಬದ ಸದಸ್ಯರು ನೆರವಾಗುತ್ತಿದ್ದರು. ವಿಧವೆಯರಿಗೆ ಮತ್ತು ಆಕೆಯ ಮಕ್ಕಳಿಗೆ ಹಾಗೆಯೇ ಇತರ ಅಭಾಗಿನಿಯರಿಗೆ ಅವಿಭಕ್ತ ಕುಟುಂಬ ಆಶ್ರಯ ನೀಡಿತ್ತು. ಅಂತೆಯೆ ಕುಟುಂಬಕ್ಕೆ ಸಂಬಂಧಿಸಿದ ಇತರೆ ವ್ಯಕ್ತಿಗಳಿಗೂ ಹಲವು ಸಂದರ್ಭಗಳಲ್ಲಿ ಆಶ್ರಯ ನೀಡಬೇಕಿತ್ತು. ಹೀಗೆ ನಿರಾಶ್ರಿತರ ವಯಸ್ಸಾದ ಮಾತೃ-ಪಿತೃಗಳ ಮತ್ತು ಎಳೆಯ ಮಕ್ಕಳ ಪೋಷಣೆ ಮತ್ತು ಪಾಲನೆಯು ಕುಟುಂಬದ ನೈತಿಕ ಕರ್ತವ್ಯವೆನಿಸಿತ್ತು. ಕುಟುಂಬದ ಪ್ರತಿಷ್ಠೆ ಗೌರವ ಮತ್ತು ನೆರೆಹೊರೆಯ ಮೆಚ್ಚುಗೆ ಅಥವಾ ಖಂಡನೆ ಈ ಕರ್ತವ್ಯಕ್ಕೆ ಪ್ರೇರಕ ಹಾಗೂ ಉತ್ತೇಜಕ ಅಂಶವಾಗಿತ್ತು.

ಸಾಕಷ್ಟು ದೀರ್ಘಾವಧಿಯವರೆಗೆ ಯುದ್ಧಗಳನ್ನು ಮತ್ತು ಆಗಾಗ್ಗೆ ದರೋಡೆಗಳನ್ನು ಕಂಡು ಅನುಭವಿಸಿದ ದೇಶಗಳಲ್ಲಿ ಹಾಗೂ ಜನರ ಕಷ್ಟಗಳನ್ನು ಪರಿಹರಿಸುವಲ್ಲಿ ಧಾರ್ಮಿಕ ಸಂಸ್ಥೆಯಾಗಲೀ, ಅಥವಾ ಸರಕಾರವಾಗಲೀ, ಹೆಚ್ಚಿನ ಶ್ರಮವಹಿಸದೇ ಇದ್ದ ಕಾಲದಲ್ಲಿ, ಜನರಿಗೆ ವಿಭಕ್ತ ಕುಟುಂಬವೇ ಸೂಕ್ತವಾಗಿತ್ತು. ಇತ್ತೀಚೆಗೆ ತನ್ನ ಅನೇಕ ಕಾರ್ಯಗಳನ್ನು ಕ್ರಮೇಣ ಕೈಬಿಡುತ್ತಾ ಬರುತ್ತಿದ್ದರೂ ಸಹ ಸಾಮಾನ್ಯ ಪರಿಸ್ಥಿತಿಯನ್ನು ಹಾಗೂ ವಿಷಮ ಪರಿಸ್ಥಿತಿಯಲ್ಲಿ ತನ್ನ ಸದಸ್ಯರುಗಳಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸುವಲ್ಲಿ ಅವಿಭಕ್ತ ಕುಟುಂಬ ಇಂದಿಗೂ ವಿಶಿಷ್ಟ ಪಾತ್ರವನ್ನು ವ್ಯಾಪಕವಾಗಿ ಬೆಳೆಯಬೇಕಿದೆಯಷ್ಟೆ.

ಇಂದು ಸರಕಾರಿ ಮತ್ತು ಹಲವು ಖಾಸಗೀ ಸಂಸ್ಥೆಗಳಲ್ಲಿ ಕೆಲಸ ಮಾಡುವವರಿಗೆ, ಕಾರ್ಖಾನೆ ಮತ್ತು ಗಣಿಗಳಲ್ಲಿ ಕೆಲಸ ಮಾಡುವವರಿಗೆ ಮತ್ತು ಇನ್ನಿತರ ಕೆಲವು ಕ್ಷೇತ್ರಗಳಲ್ಲಿ ಕೆಲಸ ಮಾಡುವವರಿಗೆ ವಿಮೆ ರಕ್ಷಣೆ ಇದೆ. ಈ ದಿಸೆಯಲ್ಲಿ ಸ್ವಲ್ಪ ಮಟ್ಟಿನ ಪ್ರಗತಿಯೂ ನಡೆದಿದೆ. ಆದರೂ ಈ ಸೌಲಭ್ಯವನ್ನು ಪಡೆಯುತ್ತಿರುವವರ ಸಂಖ್ಯೆ ಅತಿ ಕಡಿಮೆ. ವ್ಯವಸಾಯವೇ ಪ್ರಮುಖ ಕಸುಬಾಗಿರುವ ಭಾರತದಲ್ಲಿ ಹಾಗೂ ಸ್ವಂತ ಉದ್ದಿಮೆಗಳಲ್ಲಿ ತೊಡಗಿರುವ ವ್ಯಕ್ತಿಗಳಿಗೆ ಕುಟುಂಬವೇ ಇನ್ನು ಸಾಮಾಜಿಕ ರಕ್ಷಣೆಯನ್ನು ಒದಗಿಸುವ ಪ್ರಮುಖ ಸಂಸ್ಥೆ. (ರಾಜಶೇಖರ್, ಪು-೬೫, ೨೦೦೧)

ಸಹಬಾಳ್ವೆ, ಸಮಪಾಲು, ಸಹಕಾರ, ಸಹನೆ ಇತ್ಯಾದಿ ಉದಾತ್ತ ತತ್ವಗಳ ಆಧಾರದ ಮೇಲೆ ನಿರ್ಮಿತವಾದ ಅವಿಭಕ್ತ ಕುಟುಂಬ, ಸದಾ ಚಟುವಟಿಕೆಯಿಂದ ಕೂಡಿ ಆಶ್ರಯದಾಮವೆನಿಸಿದ್ದುಂಟು. ಕುಟುಂಬದ ವ್ಯಕ್ತಿಗಳಲ್ಲಿ ಅನ್ಯೋನ್ಯತಾ ಭಾವನೆಯನ್ನು ಬೆಳೆಸುವ ಅವಿಭಕ್ತ ಕುಟುಂಬ, ವಯಸ್ಸಾದವರಿಗೆ, ಅಂಗವಿಕಲರಿಗೆ, ವಿಧವೆಯರಿಗೆ, ಅನಾಥರಿಗೆ, ಅಸಹಾಯಕ ಸ್ಥಿತಿಯಲ್ಲಿರುವವರಿಗೆ ಸಾಮಾಜಿಕ ವಿಮೆ ಇದ್ದಹಾಗೆ, ಎಂದು ಹೇಳುವುದುಂಟು.(ಚ.ನ.ಶಂಕರಾವ್, ಪು-೨೮)

ಒಂದುಗೂಡಿಬಾಳುವುದರಿಂದ ಆರ್ಥಿಕ ಲಾಭವುಂಟು, ಕುಟುಂಬದ ಎಲ್ಲ ದುಡಿಯುವ ವ್ಯಕ್ತಿಗಳ ಒಟ್ಟು ಆದಾಯದ ನೆರವಿನಿಂದ ಕಡಿಮೆ ಆದಾಯದ ವ್ಯಕ್ತಿಯೂ ಕೂಡ ನೆಮ್ಮದಿಯ ಜೀವನವನ್ನು ನಡೆಸಬಹುದು ಅಂತೆಯೆ ನಿರುದ್ಯೋಗಿಗಳಿಗೆ ಉದ್ಯೋಗವನ್ನು ಅರಸುತ್ತಿರುವವರಿಗೆ ಇದು ಒಂದು ಆಶ್ರಯ ಆಸರೆ. ಹೀಗೆ ತನ್ನ ಸದಸ್ಯರುಗಳಿಗೆ ಸಮಗ್ರ ರಕ್ಷಣೆಯನ್ನು ಒದಗಿಸುವಲ್ಲಿ ಅವಿಭಕ್ತ ಕುಟುಂಬದ ಕಾರ್ಯ ಪ್ರಮುಖದ್ದಾಗಿರುತ್ತದೆ. ಅವಿಭಕ್ತ ಪದ್ಧತಿ ಆತ್ಮ ವಿಸ್ತರಣಕ್ಕೆ ಅನುಕೂಲವಾದದ್ದು. ಮನೆಯಲ್ಲಿ ನಾಲ್ಕೈದು ಮಂದಿ ಅಣ್ಣ ತಮ್ಮಂದಿರು ಒಟ್ಟಾಗಿ ಬಾಳಿಕೊಂಡಿದ್ದರೆ ಅವರಲ್ಲಿ ಪ್ರತಿಯೊಬ್ಬನೂ ತನ್ನ ಸ್ವತ್ವವನ್ನು ಉಳಿದ ನಾಲ್ಕೈದು ಮಂದಿ ಅಣ್ಣ ತಮ್ಮಂದಿರುಗಳ ಸ್ವತ್ವಗಳಲ್ಲಿ ಏಕೀಭವಿಸುವುದನ್ನು ಅಭ್ಯಾಸ ಮಾಡಿಕೊಳ್ಳುತ್ತಾನೆ. ಆ ನಾಲ್ವರೈವರ ಹೆಂಡಂದಿರುಗಳೂ ಹಾಗೆಯೇ ಪರಸ್ಪರವಾಗಿ ಅಭೇದ ದೃಷ್ಟಿಯಿಂದ ನಡೆದುಕೊಳ್ಳುವುದನ್ನು ಕಲಿಯುತ್ತಾರೆ.

ಈ ಅನ್ಯೋನ್ಯಭಾವದಿಂದ ಅವರುಗಳ ಮನಸ್ಸಿನ ಸಹಾನುಭೂತಿ ಗುಣವು ವಿಸ್ತಾರ ಪಡುತ್ತದೆ. ಇದೇ ಆತ್ಮ ವಿಸ್ತಾರದ ದಾರಿ. ಅವರಲ್ಲಿ ಕಡಿಮೆ ಶಕ್ತಿಯವನಿರುತ್ತಾನೆ. ಕಡಿಮೆ ಸಂಪಾದನೆಯವನಿರುತ್ತಾನೆ. ಗುಣದಲ್ಲಿ ಕಡಿಮೆಯಾದವನೂ ಕೂಡ ಇರುತ್ತಾನೆ. ಅಂಥವನಿಗೆ ಹೆಚ್ಚು ಗುಣವಂತರ, ಹೆಚ್ಚು ಶಕ್ತಿವಂತರ ಸಂಪರ್ಕ ನಿರಂತರವಾಗಿರುವುದರಿಂದ ಅವನ ಸಣ್ಣತನ ಮರೆತು ಹೋಗುತ್ತದೆ. ಸಣ್ಣತನ ಮರೆತಂತೆಲ್ಲ ಒಂದು ದೊಡ್ಡತನದ ರೂಢಿಗೆ ಬರುತ್ತದೆ. ಇದೇ ಹೃದಯ ವೈಶಾಲ್ಯ. ಇದು ತನ್ನದು ಇದು ಅವನದು ಎಂಬ ಭೇದ ಬುದ್ಧಿ ಕಳೆದು ಹೋಗಬೇಕಾದರೆ ಮನುಷ್ಯನು ಇತರೊಡನೆ ಬೆರೆತು ಅವರ ಕಷ್ಟಗಳು ದುಃಖಗಳೂ, ದುರ್ಬಲತೆಗಳೂ ಅವು ತನ್ನವೇ ಎಂಬಂತೆ ಅನುಭವಿಸಬೇಕು. ಈ ಅಭೇದ ಪ್ರವೃತ್ತಿಯ

ಅಭ್ಯಾಸಕ್ಕೆ ಅವಿಭಕ್ತ ಕುಟುಂಬ ಸಹಾಯಕಾರಿ. ಕೋಪತಾಪ ಲೋಭಾ ಮತ್ಸರಗಳನ್ನು ಅದುವಿಕೊಳ್ಳುತ್ತಾ, ಅನ್ಯೋನ್ಯತಾ ತತ್ವವನ್ನು ಶಿಕ್ಷಣ ಮಾಡಿಸಿ ಕೊಡುವ ಪಾಠಶಾಲೆ ಅವಿಭಕ್ತಿ ಕುಟುಂಬ.

ಅವಿಭಕ್ತ ಕುಟುಂಬ ಜೀವನವೇ ಒಂದು ಸೊಗಸು, ವೈವಿಧ್ಯಮಯ. ನಿತ್ಯ ಒಂದಲ್ಲ ಒಂದು ಚಟುವಟಿಕೆ ಅಂತೆಯೇ ಕುಟುಂಬದ ಸದಸ್ಯರ ಸಂಖ್ಯೆ ಹೆಚ್ಚಿಸುವ, ಒಂದು ಮಗುವಿನ ಜನನ ಅಥವಾ ಮತ್ತೊಂದು ಮಗುವಿನ ನಾಮಕರಣ, ಮತ್ತೊಂದು ಮಗನ ಅಥವಾ ಮಗಳ ಮದುವೆ ಸೀಮಂತ, ಅಥವಾ ಯಾವುದೋ ಒಂದು ಹಬ್ಬ, ಒಂದು ಧಾರ್ಮಿಕ ಚಟುವಟಿಕೆ, ಯಾರಾದರು ನೆಂಟರ ಆಗಮನ, ಕೊನೆಗೆ ಒಂದು ಸಾವು ಇತ್ಯಾದಿ ಹೀಗೆ ಏನಾದರೊಂದು ಚಟುವಟಿಕೆ ನಡೆಯುತ್ತಿರಲೇಬೇಕು. ನಗು, ಅಳು, ನಲಿವು, ಮನಸ್ತಾಪ, ಕೂಗಾಟ, ಜಗಳ, ಮತ್ಸರ ಒಮ್ಮೊಮ್ಮೆ ಜೀವನವೇ ಬೇಸರವೆನಿಸಬಹುದು. ಆದರೆ ಕಿರಿಯರ ಮಟ್ಟಿಗೆ ಅವಿಭಕ್ತ ಕುಟುಂಬವು ಸಂತಸ ನಲಿವಿನ ಕೇಂದ್ರ ಅವಿಭಕ್ತ ಕುಟುಂಬದ ಅನುಕೂಲತೆಗಳನ್ನು ಕುರಿತು ವಾದ ಮಾಡುವವರ ಪ್ರಕಾರ ಮೇಲಿನ ಅಂಶಗಳು ಪ್ರಮುಖವಾದವುಗಳು.

ಒಟ್ಟಿನಲ್ಲಿ ಪರಂಪರಾಗತವಾಗಿ ಬೆಳೆದು ಬಂದಿದ್ದ ಅವಿಭಕ್ತ ಕುಟುಂಬ ಪದ್ಧತಿಯಲ್ಲಿನ ಪರಿವರ್ತನೆಯನ್ನು ಅರ್ಥಮಾಡಿಕೊಳ್ಳುವ ಕುಟುಂಬದ ವಿವಿಧ ಭಾಗಗಳಲ್ಲಿನ ಬದಲಾವಣೆಗಳನ್ನು ಪರಿಶೀಲಿಸಬೇಕಾಗುತ್ತದೆ. ಅಂತೆಯೇ ಮೇಲಿನ ವಿಶ್ಲೇಷಣೆ ಪ್ರಕಾರ ಕುಟುಂಬ ನಿರ್ವಹಿಸುವ ಕಾರ್ಯಚಟುವಟಿಕೆಗಳಲ್ಲಿ ಹೆಚ್ಚಿನ ಪರಿವರ್ತನೆ ಕಂಡು ಬರದಿದ್ದರೂ, ಹಿಂದೂ ಪರಂಪರಾಗತ ಕುಟುಂಬದ ರಚನೆಯ ವಿಭಾಗವನ್ನು ಪ್ರತಿನಿಧಿಸುವ ಅವಿಭಕ್ತ ಕುಟುಂಬ ಮತ್ತು ಕುಟುಂಬದ ಸದಸ್ಯರುಗಳ ನಡುವಿನ ಸಂಬಂಧದಲ್ಲಿ ಸಾಕಷ್ಟು ಪರಿವರ್ತನೆಯನ್ನು ಗಮನಿಸಬಹುದು.

೫.೧.೩. ಅವಿಭಕ್ತ ಕುಟುಂಬದ ಪರಿವರ್ತನೆಗೆ ಕಾರಣಗಳು

೫.೧.೩.೧ ಹೆಚ್ಚುತ್ತಿರುವ ಜನಸಂಖ್ಯೆ

ಅವಿಭಕ್ತ ಕುಟುಂಬ ಪದ್ಧತಿಯು ಒಂದು ಕಾಲಕ್ಕೆ ಸಮಾಜದಲ್ಲಿ ಅದರದ್ದೇ ಆದ ಸ್ಥಾನಮಾನ ಗೌರವವನ್ನು ಹೊಂದಿತ್ತು. ಆದರೆ ಇಂದು ಅದರ ಸ್ಥಾಮಾನ ಹೆಚ್ಚುತ್ತಿರುವ ಜನಸಂಖ್ಯೆ ಪ್ರಮಾಣದಿಂದ ಹಲವಾರು ಸಮಸ್ಯೆಗಳು ಉದ್ಭವವಾಗಿ ಅವಿಭಕ್ತ ಕುಟುಂಬ ಪತನಕ್ಕೆ ಕಾರಣವಾಗಿದೆ. ಹಿಂದಿನ ಕಾಲದಲ್ಲಿ ಮ್ಯಾಸಬೇಡರ ಸಮುದಾಯದಲ್ಲಿ ಅವಿಭಕ್ತ ಕುಟುಂಬಗಳೇ ಹೆಚ್ಚು ಕಂಡುಬರುತ್ತಿದ್ದವು. ಒಂದೇ ಮನೆಯಲ್ಲಿ, ದೊಡ್ಡಪ್ಪ, ಚಿಕ್ಕಪ್ಪ, ಅಜ್ಜಿ, ಅಜ್ಜ, ಅತ್ತೆ, ಮಾವ, ಅವರ ಮಕ್ಕಳು, ಮೊಮ್ಮಕ್ಕಳು, ಕೂಡಿ ವಾಸವಾಗಿದರು. ಒಂದೇ ವಾಸದ ಮನೆ, ಒಂದೇ ಅಡಿಗೆ ಕೊಣೆ, ಒಂದೇ ರಕ್ತಸಂಬಂಧದಿಂದ ಕೂಡಿ ವಾಸಮಾಡಿರುವಂತರಾಗುತ್ತಿದ್ದರು. ಆದರೆ ಇಂದು ಹೆಚ್ಚುತ್ತಿರುವ ಜನಸಂಖ್ಯೆಯಿಂದಾಗಿ ಮನೆಯ ಸಮಸ್ಯೆ ಪ್ರಮುಖ ಕಾರಣವಾಗದೆ. ಈ ಹಿಂದೆ ಒಂದೇ ಮನೆಯಲ್ಲಿ ಹದಿನೈದು ಇಪ್ಪತ್ತು ಮಂದಿವಾಸಮಾಡುತ್ತಿದ್ದವರು ಇಂದು ಮೂವತ್ತು ಜನ ವಾಸಮಾಡುವ ಸ್ಥಿತಿ ಬಂದಿದೆ. ಇಂತಹ ಸಂದರ್ಭದಲ್ಲಿ ಪರಸ್ಪರ ಒಳಜಗಳಗಳಿಗೆ ಎಡೆಮಾಡಿಕೊಡುತ್ತದೆ.

ಎರಡನೆಯದಾಗಿ ಆಹಾರದ ಸಮಸ್ಯೆ. ಹೆಚ್ಚುತ್ತಿರುವ ಜನಸಂಖ್ಯೆಯಿಂದ ದುಡಿಯುವವರ ಸಂಖ್ಯೆ ಕಡಿಮೆಯಾಗುತ್ತಲೆ ಆಹಾರಕ್ಕಾಗಿ ಪರದಾಡುವಂತಹ ಸ್ಥಿತಿ ಎದುರಾಗುತ್ತಿದೆ. ಒಬ್ಬರಿಗೆ ಸಿಕ್ಕರೆ ಮತ್ತೊಬ್ಬರಿಗೆ ಸಿಗುವುದಿಲ್ಲ, ಇದರಿಂದ ಬೇಸತ್ತು ಪರ್ಯಾಯವಾಗಿ ವಿಭಕ್ತಕುಟುಂಬದ ಅಸ್ತಿತ್ವಕ್ಕೆ ಇದೊಂದು ಕಾರಣ ಎಂದು ಹೇಳಬಹುದು. ಬಹುತೇಕ ಹಟ್ಟಿಗಳಲ್ಲಿ ಇದೇ ಸಮಸ್ಯೆಯಿಂದಲೇ ಹೆಚ್ಚು ಅವಿಭಕ್ತ ಕುಟುಂಬ ಶಿಥಿಲತೆಗೆ ಕಾರಣ ಎನ್ನಬಹುದು.

ಮೂರನೆಯದಾಗಿ ಉಡುಗೆ ತೊಡುಗೆಗಳ ಸಮಸ್ಯೆ. ಕಡಿಮೆ ಜನಸಂಖ್ಯೆ ಹೊಂದಿದರೆ, ಒಂದು ಹಿಡಿತದಲ್ಲಿ ಉಡುಗೆ ತೊಡಗೆಗಳನ್ನು ಒದಗಿಸಬಹುದು. ಇದರಿಂದ ಖರ್ಚು ವೆಚ್ಚ ಕಡಿಮೆ ಬರುತ್ತಿತ್ತು. ಆದರೆ ಇಂದು ಹೆಚ್ಚು ಜನರನ್ನು ಹೊಂದಿರುವುದರಿಂದ ಉಡುಗೆ ತೊಡುಗೆಗಳನ್ನು ಒದಗಿಸುವುದು ಕಷ್ಟವಾಗುತ್ತದೆ.

ಏಕಕಾಲದಲ್ಲಿ ಎಲ್ಲರಿಗೂ ಒದಗಿಸುವುದು ಸಾಧ್ಯವಾಗದೇ ಇದ್ದಾಗ ಪರಸ್ಪರ ವೈಮನಸ್ಸುಗಳುಂಟಾಗಿ ಒಳಜಗಳಗಳಿಗೆ ಕಾರಣವಾಗುತ್ತದೆ. ಇಂತಹ ಸಮಯದಲ್ಲಿ ವಿಭಕ್ತ ಕುಟುಂಬಗಳು ಅಸ್ತಿತ್ವಕ್ಕೆ ಕಾರಣವಾಗುತ್ತದೆ. ಹೀಗಾಗಿ ಇಂದು ಅವಿಭಕ್ತಕುಟುಂಬಗಳು ಶಿಥಿಲವಾಗುತ್ತಿವೆ ಎಂದು ಹೇಳಬಹುದು.

೫.೧.೩.೨ ಶಿಕ್ಷಣ

ಅವಿಭಕ್ತ ಕುಟುಂಬ ಶಿಥಿಲತೆಗೆ ಆಧುನಿಕ ಶಿಕ್ಷಣ ಮತ್ತೊಂದು ಪ್ರಮುಖ ಕಾರಣ. ಸಮಾಜದಲ್ಲಿ ಎಲ್ಲಾ ಸಮುದಾಯಗಳಂತೆ ಮ್ಯಾಸಬೇಡರು ಇಂದು ಶಿಕ್ಷಣಕ್ಕೆ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಪ್ರತಿಯೊಂದು ಹಟ್ಟಿಗಳಲ್ಲಿ ಇಂದು ಪ್ರಾಥಮಿಕ ಶಾಲೆಗಳು, ಅಂಗನವಾಡಿ ಕೇಂದ್ರಗಳು ತೆರೆದಿರುವುದರಿಂದ ಹಾಗೆ ಪ್ರಾಥಮಿಕ ಶಾಲೆಯಲ್ಲಿ ಪುಸ್ತಕ, ಬಟ್ಟೆ, ಊಟ, ಜೊತೆಗೆ ಸೈಕಲ್ ಸಮೇತ ಕೊಡುವುದರಿಂದ ಹೆಚ್ಚು ಜನರು ತಮ್ಮ ಮಕ್ಕಳನ್ನು ಶಾಲೆಗೆ ಕಳಿಸುತ್ತಿದ್ದಾರೆ. ಹೀಗೆ ಪ್ರಾಥಮಿಕ ಹಂತದಲ್ಲಿ ಉಚಿತ ಸೌಲಭ್ಯವಿರುವುದರಿಂದ ಹಂತಹಂತವಾಗಿಯೇ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ಕೊಡುತ್ತಿದ್ದಾರೆ. ಇದರಿಂದಾಗಿಯೇ ಹೆಚ್ಚು ಗಮನ ಮಕ್ಕಳ ಕಡೆಗೆ ಕೇಂದ್ರೀಕರಿಸುವಂತಾಗುತ್ತದೆ. ಇಂತಹ ಸಂದರ್ಭದಲ್ಲಿ ಮಕ್ಕಳು ಉನ್ನತ ವ್ಯಾಸಂಕ್ಕೆ ತೊಡಗಿಸಿಕೊಂಡಂತೆಲ್ಲ ಹೆಚ್ಚು ಖರ್ಚು ವೆಚ್ಚಗಳು ತಗಲುತ್ತವೆ. ಆಗ ಕುಟುಂಬದ ಯಜಮಾನನಿಂದ ವೆಚ್ಚ ಬರಿಸಲು ಸಾಧ್ಯವಾಗದೇ ಇದ್ದಾಗ, ಮತ್ತು ಕೆಲವರ ಮಕ್ಕಳು ಓದಿ, ಕೆಲವರ ಮಕ್ಕಳು ಓದದೇ ಇದ್ದಾಗ ಅಣ್ಣ ತಮ್ಮಂದಿರಲ್ಲೇ ವೈಮನಸ್ಸುಗಳುಂಟಾಗಿ ವಿಭಜನೆ ಹೊಂದುತ್ತಾರೆ. ಇದರಿಂದ ಅವಿಭಕ್ತ ಕುಟುಂಬ ಶಿಥಿಲತೆಗೆ ಇದೊಂದು ಕಾರಣ ಎಂದು ಹೇಳಬಹುದು.

೫.೧.೩.೩ ನಗರೀಕರಣ ಮತ್ತು ಔದ್ಯೋಗಿಕರಣ

ಅವಿಭಕ್ತ ಕುಟುಂಬ ಶಿಥಿಲತೆಗೆ ನಗರೀಕರಣ ಮತ್ತು ಔದೋಗಿಕರಣ ಪ್ರಮುಖ ಕಾರಣಗಿವೆ. ಅದರಲ್ಲಿ ಔದೋಗಿಕರಣದ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಕೈಗಾರಿಕಾ ಕ್ರಾಂತಿಯು ಸಮಾಜದಲ್ಲಿ

ಹಲವು ಪ್ರಮುಖ ಬದಲಾವಣೆಗಳನ್ನು ತರುವಲ್ಲಿ ಯಶಸ್ವಿಯಾಗಿದೆ. ಅವಿಭಕ್ತ ಕುಟುಂಬ ಬೆನ್ನೆಲುಬಿನಂತಿದ್ದ ಗ್ರಾಮೀಣ ಸಮಾಜ, ಕೃಷಿ ಮತ್ತು ಪಶುಪಾಲನೆಯ ವೃತ್ತಿ, ಕುಟುಂಬದ ಸದಸ್ಯರುಗಳನ್ನು ಒಂದೆಡೆ ಕೂಡಿಹಾಕುವುದರಲ್ಲಿ ಯಶಸ್ವಿ ಎನಿಸಿತ್ತು. ಆದರೆ ಇಂದು ನಗರಗಳಲ್ಲಿ ಹಲವಾರು ಕೈಗಾರಿಕೆಗಳು, ಕಾರ್ಖಾನೆಗಳು ಮತ್ತು ಸಂಬಂಧ ಪಟ್ಟ ಉದ್ದಿಮೆಗಳು ಹೆಚ್ಚು ಉದ್ಯೋಗ ಅವಕಾಶವನ್ನು ಸೃಷ್ಟಿಸುತ್ತಾ ಬಂದಿವೆ. ಆದ್ದರಿಂದ ನಗರಗಳತ್ತ ಸುತ್ತು ಮುತ್ತು ಹಟ್ಟಿ ಅಥವಾ ಹಳ್ಳಿಗಳ ಬುಡಕಟ್ಟು ಜನರನ್ನು ಆಕರ್ಷಿಸುತ್ತಿವೆ. ಇಂತಹ ಆಕರ್ಷಣೆಗೆ ಒಳಗಾದ ಮ್ಯಾಸಬೇಡರು ಪ್ರಮುಖರು ಎಂದು ಹೇಳಬಹುದು.

ಮ್ಯಾಸಬೇಡರ ಸಮುದಾಯದ ಯುವಕರು ಶಿಕ್ಷಣ ಕಲಿತು ಹೆಚ್ಚಾಗಿ ಪಟ್ಟಣಗಳತ್ತ ಮುಖಮಾಡಿದ್ದಾರೆ. ಇಂತಹ ಪಟ್ಟಣಗಳತ್ತ ಮುಖಮಾಡಿರುವರು ಮತ್ತು ಕೆಲವರು ಪಟ್ಟಣಗಳಿಗೆ ಹತ್ತಿರವಿದ್ದು ಹೆಚ್ಚು ಕಾಲ ಪಟ್ಟಣ ಮತ್ತು ನಗರಗಳಲ್ಲೇ ಕಾಲ ಕಳೆಯುತ್ತ ಕಾರ್ಖಾನೆಗಳಲ್ಲಿ ದುಡಿಯಲಾರಂಭಿಸಿದ್ದಾರೆ. ಅವರ ವಿದ್ಯಾಭ್ಯಾಸ ಮಟ್ಟಕ್ಕೆ ಅನುಗುಣವಾಗಿ ವಿವಿಧ ವೃತ್ತಿಗಳಲ್ಲಿ ತೊಡಗಿಸಿಕೊಂಡು, ಬರುಬರುತ್ತ ಹಳ್ಳಿಗಳ ಸಂಸ್ಕೃತಿಯನ್ನು ಮರೆತು ಪಟ್ಟಣಗಳ ಸಂಸ್ಕೃತಿಗೆ ಮಾರುಹೋಗಿದ್ದಾರೆ. ಇಂತಹ ಸಂದರ್ಭದಲ್ಲಿ ತಮ್ಮ ಕುಟುಂಬಗಳನ್ನು ತ್ಯಜಿಸಿ ಅವರದೇ ಆದ ಜೀವನ ಪದ್ಧತಿಯನ್ನು ರೂಢಿಸಿಕೊಳ್ಳುತ್ತಿದ್ದಾರೆ. ಇದರಿಂದಾಗಿ ಸ್ವಂತ ಬದುಕನ್ನು ಕಟ್ಟಿಕೊಳ್ಳಲು ಪರಾವಲಂಬಿರಾಗಿರುತ್ತಾರೆ. ಜೊತೆಗೆ ಪ್ರಸ್ತುತ ಕಾಲ ಮತ್ತು ಬದಲಾದಂತೆಲ್ಲಾ ಮಳೆಯ ಪ್ರಮಾಣ ಏರುಪೇರುಗಳಿಂದ ಕೆಲವರು ವಲಸಿಗರಾಗಿ ನಗರಗಳತ್ತ ಮುಖಮಾಡಿ ಅಲ್ಲಿ ಅವರದೇ ಆದ ಬದುಕನ್ನು ಕಟ್ಟಿಕೊಳ್ಳುತ್ತಿರುವುದು ಕಂಡುಬರುತ್ತದೆ. ಇದರಿಂದ ಅವಿಭಕ್ತ ಕುಟುಂಬ ಶಿಥಿಲತೆಗೆ ಪ್ರಮುಖ ಕಾರಣವೆಂದು ಹೇಳಬಹುದು.

೫.೧.೩.೪ ಉದ್ಯೋಗವನ್ನು ಪಡೆಯುವುದರಿಂದ

ಮ್ಯಾಸಬೇಡ ಸಮುದಾಯದ ಜನರು ಇತ್ತೀಚೆಗೆ ಆಧುನಿಕ ಶಿಕ್ಷಣವನ್ನು ಪಡೆದುಕೊಂಡು ವಿದ್ಯಾವಂತರಾಗಿ ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳಲ್ಲಿ ಉದ್ಯೋಗದಲ್ಲಿ ತೊಡಗಿಸಿಕೊಂಡಿರುವುದು ಪ್ರಮುಖವಾಗಿ ಕಂಡು ಬರುತ್ತಿದೆ. ಉದ್ಯೋಗದಲ್ಲಿ ತೊಡಗಿಸಿಕೊಂಡಿರುವವರು ಬಹುತೇಕ ಅವರ ಸ್ಥಾನಮಾನಕ್ಕೆ ತಕ್ಕಂತೆ ಅವರದೇ ಆದ ಜೀವನ ಪದ್ಧತಿಯನ್ನು ರೂಢಿಸಿಕೊಂಡು, ಊರೂರು ಅಲೆಯುತ್ತಲೇ ಪಟ್ಟಣಗಳಂತ ಪ್ರದೇಶಗಳಲ್ಲಿ ವಾಸಿಸಲು ಮುಂದಾಗಿದ್ದಾರೆ. ಇದರಿಂದಾಗಿ ಅಪ್ಪಟ ಹಳ್ಳಿಯ ಸಂಸ್ಕೃತಿಯನ್ನು ಮರೆಮಾಚುತ್ತ ನಗರ ಸಂಸ್ಕೃತಿಗೆ ಹೊಂದಿಕೊಂಡು ಜೀವಿಸುತ್ತಿದ್ದಾರೆ. ಜೊತೆಗೆ ಹಳ್ಳಿಯ ಸಂಸ್ಕೃತಿಯಲ್ಲಿದ್ದರೆ ಮಕ್ಕಳ ವಿದ್ಯಾಭ್ಯಾಸದ ದೃಷ್ಟಿಯಿಂದಲೂ ಕೆಲವರು ಅನಿವಾರ್ಯವಾಗಿ ಪಟ್ಟಣಗಳತ್ತ ದಾಪುಗಾಲು ಇಟ್ಟಿದ್ದಾರೆ. ಇನ್ನೂ ಖಾಸಗಿ ಉದ್ದಿಮೆಗಳಲ್ಲಿ ಮತ್ತು ಕಾರ್ಖಾನೆಗಳಲ್ಲಿ ಉದ್ಯೋಗಿಗಳಾಗಿದ್ದವರು ಒಂದೇ ಪ್ರದೇಶದಲ್ಲಿ ನೆಲೆಸುತ್ತಲೇ ಅವರದೇ ಆದ ಬದುಕನ್ನು ಕಟ್ಟಿಕೊಂಡ ಅವಲಂಭಿಸಬೇಕಾಗುತ್ತದೆ. ಇದರಿಂದ ಅವಿಭಕ್ತ ಕುಟುಂಬ ಶಿಥಿಲತೆಗೆ ಪ್ರಮುಖಕಾರಣವೆಂದು ಹೇಳಬಹುದು.

೫.೧.೩.೫ ದತ್ತುಸ್ವೀಕಾರ

ಪುತ್ರ ಸಂತಾನವಿಲ್ಲದ ದಂಪತಿಗಳು ಬೇರೆಯವರ ಮಕ್ಕಳನ್ನು ಉತ್ತರಾಧಿಕಾರಿಯಾಗಿ ಸ್ವೀಕರಿಸುವುದಕ್ಕೆ ದತ್ತುಸ್ವೀಕಾರ ಎಂದು ಕರೆಯುವರು. ಮಾನವನ ಕೌಟುಂಬಿಕ ವ್ಯವಸ್ಥೆ ಸುಗಮಗೊಳ್ಳಲು ಧಾರ್ಮಿಕ ಆಚರಣೆಗಳನ್ನು ಪೂರ್ಣಗೊಳಿಸಲು, ಕುಲಬಳ್ಳಿಯನ್ನು ಮುಂದುವರಿಸಲು ವಂಶೋದ್ಧಾರಕನಿರಬೇಕೆಂಬ ನಂಬಿಕೆ ಎಲ್ಲಾ ಜನಾಂಗಗಳಲ್ಲಿಯೂ ಗಾಢವಾಗಿದೆ. ಮಕ್ಕಳಿಲ್ಲದೆ ನಡೆಸುವ ಜೀವನ ನಿರುಪಯುಕ್ತವಾದುದು ಅಷ್ಟೇ ಅಲ್ಲ ಕೆಲವು ಧಾರ್ಮಿಕ ಆಚರಣೆಗಳ ಸಂದರ್ಭದಲ್ಲಿ ಗಂಡು ಮಕ್ಕಳೇ ಮುಖ್ಯವಾಗಿದ್ದು ಅವರಿಲ್ಲದೆ ಮಾಡುವ ಕಾರ್ಯಗಳು, ಫಲಿಸುವುದಿಲ್ಲವೆಂಬ ನಂಬಿಕೆ ಇರುವುದರಿಂದ ಗಂಡು ಸಂತಾನಕ್ಕೆ ಹಂಬಲಿಸುತ್ತಾರೆ. ಒಂದು ವೇಳೆ ದಂಪತಿಗಳಿಗೆ ವಂಶೋತ್ಪತ್ತಿಯು ಸಾಧ್ಯವಾಗದೇ ಇದ್ದಾಗ ಬೇರೊಂದು ಮಗುವನ್ನು ದತ್ತು ತೆಗೆದುಕೊಳ್ಳುವರು. ಕಾರಣ ಹೀಗೆ ತೆಗೆದುಕೊಂಡ ಮಕ್ಕಳು ಅವರ ದೊಡ್ಡವರಾದ ಮೇಲೆ ಅಥವಾ ಮದುವೆಯಾಗಿ ಮಕ್ಕಳಾದ ಮೇಲೆ ಈತನ ಎಲ್ಲಾ ಆಸ್ತಿ ಮೊದಲಿನ ತಂದೆಗೆ ಸೇರುತ್ತದೆ. ಹಾಗಾಗಿ ತಮಗಿಂತ ಶ್ರೇಷ್ಠ ಎಂದು ಪರಿಗಣಿಸಿರುವ ಹೊರಗಿನ ಸಮುದಾಯದ ಪರಸ್ಪರ ಒಪ್ಪಿಗೆ ಪಡೆದು ದತ್ತು ಸ್ವೀಕರಿಸಲು ಯಾವುದೇ ಅಭ್ಯಂತರವಿಲ್ಲ. ಕುಲದಲ್ಲಿ ಎಲ್ಲರ ಒಪ್ಪಿಗೆ ಪಡೆದು ಸೇರಿಸಿಕೊಳ್ಳುತ್ತಾರೆ.

೫.೧.೩.೬ ಬಾಲ್ಯವಿವಾಹ

ಬಾಲ್ಯವಿವಾಹ ಆದಿ ಕಾಲದಿಂದಲೂ ಈ ಪದ್ಧತಿ ಬೆಳೆದುಕೊಂಡು ಬಂದಿದೆ. ಈ ಪದ್ಧತಿಯು ಮ್ಯಾಸಬೇಡರಲ್ಲೂ ಸಹ ಕಂಡುಬರುತ್ತದೆ. ಹಿಂದೆ ಚಿಕ್ಕಮಕ್ಕಳಿಗೆ ವಿವಾಹ ಮಾಡುತ್ತಿದ್ದುದು ಕಂಡುಬರುತ್ತದೆ. ಆಗಿನ ಕಾಲಕ್ಕೆ ಹೋಲಿಕೆ ಮಾಡಿದರೆ ತುಂಬ ಕಡಿಮೆಯಾಗಿದೆ ಎಂದು ಹೇಳಬಹುದು. ಏಕೆಂದರೆ ಪ್ರಸ್ತುತ ಸಂದರ್ಭದಲ್ಲಿ ಸಮುದಾಯದವರು ಆಧುನಿಕರಣ ಪ್ರಭಾವದಿಂದಾಗಿ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ಕೊಡುತ್ತಿರುವುದು ಕಂಡುಬರುತ್ತದೆ. ಇದರಿಂದಾಗಿ ಇಂದಿನ ಯುವಕರು ಹೊರ ಜಗತ್ತಿನ ಸಮಾಜದೊಂದಿಗೆ ಬೆರೆಯುವುದರಿಂದ, ದಿನೆ ದಿನೆ ನಡೆಯುತ್ತಿರುವ ಸಾವು ನೋವುಗಳನ್ನು ಗಮನಿಸುತ್ತಲೇ ಪ್ರಜ್ಞಾವಂತರಾಗಿದ್ದಾರೆ. ಹಾಗಾಗಿ ಎಲ್ಲೋ ಕೆಲವು ಹಟ್ಟಿಗಳನ್ನು ಸರ್ವೇಮಾಡಿದರೆ ಬೆರಳೆಣಿಕೆಯಷ್ಟು ಸಿಗಬಹುದು. ಹಾಗಾಗಿ ಮ್ಯಾಸಬೇಡರಲ್ಲಿಯೂ ಕೂಡ ಬಾಲ್ಯವಿವಾಹ ಪದ್ಧತಿ ಇದೆ. ಇದ್ದರೂ ಕೂಡ ತುಂಬಾ ಕಡಿಮೆ ಎಂದು ಹೇಳಬಹುದು.

೫.೧.೩.೭ ಬಹುಪತ್ನಿತ್ವ

ಸಮಾಜದ ಬೇರೆ ಸಮುದಾಯಗಳಲ್ಲಿ ಇರುವಂತೆ ಮ್ಯಾಸಬೇಡರಲ್ಲಿಯೂ ಕೂಡ ಬಹುಪತ್ನಿತ್ವ ಪದ್ಧತಿಯಿದೆ. ಒಬ್ಬ ಪುರುಷ ಒಬ್ಬಳಿಗಿಂತ ಹೆಚ್ಚು ಸ್ತ್ರೀಯರನ್ನು ಮದುವೆಯಾಗುವ ಪದ್ಧತಿಯನ್ನು

ಬಹುಪತ್ನಿತ್ವ ಪದ್ಧತಿ ಎನ್ನುವರು. ಈ ಒಂದು ಪದ್ಧತಿ ಕೆಲವು ವಿಶಿಷ್ಟ ಸಂದರ್ಭದಲ್ಲಿ ಮತ್ತು ಕಾರಣಗಳನ್ನು ಗಣನೆಗೆ ತೆಗೆದುಕೊಂಡು ಸಮಾಜವು ಬಹುಪತ್ನಿತ್ವ ವಿವಾಹ ಪದ್ಧತಿಯನ್ನು ಅಂಗೀಕರಿಸುತ್ತದೆ. ಪುತ್ರಸಂತಾನವಿಲ್ಲದಿದ್ದರೆ ಮೋಕ್ಷದೊರೆಯುವುದಿಲ್ಲವೆಂಬ ನಂಬಿಕೆ ಇವರಲ್ಲಿ ಬಲವಾಗಿ ಬೇರೂರಿದಂತೆ ಕಂಡುಬರುತ್ತದೆ. ಹಾಗಾಗಿ ಪತ್ನಿಯು ಬಂಜೆ ಎಂದು ಕಂಡುಬಂದಲ್ಲಿ, ಅನಾರೋಗ್ಯದಿಂದ ನರಳುತ್ತಿದ್ದಲ್ಲಿ, ಸಂಸಾರ ನಿರ್ವಹಣೆ ಆಕೆಯಿಂದ ಸಾಧ್ಯವಾಗದೇ ಇದ್ದ ಪಕ್ಷದಲ್ಲಿ ಹಾಗೂ ಗಂಡು ಮಗುವಿಗೆ ಜನ್ಮ ನೀಡಲು ವಿಫಲವಾದಲ್ಲಿ ಪುರುಷ ಒಬ್ಬಳಿಗಿಂತ ಹೆಚ್ಚು ಸ್ತ್ರೀಯರನ್ನು ವಿವಾಹವಾಗಬಹುದು. ಈ ರೀತಿಯ ಎರಡನೇ ವಿವಾಹ ಮೊದಲಿನ ವಿವಾಹ ಮಾದರಿಯಲ್ಲೇ ನಡೆಯುತ್ತದೆ. ಮದುವೆಯಾಗಬೇಕಾದ ಪುರುಷ ಹೆಣ್ಣಿನ ತಂದೆಗೆ ನಿಗದಿ ಪಡಿಸಿದ ತೆರ ಕೊಟ್ಟು ಹಿರಿಯ ದೈವಗಳ ಸಮ್ಮುಖದಲ್ಲಿ ವಿವಾಹವಾಗಬಹುದು. ಹೀಗೆ ಭಾರತದ ಬುಡಕಟ್ಟುಗಳಲ್ಲಿ ಕಂಡುಬರುವ ಬಹುಪತ್ನಿತ್ವ ಪದ್ಧತಿ ಆಯಾ ಸಮುದಾಯದ ನೀತಿ, ನಿಯಮ, ಆರ್ಥಿಕ ಸ್ಥಿತಿ-ಗತಿ, ಸಾಮಾಜಿಕ ಸ್ಥಾನಮಾನ, ಸಂದರ್ಭಗಳನ್ನಾಧರಿಸಿ ಜಾರಿಯಲ್ಲಿರುವುದು ಕಂಡುಬರುತ್ತದೆ.

೫.೧.೩.೮ ವಿವಾಹ ವಿಚ್ಛೇದನ

ಸಾಮಾನ್ಯವಾಗಿ ವಿವಾಹ ವಿಚ್ಛೇದನ ಸಮಾಜದ ಎಲ್ಲಾ ಸಮುದಾಯಗಳಲ್ಲಿ ಕಂಡುಬರುವಂತೆ ಮ್ಯಾಸಬೇಡರಲ್ಲಿಯೂ ಸಹ ಈ ವಿಧಾನ ಕಂಡುಬರುತ್ತಿದೆ. ಇದು ಬಹುಮುಖ್ಯವಾಗಿ ಗಂಡು ಮತ್ತು ಹೆಣ್ಣು ಪರಸ್ಪರ ಒಬ್ಬರಿಗೊಬ್ಬರು ಹೊಂದಾಣಿಕೆಯಾಗದ ಸಮಯದಲ್ಲಿ ವಿಚ್ಛೇದನ ಅಂತಿಮದ್ದಾಗಿರುತ್ತದೆ. ಗಂಡನ ನಡವಳಿಕೆಗಳು ಹೆಂಡತಿಗೆ ಅಹಿತಕರವಾಗಿದ್ದಾಗ, ಹೆಂಡತಿಯ ನಡವಳಿಕೆಗಳು ಗಂಡನಿಗೆ ಅಹಿತಕರವಾಗಿ ಕಂಡು ಬಂದಾಗ, ಗಂಡ ಹೆಂಡತಿಯನ್ನು ಸರಿಯಾಗಿ ಸಂಬಾಳಿಸಲು ಸಾಧ್ಯವಾಗದೇ ದೈಹಿಕವಾಗಿ ಸುಖವನ್ನು ಕೊಡದೇ ಇದ್ದ ಪಕ್ಷದಲ್ಲಿ, ಕುಡಿದು ಹೆಂಡತಿಯನ್ನು ಹಿಂಸಿಸುತ್ತಿದ್ದಲ್ಲಿ, ಹೆಂಡತಿಯಾದವಳು ತಮ್ಮ ಸಮುದಾಯದ ಹಿರಿಯರನ್ನು ಕರೆಸಿ ತನ್ನ ಸಮಸ್ಯೆಗಳನ್ನು ಹೇಳಿಕೊಂಡು ಆತನ ಜೊತೆ ಸಂಸಾರ ಮಾಡಲು ಸಾಧ್ಯವೇ ಇಲ್ಲ ಎಂಬ ನಿರ್ಧಾರಕ್ಕೆ ಬಂದು ವಿಚ್ಛೇದನ ಪಡೆಯಬಹುದು. ಪ್ರಸ್ತುತ ಮ್ಯಾಸಬೇಡರಲ್ಲಿ ಕಟ್ಟೆಮನೆ ನ್ಯಾಯಪಂಚಾಯ್ತಿಯಲ್ಲಿ ಪರಸ್ಪರ ಗಂಡು ಮತ್ತು ಹೆಣ್ಣನ್ನು ಮುಖಬೇಟಿ ಮಾಡಿಸಿ ಅವರ ಸಮುಸ್ಯೆಗಳನ್ನು ಚರ್ಚಿಸಿ ಕೊನೆಗೆ ಕುಲಪಂಚಾಯ್ತಿ ಸಲಹೆಗಳನ್ನು ಪಡೆದು ವಿಚ್ಛೇದನ ಪಡೆಯುತ್ತಾರೆ. ಇಂತಹ ವಿಚ್ಛೇದನದ ಪ್ರಕರಣಗಳು ಪ್ರತಿಯೊಂದು ಹಟ್ಟಿಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ.

೫.೨. ವಸತಿ ವ್ಯವಸ್ಥೆ

ಕೃಷ್ಣಮೂರ್ತಿ ಹನೂರುರವರು ತಮ್ಮ ಕೃತಿಯಲ್ಲಿ ಉಲ್ಲೇಖಿಸುವಂತೆ ಬೇಡರಲ್ಲಿ ಎರಡು ಪಂಗಡಗಳಿವೆ. ಊರು ಬೇಡರು ಮತ್ತು ಮ್ಯಾಸಬೇಡರು ಎಂದು. ಊರು ಬೇಡರು ಈಗಾಗಲೇ

ಗ್ರಾಮಾಂತರ ಪ್ರದೇಶ ಪಟ್ಟಣಗಳನ್ನು ಸೇರಿ ತಕ್ಕಮಟ್ಟಿಗೆ ವಿದ್ಯೆ, ಉದ್ಯೋಗಗಳಿಸಿ ನಾಗರೀಕರಾಗಿದ್ದಾರೆ, ಮ್ಯಾಸಬೇಡರು ಇನ್ನು ಕೊಂಚ ಮಟ್ಟಿಗೆ ಪ್ರತ್ಯೇಕವಾಗಿಯೇ ಹಟ್ಟಿಗಳನ್ನು ಕಟ್ಟಿಕೊಂಡು ವಾಸಿಸುತ್ತಿರುವ ದೃಶ್ಯವನ್ನು ಇಂದಿಗೂ, ಕೂಡ್ಲಿಗಿ, ಮೊಳಕಾಲ್ಮೂರು, ಚಳ್ಳಕೆರೆ, ಜಗಳೂರು ತಾಲೂಕುಗಳಲ್ಲಿ ಕಾಣಬಹುದಾಗಿದೆ. ಹೀಗೆ ಮ್ಯಾಸಬೇಡ ಮತ್ತು ಊರು ಬೇಡರಲ್ಲಿ ಯಾವುದೇ ರೀತಿಯ ವೈವಾಹಿಕ ಸಂಬಂಧಗಳು ಇಲ್ಲ. ಕೊಡುಕೊಳ್ಳುವಿಕೆಯ ಸಂಬಂಧಗಳು ಇರುವುದು ಕಂಡುಬಂದಿಲ್ಲ.

ಒಂದು ಮ್ಯಾಸಬೇಡರಹಟ್ಟಿ ಎಂದರೆ ಐವತ್ತು ಅರವತ್ತು ಸಣ್ಣ ಸಣ್ಣ ಗುಡಿಸಲುಗಳ ಸಮೂಹವಾಗಿರುತ್ತದೆ. ಸ್ವಲ್ಪ ಹಿಂದಿನ ಕಾಲದ ಸಂಗತಿ ಹೇಳುವುದಾದರೆ ಈ ಗುಡಿಸಲುಗಳನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೊತ್ತು ಕೊಂಡೇ ಹೋಗಬಹುದಾದ ರೀತಿಯಲ್ಲಿ ಬರೇ ಅಂಚೆ ಹುಲ್ಲು ಕಾಂಸಿ, ಹುಲ್ಲು ಲಕ್ಕಿ ಬರಲು ಇವುಗಳಿಂದಲೇ ಹೆಣೆಯಲಾಗುತ್ತಿತ್ತಂತೆ. ಹೀಗೆ ಗುಡಿಸಲುಗಳು ಹೊತ್ತುಕೊಂಡು ಹೋಗುವಷ್ಟು ಹಗುರವಾಗಿದ್ದವು. ಎಂದರೆ ಮ್ಯಾಸಬೇಡರು ಈ ಹಿಂದಿನ ದಿನಮಾನಗಳಲ್ಲಿ ಅಡವಿ ಸಂಚಾರಿಗಳಾಗಿದ್ದರು ಎಂಬುದು ನಿಜಸಂಗತಿಯಾಗಿದೆ.

ಈಗಲೂ ಚಳ್ಳಕೆರೆ, ಕೂಡ್ಲಿಗಿ, ಮೊಳಕಾಲ್ಮೂರು ತಾಲೂಕುಗಳಲ್ಲಿ ಅನೇಕಾನೇಕ ಮ್ಯಾಸಬೇಡರ ಹಟ್ಟಿಗಳನ್ನು ನೋಡಬಹುದಾಗಿದ್ದು, ಆ ಹಟ್ಟಿಗಳ ಸುತ್ತ ಅವರು ಮುಳ್ಳು ಬೇಲಿ ಹಾಕಿಕೊಂಡಿರುತ್ತಾರೆ. ಕಾಡುಗೊಲ್ಲರ ಹಟ್ಟಿಗಳ ಸುತ್ತಲೂ ಮುಳ್ಳುಬೇಲಿ ಇರುತ್ತದೆ. ವಿಚಾರಿಸಿದಲ್ಲಿ ಕೋಳಿ, ಹಂದಿ, ತಮಗಾಗದ ಈ ಎರಡು ಪ್ರಾಣಿಗಳು ಖರದಿಕಲೆಂದೂ ಮಡಿಮೈಲಿಗೆ ಆದವರನ್ನು ಬೇಲಿಯ ಆಚೆ ಇರಿಸಲೆಂದೂ ಮುಳ್ಳುಬೇಲಿ ಹಾಕಿಕೊಂಡಿರುವದು. ಅದು ಕೂಡ ಹಿಂದಿನ ಪದ್ಧತಿಯನ್ನೇ ನಾವು ಕೂಡ ಅನುಸರಿಸಿಕೊಂಡು ಬಂದಿದ್ದೇವೆ ಎನ್ನುತ್ತಾರೆ.

ವಾಸ್ತವವಾಗಿ ಈ ಬುಡಕಟ್ಟು ಸಮುದಾಯದ ಹಟ್ಟಿಗಳ ಸುತ್ತ ಮುಳ್ಳು ಬೇಲಿ ಹಾಕಿಕೊಂಡಿರುವುದು ರಕ್ಷಣೆಯ ಉದ್ದೇಶಕ್ಕಾಗಿ. ಯಾಕೆಂದರೆ ಈ ಹಿಂದೆ ಐತಿಹಾಸಿಕ ಪ್ರದೇಶವಾದ ಚಿತ್ರದುರ್ಗ ನೆಲದಲ್ಲಿ ಮೇಲಿಂದ ಮೇಲೆ ಯುದ್ಧಗಳು ಜರುಗುತ್ತಿದ್ದವು. ಒಂದು ಕಡೆಯಿಂದ ಇನ್ನೊಂದು ಕಡೆಗೆ ದಂಡು, ದಳ ಪ್ರಯಾಣ ಮಾಡುತ್ತ ಸೈನಿಕರು ಯಾವ ಸಮಯದಲ್ಲಿ ಬೇಕಾದರೂ ಹಾದಿಬದಿಯ ಹಳ್ಳಿಯ ಮೇಲೆ ದಾಳಿ ಮಾಡಿ ಲೂಟಿಗೈಯ್ಯಬಹುದಾಗಿತ್ತು. ಇದರಿಂದಲೇನೋ ಈ ಪದ್ಧತಿ ಪಾರಂಪರಿಕವಾಗಿ ಬಂದಿರಬಹುದು. ಚಿತ್ರದುರ್ಗದ ಬಹುತೇಕ ಎಲ್ಲಾ ಗ್ರಾಮಗಳ ಸುತ್ತ ಸಣ್ಣ ಪ್ರಮಾಣದಲ್ಲಿಯಾದರೂ ಒಂದು ಕೋಟೆ ಗೋಡೆ ಇರುವುದನ್ನು ಅದು ಈಗ ಪಾಳುಬಿದ್ದ ಸ್ಥಿತಿಯಲ್ಲಿರುವುದನ್ನು ನೋಡಬಹುದಾಗಿದೆ.

ಈಗಲೂ ಮ್ಯಾಸಬೇಡರ ಹಟ್ಟಿಗಳಲ್ಲಿ ಮನೆಯ ರಚನಾ ವ್ಯವಸ್ಥೆಯನ್ನು ನೋಡಿದರೆ ಒಕ್ಕಲು ಮಕ್ಕಳು ಕುಟುಂಬದ ರಕ್ಷಣೆಯ ದೃಷ್ಟಿಯಿಂದ ತಾವು ಸಾಕಿದ ದನ, ಕರುಗಳು, ಕುರಿ, ಮೇಕೆಗಳನ್ನು

ಕಾಡು ಪ್ರಾಣಿಗಳಿಂದ ರಕ್ಷಿಸಿಕೊಳ್ಳಲು ಹಾಗೂ ಕಳ್ಳರ ಕೈಗೆ ಸಿಗಬಾರದೆಂಬಂತೆ ಮನೆ ಕಟ್ಟಿರುವುದು ಕಂಡುಬರುತ್ತದೆ. ಊರದಿಡ್ಡಿ ಬಾಗಿಲು ದಾಟಿದರೆ ಸಣ್ಣದಾದ ಬೀದಿ, ಅಲ್ಲಿ ಒತ್ತೊತ್ತಾಗಿ ಮನೆಗಳಿದ್ದು ಪ್ರತಿಯೊಂದು ಮೆಯೂ ಪೆಟ್ಟಿಗೆಯಂತಿರುತ್ತದೆ. ಮನೆಯೊಳಗಡೆ ಗಾಳಿಬೆಳಕಿನ ವ್ಯವಸ್ಥೆ ಕಡಿಮೆ. ಮನೆಯ ಮೇಲೆ ಹೆಂಚು ಹೊದಿಸುವ ಅಭ್ಯಾಸವೂ ಇರುವುದಿಲ್ಲ. ಎಂಟು ಹತ್ತು ಅಡಿ ಎಬ್ಬಿಸಿದ ಗೋಡೆಯ ಮೇಲೆ ಈಚಲು, ತೆಂಗು ಅಥವಾ ಇನ್ನಾವುದೇ ಮರದ ದಿಮ್ಮಿಗಳನ್ನು ಅಡ್ಡಹಾಸಿ ಅದರ ಮೇಲೆ ಅವುರಿಕೆ ಲಕ್ಕಿಬರಲು ಹಾಕಿ ಮಣ್ಣು ಮುಚ್ಚುವುದು. ಚೌಕಾಕಾರದ ಒಳ ಹಜಾರದಲ್ಲಿ ಅರ್ಧಭಾಗ ದನ ಕಟ್ಟುವ ಜಾಗವಾದರೆ ಇನ್ನರ್ಧಭಾಗ ವಾಸದ ಅನುಕೂಲವಾಗಿರುತ್ತದೆ. ಸಂಜೆಯಾದಲ್ಲಿ ದನಕರುಗಳೂ ಜನವೂ ಮನೆಯ ಒಳಭಾಗ ಸೇರಿ ದೊಡ್ಡದಾದ ಮುಂಬಾಗಿಲನ್ನು ಮುಚ್ಚಿದರೆ ಮತ್ಯಾವ ಕಡೆಯಿಂದಲೂ ಆ ಮನೆಗೆ ಕಟ್ಟುವ ಮನೆಗಳಿಂದಲೇ ತಮ್ಮನ್ನು ತಾವು ಅಲ್ಲದೆ ತಮ್ಮ ಬದುಕಿನ ಆಧಾರವಾಗಿರುವ ದನಕರುಗಳನ್ನು ರಕ್ಷಣೆ ಮಾಡುವುದಾಗಿತ್ತೆಂದು ತಿಳಿಯಬಹುದು.

ಮ್ಯಾಸಬೇಡರು ವಾಸಿಸುವ ಗುಡಿಸಲೆಂದರೆ ಅದು ಒಂದು ಅಂಕಣ ಮಾತ್ರ ಇರಬಹುದಾದ ಸ್ಥಳವಾಗಿರುತ್ತದೆ. ಅಷ್ಟರಲ್ಲಿ ವೃತ್ತಾಕಾರಕ್ಕೆ ನಡುವಿನೆತ್ತರದ ಗೋಡೆಯೆಬ್ಬಿಸಿ ಅದರ ಮೇಲೆ ಗುಂಬದಾಕಾರಕ್ಕೆ ಲಕ್ಕಿ ಬರಲು ಜೋಡಿಸಿ ಕಟ್ಟಿ ಅಂಚಿಹುಲ್ಲು ಹೊದಿಸಿದರೆ ಮುಗಿಯಿತು. ಕೆಳಗೆ ಸೆಗಣಿ ಸಾರಿಸಿದ ನೆಲವಿರುತ್ತದೆ. ಈ ಗುಡಿಸಲಿಗೆ ಒಬ್ಬ ವ್ಯಕ್ತಿ ನಿಂತು ಒಳಗೆ ಹೋಗುವಂತಿಲ್ಲ. ಬಾಗಿಯೇ ಒಳಗೆ ಹೋಗಬೇಕು. ಸಾಮಾನ್ಯವಾಗಿ ಬುಡಕಟ್ಟು ಸಮುದಾಯದ ವಾಸದ ನೆಲೆಯ ರಚನೆಗಳು ಎಲ್ಲಿ ಗಮನಿಸಿದರೂ ಇದೇ ಮಾದರಿಯಲ್ಲಿರುತ್ತದೆ. ಇವರು ದುಷ್ಟ ಪ್ರಾಣಿಗಳು ಅತಿ ಸುಲಭವಾಗಿ, ತಮ್ಮ ನೆಲೆಯೊಳಕ್ಕೆ ಆಕ್ರಮಣ ಮಾಡಬಾರದೆಂಬ ಉದ್ದೇಶದಿಂದ ಹಿಡಿದು, ಇಡೀ ಗುಡಿಸಲೇ ಅತಿಚಿಕ್ಕದಾಗಿರುವುದಕ್ಕೆ ಮತ್ತೇ ಅದರ ಸುತ್ತ ಮುಳ್ಳುಬೇಲಿ ಹಾಕುವುದಕ್ಕೆ ಕಾರಣಗಳಾಗಿವೆ.

ಮ್ಯಾಸಬೇಡರು ಮೈಬಣ್ಣ ಸಾಮಾನ್ಯವಾಗ ಕಪ್ಪು. ಉದ್ದ ಶರೀರ, ತಲೆಯ ಮೇಲೆ ಪೇಟ, ಬರಿಮೈಯ್ಯ, ಹೆಗಲ ಮೇಲೆ ಒಂದು ಕಪ್ಪು ಕಂಬಳಿ. ಈ ಕಂಬಳಿ ಕೂಡ ಹಾಸಿಕೊಳ್ಳಲು, ಹೊದ್ದುಕೊಳ್ಳಲು ಬೇಕಾದರೆ ಒಂದು ಕಡೆ ಗುಪ್ಪೆ ಇಟ್ಟು ಕೂತುಕೊಳ್ಳಲು ಬರುವಂಥದ್ದು. ಮಳೆಗಾಲದಲ್ಲಿ ಹೊದ್ದುಕೊಂಡು ಮಲಗಿದರೂ ನೆನೆಯದಂತೆ ಬಿದ್ದ ಹನಿ ಅತ್ತ ಇತ್ತ ಸೋರಿ ಹೋಗಿಬಿಡುವಂಥ ಕಂಬಳಿ ಇದು. ನಡುವಿನಲ್ಲಿ ಒಂದು ಚಲ್ಲಣ ಕೈಯಲ್ಲಿ ಒಂದು ಕೋಲು, ಹೆಂಗಸಾದರೆ ಬಿಳಿಯ ಸೀರೆ ಉಟ್ಟು ಅದರ ಸೆರಗನ್ನು ಹೆಗಲು ಬಳಸಿ ಎದೆ ಮುಚ್ಚಿಕೊಳ್ಳುವ ರೂಢಿಯಿದ್ದು ರವಿಕೆ ತೊಡುವ ರೂಢಿ ಇವರಲ್ಲಿರಲಿಲ್ಲ. ಆದರೆ ಈಗೀಗ ಮ್ಯಾಸಬೇಡರ ಸಮಾಜ ಆಧುನಿಕತೆಗೆ ಹೊಂದಿಕೊಂಡು ಹಳೆಯ ಸ್ವರೂಪವನ್ನು ಬಿಟ್ಟುಕೊಡುತ್ತಿರುವುದನ್ನು ಎಲ್ಲ ಕಡೆ ಗಮನಿಸಬಹುದಾಗಿದೆ.

೫.೩.ಆಹಾರ ಪದ್ಧತಿ

ಮ್ಯಾಸಬೇಡರು ಮೂಲತಃ ಕಾಡಿನಲ್ಲಿ ವಾಸವಾಗಿರುವುದರಿಂದ ಮತ್ತು ಇವರ ವೃತ್ತಿಯು ಬೇಟೆಯಾಗಿರುವ ಹಿನ್ನಲೆಯಲ್ಲಿ ಮಾಂಸಹಾರಿಗಳೆಂದೇ ಹೇಳಬಹುದು. ಬೇಟೆಯಿಂದಲೆ ತಮ್ಮ ವೃತ್ತಿ ಜೀವನ ಪ್ರಾರಂಭಿಸಿದ್ದರಿಂದ ಕಾಡಿನಲ್ಲಿರುವ ಮೊಲದಂತಹ ಪ್ರಾಣಿಗಳನ್ನು ಬೇಟೆಯಾಡಿ ತಮ್ಮ ಜೀವನವನ್ನು ಸಾಗಿಸುತ್ತಿದ್ದರು. ಪಶುಪಾಲನೆಯಲ್ಲಿ ಕುರಿಸಾಗಣಿಕೆ ಇಂದು ಪ್ರದಾನ ವೃತಿಯಾಗಿರುವುದರಿಂದ ಕುರಿಗಳನ್ನು ಆರ್ಥಿಕ ಸಬಲತೆಯ ಜ಼ೊತೆ ಅವುಗಳನ್ನು ತಮಗೆ ಅಗತ್ಯವೆನಿಸಿದಾಗ ತಮ್ಮ ಆಹಾರಕ್ಕಾಗಿ ಉಪಯೋಗಿಸಿಕೊಳ್ಳುತ್ತಾ ಬಂದಿದ್ದಾರೆ. ಸಮಾಜದ ಸಂಪರ್ಕ ಹೆಚ್ಚಿದಂತೆಲ್ಲಾ ಸಸ್ಯಹಾರವನ್ನು ರೂಡಿಸಿಕೊಂಡರು. ಮದುವೆ ಮೂಹೂರ್ತದ ಸಂದರ್ಭದಲ್ಲಿ ಮೂರನೆಯ ದಿನ ಮಾಂಸ ಬ್ಯಾಟಿ ಕಡ್ಡಾಯವಾಗಿರುತ್ತದೆ. ಅಂತಿಮ ಸಂಸ್ಕಾರದ ನಂತರ ಮೂರನೇ ದಿನದಲ್ಲಿ ಸಸ್ಯಹಾರ ಊಟದ ವ್ಯವಸ್ಥೆಯಾದರೆ ಒಂಬತ್ತನೇ ದಿನ ನಡೆಯುವ ಪಿಂಡದ ಕಾರ್ಯಕ್ರಮದ ದಿನ ಮಾಂಸಹಾರ ಕಡ್ಡಾಯವಾಗಿರುತ್ತದೆ. ಅಂದು ಕುರಿಮಾಂಸವನ್ನು ಉಪಯೋಗಿಸುವರು.

ನಾಮಕರಣ ಶಾಸ್ತ್ರದಂತಹ ಸಂದರ್ಭದಲ್ಲಿ ಪಾಯಸ ಅಥವಾ ಬೇರೆ ಸಿಹಿ ಊಟವಿರುತ್ತದೆ. ಅಂದು ಗುಗ್ಗರಿಯನ್ನು ವಿಶೇಷ ಅಡುಗೆಯಾಗಿ ಮಾಡಿ ಉಪಯೋಗಿಸುತ್ತಾರೆ. ಹಾಗೆ ಇಂದು ಆರ್ಥಿಕವಾಗಿ ಸಬಲರು ನಾಮಕರಣ ಮಾಡಲು ಲಾಡು, ಮೈಸೂರ್‌ಪಾಕ್, ಜಿಲೇಬಿ, ಜಾಮೂನು ಮುಂತಾದ ವಿವಿದ ಬಗೆ ತಿನಿಸುಗಳನ್ನು ಮನೆಯಲ್ಲಿ ಮಾಡುತ್ತಾರೆ. ಹಾಗೆ ಮಗುವಿನ ಜವಳ ಅಥವಾ ಕೂದಲು ತೆಗೆಸುವಾಗ ಕಡ್ಡಾಯವಾಗಿ ಬ್ಯಾಟಿಯನ್ನು ಉಪಯೋಗಿಸಲೆ ಬೇಕು. ಶಿವರಾತ್ರಿ ಹಬ್ಬವನ್ನು ಎರಡು ದಿನಗಳ ಕಾಲ ಉಪವಾಸ ವ್ರತಚರಣೆ ಮಾಡುತ್ತಾರೆ. ಅಂದು ಬೇಟೆಗೆ ಹೋಗುತ್ತಾರೆ. ಎರಡನೆಯ ದಿನ ಬೇಟೆಯಲ್ಲಿ ಸಿಕ್ಕ, ಮೊಲ, ಜಿಂಕೆ, ಕೌಜುಗ ಮುಂತಾದವುಗಳನ್ನು ಆಹಾರಕ್ಕಾಗಿ ಉಪಯೋಗಿಸುತ್ತಾರೆ.

ಯುಗಾದಿ ಅಮವಾಸ್ಯೆ ದಿನ ಅನ್ನ ತಿಳಿಸಾರು ಆಹಾರವಾದರೆ ಎರಡನೆಯ ದಿನ ಪಾಡ್ಯದಂದು ಬೇವು, ಶ್ಯಾವಿಗೆ, ದೋಸೆಯಾದರೆ, ಮೂರನೆಯ ದಿನ ಬೆಲ್ಲದ ಕಡುಬಿನ ಊಟ ವಾಗುತ್ತದೆ. ಯುಗಾದಿಯ ನಾಲ್ಕನೆಯ ದಿನವಾದ ಕರಿ ಮಾಡುತ್ತಾರೆ. ಅಂದು ಮನೆಯಲ್ಲಿ ಸಾಕಿರುವ ಟಗರುಗಳನ್ನು ಕೂಯ್ದು ಮಾಂಸಕ್ಕಾಗಿ ಉಪಯೋಗಿಸುತ್ತಾರೆ. ನಾಗರ ಪಂಚಮಿಯ ಹಬ್ಬದಲ್ಲಿ ಸಾಮಾನ್ಯವಾಗಿ ಹುತ್ತಕ್ಕೆ ಹಾಲು ಹಾಕಿ ಪಾಯಸ ಮಾಡಿಕೊಂಡು ಸೇವಿಸುವರು. ಕಾರು ಹುಣ್ಣಿಮೆಯಲ್ಲಿ ಎತ್ತುಗಳಿಗೆ ಭರ್ಜರಿಯಾಗಿ ಬಣ್ಣ ಬಳಿದು ಅಂದು ಹೋಳಿಗೆ ಊಟವಾಗಿರುತ್ತದೆ. ಬಾದ್ರಪದ ಮಾಸದಲ್ಲಿ ಇಡೀ ಸಮುದಾಯ ಪ್ರತಿ ಮನೆಮನೆಗೂ ಅವರ ಕುಟುಂಬದ ಜನಸಂಖ್ಯೆಯ ಆಧಾರದ ಮೇಲೆ ಮನೆಗೊಂದು ಎರಡು ಬ್ಯಾಟಿಯನ್ನು ಮಾಡುತ್ತಾರೆ. ಎಷ್ಟೇ ಬಡವರಾದರೂ ಕೂಡ ಈ ಹಬ್ಬವನ್ನು ವಿಶೇಷವಾಗಿ ಮಾಡಲೇ ಬೇಕಾಗುತ್ತದೆ.

ಮಹಾನವಮಿಯ ದಿನದಲ್ಲಿ ಒಂಬತ್ತನೆಯ ದಿನ ಕಡುಬಿನ ಊಟ ಮುಖ್ಯವಾಗಿರುತ್ತದೆ. ಹತ್ತನೆಯ ದಿನ ಮಾಂಸಹಾರ ಮಾಡಲಾಗುತ್ತದೆ. ಉಳಿದ ದಿನಗಳಲ್ಲಿ ಎಂದಿನಂತೆಯೇ ಸಿಹಿ ಊಟ ನೆಡೆಯುತ್ತದೆ. ದೀಪಾವಳಿ ಹಬ್ಬದಂದು ಗೋದಿ ಪಾಯಸ ಮತ್ತು ಸಜ್ಜೆ ಕಡುಬು ಜವಳೆಕಾಯಿ ಮಾಡಲಾಗುತ್ತದೆ. ಗೌರಿ ಹುಣ್ಣಿಮೆಯ ದಿನದಂದು ಹಿಂದಿನ ದಿನದಲ್ಲಿಯೇ ತಯಾರಿಸಿದ ಸಜ್ಜೆ ರೊಟ್ಟಿಯನ್ನು ತಯಾರಿಸಿ, ಸಜ್ಜೆ ಕಡುಬು ಕೂಡ ಅಂದಿನ ಆಹಾರವಾಗುತ್ತದೆ. ಸಸ್ಯಹಾರವನ್ನು ಸಾಮಾನ್ಯವಾಗಿ ಪ್ರತಿದಿನದಲ್ಲಿ ಬಳಸಿದರೆ ಮಾಂಸ ಆಹಾರವನ್ನು ಶುಭಕಾರ್ಯಗಳಲ್ಲಿ ಕಡ್ಡಾಯವಾಗಿ ಬಳಸುತ್ತಾರೆ. ಇವತ್ತಿನ ಸಂದರ್ಭದಲ್ಲಿಯೂ ಸಹ ಈ ಸಮುದಾಯದಲ್ಲಿ ಒಳಪಂಗಡದಲ್ಲಿ ಕೆಲವರು ನವಣೆಯನ್ನು ಬಳಸುವುದಿಲ್ಲ, ಮುಟ್ಟುವುದಿಲ್ಲ. ನವಣೆ ನಿಷಿದ್ಧವಾಗಿದೆ. ಅಂತೆಯೇ ಕೋಳಿಯು ಈ ಸಮುದಾಯಗಳ ವಾಸಿಸುವ ಹಟ್ಟಿಗಳಲ್ಲಿ ಸಾಕುವುದಿಲ್ಲ. ಅದರಲ್ಲಿ ಬಹುತೇಕ ಎರಡು ಜಿಲ್ಲೆಗಳಲ್ಲಿ ಕೇವಲ ಮ್ಯಾಸನಾಯಕರವೇ ಪ್ರತ್ಯೇಕವಾದ ಹಟ್ಟಿಗಳಿರುವುದರಿಂದ ಕೋಳಿ ನಿಷಿದ್ಧವಾಗಿದೆ. ಹಾಗೆ ಹಂದಿ ಬೇಟೆಯಾಡುತ್ತಾರೆ. ಆದರೆ ಅದನ್ನು ಕೂಡ ತಿನ್ನುವುದಿಲ್ಲ. ಹಂದಿ ನಿಷಿದ್ಧವಾಗಿದೆ.

ಇವತ್ತಿನ ಸಂದರ್ಭದಲ್ಲಿ ಈ ಸಮುದಾಯದವರು ಕೇವಲ ದಿನಕ್ಕೊಂದು ಸಾರಿ ಊಟ ಸಿಕ್ಕರೆ ಸಾಕು ಎನ್ನುವಂತಹ ಸ್ಥಿತಿಯಲ್ಲಿ ತಲುಪಿದ್ದಾರೆ. ಕೇವಲ ಚಟ್ನಿ ಮುದ್ದೆ ಸಿಕ್ಕರೆ ಸಾಕು ಅನ್ನುವಂತಹ ಪರಿಸ್ಥಿತಿಗೆ ಬಂದಿದ್ದಾರೆ. ಶ್ರೀಮಂತರಾದವರು ಶ್ರೀಮಂತರಾಗಿಯೇ ಬಡವರು ಬಡವರಾಗಿಯೇ ಉಳಿದಿದ್ದಾರೆ. ಇಂದು ಸರ್ಕಾರ ನೂರಾರು ಯೋಜನೆ ಸೌಲಭ್ಯಗಳನ್ನು ಮಂಜುರಾತಿ ಮಾಡಿದರೂ ಸಹ ಅವು ಪೂರ ಕಡುಬಡವರಿಗೆ ತಲುಪದೆಯೇ ಇರುವುದು ಖೇದಕರ ಸಂಗತಿ. ಏಕೆಂದರೆ ಸರ್ಕಾರ ಹಲವಾರು ಸೌಲಭ್ಯಗಳನ್ನು ಮಂಜುರಾತಿ ಮಾಡುತ್ತದೆ. ಆದರೆ ಅವು ಎಲ್ಲಿ ಯಾರು ಯಾರಿಗೆ ತಲುಪಿಸುತ್ತಾರೆ? ಮತ್ತು ಎಷ್ಟರ ಮಟ್ಟಿಗೆ ಇವು ತಲುಪುತ್ತವೆ? ಎಂಬುದನ್ನು ಪುನಃ ಪರಿಶೀಲಿಸುವುದಿಲ್ಲ. ಇಂತಹ ಒಂದು ಪರಿಸ್ಥಿತಿ ಇರುವುದರಿಂದ ಇಂತಹ ಸಮುದಾಯಗಳು ಹಲವು ವರ್ಷಗಳಾದ್ರೂ ಸಹ ಆರ್ಥಿಕವಾಗಿ ಪ್ರಬಲರಾಗಲುಸಾಧ್ಯವೆ ಇಲ್ಲ ಎಂದು ಹೇಳಬಹುದು.

೫.೪.ಉಡುಗೆ ತೊಡುಗೆ

ಪ್ರತಿಯೊಂದು ಸಮುದಾಯವು ತನ್ನದೆ ಆದ ಭಾಷೆ, ಆಚಾರ-ವಿಚಾರ, ರೂಢಿ, ಸಂಪ್ರಾದಾಯಗಳನ್ನು ಪಾರಂಪರಿಕವಾಗಿ ರೂಢಿಸಿಕೊಂಡು ಬರುವಂತೆಯೆ ಅವರದೇ ಆದ ಉಡುಗೆ ತೊಡುಗೆಗಳಲ್ಲಿ ವಿಶೇಷತೆಯನ್ನು ಕಾಯ್ದು ಕೊಂಡಿರುತ್ತದೆ. ಆದರೆ ಇಂದು ನಾಗರೀಕತೆಯ ಪ್ರಭಾದಿಂದಾಗಿ ಬುಡಕಟ್ಟು ಸಮುದಾಯಗಳು ತಮ್ಮದೇ ಆದ ವಿಶಿಷ್ಟ ಉಡುಗೆ ತೊಡುಗೆಗಳನ್ನು ಕಾಣುತ್ತೇವೆ. ಅವರ ಉಡುಗೆ ತೊಡುಗೆಗಳ ಸ್ಥಾನವನ್ನು ಇಂದಿನ ಆಧುನಿಕತೆಯ ತೊಡುಗೆಗಳು ಆವರಿಸಿಕೊಂಡಿವೆ.

ಈ ಸಮುದಾಯದ ಪುರುಷರು ಸಾಮಾನ್ಯವಾಗಿ ಬಿಳಿಯ ಅಂಗಿಯನ್ನು ಬಹುತೇಕ ಮಂದಿ ತೊಡುವ ವಾಡಿಕೆಯಾಗಿದೆ. ಹಳೆಯ ತಲೆಮಾರಿನವರು ಚಲ್ಲಣ ಹಾಗೂ ಅಂಗಿಯನ್ನು ಹಾಕಿಕೊಳ್ಳುತ್ತಾರೆ. ಪೂಜಾರಿ ಹಾಗೂ ಕಿಲಾರಿಗಳು ಚಲ್ಲಣ ಮತ್ತು ಬರಿ ಮೈಯಲ್ಲಿರುತ್ತಾರೆ. ಹಾಗೆ ಉದ್ದನೆಯ ಕೂದಲನ್ನು ತುರುಬಾಗಿ ಕಟ್ಟಿಕೊಳ್ಳುವ ವಾಡಿಕೆ ಇವರಲ್ಲುಂಟು. ತಲೆಗೆ ರುಮಾಲನ್ನು ಸುತ್ತಿರುತ್ತಾರೆ. ಜೊತೆಗೆ ಕಂಬಳಿಯನ್ನು ಇಟ್ಟುಕೊಳ್ಳುತ್ತಾರೆ. ಇಷ್ಟಿದ್ದರೆ ಅವರ ಉಡುಗೆ ತೊಡುಗೆ ಸಂಪೂರ್ಣಗೊಂಡಂತೆ. ಮ್ಯಾಸಬೇಡರ ಸಮುದಾಯದವರ ಹೆಣ್ಣು ಮಕ್ಕಳು ಸಾಮಾನ್ಯವಾಗಿ ಹಸಿರು, ಕೆಂಪು, ಮತ್ತು ನೀಲಿ ಬಣ್ಣಗಳನ್ನು ತುಂಬಾ ಇಷ್ಟಪಡುತ್ತಾರೆ. ಇವರ ಹೆಣ್ಣು ಮಕ್ಕಳು ಮೊದಲಿಗೆ ಕುಪ್ಪಸ ತೊಡುತ್ತಿರಲಿಲ್ಲ. ಆದರೆ ಕಾಲಾಂತರದಲ್ಲಿ ಬದಲಾವಣೆಗೊಂಡು ಇಂದು ಎಲ್ಲಾ ಹೆಂಗಸರೂ ಕುಪ್ಪಸವನ್ನು ತೊಡುತ್ತಾರೆ. ಅಗಲವಾದ ಅಡ್ಡಕ್ಕೆ ಕುಂಕುಮ ಹಚ್ಚುವ ಇವರು ಕೈ ತುಂಬಾ ಗಾಜಿನ ಬಳೆಗಳನ್ನು ಹಾಕಿಕೊಳ್ಳುತ್ತಾರೆ. ವಿಧವೆಯರಾದಲ್ಲಿ ಕೈಗೆ ರಬ್ಬರ್ ಬಳೆಯನ್ನು ತೊಡುವುದು ವಾಡಿಕೆಯಾಗಿದೆ.

ಈ ಸಮುದಾಯದ ಯುವಕರು ಫ್ಯಾಷನ್ ರೂಪದಲ್ಲಿ ಪ್ಯಾಂಟ್, ಷರ್ಟ್, ಟೀಶರ್ಟ್ ಪೈಜಾಮಗಳನ್ನು ಬಳಸಿದರೆ, ಹುಡುಗಿಯರು, ಚೂಡಿದಾರ ಮತ್ತು ಹೊಸ ವಿನ್ಯಾಸದ ಉಡುಗೆಗಳನ್ನು ಅಲ್ಪಮಟ್ಟಿಗೆ ಬಳಸುತ್ತಾರೆ. ಹಾಗೆ ನೈಟಿಗಳನ್ನು ಹೆಚ್ಚಾಗಿ ಸಿಟಿಗೆ ಸಮೀಪವಿರುವವರು ಸಿಟಿಯಲ್ಲಿರುವವರು ಬಳಸುತ್ತಾರೆ. ಮದುವೆಯಾಗದ ಹೆಣ್ಣುಮಕ್ಕಳು ಕಾಲಿನ ಚೈನ ಬಳಸಿದರೆ ಮದುವೆಯಾದವರು ಬಹುತೇಕ ಕಾಲಿನ ಚೈನವನ್ನು ಬಳಸುವುದಿಲ್ಲ. ತಾಳಿ, ಮೂಗುತಿ, ವಿವಾಹಿತ ಹೆಣ್ಣು ಸೌಭಾಗ್ಯದ ಲಕ್ಷಣವೆಂದು ಭಾವಿಸಿತೊಡುತ್ತಾರೆ. ವಿಧವೆಯರು ಈ ಎಲ್ಲಾ ಸೌಭಾಗ್ಯದ ಸಾಂಕೇತಿಕ ಆಭರಣಗಳನ್ನು ತ್ಯಜಿಸುತ್ತಾರೆ. ಬಂಗಾರದ ಆಭರಣಗಳಿಗಿಂತ ಬೆಳ್ಳಿಯ ಆಭರಣಗಳನ್ನು ಧರಿಸುವುದೇ ಹೆಚ್ಚು. ಆದರೆ ತಾಳಿಯನ್ನು ಕಡ್ಡಾಯವಾಗಿ ಎಲ್ಲರೂ ಹಾಕಿಕೊಳ್ಳುವ ಪದ್ಧತಿಯಿಲ್ಲ. ಅಯಾ ಬೇಡಗಿಗಳಿಗೆ ಸಂಬಂಧಪಟ್ಟಂತೆ ಹಾಕುತ್ತಾರೆ. ಒಟ್ಟಿನಲ್ಲಿ ಸಾಮಾನ್ಯ ಮಟ್ಟದಲ್ಲಿ ಸಹಜವಾದ ರೀತಿಯಲ್ಲಿ ಇರುತ್ತಾರೆ.

೫.೫. ಮದುವೆ

ಮ್ಯಾಸಬೇಡರ ಮದುವೆ ಪದ್ಧತಿ ಕುರಿತು ಭಿನ್ನತೆಗಳಿವೆ ಈ ಕುರಿತು ಕಾಮಗೇತನಹಳ್ಳಿ ಪೂಜಾರಿ ನಿಜಲಿಂಗಪ್ಪ ಹೇಳುವ ಮಾಹಿತಿ ಈ ಕೆಳಗಿನಂತಿದೆ:

ಮ್ಯಾಸಬೇಡರ ಮದುವೆ ಪದ್ಧತಿಯು ಬಹಳ ಸರಳವಾಗಿರುತ್ತದೆ. ಕಡಿಮೆ ವೆಚ್ಚದಲ್ಲಿಯೇ ಮದುವೆ ಮಾಡಿ ಮುಗಿಸುತ್ತಾರೆ. ಆದರೆ ನಾಗರಿಕತೆ ಬದಲಾದಂತೆಲ್ಲಾ ಕೆಲವು ನಿಯಮಗಳು ಬದಲಾಗಿವೆ. ಆದರೆ ಹಿಂದಿನ ಕಾಲದಲ್ಲಿ ಮದುವೆ ವಧುವರವಿನ ತಂದೆ ತಾಯಿಗಳೇ ನಿರ್ಧರಿಸುತ್ತಿದ್ದರು. ತಂದೆ ತಾಯಿಯರ ಒಪ್ಪಿಗೆಯಾದರೆ ವಧುವರರಿಗೆ ಒಪ್ಪಿಗೆಯಾಗುತ್ತಿತ್ತು. ಆದರೆ ಇಂದು ವಧು ವರರೇ ತಮಗೆ ಒಪ್ಪಿಗೆಯಾದ

ಗಂಡು ಅಥವಾ ಹೆಣ್ಣು ನೋಡಿ ನಿರ್ಧರಿಸಿದನಂತರ ತಂದೆ ತಾಯಿಗಳಿಗೆ ತಿಳಿಸುತ್ತಾರೆ. ಅವರ ನಿರ್ಧಾರದಂತೆ ಇಂದು ಮದುವೆಗಳು ನಡೆಯುತ್ತವೆ. ಇದು ಅನಿವಾರ್ಯ ಕೂಡ ಎಂದು ಹೇಳಬಹುದು. ಪ್ರಸ್ತುತ ಸಂದರ್ಭಕ್ಕೆ ತಕ್ಕಂತೆ ಅನಿವಾರ್ಯವಾಗಿ ಬದಲಾವಣೆ ಬಯಸುತ್ತಾರೆ. ಮೊದಲು ಬಾಲ್ಯವಿವಾಹ ಪದ್ಧತಿ ರೂಢಿಯಲ್ಲಿತ್ತು. ಇದು ಇಂದು ಕೂಡ ಕೆಲವು ಹಳ್ಳಿಗಳಲ್ಲಿದೆ. ಅದು ಕೂಡ ಬೆರಳಣಿಕೆಯಷ್ಟು. ೧೩-೧೯ ವರ್ಷದವರೆಗೆ ಮದುವೆ ಮಾಡುವ ಪದ್ಧತಿ ಇದೆ. ಒಂದೇ ಬೆಡಗಿಗೆ ಸಂಬಂಧಸಿದವರಲ್ಲಿ ವೈವಾಹಿಕ ಸಂಬಂಧಗಳು ನಡೆಯುವುದಿಲ್ಲ. ಇದನ್ನು ಕಟ್ಟು ನಿಟ್ಟಾಗಿ ಪಾಲಿಸಿಕೊಂಡು ಬಂದಿದ್ದಾರೆ. ಉದಾಹರಣೆಗೆ ಮಲ್ಲೆನಾಯಕರ ಬೆಡಗು ಮಂದ್ನಾರು ಬೆಡಗುಗಳ ನಡುವೆ ಸಂಬಂಧ ಏರ್ಪಡುತ್ತದೆ. ಆದರೆ ಮಲ್ಲೆನಾಯಕರಲ್ಲಿನ ಉಪ ಪಂಗಡಗಳಾದ ದಡ್ಡಿ ಸೂರನಾಯಕರು, ಅಜ್ಜಡ್ಲಾರು, ಅಬ್ಬನಾರು, ಬೋಸೆವಾರು, ಮೀಸ್ಲಾರು, ಈ ಎಲ್ಲಾ ಪಂಗಡದವರು ಒಂದೇ ಬೆಡಗಿಗೆ ಅಂದರೆ ಎನುಮ್ಲಾರ ಬೆಡಗಿಗೆ ಸೇರುತ್ತಾರೆ. ಮಂದ್ಲಾರು ಬೆಡಗಿಗೆ, ದೇವರಗೊಡ್ಲಾರು, ಎರ್ರಗಾಟಲು ದಾದಿಗನಾರು, ಎರ್ರಬೋತ್ಲಾರು, ಮಾನುಗ್ಲಾರು, ಎರ್ರಗಾಟ್ಲು, ಮುಂತಾದವರು ಮಂದ್ಲಾರು ಪಂಗಡಕ್ಕೆ ಸೇರುತ್ತಾರೆ. ಹೀಗೆ ವಿರುದ್ಧ ಪಂಗಡಗಳಲ್ಲಿ ಮಾತ್ರ ಮದುವೆ ಮಾಡಲಿಕ್ಕೆ ಅವಕಾಶ ವಿದೆ.

ಮುಖ್ಯವಾಗಿ ಮದುವೆಗಳು ಗಂಡಿನ ಕಡೆಯವರಾದರೆ ಮೂರು ದಿನಗಳು, ಹೆಣ್ಣಿನ ಕಡೆಯವರಾದ್ರೆ ಎರಡು ದಿನಗಳವರೆಗೆ ನಡೆಯುತ್ತವೆ. ಅಂದರೆ ಅವರ ಆರ್ಥಿಕ ಸ್ಥಿತಿಗತಿಗನುಗುಣವಾಗಿ ಮದುವೆ ನಡೆಯುತ್ತದೆ. ಮದುವೆ ಸಂದರ್ಭದಲ್ಲಿ ನಿಶ್ಚಿತಾರ್ಥ, ವೀಳ್ಯಶಾಸ್ತ್ರ, ಮುಹೂರ್ತಶಾಸ್ತ್ರ, ಗಂಗೆಶಾಸ್ತ್ರ ಇವು ಪ್ರಮುಖವಾಗಿ ನಡೆಯುವಂತ ಆಚರಣೆಗಳು. ಸುಮಾರು ೧೮-೨೦ ವರ್ಷದ ಯುವಕರಿಗೆ ಮನೆಯ ಹಿರಿಯರು ಮದುವೆ ಮಾಡಬೇಕೆಂದು ಯೋಚಿಸಿ ಸಂಬಂಧ ಬೆಳೆಸಬಹುದಾದ ಬೇಡಗಿನ ಹೆಚ್ಚಿನ ಹಟ್ಟಿಗಳನ್ನು ಗುರುತಿಸುತ್ತಾರೆ. ಯಾವುದಾದರೂ ಒಂದು ದಿನ ನಿಗದಿಗೊಳಿಸಿ ಒಬ್ಬ ಮಹಿಳೆಯೊಂದಿಗೆ (ಸೋದರಿ, ಸೋದರತ್ತೆ ಅಥವಾ ಕುಲದ ಮುತ್ತೈದೆ.) ಒಟ್ಟು ಸರಿಸಂಖ್ಯೆಯೊಂದಿಗೆ, ಆರು, ಎಂಟು, ಹತ್ತು ಜನರು ಸೇರಿ ಹೋಗುತ್ತಾರೆ. ಹೋಗುವ ದಾರಿಯಲ್ಲಿ ಬೆಕ್ಕು, ಕಟ್ಟಿಗೆ, ರಂಡೆಮುಂಡೆ ಅಡ್ಡ ಬಂದರೆ ಅಪಶಕುನವೆಂದು ಭಾವಿಸುತ್ತಾರೆ. ಹೆಣ್ಣಿನ ಮನೆಗೆ ಹೋದ ಸಂದರ್ಭದಲ್ಲಿ ಅತಿಥ್ಯ ನಡೆಯುತ್ತದೆ. (ನಿಶ್ಚಿತಾರ್ಥವಾಗುವವರೆಗೆ ಅಲ್ಲಿ ಊಟ ಮಾಡುವಂತಿಲ್ಲ) ವಧುವನ್ನು ನೋಡಿ ಮರಳಿ ಹೋಗುತ್ತಾರೆ. ಒಪ್ಪಿಗೆಯಾದಲ್ಲಿ ನಂತರ ಒಪ್ಪಿಗೆಯೆಂದು ಬೇರೆಯವರ ಮೂಲಕ ಹೇಳಿಕಳಿಸುತ್ತಾರೆ.

ಮದುವೆಯ ಗಂಡು ಮತ್ತು ಹೆಣ್ಣು ತಾವು ಒಬ್ಬರಿಗೊಬ್ಬರು ಒಪ್ಪಿಗೆ ಮಾಡಿಕೊಂಡಾಗ ಗಂಡು ಮತ್ತು ಹೆಣ್ಣಿನ ಕಡೆಯವರು ಎರಿಗೂ ಒಪ್ಪಿಗೆಯಾದ ನಂತರ ಹೆಣ್ಣನ್ನು ಕಾಯಂ ಮಾಡಲಿಕ್ಕೆ ಗಂಡಿನ ಕಡೆಯವರು (ಮಂಚಿಮಾಟ) ನಿಶ್ಚಿತಾರ್ಥ ಅಂತ ಮಾಡುತ್ತಾರೆ. ಗಂಡಿನ ಕಡೆಯವರು ಒಂದು ಅಥವಾ ಎರಡು ಸೀರೆ. ಎರಡು ಕುಪ್ಪಸ ಎರಡು ತೆಂಗಿನ ಕಾಯಿ, ಹಣ್ಣು ಹೂಗಳನ್ನು ತಗೆದುಕೊಂಡು ಹೆಣ್ಣಿನ ಮನೆಗೆ ಹೋಗುತ್ತಾರೆ.

೫.೫.೧.ವೀಳ್ಯೇಶಾಸ್ತ್ರ

ವೀಳೆಶಾಸ್ತ್ರ ಕುರಿತು ಹಿರೆಹಳ್ಳಿಯ ಪ್ರಕಾಶ್‌ನು ಹೇಳುವ ಮಾಹಿತಿ ಈ ಕೆಳಗಿನಂತಿದೆ:



ಹೆಸರು - ಪ್ರಕಾಶ್

ವಯಸ್ಸು - ೩೮ ವರ್ಷ

ವೃತ್ತಿ - ಕೃಷಿ

ಊರು - ಹಿರೇಹಳ್ಳಿ

ಅಂಚೆ - ಹಿರೇಹಳ್ಳಿ

ತಾಲೂಕು - ಚಳ್ಳಕೆರೆ

ಜಿಲ್ಲೆ - ಚಿತ್ರದುರ್ಗ

"ಹೆಣ್ಣು ಕಾಯಂ ಆದ ಕೂಡ್ಲೆ ಯಾವತ್ತಾದ್ರು ಒಂದು ಒಳ್ಳೆಯ ದಿನ ನೋಡಿ 'ವೀಳ್ಯೆ ಶಾಸ್ತ್ರ' ಅಂತ ಮಾಡ್ತೀವಿ. ಈ ಶಾಸ್ತ್ರಕ್ಕೆ ಹೆಣ್ಣು ಕಡೆ ಮತ್ತು ಗಂಡು ಕಡೆ ಎಲ್ಲಾರು ಸೇರ್‍ತಾರೆ, ಅವರು ಬಂಧು ಬಳಗ ಕೊಳ್ಳುಬಳ್ಳಿಯವರು ಸೇರಿ ಈ ಕಾರ್ಯ ಮಾಡ್ತೀವಿ. ಈ ಶಾಸ್ತ್ರವನ್ನು 'ಉಡಿತುಂಬುಶಾಸ್ತ್ರ' ಅಂತ ನಾವು ಕರೆಯುತ್ತೇವೆ. ಈ ಶಾಸ್ತ್ರ ಹೆಣ್ಣಿನ ಮನೆಯಲ್ಲಿ ಮಾಡ್ತೀವಿ. ಈ ಶಾಸ್ತ್ರಕ್ಕೆ ಊರಿನ ಎಲ್ಲಾ ಬಂಧುಗಳು ಬರ್ತಾರೆ. ನಮ್ಮೂರು ಹೆಣ್ಣುಕಡೆಯ ಊರಿವರೆಲ್ಲಾರು ಸೇರಿ ಮಾಡ್ತೀವಿ. ಹಿಂದೆ ಗಾಡಿಗಳನ್ನು ಕಟ್ಟಿಕೊಂಡು ಹೋಗ್ತಿದ್ರು. ಈಗ ಟ್ರಾಕ್ಟರ್ ಮಾಡಿಕೊಂಡು ಹೋಗ್ತೀವಿ. ಆ ದಿನ ಉಗ್ಗಿ ಮಾಡ್ತೀವಿ. ಇದ್ದಂತವರಾದ್ರೆ ಲಡ್ಡು ಗಿಡ್ಡು ಮಾಡ್ತಾರೆ. ಇಲ್ಲದಂತವರು ಉಗ್ಗಿ ಮಾಡಿ ಮುಗಿಸ್ತೀವಿ. ಅದು ಕೂಡ ಎಲ್ಲಾರು ಹುಡುಗಿ ಮನೆಯ ಮುಂದೆ ರಾತ್ರಿ ೭.೩೦ ಹೆಚ್ಚು ಕಮ್ಮಿ ೨ ಗಂಟೆ ಆಗ್ತದೆ. ಎಲ್ಲಾರು ಊಟಗೀಟ ಮಾಡಿ ಊರಿನ ಯಜಮಾನ್ರು ಕರೆಸಿ ಅವರಿಗೆ ಊಟ ಮಾಡಿಸಿ ಎಲ್ಲಾರು ಕೂತ್ಕೊಂಡ ಮೇಲೆ ಒಬ್ರು ಆ ಊರಿನ ಯಜಮಾನ ಕೇಳ್ತಾನೆ ಏನಪ್ಪ ಯಾಕೆ ಬಹಾಳ ದೂರ ಬಂದ್ರಿ ಏನ್ ಸಮಾಚಾರ ಅಂತ ಕೇಳ್ತಾನೆ. ಆಗ ಗಂಡಿನ ಕಡೆಯವರು ಇಂತವರ ಮನೆಯಲ್ಲಿ ಹಾಲು ತುಪ್ಪ ಕುಡಿಯಲಿಕ್ಕೆ ಬಂದಿವಿ ಅಂತಹೇಳ್ತಾರೆ. ಆಗ ಹೆಣ್ಣಿನ ಕಡೆ ಯಜಮಾನ ಅವರ ತಂದೆ ತಾಯಿಗಳಿಗೆ ಹೇಳ್ತಾನೆ. ನೋಡಪ್ಪ ಇವ್ರು ನಿಮ್ ಮನೆಗೆ ಹಾಲು ತುಪ್ಪ ಕುಡಿಯಲಿಕ್ಕೆ ಬಂದಾರಂತೆ ಅಂದಕೂಡ್ಲೆ ಸಂತೋಷ ಬಿಡು ಅಂತಾರೆ. ಹಾಗೆ ತಾಯಿಯನ್ನು ಕೇಳ್ತಾರೆ ಆಗ ತಾಯಿ ಅವ್ರಿಗೆ ಸಂತೋಷವಾದ್ರೆ ನಮ್‌ಗೂ ಸಂತೋಷ ಅಂತಾರೆ. ಹಾಗೆ ಇಂತವರ ಮನೆಗೆ ಇಂತವರ ಮಗಳನ್ನು ಕೇಳಲಿಕ್ಕೆ ಬಂದಾರಂತೆ ಅಂತ ಯಜಮಾನ ಹೇಳ್ತಾರೆ. ಆಗ ತಂದೆಯಿಂದ ಅವರ ಬಂಧು ಬಳಗ ಎಲ್ಲರನ್ನು ಕೇಳ್ತಾರೆ ಒಬ್ಬೊಬ್ಬರಂತೆ ಹುಡಿಗಿಯ ತಾಯಿ, ಚಿಕ್ಕಪ್ಪ, ಚಿಕ್ಕಮ್ಮ, ಅಣ್ಣ, ತಮ್ಮಂದಿರು, ಮಾವಂದಿರು, ಅತ್ತೆಯಂದಿರು ಎಲ್ಲಾರನ್ನು ಕೇಳ್ತಾರೆ. ಎಲ್ಲಾರು ಒಂದೇ ರೀತಿ ಹೇಳ್ತಾರೆ. ಅವರ ತಂದೆ ತಾಯಿ ಸಂತೋಷವೇ ನಮ್ ಸಂತೋಷ

ಎಂದು ಹೇಳ್ತಾರೆ. ಊರ ಯಜಮಾನ್ರು ಸಹ ಉಳಿದ ಹಿರಿಯರಿಗೆ ಕೇಳ್ತಾರೆ. ಅವ್ರು ಸಹ ಒಂದೇ ರೀತಿಯ ಉತ್ತರ ಕೊಡ್ತಾರೆ. ಇಷ್ಟೆಲ್ಲಾ ಆದ ಮೇಲೆ, ಸರಿ ನಮ್ ಮಗಳಿಗೆ ವಧುದಕ್ಷಿಣೆ ಏನೇನು ಕೊಡ್ತೀರಿ ಅಂತ ಕೇಳ್ತಾರೆ. ಆಗ ಒಂದು ಜೊತೆ ಬೆಂಡೋಲೆ ಕೊಡ್ತೀವಿ ಅಂತ ಹೇಳ್ತಾರೆ ಇನ್ನು ಬೆಂಡಾಲಿ ಜೊತೆ ಜಿಮ್ಕೆ, ಬುಗಡಿಕಡ್ಡಿ ಎಲ್ಲತರಬೇಕು. ಜೊತೆಗೆ ಎರಡು ಚೀಲ ಜ್ವಾಳ, ಒಂದೈದಾರು ಚೀಲ ನೆಲ್ಲು ಹಾಕಬೇಕು. ಅಂತ ಕೇಳ್ತಾರೆ, ಆಯಿತು ಕೋಡೋಣ ಅಂತ ಹೇಳಿ ಅಲ್ಲಿಗೆ ಮುಗಿಸುತ್ತಾರೆ. ಮುಗ್ಸಿದ ಮೇಲೆ ಇಂತಹ ಬೇಡಗಿನ ಹೆಣ್ಣು ಇಂತಹ ಬೆಡಗಿನ ಕೊಡುತ್ತೇವೆ. ಅಂತ ಹೇಳಿದ್ರೆ ಗಂಡನವರು ಇಂತಹ ಬೆಡಗಿನವರ ಹೆಣ್ಣನ್ನು ಇಂತಹ ಬೆಡಗಿನವ್ರು ತಗಂತೀವಿ ಅಂತ ಎಲೆ ಅಡಿಕೆ ಕೊಡುವ ತಗೊಳ್ಳುವ ಮಾಡ್ತಾರೆ. ಇಷ್ಟೆಲ್ಲಾ ಮುಗಿದ ಮೇಲೆ ಎಲ್ಲಾರಿಗೂ ಎಲೆ ಅಡಿಕೆ ಹಂಚುತ್ತಾರೆ. ಗಂಡಿನ ಕಡೆಯವರು ನಂತರ ಅವರಿಗೆ ಯಾವಾಗ ಅನುಕೂಲವಾಗ್ತದೋ ಆ ದಿನ ಮದುವೆ ಕಾರ್ಯ ಏರ್ಪಾಡು ಮಾಡಿಕೊಳ್ತಾರೆ. ಗಂಡಿನ ಕಡೆಯವರು ಆ ರಾತ್ರಿಯೇ ವಾಪಾಸ್ಸು ಬರ್ತಾರೆ, ಇಷ್ಟು ನೋಡ್ರಿ ವೀಳ್ಯೇ ಶಾಸ್ತ್ರ."

ಹಿರೇಹಳ್ಳಿ ಪ್ರಕಾಶ್‌ನು ಹೇಳುವ ವಿವರಗಳಲ್ಲಿ ಮೂಲದ ಆಚರಣೆ, ಬದಲಾದ ಸೂಕ್ಷ್ಮತೆಗಳು ಮತ್ತು ಸಮುದಾಯವೊಂದರ ಒಳಗೆ ಇರಬಹುದಾದ ಪರಸ್ಪರಾವಲಂಬನ ನಡವಳಿಕೆಗಳು, ಊರಿನ ಹಿರಿಯರನ್ನು ಅಂದರೆ ಊರಿನ ಎಲ್ಲಾ ಜಾತಿಯ ಹಿರಿಯರನ್ನು ಗೌರವಿಸುವ, ಪರಸ್ಪರ ಕೊಡುಕೊಳ್ಳುವಿಕೆ ಮುಂತಾದ ಸೂಕ್ಷ್ಮಗಳನ್ನು ಗುರುತಿಸಲಿಕ್ಕೆ ಸಾಧ್ಯವಿದೆ. ಒಳಪಂಗಡ ವ್ಯವಸ್ಥೆ, ವಧುದಕ್ಷಿಣೆ ತೆರ ಪಡೆಯುವ ವಿಧಾನದ ಬಗ್ಗೆ ಸೂಕ್ಷ್ಮವಿವರಗಳು ಇಲ್ಲಿವೆ. ಇದ್ದಂತರು ಕೇಸರಿಬಾತ್, ಲಡ್ಡು ಮಾಡ್ತಾರೆ, ನಾವು ಉಗ್ಗಿ ಮಾಡ್ತೀವಿ ಎನ್ನುವಲ್ಲಿ ಸಮುದಾಯದ ಒಳಗೇ ಇರುವ ವರ್ಗ ಶ್ರೇಣೀಕರಣವನ್ನು ಬಿಂಬಿಸುತ್ತದೆ.

೫.೫.೨.ಮದ್ದಿಂಗನಶಾಸ್ತ್ರ

ಮ್ಯಾಸಬೇಡರ ಮದ್ದಿಂಗ ಶಾಸ್ತ್ರ ಕುರಿತು ಸಣ್ಣಸೂರಯ್ಯ ಸೂರಮ್ಮನಹಳ್ಳಿ ಅವರು ಕೊಡುವ ಮಾಹಿತಿ ಈಗಿದೆ:

ಹೆಸರು - ಸಣ್ಣಸೂರಯ್ಯ

ವಯಸ್ಸು - ೭೫ ವರ್ಷ


ವೃತ್ತಿ - ಕೃಷಿ

ಊರು - ಸೂರಮ್ಮನಹಳ್ಳಿ

ಅಂಚೆ - ಬಿ.ಜಿ.ಕೆರೆ

ತಾಲೂಕು - ಮೊಳಕಾಲ್ಮೂರು

ಜಿಲ್ಲೆ - ಚಿತ್ರದುರ್ಗ



"ನೋಡಪ್ಪ ನಮ್ ಜಾತಿಯಲ್ಲಿ ಮದುಮಗ ಆಗುವವರು ನಮ್ ಮನೆಯಲ್ಲಿ ಏನು ಮಾಡಲ್ಲ. ಮಾಮೂಲಿ ಮನುಷ್ಯನಂತೆ ಎಲ್ಲಾ ಸಾಮಾನಗಳನ್ನು ತಗಂಡು ಯಾರ್‍ಯಾರು ಯಾವ್ಯವ್ ಮನೆದೇವ್ರಿಗೆ ಸೇರಿರ್ತಾರೋ ಅಲ್ಲಿಗೆ ಹೋಗ್ತೀವಿ. ಅಲ್ಲಿ ಪೂಜಾರಿ ಇಲ್ಲಂದ್ರೆ ಕಿಲಾರಿಗಳು ಇರ್ತಾರೆ. ಅವ್ರತ್ರ ಹೋಗಿ ಇಂಗೆ ನಾವು ಮದ್ಲಿಂಗ ಆಗ್ಲಿಕ್ಕೆ ಬಂದೀವಿ ಎಂದು ಹೇಳ್ತೀವಿ. ಆಗ ಪೂಜಾರಿಗಳು ಇಲ್ಲಂದ್ರೆ ಕಿಲಾರಿಗಳು ಅವ್ರ ಮನೆಯಲ್ಲಿ ನೀರು ಕಾಯಿಸುತ್ತಾರೆ. ನೀರು ಕಾಯ್ಸಿದ್ ಮೇಲೆ ಮೈತೊಳ್‌ಕೊಂಡು ದೇವಸ್ಥಾನಕ್ಕೆ ಹೋಗ್ತೀವಿ. ಅಲ್ಲಿ ಕುಂದ್ರಿಸಿ ಗುಡಿ ಇಲ್ಲಂದ್ರೆ ಹಟ್ಟಿ ಹತ್ರ ಪೂಜಾರಿಗಳು ಮದ್ಲಿಂಗನನ್ನು ಮಾಡ್ಲಿಕ್ಕೆ ನಾವು ತಗಂಡು ಹೋದ ಸಾಮಾನುಗಳನ್ನೆಲ್ಲ ಇಸ್ಕಂತಾರೆ. ಅಂದ್ರೆ ವಿಭೂತಿ, ಕಂಬ್ಳಿ, ಚಾಕು (ಬಾಕು), ವೀರದಾಳಿ (ಬೆಳ್ಳಿಸರ), ನಿಂಬೆಹಣ್ಣು, ಅಕ್ಕಿ, ಹೊಸಬಟ್ಟೆ, ಇವುಗಳೆಲ್ಲವನ್ನು ಕೊಡ್ತೀವಿ ಪೂಜಾರಿ ವಿಭೂತಿ ಹಚ್ಚಿ, ಕೈಯಲ್ಲಿ ಚಾಕು ಕೊಟ್ಟು, ಅದರ ತುದಿಗೆ ನಿಂಬೆಹಣ್ಣ ಇಟ್ಟು, ಒಂದು ಕೆಂಪು ಬಟ್ಟೆ ಕಟ್ಟಿ ನಮ್ ಕೈಗೆ ಕೊಡ್ತಾನೆ. ಕೊರಳಲ್ಲಿ ವೀರದಾಳಿಯನ್ನು ಹಾಕ್ತಾನೆ. ಒಂದು ಕೈಯಲ್ಲಿ ಅಂದ್ರೆ ಎಡಗೈಗೆ ಕಂಬ್ಳಿ ಹಿಡಿಸುತ್ತಾರೆ. ತಲೆಗೆ ರುಮಾಲು ಸುತ್ತುತ್ತಾರೆ. ನಾವು ತಗಂಡು ಹೋಗಿರವ ಅಕ್ಕಿಯನ್ನು ಅರ್ಧ ದೇವ್ರತ್ರ ಇಟ್ಟು ಬಂಡಾರ ಹಚ್ಚಿ ಅರ್ಧ ನಮ್‌ಗೆ ಕೊಡ್ತಾರೆ. ಹಿಂದೆ ಕಿವಿಯಲ್ಲಿ ಬೆಂಡಾಲಿಕೂಡ ಇಡುತ್ತಿದ್ರು. ಈಗ ಯಾರು ಬೆಂಡಾಲಿಯನ್ನು ಹಾಕಿಕೊಳ್ಳಲ್ಲ. ಹಿಂದಿನ ಕಾಲ್ದಲ್ಲಿ ಚಲ್ಲಣ (ಸಲ್ಲಡಮು) ಕೂಡ ಹಾಕೊಳ್‌ತಿದ್ರು. ಈಗ ಯಾರು ಹಾಕಿಕೊಳ್ಳಲ್ಲ. ಹಿಂದ್ಲು ಕಾಲ್ದಲ್ಲಿ ನಮ್ ಮನೆದೇವ್ರು ಎಷ್ಟು ದೂರ ಇದ್ರು ನಡ್‌ಕೊಂಡು ಹೋಗ್ತಿದ್ವಿ. ಈಗ ಯಾವುದಾದ್ರು ಗಾಡಿ-ಗೀಡಿ ತಗಂಡು ಹೋಗ್ತೀವಿ. ಹಿಂಗೆಲ್ಲ ಪೂಜಾರಿಗಳು ಮಾಡಿ ಮದ್ಲಿಂಗನನ್ನು ಕಳಿಸುತ್ತಾರೆ. ಮದ್ಲಿಂಗನು ಮನೆಗೆ ಬಂದ್ ಮೇಲೆ ಮನೆಯಲ್ಲಿ ರಾತ್ರಿ ಎಲ್ಲಾರು ಕೂಡಿ ಕರಿಮಣಿಯನ್ನು ಪೋಣಿಸುತ್ತಾರೆ. ಮೊದ್ಲು ಮದ್ಲಿಂಗ ಪೋಣಿಸುತ್ತಾನೆ. ಆ ಕಡೆ ಮೂರು ಈ ಕಡೆಗೆ ಮೂರು ಎಂದು ಶಾಸ್ತ್ರ ಪ್ರಕಾರ ಪೋಣಿಸುತ್ತಾನೆ. ಆ ಮೇಲೆ ಎಲ್ಲಾರು ಹೆಣ್ ಮಕ್ಕಳು ಸೇರಿ ಪೋಣಿಸಿ ಮುಗಿಸುತ್ತಾರೆ. ಹಿಂಗೆ ಎಲ್ಲಾ ರೆಡಿ ಮಾಡಿ ಕೊಂಡು ಹೆಣ್ಣು ಊರಿಗೆ ಹೋಗ್‌ಬೇಕಾದ್ರೆ, ನಮ್ಮೂರಿನ ದೇವ್ರಿಗೆ ಹೋಗಿ ಕೈ ಮುಗಿದು ಟ್ರ್ಯಾಕ್ಟರ್ ಇಲ್ಲಂದ್ರೆ ಲಾರಿ ಮಾಡಿಕೊಂಡು ಹೆಣ್ಣಿನ ಮನೆಗೆ ಹೋಗ್ತೀವಿ. ಹಿಂದೆ ಎತ್ತಿನ ಗಾಡಿಗಳ ಮೇಲೆ ಹೋಗ್ತಿದ್ರು. ಈಗ ಲಾರಿ ಗೀರಿ ಮಾಡ್ತಾರೆ ನೋಡ್ರಿ."

ಮ್ಯಾಸಬೇಡರ ಮದ್ಲಿಂಗನ ಶಾಸ್ತ್ರ ಕುರಿತು ಸಣ್ಣಸೂರಯ್ಯ ಹೇಳುವ ವಿವರದಲ್ಲಿ ನಂಬಿಕೆಯ ಸಾಮಾಜಿಕ ಸ್ಥಿತ್ಯಂತರಗಳನ್ನು ಗುರುತಿಸಲಿಕ್ಕೆ ಸಾಧ್ಯವಿದೆ. ಮೊದಲು ಎತ್ತಿನ ಬಂಡಿಯಲ್ಲಿ ಹೋಗುತ್ತಿದ್ದ ದಿಬ್ಬಣ, ಈಗ ಲಾರಿ, ಟ್ರ್ಯಾಕ್ಟರ್ ಅನ್ನು ಅವಲಂಬಿಸಿದೆ. ಮೊದಲು 'ಚಲ್ಲಣ' ಹಾಕುತ್ತಿದ್ದ ಮಧುಮಗ ಈಗ ಪಂಚೆ ಆಕುತ್ತಾನೆ. ಮನೆ ದೇವರಿಗೆ ಎಷ್ಟೋ ದೂರವಿರಲ್ಲಿ ನಡೆದೇ ಹೋಗುತ್ತಿದ್ದ ಬೇಡರು ಈಗ ವಾಹನದ ಮೂಲಕ ಹೋಗಿಬರುತ್ತಾರೆ. ಹೀಗೆ ಸಾಮಾಜಿಕ ನಂಬಿಕೆಯ ಪಲ್ಲಟದ ಸೂಕ್ಷ್ಮಗಳನ್ನು ಗುರುತಿಸಬಹುದು.

೫.೫.೩.ತಾಳಿಶಾಸ್ತ್ರ

ಮ್ಯಾಸಬೇಡರ ತಾಳಿಶಾಸ್ತ್ರದ ಬಗ್ಗೆ ರುದ್ರಮ್ಮನಹಳ್ಳಿ ಬೋರಮ್ಮನು ಹೇಳುವ ವಿವರ ಹೀಗಿದೆ:

ಹೆಸರು - ಬೋರಮ್ಮ



ವಯಸ್ಸು - ೪೪ ವರ್ಷ

ವೃತ್ತಿ - ಮನೆಗೆಲಸ

ಊರು - ರುದ್ರಮ್ಮನಹಳ್ಳಿ

ಅಂಚೆ - ಹಿರೇಹಳ್ಳಿ

ತಾಲೂಕು - ಚಳ್ಳಕೆರೆ

ಜಿಲ್ಲೆ - ಚಿತ್ರದುರ್ಗ

"ನಮ್ಮ ಸಮುದಾಯದಲ್ಲಿ ಮದುವೆ ಹೆಣ್ಣಿನ ಮನೆಯ ಮುಂದೆ ನಡೆಯುತ್ತದೆ. ಕೆಲವೊಂದು ಟೈಮ್‌ನಲ್ಲಿ ದೇವರ ಗುಡಿಯ ಮುಂದೆ ನಡಿತಾವೆ. ಆದ್ರೆ ಎಲ್ಲಾರು ಮನೆಯ ಮುಂದೆ ಮಾಡ್ಲಿಕ್ಕೆ ಇಷ್ಟ ಪಡುತ್ತಾರೆ. ಮುಹೂರ್ತದ ಹಿಂದಿನ ದಿನವೇ ಗಂಡಿನ ಕಡೆಯವ್ರು ಹೆಣ್ಣಿನ ಊರಿಗೆ ಬರ್ತಾರೆ. ಕೆಲವರು ಈಗ ಬೆಳಿಗ್ಗೆ ಬರ್ತಾರೆ. ಮುಹೂರ್ತ ಬೆಳಿಗ್ಗೆ ಎಷ್ಟು ಗಂಟೆಗೆ ಇರ್ತದೋ ಅದೆಲ್ಲ ನೋಡಿಕೊಂಡು ಹೆಣ್ಣು ಮನೆಯಲ್ಲಿ ಏನೇನು ಕಾರ್ಯಗಳು ಮಾಡಬೇಕು ಎಲ್ಲಾ ಮಾಡ್ತೀವಿ. ಲಗ್ನ ಅಂತಕಟ್ಟಿಸುತ್ತಾರೆ. ಅದಕ್ಕೆ ಕೆಲವರು ಬೇರೆ ಊರಿಗೆ ಹೋಗಿ ಕಟ್ಟಿಸಿಕೊಂಡು ಬರ್ತಾರೆ ಕೆಲವರು. ಜಂಗಮರನ್ನು ಮನೆಹತ್ತಿರ ಕರ್ಕೊಂಡು ಬಂದು ಕಟ್ಟಿಸುತ್ತಾರೆ. ಲಗ್ನ ಕಟ್ಟಿಸಿದ ಮೇಲೆ, ಗಂಡಿನ ಕಡೆಯವರನ್ನು ಹೆಣ್ಣಿನ ಮನೆಹತ್ತಿರ ತರುತ್ತೇವೆ. ಮದುಮಗ ಅಲ್ಲೇ ಹತ್ತಿರ ಇರ್ತಾನೆ. ಊರಿನ ಎಲ್ಲಾ ಕೋಮಿನವರು ಬರ್ತಾರೆ ಆಗ ಗಂಡಿನ ಕಡೆಯವರು ತಂದಿರುವ ಎಲೆ ಅಡಿಕೆಯನ್ನು ಮುಗ್ಗೂರು ನಾಯಿಕಡ್ಲು ಅಂತರಲ್ಲ ಅವರಲ್ಲಿ ಯಾರಾದ್ರು ಒಬ್ರು ಗದ್ಪಿಗೆ ಹಾಕ್ತಾರೆ. ಗದ್ಪಿಗೆ ಆಕ್ಲಿಕ್ಕೆ ಎಲ್ಲಾ ಅಪ್ಪಣೆಯನ್ನು ಕೇಳ್ತಾನೆ. ಗದ್ಪಿಗೆ ಹಾಕುವವನು ಅಪ್ಪಣೆ ಅಂದಕೂಡ್ಲೆ ಗದ್ಪಿಗೆ ಆತ ಎಲೆ ಈ ಕೋಮಿಗೆ ಸೇರಿದ ಪ್ರಮುಖರು ಮೂವರು ಜನ ನಾಯಕರು, ಆರು ಜನ ನಾಯಕರು, ಒಂಬತ್ತು ಜನ ನಾಯಕರು ಅಂತೇಳಿ ಇಷ್ಟು ಭಾಗ ಗದ್ಪಿಗೆ ಮೇಲೆ ಇಡ್ತಾರೆ. ಇಷ್ಟು ಎಲ್ಲಾರಿಗೂ ಹಂಚುತ್ತಾರೆ. ಆ ಮೇಲೆ ಹೆಣ್ಣಿನ ಕಡೆಯವರ ಹೆಣ್ಣಿಗೆ ಸಂಬಂಧ ಪಟ್ಟ ಚಿಕ್ಕಮ್ಮ ಎಲೆಯ ಜೊತೆಗೆ ತಂದಿದ್ದ ವಡವೆಗಳನ್ನು ಒಂದು ಕಂಚಿನ ತಟ್ಟೆಯಲ್ಲಿ ಮೂರು ಬಾರಿ ತಗಂಡು ಹೊಳಗಡೆ ಹೋಗ್ತಾಳೆ. ನಂತರ ಮೂರು ಬಾರಿ ಅಡಿಕೆಯನ್ನು ಆ ತಟ್ಟೆಯಲ್ಲಿ ತಗಂಡು ಹೊಗ್ತಾಳೆ. ಇದಾದ್ ಮೇಲೆ ಒಳಗಡೆ ಮದುವಣಗಿತ್ತಿ ಮಾಡ್ತಾರೆ. ಗದ್ಪಿಗೆ ಮೇಲಿದ್ದ ೩ ಭಾಗ ೬ ಭಾಗ ೯ ಭಾಗ ಎಲೆಯನ್ನು ಆಯಾ ಕೋಮಿನವರಿಗೆ ಕೊಡ್ತಾರೆ. ಕೊಟ್ಟ ಮೇಲೆ ಮದ್ಲಿಂಗನನ್ನು ಕರೆಸಿ ಮದುವಣಗಿತ್ತಿಯನ್ನು ಕರೆಸಿ ಇಬ್ರನ್ನು ಪೂರ್ವಕ್ಕೆ ಒಬ್ರನ್ನು ಪಶ್ಚಿಮಕ್ಕೆ ಕೂಡಿಸಿತ್ತೇವೆ. ಆಗ ಹಾಲನ್ನು



ಹಾಕಿ ಇಬ್ರೂ ಒಬ್ರು ಕೈ ಮೇಲೆ ಒಬ್ರು ಹಾಕಿ ಕಂಚಿನ ತಟ್ಟೆಯಲ್ಲಿ ಹಾಲು ಹಾಕಿ. ಅದ್ರಲ್ಲಿ ಒಂದು ಉಂಗುರ ಹಾಕಿ ಹುಡುಕಿಸುತ್ತೇವೆ. ಉಂಗುರ ಮೂರು ಬಾರಿ ಹುಡುಕಿಸಿದ ಮೇಲೆ ತಾಳಿಯನ್ನು ಎಲ್ಲಾರಿಗೆ ತೋರಿಸುತ್ತೇವೆ. ಎಲ್ಲಾರು ಅದಕ್ಕೆ ಕೈ ಮುಗಿದು ನಂತರ ಅದನ್ನು ಮದ್ಲಿಂಗನ ಕೈಗೆ ಕೊಡುತ್ತೇವೆ. ಆಗ ಮದ್ಲಿಂಗನು ಎಲ್ಲಾರಿಗೆ ತೋರಿಸಿ. ಸರಿಯಾದ ಸಮಯಕ್ಕೆ ಮದುವಣಗಿತ್ತಿಯ ಕೊರಳಿಗೆ ಮೂರು ಗಂಟು ಹಾಕುತ್ತಾನೆ. ನಂತರ ಅದನ್ನು ಬೇರೆಯವರು ಗಟ್ಟಿಯಾಗಿ ಕಟ್ಟಿ ಮುಗಿಸುತ್ತಾರೆ. ಇದೇ ತಾಳಿಶಾಸ್ತ್ರ ಕೆಲವರು ತಾಳಿಕಟ್ತಾರೆ ಕೆಲವರು ಬರಿ ಕರಿಮಣಿ ಕಟ್ತಾರೆ."

ರುದ್ರಮ್ಮನ ಹಳ್ಳಿ ಬೋರಮ್ಮನು ಹೇಳುವ ತಾಳಿಶಾಸ್ತ್ರದಲ್ಲಿ ಕೆಲವು ಸೂಕ್ಷ್ಮ ವಿವರಗಳಿವೆ. ಜಂಗಮರ ಮನೆಗೆ ಹೋಗಿ ಲಗ್ನಕಟ್ಟಿಸಿಕೊಂಡು ಬರುವುದು. ಮದುವೆಗೆ ಎಲ್ಲರ ಅಪ್ಪಣೆ ಕೇಳುವುದು, ಇಳೇವನ್ನು ಸರ್ವರಿಗೂ ಹಂಚುವುದೂ, ಇವೆಲ್ಲಾ ಬುಡಕಟ್ಟು ಸಮುದಾಯಕ್ಕೆ ವಿಶೇಷವಾದ ಸಮಾಜವಾದಿ ಲಕ್ಷಣಗಳು ಇನ್ನು ಕೆಲವು ಲಕ್ಷಣಗಳು ಜನಪ್ರಿಯ ಸಂಸ್ಕೃತಿಯಿಂದ ಬಂದಿರಲಿಕ್ಕೆ ಸಾಕು. ಹಾಲಿನಲ್ಲಿ ಉಂಗುರ ಹುಡುಕುವ ಆಚರಣೆ ಹೆಚ್ಚಾಗಿ ಮೇಲ್ವರ್ಗದಲ್ಲಿ ಇರುವಂಥದ್ದು, ಅದು ಈಗ ಬೇಡರ ಮದುವೆಯಲ್ಲೂ ಆಚರಣೆಗೊಳಗಾಗುತ್ತಿರುವುದುದನ್ನು ಕಾಣಬಹುದು.

೫.೫.೪.ಗಂಗೆಶಾಸ್ತ್ರ

ಗಂಗೆಶಾಸ್ತ್ರ ಪ್ರತಿ ಸಮುದಾಯದಲ್ಲಿ ಮಾಡುವ ರೀತಿಯಲ್ಲಿ ಈ ಸಮುದಾಯದಲ್ಲಿ ಸಹ ಮಾಡುತ್ತಾರೆ. ಇದರ ಬಗ್ಗೆ ಮಾಹಿತಿ ಕೋನಸಾಗರ ಸೂರಮ್ಮ ಹೇಳುವ ವಿವರ ಹೀಗಿದೆ:

ಹೆಸರು - ಸೂರಮ್ಮ

ವಯಸ್ಸು - ೬೦ ವರ್ಷ

ವೃತ್ತಿ - ಕೂಲಿ

ಊರು - ಕೋನಸಾಗರ

ಅಂಚೆ - ಕೋನಸಾಗರ

ತಾಲೂಕು - ಮೊಳಕಾಲ್ಮೂರು

ಜಿಲ್ಲೆ - ಚಿತ್ರದುರ್ಗ



"ಗಂಗೆಶಾಸ್ತ್ರವನ್ನು ನಾವು ಮದುವೆಯ ಮೂರನೇ ದಿನದಲ್ಲಿ ಮಾಡ್ತೀವಿ. ಇದು ಮದುವೆಯ ಕೊನೆ ಕಾರ್ಯ. ಮೂರನೆ ದಿನ ಬೆಳಿಗ್ಗೆ ಸುಮಾರು ೧೦ ಅಥವಾ ೧೧ ಗಂಟೆಗೆ ಗಂಡು ಮತ್ತು ಹೆಣ್ಣು ಇಬ್ರನ್ನು ಸೇರಿಸಿ ಸ್ನಾನ ಮಾಡಿಸುತ್ತೇವೆ. ಸ್ನಾನ ಮಾಡಿದ ಮೇಲೆ ಇಬ್ರೂ ಎಲೆ ಅಡಿಕೆ ತಿಂದು ಒಬ್ರು ಮೇಲೆ ಒಬ್ರು ಆಕಡೆಗೆ ಉಗುಳುತ್ತಾರೆ. ಉಗುಳಿದ ನಂತರ ಒಳಗಡೆಗೆ ಬಂದು ಮದುಮಗಳು ಹೊಸ ಬಿಂದಿಗೆಯನ್ನು ಹೊತ್ಕೊಂಡು ಊರಿನ ಮುಂದೆ ಯಾವುದಾದ್ರು ಬಾವಿ, ಇಲ್ಲಂದ್ರೆ ಕೆರೆ, ಅದು ಇಲ್ಲಂದ್ರೆ

ಕೊಳವೆಯ ಹತ್ತಿರ ಹೋಗ್ತಾರೆ. ಮದುಮಗಳ ಜೊತೆಗೆ ಮತ್ತೆ ನಾಲ್ಕು ಜನ ಕೊಡಗಳನ್ನು ತಗಂಡು ಗಂಗೆಗೆ ಹೋಗ್ತಾರೆ. ಅಲ್ಲಿ ಒಟ್ಟು ಐದು ಕೊಡಗಳನ್ನು ತುಂಬ್ಸಿ ಸಾಲಾಗಿ ಇಟ್ಟಿರುತ್ತಾರೆ. ಐದು ಸಣ್ಣ ಕಲ್ಲುಗಳು ಐದು ಎಳ್ಳುಂಡೆ, ಐದು ಗೋದಿ ಉಂಡೆ, ಮಾಡಿ ಐದು ಎಲೆ ಇಟ್ಟು ಮದುವಣಗಿತ್ತಿ (ಮದ್ಲಿಗಿತ್ತಿ)ಯನ್ನು ಪೂಜೆ ಮಾಡ್ಲಿಕ್ಕೆ ಹೇಳ್ತಾರೆ. ಆಗ ಅವಳು ಪೂಜೆ ಮಾಡಿ. ಐದು ಎಲೆಗಳಲ್ಲಿ ನಾಲ್ಕು ಎಲೆಗಳನ್ನು ಬೇರೆಯವರಿಗೆ ಉಡಿ ತುಂಬಿ ಒಂದನ್ನು ತಾನು ತುಂಬಿಕೊಂಡು ಒಂದು ಎಲೆಯ ಜೊತೆಗೆ ಬಾಳೆ ಹಣ್ಣನ್ನು ಗಂಗೆಯಲ್ಲಿ ಬಿಟ್ಟು ನಮಸ್ಕರಿಸುತ್ತಾರೆ. ಜೊತೆಗೆ ಐದು ಉಂಡೆಗಳನ್ನು ಅಕ್ಕಿಯ ಜೊತೆಗೆ ಬೆರೆಸಿ ಗಂಗೆಗೆ ಬರುವ ಎಲ್ಲಾರಿಗೂ ಹಂಚುತ್ತಾಳೆ. ನಂತರ ಮದುಮಗಳು ಕೊಡವನ್ನು ಹೊತ್ಕೊಂಡು ಅವಳ ಜೊತೆಗೆ ಇತರೆ ನಾಲ್ಕು ಜನ ಸೇರಿ ಒಟ್ಟಿಗೆ ಸಾಲಾಗಿ ಮನೆಗೆ ಬರ್ತಾರೆ. ಮನೆಗೆ ಬಂದ ಮೇಲೆ ಮದುಮಗ ಬಾಗಿಲಲ್ಲಿ ನಿಂತ್ಕೊಂಡು ಕೊಡ ಹಿಡ್ಕೊಂಡು ಅದರೊಳಗೆ ಎರಡು ರುಪಾಯಿ ಅಥವಾ ಐದು ರೂಪಾಯಿ ಹಾಕಿ ಯಾರ‍್ಯಾರು ಬಂದ್ರಿ ಅಂತ ಕೇಳ್ತಾರೆ. ಆಗ ಮದು ಮಗಳು ನಾನು ಗಂಗಮ್ಮ ಬಂದ್ವಿ ಅಂತ ಹೇಳ್ತಾಳೆ. ಆಗ ಮದುಮಗ ಕೊಡ ಇಳಿಸಿಕ್ಕೊಂಡು ಒಳಗಡೆ ಇಳಿಸುತ್ತಾನೆ. ಇದೆ ಗಂಗೆಶಾಸ್ತ್ರ, ನೋಡ್ರಿ ಇದೆ ಕೊನೆಯ ಕಾರ್ಯ ನಮ್ದು.”

ಕೋನಸಾಗರದ ಸೂರಮ್ಮ ಹೇಳುವ ವಿವರ, ಜನಪ್ರಿಯವಾಗಿ ಎಲ್ಲಾ ಸಮುದಾಯಗಳು ಮಾಡುವ ಆಚರಣೆಗೆ ಹೆಚ್ಚು ಸಾಮ್ಯತೆ ಇರುವುದನ್ನು ಗಮನಿಸಬಹುದು. ಇದು ಗ್ರಾಮೀಣ ಬದುಕಿನ ಭಾಗವಾಗಿ ರೂಪಗೊಂಡ ಆಚರಣೆಯೇ ವಿನಃ ಸಮುದಾಯ ನಿಷ್ಟವಾಗಿ ರೂಪುಗೊಂಡ ಆಚರಣೆಯಲ್ಲ.

೪.೬.ಶವಸಂಸ್ಕಾರ

ಸಮಾಜದಲ್ಲಿ ಎಲ್ಲಾರು ಮಾಡುವಂತೆ ಮ್ಯಾಸಬೇಡರಲ್ಲಿ ಶವಸಂಸ್ಕಾರ ಪದ್ಧತಿಯನ್ನು ಪೂರ್ವದಿಂದಲೂ ಮುಂದುವರೆಸಿಕೊಂಡು ಬಂದಿದ್ದಾರೆ. ಇದರ ಬಗೆ ಕಂಪಳ ದೇವರಹಟ್ಟಿಯ ಗೊಡ್ಲುಕಿಲಾರಿ ಕೊಡುವ ವಿವರ ಈ ಕೆಳಗಿನಂತಿದೆ:

ಹೆಸರು - ಗೊಡ್ಲುಕಿಲಾರಿ

ವಯಸ್ಸು - ೬೬ ವರ್ಷ

ವೃತ್ತಿ - ಕೃಷಿ

ಊರು - ಕಂಪಳ ದೇವರಹಟ್ಟಿ

ಅಂಚೆ - ಕಂಪಳ ದೇವರಹಟ್ಟಿ

ತಾಲೂಕು - ಮೊಳಕಾಲ್ಮೂರ್

ಜಿಲ್ಲೆ - ಚಿತ್ರದುರ್ಗ



"ನೋಡ್ರಿ 'ಸಾವು' ಎಲ್ಲರಿಗೂ ಬಂದೇ ಬರ್ತದೆ. ಹುಟ್ಟಿದ ಮೇಲೆ ಅವ್ರು ಎಂತವರೇ ಇರ್ಲಿ ಒಂದಿಲ್ಲೊಂದು ದಿನ ಸಾಯ್‌ಲೇ ಬೇಕು. ನೋಡ್ರಿ ನಾವೇನು ಬೇರೆ ರೀತಿಯಾಗಿ ಮಾಡಲ್ಲ ಎಲ್ಲಾರು ಹೆಂಗೆ ಮಾಡ್ತಾರೋ ನಾವು ಅದೇ ರೀತಿಯಾಗಿ ಮಾಡ್ತೀವಿ. ನಮ್ಮಲ್ಲಿ ಯಾರಾದ್ರು ಮೊದ್ಲು ಸತ್ರೆ ಅವುನ್ನು ಮೊದಲು ಮನೆಯಿಂದ ಹೊರಗಡೆ ತಂದು ಮಲಸ್ತೀವಿ. ಸತ್ತ ಸಂಬಂಧಿಕರಿಗೆಲ್ಲಾ ಊರಿನವ್ರು ಸೇರಿ ಹಿಂದೆ ಮಣೇಗಾರರನ್ನು ಹಿಂದಿನ ಕಾಲದಲ್ಲಿ ಬಸ್‌ಚಾರ್ಜ್‌ಕೊಟ್ಟು ಕಳುಸ್ತಿದ್ವಿ. ಈಗ ಎರಡು ಮೂರು ವರ್ಷದಿಂದ ಫೋನ್ ಬಂದಿವೆ. ಫೋನ್ ಮಾಡಿಬಿಡ್ತೀವಿ. ಫೋನ್ ಇಲ್ಲದೆ ಇದ್ರೆ ಮಣೆಗಾರರು ಹೋಗ್ತಾರೆ. ಅವ್ರು ನಾವು ಯಾವ ಊರಿಗೆ ಕಳಿಸ್ತೀವೋ ಆ ಊರಿಗೆ ಹೋಗಿ ಮನೆಗೆ ಸುದ್ದಿ ತಲುಪಿಸಿ ವಾಪಾಸು ಬರೋಮಟ್ಟಕಾಯ್ತೀವಿ. ಒಂದು ರಾತ್ರಿಯಲ್ಲ ಮನೆ ಮುಂದೆ ಭಜನೆ ಮಾಡಿಕೊಂಡು ಕಾಲ ಕಳಿಯುತ್ತೇವೆ. ಬೆಳಿಗ್ಗೆ ಎಲ್ಲಾ ಕಾರ್ಯಗಳಿಗೆ ರೆಡಿಮಾಡ್ಕೊಂಡು ಬಂದವರಿಗೆಲ್ಲ ಸಮಾಧಾನ ಪಡಿಸಿ ಹೊಸ ಬಟ್ಟೆ, ಹೂವಿನ ಹಾರ, ಹೊಸ ಮಡಿಕೆ ಎಲ್ಲಾ ರೆಡಿಮಾಡಿಕೊಂಡ್ತೀವಿ. ಎಲ್ಲಾರು ಸೇರಿದ ಕೂಡ್ಲೆ. ಚಟ್ಟವನ್ನು ಕಟ್ತೀವಿ, ಚಟ್ಟಕಟ್ಟಿ, ಮನೆಯ ಮುಂದುಗಡೆ ಹೊಸ ಮಡಿಕೆ ತಂದು ಒಂದು ಪಾವು ಅಕ್ಕಿ ಹಾಕಿ ಅನ್ನ ಮಾಡ್ತಾರೆ. ಅಷ್ಟೊತ್ತಿಗಾಗ್ಲೆ ಎಲ್ಲಿ ಹೂಳ್‌ಬೇಕೋ ಆ ಜಾಗದಲ್ಲಿ ಮಣೇಗಾರರು ಹೋಗಿ ಕುಣಿ ತಗೆದಿರ್ತಾರೆ. ಹೊಸ ಬಟ್ಟೆಯನ್ನು ಹಾಕಿ ಚಟ್ಟವನ್ನು ಬದ್ರವಾಗಿ ಕಟ್ಟಿ ಅದರ ಮೇಲೆ ಹೆಣ ಮಲಗಸ್ತೀವಿ. ಹೂವಿನ ಹಾರಹಾಕಿ ಬಾಯಿಯಲ್ಲಿ ರೊಕ್ಕ ಇಟ್ಟು ಪೂಜೆ ಮಾಡಿ. ಹೊತ್ಕೊಂಡು ಹೋಗ್ತೀವಿ. ಕೆಲವ್ರು ಹೆಣದ ಹಿಂದೆ ಮಂಡಕ್ಕಿ, ನವಣೆ, ಎಲೆ, ಚೆಲ್ಲಿ ಕೊಂಡು ಹೋಗ್ತಾರೆ. ಶವದ ಮುಂದೆ ಮಗ ಇಲ್ಲಂದ್ರೆ ಮೊಮ್ಮಗ ಅನ್ನದ ಮಡಿಕೆಯನ್ನು ತಗಂಡು ಮುಂದೆ ಹೋಗ್ತಾರೆ. ಅರ್ದದಾರಿಗೆ ಹೋದ್ ಕೂಡ್ಲೆ ಅಲ್ಲೊಂದು ತಂಗಡೆಗಿಡ ಇಲ್ಲಂದ್ರೆ ಹಸಿರು ಗಿಡದ ಹತ್ತಿರ ಹೆಣ ಇಳಿಸಿದ ಕೂಡ್ಲೆ ಕೂಳು, ನೀರು ಹೊತ್ತ ಹಿರಿಯ ಮಗ ಅಥವಾ ಮೊಮ್ಮಗ ಮಡಿಕೆ ಅಥವಾ ಗಡಿಗೆಯನ್ನು ಹೊತ್ಕೊಂಡು ಮೂರು ಸುತ್ತು ತಿರುಗ್ತಾನೆ. ತದ ನಂತರ ಅದೇ ಗಿಡದ ಬುಡದಲ್ಲಿ ಕೂಳು, ನೀರಿನ ಮಡಿಕೆ ಇಡುತ್ತಾರೆ. ಒಂದು ಮಡಿಕೆಯಲ್ಲಿ ಹಾಲನ್ನು ಹೊತ್ಕೊಂಡು ತಿರುಗ್ತಾರೆ. ಹೀಗೆ ತಿರುಗಬೇಕಾದ್ರೆ ಹಿಂದೆ ಒಬ್ರು ಕೊಡ್ಲಿ, ಗಡಿಗೆ ಅಥವಾ ಮಡಿಕೆಯನ್ನು ಒಡಿತಾರೆ. ನಂತರ ಅವನು ಹಿಂದ್ಲು ಮುಖಾಮಾಡಿ ಅದನ್ನು ಬಿಡ್ತಾನೆ. ಅದು ಪೂರ್ತಿ ಹೊಡಿದ್ರೆ ಅವ್ರು ಆಯುಷ್ಯ ಅಷ್ಟಕ್ಕೆ ಇತ್ತು ಅಂತ ತಿಳಿತಾರೆ. ಒಡಿಯಲಿಲ್ಲಂದ್ರೆ ಇನ್ನು ಆಯಷ್ಯ ಇತ್ತು ಅಂತ ತಿಳಿತಾರೆ. ಆ ವ್ಯಕ್ತಿಯನ್ನು ಕರ್ಕೊಂಡು ಒಬ್ರು ಮನೆಗೆ ಬರ್ತಾರೆ. ಹೆಂಡತಿ ಏನಾದ್ರು ಇದ್ರೆ ಅಲ್ಲೇ ಅವಳ ಬಳೆ, ತಾಳಿ, ಕರಿಮಣಿಯನ್ನು ತೆಗೆದು ಗಿಡಕ್ಕೆ ಹಾಕಿ ಎಲ್ಲಾರು ಎಡಗೈಯಿಂದ ಒಂದೊಂದು ಕಲ್ಲು ಹಾಕಿ ಹೆಣ ಹೊತ್ಕೊಂಡು ಹೋಗ್ತಾರೆ ಇದನ್ನು ಗುಡ್ಡೆ ಎಂದು ಕರೆಯುತ್ತಾರೆ. ಗುಡ್ಡೆಯಾಕೆ ಅಕ್ತಾರೆಂದರೆ ಮುಂದಿನ ತಲೆಮಾರಿನವರು ಹಿರಿಯರ ಆರಾಧನೆ ಮಾಡಿಕೊಂಡು ಹೋಗ್ಲಿ ಅಂತ ನೆನಪಿಗೋಸ್ಕರ ಗುಡ್ಡೆ ಹಾಕ್ತಾರೆ.

ನಂತರ ಶವವನ್ನು ಹೊತ್ಕೊಂಡು ಹೋಗ್ತೀವಿ ಅಲ್ಲಿ ಕುಣಿಯತ್ರ ಇಟ್ಟು ಕುಣಿಯನ್ನು ಆಳವಾಗಿ ತೆಗೆದು ಮುಗಿಸಿದನಂತರ ಎಲ್ಲಾರು ಇನ್ನೊಂದು ಸಲ ಮುಖವನ್ನು ನೋಡುತ್ತಾರೆ. ಅದು ಕೊನೆಯ ಸಲ ನೋಡುವುದು. ನೋಡಿದ ನಂತರ ಕುಣಿಯಲ್ಲಿ ಶವವನ್ನು ಇಟ್ಟು ಎಲ್ಲಾರು ಒಂದೊಂದು ಹಿಡಿ ಮಣ್ಣ ಹಾಕ್ತಾರೆ. ಆ ಮೇಲೆ ಚೆಲಿಕೆಯಿಂದ ಮಣ್ಣು ಹಾಕಿ ಮುಚ್ತಾರೆ. ಮುಚ್ಚಿದ ನಂತರ ಆ ಮಣ್ಣಿನ ಮೇಲೆ ಕಲ್ಲು, ಕಲ್ಲಿನ ಸುತ್ತ ಒಂದಿಷ್ಟು ಮುಳ್ಳು ಬೇಲಿ ಹಾಕಿ ಬರ್ತಾರೆ. (ಬೇಡರು ಮೂಲತಃ ಅರಣ್ಯ ಜೀವಿಗಳಾಗಿದ್ದರಿಂದ ನರಿನಾಯಿಗಳು ವಾಸನೆ ಹಿಡಿದು ಬಂದು ಸಮಾಧಿಯನ್ನು ಕೆರೆದು ಹೂಳಿದ್ದ ದೇಹವನ್ನು ತಿಂದುಹಾಕಬಾರದೆಂದು ಬಲವಾಗಿ ಕಲ್ಲು ಮುಳ್ಳು ಹಾಕುವುದನ್ನು ರೂಢಿಸಿಕೊಂಡಿರಬೇಕು.) ಆ ಮೇಲೆ ಪಕ್ಕದಲ್ಲಿ ಎಲ್ಲಾದ್ರು ಕೆರೆ ಅಥವಾ ಬಾವಿ ಇದ್ರೆ ಅದರಲ್ಲೇ ಎಲ್ಲಾರು ಸ್ನಾನಮಾಡಿಕೊಂಡು ನೇರವಾಗಿ ದೇವಸ್ಥಾನಕ್ಕೆ ಹೊಗ್ತಾರೆ. ದೇವಸ್ಥಾನದಲ್ಲಿ ಭಟ್ಟು ಭಂಡಾರವನ್ನು ಹಚ್ಕೊಂಡು ಸತ್ತಿರುವವರ ಮನೆಹತ್ತಿರ ಎರಡು ನಿಮಿಷ ಎಲ್ಲಾರು ಕುಂತ್ಕೊಂಡು, ನಂತರ ಅವರವರ ಮನೆಗೆ ಹೋಗ್ತಾರೆ. ಮೂರು ದಿನಗಳ ನಂತರ ಮೂರು ದಿನದ ಕಾರ್ಯಮಾಡ್ತೀವಿ. ಅಂದು ಹಿರಿಯ ಮಗ ಇಲ್ಲಂದ್ರೆ ಮೊಮ್ಮಗ (ತಲುಗೊರುವ ಪಡಿಸ್ನಾರು) ಒಂದು ಮಡಿಕೆ, ಒಂದು ಪಾವು ಅಕ್ಕಿಯನ್ನು ತಗಂಡೋಗಿ ಸಮಾದಿ ಹತ್ತಿರ ಅನ್ನವನ್ನು ಮಾಡ್ತಾನೆ. ಮಾಡಿದ ಅನ್ನವನ್ನು ಮೂರು ಎಲೆಗೆ ಹಾಕಿ ಪ್ರದಕ್ಷಣೆ ಹಾಕ್ತಾನೆ. ಅಲ್ಲೇ ಒಂದು ಮೂಲೆಯಲ್ಲೇ ಕೂಡ್ತಾನೆ. ಕಾಗೆ ಬಂದು ಅನ್ನ ತಿನ್ನುವವರಿಗೆ ಇದ್ದು ನಂತರ ಮನೆಗೆ ಬರ್ತಾನೆ. ಕಾಗೆ ತಿನ್‌ಲಿಲ್ಲಂದ್ರೆ ಸತ್ತವರಿಗೆ ಸ್ವರ್ಗಸಿಗ್ಲಿಲ್ಲಂತ ನಂಬಿಕೆ. ನಂತರ ಐದು ಇಲ್ಲಂದ್ರೆ ೯ದಿವಸದಲ್ಲಿ ಸಿಹಿ ಅಡಿಗೆ ಮಾಡ್ತಾರೆ. ಅದು ಸಣ್ಣ ಕಾರ್ಯ. ನಂತರ ೧೬ ದಿನದಲ್ಲಿ ಇಲ್ಲಂದ್ರೆ ಒಂದು ತಿಂಗಳು ತುಬ್ಬಿದಂಗೆ ದೊಡ್ಡ ದಿವಸ ಅಂತ ಮಾಡ್ತಾರೆ. ಈ ದಿವಸಕ್ಕೆ ಬ್ಯಾಟಿ ಕೊಯ್‌ತೀವಿ. ಸತ್ತಿರುವವರು ಮನೆಯಲ್ಲಿ ಯಾವ ಸ್ಥಳದಲ್ಲಿ ಸತ್ತಿರ್‌ತಾರೋ ಅಲ್ಲೇ ಬೇಟೆ ಕೊಯ್‌ತೀವಿ. ಈ ಕಾರ್ಯಕ್ಕೆ ನಮ್ ದೇವರಿಗೆ ಸೇರಿದವ್ರು ಯಾರಾದ್ರು ಒಬ್ರೂ ಬರ್ತಾರೆ. ಈ ಕಾರ್ಯಕ್ಕೆ ಅವ್ರು ಕಡ್ಡಾಯವಾಗಿ ಬರ್ಲೇಬೇಕು. (ಉದಾಹರಣೆಗೆ ದೇವರಗೊಡ್ಡಾರು ಕಾರ್ಯಕ್ಕೆ ಮಾನುಗ್ನಾರು ಅಂತ ಬರ್ತಾರೆ. ಬಂದು ಎಲ್ಲಾ ಕಾರ್ಯ ಅವರೇ ಮಾಡಬೇಕು. ಮತ್ತೇ ಗೂನಾರು ಅಂತ ಬೆಡಗು ಇದೆ. ಅವ್ರು ಕಾರ್ಯಕ್ಕೆ ಮಾನುಗ್ನಾರು ಬರ್ತಾರೆ, ಹಿಂಗೆ ಆಯಾ ಬೆಡಗಿಗೆ ಸಂಬಂಧ ಪಟ್ಟಂಗೆ ಬರ್ತಾರೆ.) ಈ ಕಾರ್ಯಕ್ಕೆ ಊರಿನ ಎಲ್ಲಾರು ಬಂದು ಈ ಕಾರ್ಯಕ್ರಮ ಮಾಡಿ ಊಟಗೀಟ ಮಾಡಬಹುದು. ಕೆಲವರ ಕಾರ್ಯಕ್ರಮಕ್ಕೆ ಕೇವಲ ಅವರ ಸಂಬಂದಿಕ್ರು ಮಾತ್ರ ಬರಬೇಕು. ಬೇರೆಯಾರು ಬರಂಗಿಲ್ಲ. ಹಿಂಗೆ ದೊಡ್ಡದಿವಸ ಮಾಂಸದ ಊಟದಿಂದ ಮುಕ್ತಾಯವಾಗುತ್ತದೆ. ಮರುದಿನ ಆ ಮನೆಗೆ ಯಾರಾದ್ರು ಬಂದು ಹೋಗ್‌ಬಹುದು. ಎಲ್ಲಾ ಸುಣ್ಣಗಿಣ್ಣ ಬಳಿದು ಪಾಪ ಕರ್ಮಗಳನ್ನೆಲ್ಲಾ ಕಳೆದಿರ್ತೀವಿ ಹಿಂಗೈತಿ ನೋಡ್ರಿ ನಮ್ ಕಾರ್ಯಗಳು."

ದೇವರ ಹಟ್ಟಿಯ ಗೊಡ್ಲು ಕಿಲಾರಿ ಹೇಳುವ ಶವಸಂಸ್ಕಾರದ ವಿವರವೂ ಒಂದು ಬುಡಕಟ್ಟಿಗೆ ವಿಶಿಷ್ಟವಾದ ಆಚರಣೆಯಾಗಿ ಉಳಿದಿಲ್ಲ. ಇಲ್ಲಿಯೂ ಗ್ರಾಮೀಣ ಭಾಗದ ಜೀವನ ವಿಧಾನದ

ಪ್ರಭಾವವಿರುವುದನ್ನು ಕಾಣಬಹುದು. ಬೇಡರಿಗೆ ಪೂರ್ವಜನ್ಮದ ಕಲ್ಪನೆ ಇದ್ದಂತಿಲ್ಲ. ಕಾರಣ ಪುನರ್ಜನ್ಮಕ್ಕೆ ಸಂಬಂಧಿಸಿದ ವಿವರಗಳಿಲ್ಲದಿರುವುದನ್ನು ಇಲ್ಲಿ ಕಾಣಬಹುದು. ಬಹುಪಾಲು ಕೆಳಸಮುದಾಯಗಳು ಅನುಸರಿಸುವ ಶವಸಂಸ್ಕಾರದ ವಿಧಿಗಳನ್ನೇ ಬೇಡರು ಆಚರಿಸುತ್ತಿದ್ದಾರೆ. ಇಲ್ಲಿ ಕಾಡು ಜೀವನದ ಮೂಲನಿವಾಸಿತನದ ಆಚರಣೆಗಳು ಹೆಚ್ಚಾಗಿ ಕಂಡು ಬರುತ್ತವೆ.

೫.೭.ಮ್ಯಾಸಬೇಡ ಕೆಲವು ನಂಬಿಕೆಗಳು

ಪ್ರಪಂಚದ ಇಂದಿನ ವೈದ್ಯ ಪದ್ಧತಿಗೆ ತಾಯಿ ಬೇರಾದುದು ಜನಪದ ವೈದ್ಯ. ಈ ಜನಪದ ವೈದ್ಯವೂ ಆಯಾ ಪರಿಸರ, ಗುಂಪು ಬುಡಕಟ್ಟು, ಸಮುದಾಯಗಳಲ್ಲಿ ಭಿನ್ನ ಭಿನ್ನವಾದ ರೀತಿಯಲ್ಲಿಯೇ ಬಳಕೆಗೊಳ್ಳುತ್ತವೆ. ಈ ಎಲ್ಲಾ ಸಮುದಾಯಗಳ ಗುಂಪುಗಳ ವೈದ್ಯ ಪದ್ಧತಿಯ ಮೂಲ ಉದ್ದೇಶ ಮಾತ್ರ ಅದರೊಳಗಿನ ರೋಗ ರುಜಿನಗಳನ್ನು ಹೊಡೆದೋಡಿಸುವುದಾಗಿದೆ. ಜನಪದ ವೈದ್ಯದಲ್ಲಿ ಮೂರು ಗುಂಪುಗಳಲ್ಲಿ ಸ್ಥೂಲವಾಗಿ ಗುರುತಿಸಬಹುದು. ಸಸ್ಯ ಜನಪದ ವೈದ್ಯ, ಖನಿಜ ಜನಪದ ವೈದ್ಯ, ಮತ್ತು ಮಂತ್ರಗಾರಿಕೆ, ಜನಪದ ವೈದ್ಯಲ್ಲಿ ಮನುಷ್ಯ ಮತ್ತು ಪ್ರಾಣಿ ಜನಪದ ವೈದ್ಯರೆಂದೂ ವಿಂಗಡಿಸಬಹುದು.[೨] ಪ್ರಸ್ತುತ ಇಲ್ಲಿ ಮ್ಯಾಸಬೇಡರ ವೈದ್ಯ ಪದ್ಧತಿ ಕುರಿತು ಗಮನಹರಿಸುವ ಒಂದು ಪ್ರಯತ್ನವನ್ನು ಮಾಡಲಾಗಿದೆ. ಮ್ಯಾಸಬೇಡರು ತಮಗೆ ಒದಗುವ ರೋಗ ರುಜಿನಗಳಿಂದ ಪಾರಾಗಲು ತಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ದೊರೆಯುವ ಕೆಲವು ಸಸ್ಯಗಳನ್ನು, ಲೋಹಗಳನ್ನು ಹಾಗೆಯೇ ಭಸ್ಮಗಳನ್ನು, ಉಪಯೋಗಿಸುವುದನ್ನು ನೋಡಬಹುದಾಗಿದೆ. ಇವುಗಳ ಹೊರತಾಗಿಯೇ ಮಂತ್ರ ಶಕ್ತಿಯಿಂದ ರೋಗಗಳನ್ನು ನಿಯಂತ್ರಿಸುವ ಪರಿಪಾಠ ಇತರೆ ಸಮುದಾಯಗಳಲ್ಲಿರುವಂತೆಯೇ ಇವರಲ್ಲಿಯೂ ಕಂಡು ಬರುತ್ತದೆ. ಮಾಟಮಂತ್ರ, ರೋಗ ತರುವ ಯಾವುದೇ ವಸ್ತುವಿನ ಪ್ರವೇಶ ದುಷ್ಟ ಅತಿಮಾನುಷ ಶಕ್ತಿಯ ಪ್ರವೇಶ ದೇಹದಿಂದ ಆತ್ಮ ಬೇರೆಯಾಗುವುದು. ಹೀಗೆ ಹತ್ತು ಹಲವು ಸಮಸ್ಯೆಗಳು ಮಾನವನನ್ನು ಶಕ್ತಿ ಕುಂದಿಸುವ ಬದಲು ಹೆಚ್ಚು ಹೆಚ್ಚು ನಿಗೂಢತೆಯತ್ತ ಎಳೆಯುತ್ತಾ, ಅದನ್ನು ಹುಡುಕುವ ಹೊಸ ತಂತ್ರಗಳನ್ನು ರೂಪಿಸಿಕೊಳ್ಳುವಂತೆ ಪ್ರೇರೆಪಿಸಿರಬೇಕು. ಇದಕ್ಕೆ ಮ್ಯಾಸಬೇಡರು ಕೂಡ ಹೊರತಾಗಿಲ್ಲ. ಮ್ಯಾಸಬೇಡರ ಹಿರಿಯ ವೈದ್ಯ ತಿಮ್ಮಪ್ಪ ವಕ್ತ ತಿಳಿಸಿದಂತೆ ಈ ಪ್ರಪಂಚ ಎನ್ನುವುದು ವಿಶ್ವ ಕರ್ಮ ಸೃಷ್ಟಿ. ಇಲ್ಲಿ ಹುಟ್ಟಿದ ಪ್ರತಿ ಪ್ರಾಣಿಗೂ ನೋವು, ರೋಗಗಳು ತರುವ ಶಕ್ತಿಯನ್ನು ಶಿವನು ಕೊಟ್ಟಂತೆ, ಅದಕ್ಕೆ ಪರಿಹಾರವಾಗಿಯೂ ಹತ್ತು ಹಲವು ಸಸ್ಯಗಳನ್ನು ಪ್ರಪಂಚದ ಮೇಲೆ ಶಿವನೇ ಹುಟ್ಟು ಹಾಕಿದ್ದಾನೆ. ತಮಗೆ ಬಂದ ರೋಗ ಯಾವುದು? ಆ ರೋಗಕ್ಕೆ ಯಾವ ಸಸ್ಯ ಔಷಧಿ ಮಾಡಲು ತಕ್ಕದ್ದು ಎಂದು ಗುರುತಿಸುವುದಷ್ಟೇ, ಮನುಷ್ಯನ ಕೆಲಸ. ಮನುಸ್ಯನು ಎಲ್ಲಿಯವರೆಗೆ ಪರಿಶುದ್ಧನು, ಆತ್ಮಶುದ್ಧಿ ಯುಳ್ಳವ ನಾಗಿರುತ್ತಾನೋ, ಅಲ್ಲಿಯವರೆಗೂ ಆ ಸಸ್ಯಗಳು ಗುಣಧರ್ಮಗಳನ್ನು ತಿಳಿದುಕೊಳ್ಳುವ ಶಕ್ತಿಯನ್ನು ಗಳಿಸಿಕೊಂಡಿರುತ್ತಾನೆ. ಪ್ರಾಮಾಣಿಕತೆಗೆ ಅವನು ಎಂದು ಭಿನ್ನವಾಗಿ

ನೆಡೆದುಕೊಳ್ಳುತ್ತಾನೋ, ಅಂದಿಗೆ ಅವನ ಔಷಧಿಗೆ ಗುಣಪಡಿಸುವ ಶಕ್ತಿಯು ನಾಶಗೊಳ್ಳುತ್ತದೆ. ಹಣ, ಅಂತಸ್ತು, ಇವು ಯಾವುಗಳನ್ನು ತನ್ನ ಒಡ್ಡಿಕೊಳ್ಳದೆ ಇರುವಂತವನಿಗೆ ಮಾತ್ರ ಔಷಧಿಕೊಡುವ, ಗುಣಪಡಿಸುವ ಸಾಮರ್ಥ್ಯ ಇರುತ್ತದೆ.(ಆರ್.ಬಿ.ಕುಮಾರ್, ಪು-೫೫, ೨೦೦೪)

ಸಣ್ಣಪುಟ್ಟ ರೋಗಗಳಿಗೆ ಔಷಧಿ ಮಾಡುವ ಸಾಮಾನ್ಯವಾದ ಗಿಡ ಸಸ್ಯಗಳ ಪರಿಚಯ ಸಹಜವಾಗಿ ಎಲ್ಲಾ ಮ್ಯಾಸಬೇಡರರಿಗೂ ತಿಳಿದಿರುತ್ತದೆ. ಆದರೆ ಒಂದೇ ರೋಗಕ್ಕೆ ಒಬ್ಬ ಮ್ಯಾಸಬೇಡರು ಒಂದು ಸಸ್ಯದಲ್ಲಿ ಔಷಧಿ ಮಾಡಿಕೊಟ್ಟರೆ ಇನ್ನೊಬ್ಬ ಬೇಡನು ಅದೇ ರೋಗಕ್ಕೆ ಬೇರೆಯದೆ ಇನ್ನೊಂದು ಸಸ್ಯದ ಔಷಧಿಯನ್ನು ಮಾಡಿಕೊಡಬಹುದು. ದುಷ್ಟಶಕ್ತಿಗಳಿಂದುಟಾಗುವ ರೋಗಗಳಿಗೆ ವೈದ್ಯಮಾಡುವ ಕಾರ್ಯ ಕೆಲವೇ ಕೆಲವು ಹಿರಿಯರಿಂದ ಬಳುವಳಿಯಾಗಿರುತ್ತದೆ. ಇವರನ್ನು ಮಾಂತ್ರಿಕ ವೈದ್ಯರೆಂದೂ ಬೇಕಾದರೆ ಕರೆಯಬಹುದು. ಮ್ಯಾಸಬೇಡರ ಸಮುದಾಯದಲ್ಲಿ ಇವರಿಗೆ ಒಂದು ವಿಶಿಷ್ಟ ಸ್ಥಾನವೇ ಇರುತ್ತದೆ. ಇವರು ಪುರುಷ ಇಲ್ಲವೇ ಮಹಿಳೆಯರಾಗಿರಬಹುದು. ಸಾಮಾನ್ಯವಾಗಿ ಇಂತಹ ಮಾಂತ್ರಿಕ ಶಕ್ತಿಯ ವೈದ್ಯರು ಮಧ್ಯಮ ವಯಸ್ಸಿಗೆ ಮೀರಿದವರಾಗಿರುತ್ತಾರೆ.

ಈ ಸಮುದಾಯದಲ್ಲಿ ವೈದ್ಯಕೀಯ ಪದ್ಧತಿ ಸಾಮಾನ್ಯವಾಗಿ ತಮ್ಮ ಹಿರಿಯರಿಂದ ಬಳುವಳಿಯಾಗಿರುತ್ತದೆ. ತಮ್ಮೊಳಗಿನ ಗುಟ್ಟನ್ನು ಪರರಿಗೆ ಕೊಡದ ಇವರು ತಮ್ಮ ವಂಶದ ಒಬ್ಬ ವ್ಯಕ್ತಿಗೆ ಮಾತ್ರ ತಮ್ಮ ಕೊನೆ ಕಾಲದಲ್ಲಿ ವೈದ್ಯದ ಗುಟ್ಟುಗಳನ್ನು ತಿಳಿಸಿ ಹೇಳುತ್ತಾರೆ. ಆಕಸ್ಮತ್ತಾಗಿ ವೈದ್ಯದ ಗುಟ್ಟುಗಳನ್ನು ತಿಳಿಸಿದ ಹಿರಿಯರು ಜೀವಂತವಾಗಿದ್ದ ಪಕ್ಷದಲ್ಲಿ ಗುಟ್ಟುಗಳನ್ನು ಪಡೆದಾತ ವೈದ್ಯ ಪ್ರಯೋಗಗಳನ್ನು ಮಾಡುವುದಿಲ್ಲ. ತನ್ನ ಬಳಿಗೆ ಔಷಧೋಪಚಾರಕ್ಕಾಗಿ ಬಂದ ವ್ಯಕ್ತಿಯನ್ನು ತನ್ನ ಹಿರಿಯ ವೈದ್ಯನಲ್ಲಿಗೆ ಕರೆದುಕೊಂಡು ಹೋಗುತ್ತಾನೆ.

ಕೆಲವು ರೋಗಗಳಿಗೆ ಔಷಧಿಯನ್ನು ಹೇಗೆ ಹಚ್ಚಬೇಕು ಮತ್ತು ಯಾವ್ಯಾವ ಗಿಡದ ಅಥವಾ ಸಸ್ಯಗಳನ್ನು ಉಪಯೋಗಿಸಬೇಕು ಎಂಬುದನ್ನು ಮ್ಯಾಸಬೇಡರ ಜನಪದ ವೈದ್ಯ ಪದ್ಧತಿಯ ಕುರಿತು, ದೇವರಹಟ್ಟಿ ಕೆಂಗಬೋರಯ್ಯ ಮತ್ತು ಕಂಪಳದೇವರಹಟ್ಟಿಯ ಮುದಿಯಪ್ಪ ಕೊಡುವ ವಿವರ ಹೀಗಿದೆ:

೧. ಮಕ್ಕಳಿಗೆ ಜ್ವರ ಬಂದ್ರೆ ಏನು ಮಾಡಬೇಕು ಅಂದ್ರೆ ಒಣ ಮೆಣಸಿನಕಾಯಿ ಪರಿಕೆಯ ಕಡ್ಡಿ ಮತ್ತು ಉಪ್ಪು ತಗಂಡು, ಈ ಮೂರನ್ನು ಕೈಯಲ್ಲಿ ಹಿಡ್‌ಕೊಂಡು ಮೇಲಿನಿಂದ ಕೆಳಕ್ಕೆ ನಿವಾಳಿಸಬೇಕು. ಆ ಮೇಲೆ ಬೆಂಕಿಯಲ್ಲಿ ಹಾಕಿ ಸುಡಬೇಕು ಅದು ಗಾಟಾದರೆ, ಚಟಪಟ ಅಂದ್ರೆ ಮೇಲಾಗ್ತದೆ ದೃಷ್ಟಿ ಕಡಿಮೆಯಾಗಿದೆ ಎಂದು ತಿಳಿಯಬೇಕು. ಇದು ಪೂರ್ವಿಕರಿಂದ ಹಾಗೆ ಬೆಳಕೊಂಡು ಬಂದಿದೆ. ಇದು ಒಂದು ಪ್ರಕಾರ. ಇನ್ನು ಎರಡನೆಯದು ಜ್ವರ ಬಂದ್ರೆ ಮಕ್ಳು ಜಾಸ್ತಿ ಹಟಮಾಡ್ತಾರೆ ಆಗ ಬೇವಿನಕಡ್ಡಿ ಇಲ್ಲಂದ್ರೆ ಸೂಜಿ, ಅದು ಸಿಗ್ಲಿಲ್ಲಂದ್ರೆ ಬಳೆಯನ್ನು ತಗಂಡು ಕಾಶಿ ಸುಡಬೇಕು ಆಗ ಜ್ವರ ತಕ್ಷಣ ಕಡಿಮೆಯಾಗ್ತದೆ

೨. ಉಳುಕದ್ದಿಯಾದ್ರೆ. ಅದನ್ನು ಹುಳತಿನ್‌ತಿರುತ್ತದೆ ಆಗ ತಿಂಡಿ ಆಗ್ತದೆ. ಆಗ ಏನು ಮಾಡ್ಬೇತಂಗಡೆ ಗಿಡದ ಬೇರೆ ನೆಲ್‌ತಂಗಡ ಬೇರೆ ಅಂತಿವಿ. ಜೊತೆಗೆ ಮೇಕೆ ಹಾಕಿರುವ ಗೊಬ್ಬರ ತೆಲುಗಿನಲ್ಲಿ (ಪಿಚ್ಚಿಗೆ) ಅಂತಾರೆ. ಒಣಗಿರುವುದನ್ನು ತಗಂಡು ಚೆನ್ನಾಗಿ ಜಜ್‌ಬೇಕು ಹಿಂಗೆ ಎಂಟುದಿನ ಉಜ್ಜಿದ್ರೆ ಅದು ಪೂರ್ತಿ ಕಡಿಮೆ ಯಾಗ್ತದೆ.

೩. ಕಾಮಾಲೆ ರೋಗ ಬಂದ್ರೆ ಹೊನ್ನೆಂಬರೆ ಗಿಡವನ್ನು ತಂದು ಜೊತೆಗೆ ಒಂಟಿ ಬೆಳ್ಳುಳ್ಳಿ ಹಾಕಿ ಚೆನ್ನಾಗಿ ಕುಟ್ಟಿ ಬೆಳ್ಗಿಗ್ಗೆ ನೀರು ಮುಟ್ಟದಾಗೆ ಆಕಳ ಹಾಲಿನಲ್ಲಿ ಹಾಳ್ಹೊಟ್ಟೆಗೆ ಕುಡಿದ್ರೆ ಎಂತ ಕಾಮಾಲೆ ಬಂದ್ರು ಕೂಡ ಅದು ಸಂಪೂರ್ಣ ಕಡಿಮೆಯಾಗ್ತದೆ. ಇನ್ನೊಂದು ಪ್ರಕಾರ ಹೊನ್ನಂಬರೆ ಗಿಡವನ್ನು ಕಿತ್ತಿ ತಿರುವಿಹಾಕಿ ಬಂದ್ರೆ ಆ ಗಿಡ ಒಣಗಿದಾಗ ಇಲ್ಲಿ ಕಾಮಾಲೆ ಕಡಿಮೆಯಾಗುತ್ತದೆ.

೪. ಅದೇ ರೀತಿ ಮೂಲ ವ್ಯಾಧಿ ಬಂದ್ರೆ ನೆಲ ನೆಲ್ಲಿ ಗಿಡವನ್ನು ಕಿತ್ತಿ ರೋಗಿ ನಿವಾರಣೆಯಾಗ್ಲಿ ಅಂದು, ಆ ಗಿಡಕ್ಕೆ ತಿರುವಿ ಹಾಕಿ ಹಿಂತಿರುಗಿ ನೋಡದೆ ಬರಬೇಕು, ಹಿಂಗೆ ಮಾಡಿದ್ರೆ ಮೂಲವ್ಯಾಧಿ ಕಡಿಮೆಯಾಗುತ್ತದೆ.

೫. ಬೇದಿಯಾದ್ರೆ ಮಾದಲು ಬೇರು ಇಲ್ಲಂದ್ರೆ ತಂಗಡೆ ಗಿಡದ ಹೂವನ್ನು ಜೇನು ತುಪ್ಪದಲ್ಲಿ ಕುಡಿಸಿದ್ರೆ ಬೇದಿ ಕಡಿಮೆಯಾಗುತ್ತದೆ. ವಾಂತಿಯಾದ್ರೆ ಮೊದಲು ಬೇರನ್ನು ಜೇನು ತುಪ್ಪದಲ್ಲಿ ಅರೆದು ಕುಡಿಸಿದ್ರೆ ವಾಂತಿ ಕಡಿಮೆಯಾಗುತ್ತದೆ. ಜೊತೆಗೆ ಈರುಳ್ಳಿ ನಿಂಬೆ ಹಣ್ಣು ಮೂಸಿ ನೋಡಿದ್ರೆ ವಾಂತಿ ಕಡಿಮೆಯಾಗುತ್ತದೆ.

ಯಾರಾದ್ರು ಹೊಟ್ಟೆಯೊಳಗೆ ಮದ್ದು ಮಾಡಿಸಿ ಹಾಕಿದ್ರೆ, ನುಗ್ಗೆ ಗಿಡದ ಸೊಪ್ಪನ್ನು ಬೇಳೆಯಲ್ಲಿ ಇಟ್ಟು ತಳಸಿಕೊಂಡು ಹಾಳು ಹೊಟ್ಟೆಗೆ ತಿಂದ್ರೆ ಅದು ಕಡಿಮಾಯಾಗುತ್ತದೆ. ಇನ್ನೊಂದು ರೀತಿ ಆಡು ಮುಟ್ಟದ ಬಳ್ಳಿಯಲ್ಲಿ ಅದರ ಎಲೆಯ ರಸವನ್ನು ಹಾಡಿನ ಹಾಲಿನೊಂದಿಗೆ ಸೇರಿಸಿ ಕುಡಿಸಿದ್ರೆ ಮದ್ದು ಹೊರಬರುತ್ತದೆ.

* ಹೆಣ್ಣು ಮಕ್ಕಳಿಗೆ ಬಿಳಿ ಸೆರಗು ಆದ್ರೆ ಅದಕ್ಕೆ ಉತ್ತರಾಣಿ ಬೇರನ್ನು ಬೆಣ್ಣೆಯಲ್ಲಿ ಬೆರಸಿ ತಿಂದ್ರೆ ಬಿಳಿ ಸೆರಗು ನಿವಾರಣೆಯಾಗುತ್ತದೆ.

೫.೮.೧. ಅತಿಮಾನುಷ ನಂಬಿಕೆಗಳು

ಮಾನವ ಬದುಕುತ್ತಿದ್ದ ಅನಿಶ್ಚಿತ ಪರಿಸರ ಆಗೋಚರವಾದ ಪ್ರಕೃತಿ ಶಕ್ತಿ ಮತ್ತು ಅತಿ ಮಾನುಷ ಶಕ್ತಿಗಳ ಪರಿಣಾಮ, ಪ್ರವಾಹ, ಬರಗಾಲ, ರೋಗ, ಸಾವು ಪ್ರಕೃತಿಯ ವಿದ್ಯಮಾನ, ಮಾನವನ ಅಸಹಾಯಕತೆ ಇಂಥಾ ಹತ್ತು ಹಲವು ಕಾರಣಗಳೇ ಅತಿಮಾನುಷ ನಂಬಿಕೆಗಳ ಉಗಮಕ್ಕೆ ಮೂಲ ಕಾರಣ. ಇವು ಹೆಚ್ಚಾಗಿ ಭಯ ಮತ್ತು ಮನಸ್ಸಿನ ಅಸ್ಥಿರ ಸ್ಥಿತಿಯಲ್ಲಿ ಹುಟ್ಟಿಕೊಂಡಂತವು, ಇಂಥ ನಂಬಿಕೆಗಳಿಂದ ತಾತ್ಕಾಲಿಕ ಶಾಂತಿ ಮನುಷ್ಯನಿಗೆ ಲಭಿಸುತ್ತಾ ಬಂದಿದ್ದರಿಂದಲೇ, ಇವು ಮನುಷ್ಯನನ್ನು ತಮ್ಮ ಪ್ರಭಾವಕ್ಕೆ ಸೆಳೆದವು. ಇದರಿಂದ ದೆವ್ವ, ಶಕ್ತಿ ದೈವ ಮುಂತಾಗಿ ಕಲ್ಪಿಸಿಕೊಂಡು ಅವುಗಳನ್ನು

ಆರಂಭಿಸತೊಡಗಿದ, ಇದರಿಂದ ಶಾಂತಿ ನೆಮ್ಮದಿಗಳನ್ನು ಗಳಿಸಿಕೊಂಡ ಮ್ಯಾಸಬೇಡರಲ್ಲೂ ಇಂಥ ನಂಬಿಕೆಗಳು ಕಂಡು ಬಂದಿದ್ದು ಸಾಕಷ್ಟು ಪ್ರಭಾವ ಬೀರಿವೆ. ಮತ್ತು ಬೀರುತ್ತಿವೆ. ಮ್ಯಾಸಬೇಡರಲ್ಲಿ ಹೆಚ್ಚಾಗಿ ಆಳುವಂಥವು ಅತಿಮಾನುಷ ನಂಬಿಕೆಗಳಿದ್ದು ಇಂದೂ ಅತಿಮಾನುಷವೆನಿಸುವ ಶಕ್ತಿಗಳ ಆರಾಧನೆ ಇವರಲ್ಲಿ ಸಾಕಷ್ಟಿದೆ ಎನ್ನಬಹುದು.

* ಮನೆಕಟ್ಟುವಾಗ ಯಾರೇ ಆಗಲಿ ದೇವರಿಗೆ ಹರಕೆ ಹೊರಬೇಕು, ಇಲ್ಲದಿದ್ದರೆ ಒಳ್ಳೆಯದಾಗುವುದಿಲ್ಲ ಎಂದು ನಂಬಿಕೆ.

ಇದು ಸಾಮಾನ್ಯವಾಗಿ ಎಲ್ಲರಲ್ಲೂ ಇರುವ ನಂಬಿಕೆ ಶಿಷ್ಟ ಸಂಪ್ರದಾಯದವರೂ ಸಹ ತಮ್ಮ ತಮ್ಮ ದೇವರುಗಳಿಗೆ ಪೂಜಿಸಿ ಮನೆಕಟ್ಟುತ್ತಾರೆ. ಇದರ ಹಿನ್ನೆಲೆಯಲ್ಲಿ ಮನೆಯ ಎಲ್ಲ ಕಾರ್ಯವೂ ಸಾರಾಗವಾಗಿ ನೆರವೇರಲಿ ಎಂಬ ಭಾವನೆ. ಆದೇ ರೀತಿ ಮ್ಯಾಸಬೇಡರಲ್ಲಿ ಕೂಡ ಅವರವರ ದೈವಕ್ಕೆ ಹರಕೆ ಹೊತ್ತು ಕಾರ್ಯ ಪ್ರರಂಭಿಸುತ್ತಾರೆ. ಮ್ಯಾಸಬೇಡರಲ್ಲಿ ಸಹ ದೇವರುಗಳಿಗೆ ಹರಕೆ ಹೊತ್ತು ಮನೆಯನ್ನು ಕಟ್ಟಿಸುತ್ತಾರೆ. ಮುಂದೆ ಯಾವುದೇ ರೀತಿಯ ತೊಂದರೆ ಯಾಗುವುದಿಲ್ಲ ಎಂಬ ನಂಬಿಕೆ. ಈ ರೀತಿ ಹರಕೆ ಹೊರದವರಿಗೆ ಮನೆಕಟ್ಟುವಲ್ಲಿ ಆಗಿರಬಹುದಾದ ಕಹಿ ಅನುಭವಗಳ ಹಿನ್ನೆಲೆಯಲ್ಲೂ ಈ ರೀತಿ ನಂಬಿಕೆ ಮೂಡಿರುತ್ತದೆ.

* ಮಾರೆಮ್ಮನಿಗೆ ಪ್ರತಿ ವರ್ಷ ಪ್ರತಿ ಮನೆಮನೆಯವರು ಸೇರಿ ಕಡ್ಡಾಯವಾಗಿ ಬಲಿಯನ್ನು ಕೊಡಲೇ ಬೇಕು. ಒಂದು ಪಕ್ಷ ಕೊಡದಿದ್ದರೆ ಒಳ್ಳೆಯದಾಗುವುದಿಲ್ಲ.

ಮ್ಯಾಸಬೇಡರಲ್ಲಿ ಮನೆದೇವತೆ ಪ್ರತಿಯೊಂದು ಊರಲ್ಲಿ ಗ್ರಾಮದೇವತೆ ಆದಿದೇವತೆ ಎಂದು ಹೆಸರುಗಳಿಸಿರುವ ಈ ದೇವತೆಗೆ ಹರಕೆ ಅಥವ ಬಲಿಕೊಡದಿದ್ದರೆ, ಯಾವುದಾದರೂ ರೋಗಗಳು ಬರುತ್ತವೆ ಎಂಬ ಭಾವನೆ ಮ್ಯಾಸಬೇಡರಲ್ಲಿದೆ. ಉದಾಹರಣೆಗೆ ಕಾಲರ, ಪ್ಲೇಗ್, ಅಮ್ಮ, ದಡಾರ ಬರುತ್ತವೆ ಎಂಬ ಭಾವನೆಯಿದೆ.

ಈ ಹಿನ್ನೆಲೆಯಲ್ಲಿ ಪ್ರತಿಯೊಬ್ಬರು ಮನೆಗೊಂದು ಬಲಿಯನ್ನು ಕಡ್ಡಾಯವಾಗಿ ಕೊಡುತ್ತಾರೆ.

* ಸತ್ತವರ ಬಾಯಿಗೆ ನೀರು ಬಿಡದಿದ್ರೆ ಸ್ವರ್ಗಸಿಗುವುದಿಲ್ಲ, ಇಲ್ಲಂದ್ರೆ ಅವರು ದೆವ್ವಗಳಾಗುತ್ತಾರೆ ಎಂಬ ನಂಬಿಕೆಯೂ ಮ್ಯಾಸಬೇಡರಲ್ಲಿ ಕಂಡುಬರುತ್ತದೆ.

ಈ ಸಮುದಾಯದಲ್ಲಿ ಸತ್ತವರ ಬಗೆಗಿರುವ ಭಯವನ್ನು ಇದು ತಿಳಿಸುತ್ತದೆ. ಸತ್ತವನಿಗೆ ಸಾಯುವಾಗ ನೀರು ಬಿಡುತ್ತಾರೆ, ಮತ್ತು ಅವರ ಕಾರ್ಯಗಳನ್ನು ಯಾರು ತಿರಸ್ಕರಿಸದೆ, ಎಲ್ಲಾರು ಎಚ್ಚರಿಕೆಯಿಂದ ಮಾಡುತ್ತಾರೆ.

* ಹಾಗೆ ಬಾಣಂತಿಯರು, ಗರ್ಭಿಣಿಯಾದ ಹೆಂಗಸರನ್ನು ಸುಡದಿದ್ರೆ ಅವರು ದೆವ್ವಗಳಾಗಿರುತ್ತಾರೆ. ಎಂದು ನಂಬಿಕೆಯೂ ಮ್ಯಾಸಬೇಡರಲ್ಲಿ ಕಾಣಬಹುದಾಗಿದೆ.

ಈ ಸಮುದಾಯದಲ್ಲಿ ಬಾಣಂತಿಯರು ಮತ್ತು ಗರ್ಭಿಣಿಯರನ್ನು ಯಾಕೆ ಸುಡುತ್ತಾರೆಂದರೆ,

ಅವರಿಂದ ಕೆಲವು ರೋಗಾಣುಗಳು ಇನ್ನೊಬ್ಬರಿಗೆ ಹರಡಂತೆ ಮುನ್ನೆಚರಿಕೆಯ ಕ್ರಮ ಕೈಗೊಳ್ಳುತ್ತಾರೆ. ಯಾಕಂದ್ರೆ ಸುಟ್ಟರೆ ಆ ರೋಗಾಣುಗಳು ಸಹ ಸುಟ್ಟು ಹೋಗುತ್ತವೆ, ಎಂಬ ಗ್ರಹಿಕೆಯಾಗಿದೆ.

* ರಾತ್ರಿ ಹೊತ್ತು ಹುಣಸೆ ಮರ ಮತ್ತು ಆಲದ ಮರಕೆಳಗೆ ಮಲಗಬಾರದು, ಒಂದು ಪಕ್ಷ ಮಲಗಿದರೆ ಅಂತವರಿಗೆ ದೆವ್ವಗಳು ಹಿಡಿಯುತ್ತವೆ ಎಂಬ ನಂಬಿಕೆಯಿದೆ.

ಜನಪದರ ಕಲ್ಪನೆಯಲ್ಲಿ ಹುಣಸೆ ಮತ್ತು ಆಲದ ಮರಗಳಲ್ಲಿ ದೆವ್ವಗಳಿರುತ್ತವೆ, ಹಿಂದಿನ ಕಾಲದಲ್ಲಿ ದೇವರುಗಳು ಮೈಮೇಲೆ ಬಂದು. ಆ ದೆವ್ವಗಳನ್ನು ಹೋಡಿಸಿಕೊಂಡು ಹೋಗಿ ಅವುಗಳಿಗೆ ಆ ಮರದಲ್ಲಿ ಮಳೆಗಳನ್ನು ಒಡೆದು ಬಂದಿದ್ದಾರಂತೆ, ಅದಕ್ಕೆ ಈಗಲೂ ಯಾರು ಈ ಮರಗಳ ಕೆಳಗೆ ಮಲಗುವುದಿಲ್ಲವೆಂದು ಹೇಳುವ ವಾಡಿಕೆಯಿದೆ.

ಆದರೆ ವೈಜ್ಞಾನಿಕವಾಗಿ ರಾತ್ರಿಯ ಸಂದರ್ಭದಲ್ಲಿ ಮರಗಳು ಇಂಗಾಲ ಡೈಯಕ್ಸೈಡನ್ನು ಹೀರಿಕೊಂಡು ಶುದ್ಧಗಾಳಿಯನ್ನು ಹೊರಡಗೆ ಬಿಡುತ್ತವೆ. ಆ ಕಾರಣದಿಂದ ಹೀಗಿರಬಹುದು ಇದೇ ರೀತಿಯಾಗಿ ಇನ್ನು ಅನೇಕ ಅತಿಮಾನುಷ ನಂಬಿಕೆಗಳನ್ನು ನೊಡಬಹುದಾಗಿದೆ.

೫.೮.೨.ಮಾನುಷ ನಂಬಿಕೆಗಳು

ಮನುಷ್ಯ ತನ್ನ ಬದುಕನ್ನು ಸುಗಮಗೊಳಿಸಿಕೊಳ್ಳಲು ನಾನಾ ರೀತಿಯ ನಂಬಿಕೆಗಳನ್ನು ಇರಿಸಿಕೊಂಡೇ ಶಾಂತಿಯ ದಾರಿಯಲ್ಲಿ ನಡೆಯಲು ಪ್ರಯತ್ನಿಸುತ್ತಿದ್ದಾನೆ. ಮನಸ್ಸಿಗೆ ಸಿಗುವ ಸಾಂತಿಗೆ ಈ ನಂಬಿಕೆಗಳು ಮೂಲ ಕಾರಣ ಇಂಥ ನಂಬಿಕೆಗಳು ಮಾನವನನ್ನು ಕುರಿತಂತೆ ಮತ್ತು ಅವನು ಬಳಸುವ ಎಲ್ಲಾ ವಸ್ತುಗಳನ್ನು ಕುರಿತಂತೆ ವಿಸ್ತೃತವಾಗಿ ಹಬ್ಬಿದೆ. ಆದರೆ ಎಲ್ಲ ನಂಬಿಕೆಯೂ ಮಾನವನ ಬದುಕಿನ ಸುತ್ತ ರಕ್ಷಣೆ ಒದಗಿಸುವಂಥದೇ ಆಗಿದೆ. ಯಾವುದಾದರೊಂದು ನಂಬಿಕೆಯಿಂದ ತನ್ನ ಬದುಕಿಗೆ ತೊಂದರೆಯಾಗುತ್ತದೆಂದರೆ ಅದನ್ನು ಪರಿಹರಿಸಿಕೊಳ್ಳಲು ನೋಡುತ್ತಾನೆ. ಈ ನಂಬಿಕೆಗಳು ಹುಟ್ಟಿನಿಂದ ಸಾವಿನವರೆಗೆ ಜೀವನದಲ್ಲಿ ಬರುತ್ತವೆ. ಇವು ಉಡುಗೆ, ತೊಡುಗೆ, ಊಟ, ಕಾಲಸ, ಆಚರಣೆ, ಧರ್ಮ ಮುಂತಾಗಿ ಮಾನವ ಸಂಬಂಧಿಗಳಾದ ವಿಷಯಗಳಲ್ಲಿ ನಂಬಿಕೆ ಕುಡಿರುವದಿದೆ. ಈ ಎಲ್ಲ ನಂಬಿಕೆಗಳು ಮನಸ್ಸಿಗೆ ಶಾಂತಿಯನ್ನು ದೊರಕಿಸಿ ಕೊಡುವ ಕಾರ್ಯದಲ್ಲಿ ಪ್ರಮುಖವೆನಿಸುತ್ತವೆ.

ವೃತ್ತಿಯ ದೃಷ್ಟಿಯಿಂದ ಮ್ಯಾಸಬೇಡರಲ್ಲಿ ಕೆಲವು ನಂಬಿಕೆಗಳಿವೆ. ಉದಾ ಅಮವಾಸ್ಯೆ ದಿನ ಯಾವುದೇ ತರಹದ ಉಳುಮೆ ಮಾಡುವ ಮುಟ್ಟನ್ನು ಕಡಿಯಬಾರದು, ಕಡಿದರೂ ಅದು ಒಳ್ಳೆಯದಾಗುವುದಿಲ್ಲವೆಂಬ ನಂಬಿಕೆ. ಹಾಗೆಯೇ ಅಮವಾಸೆಯ ದಿನ ಮಕ್ಕಳು ಹುಟ್ಟಬಾರದು ಒಂದು ಪಕ್ಷ ಹುಟ್ಟಿದರೆ ಅಶುಭ ಎಂದು ಹೇಳುತ್ತಾರೆ.

೫.೮.೩.ಪ್ರಕೃತಿ ಬಗೆಗಿನ ನಂಬಿಕೆಗಳು

ಮ್ಯಾಸಬೇಡರು ತಾವು ವಾಸಿಸುವ ಪರಿಸರ, ಸಸ್ಯಗಳು, ವೃಕ್ಷಗಳು ಭೂಮಿ ನಕ್ಷತ್ರ, ಗೃಹ, ಸಮುದ್ರ, ಬೆಟ್ಟ ಗುಡ್ಡ ಮಳೆ ಮುಂತಾದವುಗಳ ಬಗ್ಗೆ ಸಾಕಷ್ಟು ನಂಬಿಕೆಗಳನ್ನು ಇಟ್ಟು ಕೊಂಡಿದ್ದಾರೆ.

ತಮ್ಮ ಸುತ್ತ ಮುತ್ತಲಿನ ಪರಿಸರದಲ್ಲಿರುವ ಕೆಲವು ವೃಕ್ಷ, ಸಸ್ಯಾದಿಗಳನ್ನು ಕುರಿತು ಧಾರ್ಮಿಕ, ಬೌದ್ಧಿಕ ನಂಬಿಕೆಗಳನ್ನು ಬೆಳೆಸಿಕೊಂಡಿದ್ದಾರೆ. ಪ್ರಕೃತಿ ಧರ್ಮದ ವಿಷಯದಲ್ಲಿ ಅವುಗಳ ವಿಕೋಪದ ಸಂದರ್ಭದಲ್ಲಿ ಪರಿಹಾರೋಪಾಯದ ನಂಬಿಕೆಗಳೂ ಕೆಲವಿವೆ. ಅಂಥವುನ್ನು ಮ್ಯಾಸಬೇಡರು ನಂಬಿರುವ ಅರ್ಥದಲ್ಲಿ ಕೆಲವು ನಂಬಿಕೆಗಳನ್ನು ವಿವರಿಸಲಾಗಿದೆ.

ಸಿಡಿಲು ಹೊಡೆದು ಯಾರಾದರು ಸತ್ತರೆ ಅಥವಾ ಅವರ ಯಾವುದಾದರು ಪ್ರಾಣಿಗಳು ಹೊಡೆದು ಸತ್ತರೆ ಅವನು ಪಾಪ ಮಾಡಿದ್ದಾನೆ. ಇಲ್ಲಂದ್ರೆ ಅವನ ಪಾಪವು ಆಪ್ರಾಣಿಗಳಿಗೆ ತಟ್ಟಿದೆ ಎಂದು ಭಾವಿಸುತ್ತಾರೆ. ಸಿಡಿಲು ಹೊಡೆಯುವುದು ಪ್ರಕೃತಿಯ ಧರ್ಮವಾದರೂ ಅದರ ಹೊಡೆತದಿಂದ ಮನುಷ್ಯ ಸಾಯುವುದು ದುರಂತ. ಆದರೆ ಮಾನವನ ಅಸಾಯಕತೆಯನ್ನು ವ್ಯಕ್ತಪಡಿಸುತ್ತಾರೆ. ಹಾಗೆಯೇ ಸಿಡಿಲು ಹೊಡೆದಾಗ ಸಾಮಾನ್ಯವಾಗಿ ಕಬ್ಬಿಣದ ತುಂಡನ್ನು ಮನೆಯಿಂದ ಹೊರಗಡೆ ಹಾಕುತ್ತಾರೆ. ಯಾಕೆಂದರೆ ಕಬ್ಬಿಣದ ತುಂಡು ಇದ್ದಲ್ಲಿ ಸಿಡಿಲು ಹೊಡೆಯುವುದಿಲ್ಲವೆಂದು ಅವರ ನಂಬಿಕೆಯಾಗಿದೆ.

ಸೂರ್ಯ, ಚಂದ್ರರು, ತಂಪಾಗಿರಲು ಮತ್ತು ಬೆಂಕಿಯಾಗಿರಲು ಕಾರಣ ತಾಯಿ ಕೊಟ್ಟ ಶಾಪದಿಂದ ಎನ್ನುವ ನಂಬಿಕೆ ಅವರದು ಇದಕ್ಕೆ ಸಂಬಂಧಪಟ್ಟಂತೆ ಕಥೆಯೊಂದನ್ನು ಹೇಳುತ್ತಾರೆ. ಒಂದು ದಿನ ಸೂರ್ಯ ಮತ್ತು ಚಂದ್ರನೂ ಒಂದು ಮದುವೆಗೆ ಹೋಗಿ ಬರಬೇಕಾದ್ರೆ ಸೂರ್ಯನು ತನ್ನ ಹೊಟ್ಟೆಯನ್ನು ತುಂಬಿಸಿಕೊಂಡು ತಾಯಿಗೆ ಏನು ತರಲಿಲ್ಲ. ಚಂದ್ರ ತಾನು ಉಣ್ಣುವ ಅರ್ಧ ಊಟದಲ್ಲಿ ತಾಯಿಗೆ ತಂದಿದ್ದನಂತೆ. ಅದಕ್ಕೆ ತಾಯಿ ಸೂರ್ಯನಿಗೆ ನೀನು ಬೆಂಕಿಯಾಗಿ ಉರಿಯಬೇಕು ಚಂದ್ರನಿಗೆ ನೀನು ಯಾವಾಗಲೂ ತಣ್ಣಗಾಗಿಯೇ ಇರು ಎಂದು ಹೇಳಿದಳಂತೆ ಎಂದು ನಂಬುತ್ತಾರೆ. ಚಂದ್ರ ಗ್ರಹಣವನ್ನು ಕುರಿತು ಸಂಕವಳ-ಸರ್ಪ ಚಂದ್ರನ ಮೇಲಿನ ಸಿಟ್ಟಿನಿಂದ ಚಂದ್ರನನ್ನು ವರ್ಷಕ್ಕೊಮ್ಮೆ ಅಟ್ಟಿಸಿಕೊಂಡು ಹೋಗಿ ನುಂಗುವುದರಿಂದ ಚಂದ್ರ ಗ್ರಹಣವಾಗುತ್ತದೆ ಎಂಬುದಾಗಿ, ಇದಕ್ಕೂ ಒಂದು ಘಟನೆಯನ್ನು ಹೇಳುತ್ತಾರೆ. ಒಂದು ದಿನ ಸಂಕವಳ (ಸರ್ಪ) ಮೊಲವನ್ನು ಬೆನ್ನಟ್ಟುವಾಗ ಚಂದ್ರ ಅದನ್ನು ಕಂಡು ಒಂದು ನೂಲು ಕೆಳಕ್ಕೆ ಬಿಟ್ಟನು ಅದರಲ್ಲಿ ಮೊಲ ಹತ್ತಿಕೊಂಡು ಹೋಯಿತು. ಆಗ ಚಂದ್ರ ನೂಲು ತುಂಡು ಮಾಡಿದ. ಇದೇ ಸಿಟ್ಟಿನಿಂದ ಸಂಕವ್ವಳ ವರ್ಷಕ್ಕೊಮ್ಮೆ ಚಂದ್ರನನ್ನು ನುಂಗಲು ಹೋಗುತ್ತದೆ ಎಂದು ತಿಳಿದಿದ್ದಾರೆ.

ಇನ್ನೊಂದು ಪ್ರಮುಖ ನಂಬಿಕೆ ಎಂದರೆ ಸಾಮಾನ್ಯವಾಗಿ ಆಕಾಶದಲ್ಲಿನ ನಕ್ಷತ್ರಗಳು ರಾತ್ರಿಯ ಕತ್ತಲಿನಲ್ಲಿ ಜಾರಿ ಬಿದ್ದಂತೆ ಕಾಣುತ್ತವೆ. ಇದಕ್ಕೆ ಮ್ಯಾಸಬೇಡ ಸಮುದಾಯದವರು, ನಕ್ಷತ್ರ ಬಿದ್ದರೆ ಮತ್ತು ಅದು ಆಯಾ ಊರಿನ ಯಾವ ಕಡೆಗೆ ಬೀಳುವಂತೆ ಕಾಣುತ್ತದೋ ಆ ಕಡೆಗೆ ಯಾರಾದರು ಸಾಯುತ್ತಾರೆ. ಸಾವಿನ ಸುದ್ದಿ ಕೇಳುತ್ತೇವೆ ಎನ್ನುವ ನಂಬಿಕೆ ಇವರಲ್ಲಿ ಪ್ರಮುಖವಾಗಿದೆ.

ಗ್ರಹಣ ಹಿಡಿದಾಗ ಗರ್ಭಿಣಿಯ ಹೆಂಗಸರು ಹೊರಗಡೆ ಬರಬಾರದು ಮತ್ತು ಏನನ್ನು ಅಚ್ಚುವ ಕೆಲಸ ಮಾಡಬಾರದು. ಹಾಗೆ ಗ್ರಹಣದ ಸಂದರ್ಭದಲ್ಲಿ ಹಟ್ಟಿಗಳಲ್ಲಿ ಕೆಲವು ಜನರು ಅಡಿಗೆ ಮಾಡುವುದಿಲ್ಲ. ಆ ಸಂದರ್ಭದಲ್ಲಿ ಹಳೆಯ ತಲೆಮಾರಿನ ಜನರು ಊಟ ಮಾಡುವುದಿಲ್ಲ. ಮತ್ತು ದನಗಳು ಕುರಿ ಮೇಕೆಗಳು ಗರ್ಭವಾದರೆ ಅವುಗಳಿಗೆ ಎಲೆಯನ್ನು ತಂದು ಹೊಗೆ ಹಾಕುತ್ತಾರೆ.

ಬತ್ತಕುಟ್ಟುವಾಗ ಹಿಂದಿನ ಕಾಲದಲ್ಲಿ ಒನಕೆ ಹಗಲೆಲ್ಲ ಆಕಾಶಕ್ಕೆ ತಗಲುತ್ತಿತಂತೆ ಆಗ ಹೆಣ್ಣು ಮಗಳು ಶಾಪಕೊಟ್ಟಿದ್ದಂತೆ ಇಷ್ಟು ಕೆಳಗೆ ಇದು ಯಾಕೆ ಇದೆ ಹಾಳಾಗಿ ಮೇಲಕ್ಕಾದ್ರು ಹೋಗುವಲ್ಲದು ಅಂತ ಶಾಪಹಾಕಿದ್ದಂತೆ ಅದಕ್ಕೆ ಆಕಾಶ ಮೇಲಕ್ಕೆ ಹೋಗಿತ್ತಂತೆ ಎಂದು ನಂಬಿಕೆ. ಹೀಗೆ ಪ್ರಕೃತಿಯ ಬಗೆಗೆ ಹಲವಾರು ನಂಬಿಕೆಗಳಿವೆ.

೫.೮.೪.ಮಾಟಮಂತ್ರ ಬಗೆಗಿನ ನಂಬಿಕೆಗಳು

ಮ್ಯಾಸಬೇಡರು ತಮ್ಮಲ್ಲಿ ಆರೋಗ್ಯ ಸರಿ ಇಲ್ಲದಿದ್ರೆ, ಜಾನುವಾರುಗಳು ಸತ್ರೆ, ಹಾಗೆ ಕೆಲವು ರೀತಿಯ ತೊಂದರೆಗಳಿಗೆ ಒಳಗಾದಾಗ ಇವು ಮಾಟ ಮಂತ್ರಗಳ ಪ್ರಭಾವವೆಂದು ತಿಳಿಯುತ್ತಾರೆ. ಅಂತಹವುಗಳಿಗೆ ತಮಗೆ ಗೊತ್ತಿರುವ ಮಾಟಮಂತ್ರಗಾರರ ಹತ್ತಿರ ಹೋಗಿ ಪರಿಹಾರವನ್ನು ಕಂಡುಕೊಳ್ಳುತ್ತಾರೆ. ಅಥವಾ ಮಂತ್ರವಾದಿಗಳನ್ನು ಕರೆದು ತರುತ್ತಾರೆ. ಇಂಥ ಕೆಲವು ಅನುಭವಗಳ ಹಿನ್ನೆಲೆಯಲ್ಲಿ ತಾವು ಪಟ್ಟ ತೊಂದರೆಯ ಕಾರಣಗಳಿಂದಾಗಿ ಕೆಲವಾರು ನಂಬಿಕೆಗಳು ರೂಢಿಗೊಂಡಿವೆ. ಕನಸಿನಲ್ಲಿ ಅಥವಾ ಬೇರೆ ರೂಪಗಳಲ್ಲಿ ಮುಂದಾಗುವುದನ್ನು ಮೊದಲೇ ತಿಳಿಯುವಂಥ ಶಕುನಗಳೂ ಅಷ್ಟೆ ಪ್ರಧಾನವೆನಿಸಿವೆ. ಶಕುನಗಳು ಕನಸಿನ ರೂಪದಲ್ಲಿ ಜ್ಯೋತಿಷ್ಯದ ರೂಪದಲ್ಲಿ ಪ್ರಾಣಿಪಕ್ಷಿಗಳ ಧನಿಗಳಲ್ಲಿ ಕೆಲವಾರು ಸಂಕೇತಗಳಲ್ಲಿ ವ್ಯಕ್ತವಾಗುತ್ತದೆ.

ರಾವು ಬಡಿದರೆ, ಗಾಳಿ ಸೋಂಕು ಆದ್ರೆ, ಮಂತ್ರ ಹಾಕಿಸುತ್ತಾರೆ.

ಮಕ್ಕಳಿಗೆ ಭಯದಿಂದ ಜ್ವರ ಬಂದ್ರೆ ಸೂಜಿ, ಬೇವಿನ ಎಲೆ ಅಥವಾ ಭಂಡಾರ ಹಾಕಿ ತಾಮ್ರದ ತಗಡಿನಲ್ಲಿ ಮಾಡಿಸಿ ಬರೆದು ಕಟ್ಟುತ್ತಾರೆ.

ಸತ್ತವರ ಸಮಾಧಿ ಮೇಲಿನ ಲಕ್ಕೆ ಸೊಪ್ಪು, ನಾರುಳಿ, ಸಿಪ್ಪೆ ಕೈಯುಗುರು ಹೊಗೆ ಮಾಡಿ ತೊಟ್ಟಿಲಡಿಗೆ ಇಟ್ಟರೆ ಭೂತ ಚೇಷ್ಟೆ ಹೋಗುತ್ತದೆ.

ಮಾಟ ಮಾಡಿಸಿದರೆ ಮಂತ್ರಗಾರರಿಂದ ತೆಗೆಸಬೇಕು, ಸುಮ್ಮನೆ ಮಾಡಿಸಿದ್ರೆ ಮಾಡಿಸಿದವನಿಗೆ ಏಟುಕೊಡ್ತದೆ.

ರಣ ಮಾಟ ಮಾಡಿಸಿದರೆ, ಶತ್ರು ಸಾಯುತ್ತಾನೆ, ಅದಕ್ಕೆ ಪ್ರತಿ ರಣ ಮಾಟನೇ ಮಾಡಿಸಬೇಕು.

ಮನೆಯಲ್ಲಿ ಜಾನುವಾರು ಅಥವಾ ಜನರು ರಕ್ತ ಕಾರಿದರೆ ಅದು ಮಾಟಮಾಡಿದ ಕಾರಣದಿಂದಾಗಿಯೇ ಹೀಗಾಗಿದೆ ಎಂದು ನಂಬುತ್ತಾರೆ. ಇನ್ನೂ ಮುಂತಾದ ನಂಬಿಕೆಗಳು ಈ ಸಮುದಾಯದಲ್ಲಿ ಕಾಣಬಹುದು.

ಮ್ಯಾಸಬೇಡರಲ್ಲಿ ಮಾಟಮಂತ್ರ ಮಾಡುವವರು ಸಾಕಷ್ಟಿದ್ದಾರೆ. ಆದರೆ ಕೆಲವು ಮಂತ್ರವಾದಿ ಆಚಾರಿಗಳನ್ನು ಈ ಕಾರ್ಯಕ್ಕೆ ಬಳಸುತ್ತಾರೆ. ಹಾಗೆ ಬೇರೆ ಕಡಿಯಿಂದ ಮಂತ್ರವಾದಿಗಳನ್ನು ಕರೆಸುತ್ತಾರೆ. ದ್ವೇಷ ಅಸೂಯೆಗಳು ಇಂಥ ಮಾಟಕ್ಕೆ ಕಾರಣವಾದ್ದರಿಂದ ಈ ರೀತಿ ಮಾಟಮಂತ್ರ ರೂಢಿಗೆ ಬಂದಿದೆ ಮಾನವನು ಪ್ರಾರಂಭದ ಹಂತದಿಂದಲೇ ಮನುಷ್ಯ ಮನುಷ್ಯನನ್ನು ವಶಪಡಿಸಿಕೊಳ್ಳಲು ಹೆದರಿಸಲು, ಆಶ್ರಯಿಸುವಂತೆ ಮಾಡಲು ಮಾಟವೇ ಪ್ರಮುಖವೆನಿಸಿತು. ಸಾಮಾನ್ಯವಾಗಿ ಕೆಟ್ಟದನ್ನು ಮಾಡಿದವರಿಗೆ ಮಾತ್ರ ಮಾಟ ತಾಗುತ್ತದೆ. ಒಳ್ಳೆಯವರ ಮೇಲೆ ಈ ಮಾಟ ಪ್ರಭಾವ ಬೀರಲಾರದು ಎಂದು ಮ್ಯಾಸಬೇಡರ ನಂಬಿಕೆಯಾಗಿದೆ.

೫.೯.೧ ನ್ಯಾಯಪಂಚಾಯ್ತಿ

ಭಾರತದಲ್ಲಿ ಪ್ರತಿಯೊಂದು ಬುಡಕಟ್ಟುಗಳು ತಮ್ಮಲ್ಲಿರುವ ಒಳಜಗಳಗಳನ್ನು ಬಗೆಹರಿಸಿಕೊಳ್ಳಲು ತಮ್ಮಲ್ಲೇ ಒಂದು ಪಂಚಾಯ್ತಿಯನ್ನು ರಚಿಸಿಕೊಂಡಿರುತ್ತವೆ. ಇದಕ್ಕೆ ಕೆಲವರು ಕುಲಪಂಚಾಯ್ತಿ, ಜಾತಿಪಂಚಾಯ್ತಿ, ನ್ಯಾಯಪಂಚಾಯ್ತಿ ಎಂತಲೂ ಕರೆಯುವರು. ಮಾಡಿದ ತಪ್ಪನ್ನು ತಿದ್ದಿಕೊಳ್ಳುವುದು ಮಾನವರಿಗೆ ಮಾತ್ರ ಸಾಧ್ಯ. ಇದು ಸರಿ ಇದು ತಪ್ಪು, ಇದು ಒಳ್ಳೆಯದು ಇದು ಕೆಟ್ಟದ್ದು, ಇದು ನ್ಯಾಯ, ಇದು ಅನ್ಯಾಯ ಹೀಗೆ ಸಮಾಜದಲ್ಲಿ ತಾನು ರೂಪಿಸಿಕೊಂಡ ಮೌಲ್ಯಗಳಿಗೆ ಸರಿತಪ್ಪುಗಳ ಕಲ್ಪನೆಯಡಿಯಲ್ಲಿ ನ್ಯಾಯವನ್ನು ಒದಗಿಸಲು ಒಂದು ವೇದಿಕೆಯನ್ನು ನಿರ್ಮಿಸಿಕೊಂಡನು. ಇಂತಹ ವೇದಿಕೆ ಸಮಾಜದಲ್ಲಿನ ದ್ವೇಷ, ಕ್ರೋಧ ಮುಂತಾದ ಸಂಕೀರ್ಣ ಭಾವನೆಗಳನ್ನು ನಿಯಂತ್ರಣದಲ್ಲಿಡಲು ಸಹಕಾರಿಯಾಗಿವೆ ಹೀಗಾಗಿ ಪ್ರತಿಯೊಂದು ಸಮುದಾಯವು ಪರಂಪರೆಯಿಂದ ನಂಬಿಕೊಂಡು ಬಂದ ಜೀವನ ಮೌಲ್ಯಗಳನ್ನು ಬಗೆಹರಿಸಿಕೊಳ್ಳಲು ಮತ್ತು ಸಮುದಾಯವು ಹರಿದು ಹಂಚಿ ಹೋಗದಂತೆ ಸಾಮಾಜಿಕ ನ್ಯಾಯಪದ್ಧತಿ ಅತ್ಯವಶ್ಯಕವಾಯಿತು.

ಭಾರತದಲ್ಲಿ ಸ್ಥಿರವಾಗಿ ಅಲೆಮಾರಿಗಳಾಗಿ ಜೀವನ ಸಾಗಿಸುತ್ತಿರುವ ಬಹುತೇಕ ಬುಡಕಟ್ಟುಗಳಲ್ಲಿ ನ್ಯಾಯಪಂಚಾಯ್ತಿ ವ್ಯವಸ್ಥೆ ಕಂಡುಬರುತ್ತಿದ್ದು ಅವು ಪ್ರದೇಶದಿಂದ ಪ್ರದೇಶಕ್ಕೆ ಸಮುದಾಯದಿಂದ ಸಮುದಾಯಕ್ಕೆ ವ್ಯತ್ಯಾಸವನ್ನು ಹೊಂದಿರುತ್ತವೆ. ಅಷ್ಟೇ ಅಲ್ಲ ನ್ಯಾಯವನ್ನು ನಿರ್ಣಯಿಸುವ ವಿಧಾನದಲ್ಲಿ ಮತ್ತು ಶಿಕ್ಷೆಕೊಡುವ ವಿಧಾನದಲ್ಲಿ ಕೆಲವೊಂದು ವ್ಯತ್ಯಾಸಗಳು ಕಂಡುಬರುತ್ತಿದ್ದರೂ ಸಹ ಪಂಚಾಯ್ತಿಯ ಮೂಲ ಉದ್ದೇಶ ಸಾಮಾಜಿಕ ಒದಗಿಸುವುದಾಗಿದೆ.

ಪ್ರತಿಯೊಂದು ಬುಡಕಟ್ಟಿನ ನ್ಯಾಯಪಂಚಾಯ್ತಿಯಲ್ಲಿ ಅನುಭವಸ್ಥ ಹಿರಿಯ ನ್ಯಾಯಾಧೀಶನಾಗಿರುತ್ತಾನೆ. ಕೆಲವೊಂದು ಸಮಯಗಳಲ್ಲಿ ನ್ಯಾಯಧೀಶನ ಆಯ್ಕೆ ಪರಂಪರೆಯಿಂದ ಕೂಡಿರುತ್ತದೆ. ಕೆಲವು ಸಮುದಾಯುಗಳಲ್ಲಿ ಅರ್ಹತೆಯ ಆಧಾರದಮೇಲೆ ಆಯ್ಕೆ ನಡೆಯುತ್ತದೆ. ಕಲಿತವರಿಗಿಂತ ನುರಿತವರು ಮೇಲು ಎಂಬಂತೆ, ಅನಕ್ಷರ ಅನುಭವಸ್ಥ ಹಿರಿಯರ ನ್ಯಾಯ ನಿರ್ಣಯಗಳು

ಪದವಿ ಪಡೆದ ಕಾನೂನು ತಜ್ಞರ ನ್ಯಾಯ ನಿರ್ಣಯಗಳಿಗಿಂತ ಹೆಚ್ಚು ಪ್ರಭಾವಶಾಲಿಯಾಗಿರುತ್ತದೆ. ಇದಕ್ಕೆ ಕಾರಣ ಬುಡಕಟ್ಟು ಸಮುದಾಯವು ಒಂದು ಚಿಕ್ಕ ಘಟಕವಾಗಿದ್ದ ಈ ಘಟಕದಲ್ಲಿನ ನ್ಯಾಯಧೀಶನಿಗೆ ವಾದಿ ಪ್ರತಿವಾದಿಯ ಚಟುವಟಿಕೆಗಳ ಬಗ್ಗೆ ಸಂಪೂರ್ಣ ಅರಿವಿರುತ್ತದೆ. ಅಪರಾಧಿಗಳ ಅಪರಾಧಗಳನ್ನು ಕಣ್ಣೆದುರಿಗೆ ನೋಡುವ ಅವಕಾಶ ಅವನಿಗಿರುತ್ತದೆ. ಹಾಗಾಗಿ ಇಲ್ಲಿನ ನ್ಯಾಯಧೀಶ ನಿರಪರಾಧಿಗೆ ಅನ್ಯಾಯವಾಗದಂತೆ ನೋಡಿಕೊಳ್ಳುತ್ತಾನೆ. ಅಪರಾಧಿಗೆ ದಂಡ ರೂಪದ ಅಥವಾ ಬಹಿಷ್ಕಾರ ರೂಪದ ಶಿಕ್ಷೆಯನ್ನು ವಿಧಿಸುತ್ತಾರೆ. ಒಂದು ವೇಳೆ ಅಪರಾಧಿ ತನ್ನ ತಪ್ಪನ್ನು ಒಪ್ಪಿಕೊಂಡರೆ ಮತ್ತೇ ಸಮುದಾಯದಲ್ಲಿ ಉತ್ತಮ ಪ್ರಜೆಯಾಗಿ ಬದುಕಲು ಅವಕಾಶ ಮಾಡಿಕೊಡುತ್ತಾರೆ.

ಬುಡಕಟ್ಟು ಸಮುದಾಯಗಳ ನ್ಯಾಯಾಲಯಗಳಲ್ಲಿನ ನ್ಯಾಯವು ಆದಷ್ಟು ಮಟ್ಟಿಗೆ ವಾದ ಪ್ರತಿವಾದಗಳು ಏನೇ ಇರಲಿ ಅವು ಜನರನ್ನು ಸಂಘಟಿಸಲು ಪ್ರಯತ್ನಿಸುತ್ತವೆಯೇ ವಿನಃ ವಿಘಟನೆ ಮಾಡಲು ಇಷ್ಟಪಡುವುದಿಲ್ಲ. ಹೀಗಾಗಿ ಬುಡಕಟ್ಟು ಸಮುದಾಯಗಳ ನ್ಯಾಯಾಲಯಗಳಲ್ಲಿನ ನ್ಯಾಯ ಇಂದಿನ ಕೋರ್ಟುಗಳಲ್ಲಿನ ನ್ಯಾಯಕ್ಕಿಂತ ಹೆಚ್ಚು ಮಹತ್ವದ್ದಾಗಿರುತ್ತದೆ. ಇವರು ಕೈಗೊಂಡ ನ್ಯಾಯ ನಿರ್ಣಯಗಳಿಗೆ ಯಾವ ಲಿಖಿತ ದಾಖಲೆಗಳು ಸಿಗುತ್ತಿಲ್ಲ. ಪರಂಪರೆಯಿಂದ ನಂಬಿಕೊಂಡು ಬಂದ ಜೀವನ ಮೌಲ್ಯಗಳಾದ ಮಾನವೀಯತೆ, ಸಹಕಾರ, ನಡುವಳಿ ಸ್ವಭಾವನೆ ಗುಣ ಮತ್ತು ಸಂಪ್ರದಾಯ, ಆಚರಣೆ ಪದ್ಧತಿ ರೀತಿ-ರಿವಾಜುಗಳನ್ನು ಗಮನದಲ್ಲಿಟ್ಟುಕೊಂಡು ನ್ಯಾಯ ತೀರ್ಮಾನ ಮಾಡುವರು.

ಪಂಚರ ಸಮ್ಮುಖದಲ್ಲಿ ನಡೆಯುವ ನ್ಯಾಯ ಅತ್ಯಂತ ಮಹತ್ವದಾಗಿರುತ್ತದೆ. ಸಮಾಜದಲ್ಲಿ ಪಂಚರಿಗೆ ವಿಶಿಷ್ಟ ಸ್ಥಾನವಿದೆ. ಪಂಚಾಯ್ತಿ ಮಾಡುವುದು ಪವಿತ್ರ ಹಾಗೂ ಪುಣ್ಯದ ಕೆಲಸವಾಗಿದೆಯೇ ವಿನಃ ಇದೊಂದು ವೃತ್ತಿಯಲ್ಲಿ ಪ್ರವೃತ್ತಿ. 'ಪಂಚರಿಗೆ ಪಗಾರಿಲ್ಲ ಕತ್ತಿಗೆ ಲಗಾಮಿಲ್ಲ' ಎಂಬ ಗಾದೆಯನ್ನು ಗಮನಿಸಿದಾಗ ಇದರಿಂದ ಪಂಚರಿಗೆ ಯಾವುದೇ ರೀತಿಯ ಲಾಭವಿಲ್ಲ ಎಂಬುದು ದೃಢಪಡುತ್ತದೆ. ಇಲ್ಲಿ ಇವರು ರೂಪಿಸಿಕೊಂಡ ನಿಯಮಗಳು ವ್ಯಕ್ತಿ ವ್ಯಕ್ತಿಗಳ ನಡುವೆ ಸೇಡು ತೀರಿಸಿಕೊಳ್ಳುವುದಿಲ್ಲ ಇದು ಸುವ್ಯವಸ್ಥಿತ ಸಮಾಜದ ನಡಿಗೆಗೆ ಹಾಕಿದ ಲಗಾಮು. ಈ ರೀತಿಯ ಲಗಾಮಿರುವುದರಿಂದಲೇ ನಮ್ಮ ಅಕ್ಕಪಕ್ಕ ವಾಸಿಸುವ ಬುಡಕಟ್ಟುಗಳ ಮೂಲ ಬೇರುಗಳು ಉಳಿದುಕೊಳ್ಳಲು ಸಾಧ್ಯವಾಗಿರುವುದು.

ಮ್ಯಾಸಬೇಡರು ಇತರೆ ಸಮುದಾಯಗಳೊಂದಿಗೆ ಸಂಬಂಧ:

ಕೈಗಾರಿಕೀಕರಣದಿಂದ ಉಂಟಾದ ಸಾಮಾಜಿಕ ಬದಲಾವಣೆಯಿಂದಾಗಿ ಮ್ಯಾಸಬೇಡರು ಮುಖ್ಯವಾಗಿ ಸಾಂಸ್ಕೃತಿಕ ಏಕರೂಪತೆಯನ್ನು ಪಡೆಯುತ್ತ ಆಸಕ್ತಿ ತೋರುತ್ತಿರುವುದು ಗಮನಾರ್ಹವಾಗಿದೆ.

ಕಟ್ಟೆಮನೆ ನ್ಯಾಯಪದ್ಧತಿ

ಪರಂಪರೆಯಲ್ಲಿ ನ್ಯಾಯಪದ್ಧತಿಯು ತನ್ನದೇ ಆದ ವಿಶಿಷ್ಟ ಪರಂಪರೆಯಾಗಿ ಬೆಳೆದು ಕೊಂಡು ಬಂದಿರುವುದು ಕಾಣಬಹುದಾಗಿದೆ. ಕರ್ನಾಟಕದ ಎಲ್ಲ ಬುಡಕಟ್ಟುಗಳಂತೆ ಈ ಬುಡಕಟ್ಟು ಸಮುದಾಯವು

ಸಹ ತನ್ನದೇ ಆದ ನ್ಯಾಯಪದ್ಧತಿ ಕ್ರಮವನ್ನು ಅನುಸರಿಸಿಕೊಂಡು ಬಂದಿದ್ದಾರೆ. ಸಾಮಾನ್ಯವಾಗಿ ಎಲ್ಲಾ ಬುಡಕಟ್ಟುಗಳ ನ್ಯಾಯ ಪದ್ಧತಿಯೂ ಒಂದೇ ಆಗಿದ್ದರೂ ಆಯಾ ಪದ್ಧತಿಯ ರಚನಾ ಕ್ರಮಗಳು ಮಾತ್ರ ಭಿನ್ನತೆಗಳಿಂದ ಕೂಡಿರುವುದು ಪ್ರಮುಖವಾಗಿರುತ್ತದೆ. ಯಾವುದೇ ಒಂದು ಸಮುದಾಯ ನಂಬಿಕೆ, ಆಚರಣೆ, ಆದರ್ಶ ಕಂಡ ಮೌಲ್ಯಗಳು ನ್ಯಾಯ ಪದ್ಧತಿಯನ್ನು ರೂಢಿಸುತ್ತವೆ. ಈ ನ್ಯಾಯ ಪದ್ಧತಿ ಕ್ರಮವು ತಳ ಸಮುದಾಯಗಳಲ್ಲಿ ತುಂಬಾ ಗೌರವ ಮತ್ತು ನಿಷ್ಠೆಯಿಂದ ನಡೆಯಲ್ಪಡುತ್ತವೆ. ಈ ಒಂದು ಹಿನ್ನೆಲೆಯಲ್ಲಿ ಮ್ಯಾಸಬೇಡರ ಸಮುದಾಯದಲ್ಲಿಯೂ ಸಹ ಈ ಪದ್ಧತಿ ಅದರದೇ ಆದ ಸ್ಥಾನಮಾನವನ್ನು ಪಡೆದು ಕೊಂಡು ಬಂದಿದೆ.(ಕೃಷ್ಣಮೂರ್ತಿ ಹನೂರು, ಪು-೯೩, ೧೯೯೩)

ಕರ್ನಾಟಕದ ವಿವಿಧ ಕಡೆಗಳಲ್ಲಿ ವಾಸಿಸುತ್ತಿರುವ ಮ್ಯಾಸಬೇಡರ ಸಮುದಾಯವು ಬಹುಪಾಲು ತಮ್ಮದೇ ಆದ ಕಟ್ಟೆಮನೆ ನ್ಯಾಯಪದ್ಧತಿಯನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಅದರಲ್ಲಿ ಚಿತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ವಾಸಿಸುತ್ತಿರುವ ಈ ಸಮುದಾಯದವರು ಆಯಾ ಪ್ರಾದೇಶಿಕ ತಕ್ಕಂತೆ ೨೦ ರಿಂದ ೩೦ ಹಳ್ಳಿಗಳಿಗೆ ಒಂದೊಂದು ಕಟ್ಟೆಮನೆಯನ್ನು ಹೊಂದಿವೆ. ಹೀಗೆ ಹನ್ನೆರಡು ಕಟ್ಟೆಮನೆಗಳನ್ನು ಪ್ರಮುಖವಾಗಿ ಹೊಂದಿವೆ. ಈ ಕಟ್ಟೆಮನೆಗಳಲ್ಲಿ ಬಹುಪಾಲು ಸಣ್ಣ ಪುಟ್ಟ ವ್ಯಾಜ್ಯಗಳಿಂದ ಹಿಡಿದು ಎಲ್ಲಾ ವ್ಯಾಜ್ಯಗಳಿಗೆ ಕಟ್ಟೆಮನೆಗಳ ತೀರ್ಮಾನವೇ ಅಂತಿಮದ್ದಾಗಿರುತ್ತದೆ. ಈ ನ್ಯಾಯಪದ್ಧತಿ ಬಗ್ಗೆ ಸ್ವತಃ ಸಮುದಾಯದ ಯಜಮಾನ ಹಿರಿಯ ಕಾಮಗೇತನಹಳ್ಳಿ ನಿಜಲಿಂಗಪ್ಪ ಕೊಡುವ ಮಾಹಿತಿ ಈ ಕೆಳಗಿನಂತಿದೆ:

“ನಾವು ಈ ಪದ್ಧತಿಯನ್ನು ಪೂರ್ವಕಾಲದಿಂದ್ಲೂ ಮುಂದುವರೆಸಿಕೊಂಡು ಬಂದೀವಿ. ಇದು ಇವತ್ತಿಂದಲ್ಲ ಇದಕ್ಕೆ ನಾವು (ಕಟಿಂಡ್ಲು ಅಂತೀವಿ ತೆಲುಗಿನಲ್ಲಿ) ಕನ್ನಡದಲ್ಲಿ ನ್ಯಾಯಪದ್ಧತಿ ಅಂತ ಕರೆಯುತ್ತಾರೆ. ಹನ್ನೆರಡು ಕಟ್ಟೆಮನೆಗಳು ಯಾವುವುವೆಂದ್ರೆ ಗೋನೂರು, ಕಾಮಗೇತನಹಳ್ಳಿ, ಹಿರೇಹಳ್ಳಿ ಅಡವಿ ಮಾರನಹಳ್ಳಿ, ಓಬೇನಹಳ್ಳಿ, ಮಲುವರಹಳ್ಳಿ, ಕೋನಸಾಗರ ತಾಳೀಕೆರೆ, ನನ್ನಿವಾಳ ನಾಯಕನಹಟ್ಟಿ, ಮುತ್ತಿಗಾರಹಳ್ಳಿ, ಹಿರೇಮಲ್ಲನ ಹೊಳೆ ಇವು ಹನ್ನೆರಡು ಕಟ್ಟೆಮನೆಗಳು. ಈ ಎಲ್ಲ ಕಟ್ಟಿಮನೆಗಳಿಗೆ ಗುರುಸ್ಥಾನ ಕಂಪಳದೇವರಹಟ್ಟಿ. ಕಟ್ಟಿಮನೆಗಳಲ್ಲಿ ಬಗೆಹರಿಯಲಿಲ್ಲಂದ್ರೆ ಗುರುಸ್ಥಾನಕ್ಕೆ ಬರ್ತೀವಿ ಅಲ್ಲೇ ಎಲ್ಲ ತೀರ್ಮಾವಾಗ್ತದೆ. ನಾವು ಸಣ್ಣ ಜಗಳಗಳಾದ್ರೂ ಸಹ ಊರಿನಲ್ಲೇ ಬಗೆಹರಿಸ್ತೀವಿ ಊರಿನಲ್ಲಿ ಕೂಡ ಯಜಮಾನ ಇರ್ತಾನೆ. ಅವರ ಕೈಲಿ ಆಗ್ಲಿಲ್ಲಂದ್ರೆ. ಕಟ್ಟಿಮನೆಗೆ ಹೋಗ್ತಾರೆ ಅಲ್ಲಿ ಆಗ್ಲಿಂದ್ರೆ ಗುರುಸ್ಥಾನಕ್ಕೆ ಹೋಗ್ತಾರೆ. ಎಲ್ಲಾರ್ದು ಒಂದೇ ಮಾತು ಇರ್ತದೆ ಯಾರು ಕೂಡ ದೇವರಹತ್ತಿರ ಸುಳ್ಳು ಹೇಳಲ್ಲ. ಸುಳ್ಳು ಹೇಳಿದ್ರೆ ಅವರಿಗೆ ದೇವರು ಒಳ್ಳೆಯದು ಮಾಡಲ್ಲ ಯಾವ ರೂಪದಲ್ಲಾದ್ರು ಅವ್ರಿಗೆ ತೋರುಸ್ತಾನೆ. ಊರಿನಲ್ಲಿ ಏನಾದ್ರು ತೊಂದ್ರೆ ಆದ್ರೆ ಇಲ್ಲಂದ್ರೆ ಯಾವುದಾದ್ರು ಹಬ್ಬ ಮಾಡಿದ್ರೆ ಬಡುದಾಡಿದ್ರೆ, ಹುಡುಗ ಹುಡುಗಿಯರ್ದು ಜಗಳವಾದ್ರೆ, ಮೆಟ್ಟಿನಿಂದ ಹೊಡೆದಾಡಿದ್ರೆ, ಯಾರಾದ್ರು

ಬೇರೆ ಕುಲದಲ್ಲಿ ಮದುವೆಯಾದ್ರೆ, ಇವೆಲ್ಲವು ಊರಿನಲ್ಲಿ ಬಗೆಹರಿಸಿಕೊಳ್ತೀವಿ. ಅಲ್ಲಾಗ್ಲಿಲ್ಲಂದ್ರೆ ಕಟ್ಟೆಮನೆಗೆ ಹೋಗ್ತೀವಿ. ನಮ್ ಕುಲ್ದಲ್ಲಿ ಜೈಲಿಗೆ ಹೋಗಿ ಬಂದ್ರೆ ಅವ್ರಿಗೆ ಕುಲದಿಂದ ಹೊರಗೆ ಹಾಕ್ತೀವಿ. ಅವ್ರು ಬಂದ ಮೇಲೆ ಎಲ್ಲಾರು ಮಾತಾಡಿ ಸೋಮುವಾರ ಇಲ್ಲಂದ್ರೆ ಶುಕ್ರವಾರ ದೇವರ ಹತ್ತಿರ ಸೇರಿ ಎಲ್ಲಾ ಕುಲಬಂಧುಗಳು ಬರ್ತಾರೆ ಒಂದೋ ಎರಡೊ ಬೇಟೆ ಕೊಯ್ದು ಊರಿನ ಎಲ್ಲಾರಿಗೆ ಇಟ್ಟು. ದೇವ್ರು ಹತ್ತಿರ ತೀರ್ಥ ಹಾಕಿ ನಾಲಿಗೆ ಸುಟ್ಟು ಆ ಮೇಲೆ ಅವ್ರನ್ನು ಕುಲಕ್ಕೆ ಸೇರಿಸ್ಕೊಳ್ತೀವಿ. ಅಲ್ಲಿಯವರೆಗೆ ಅವ್ರು ಹೊರಗಡೆ ಇರಬೇಕು. ಇನ್ನು ಚಪ್ಲಿತಗಂಡು ಹೊಡೆದಾಡಿದ್ರೆ ಅವ್ರಿಗೆ ಕೂಡ ಕುಲದಿಂದ ಹೊರಗೆ ಹಾಕ್ತೀವಿ. ಹೊಡೆಸಿಕೊಂಡವ್ರಿಗೆ ಮತ್ತು ಹೊಡೆದವ್ರಿಗೆ ಇಬ್ಬರಿಗೂ ಕುಲದಿಂದ ಹೊರಗೆ ಹಾಕಿ ಆ ಮೇಲೆ ಕುಲಬಂಧುಗಳು ಎಲ್ಲಾರು ಸೇರಿ ಪಂಚಾಯ್ತಿ ಮಾಡಿ. ಪಂಚನಾಮ್‌ನಲ್ಲಿ ಏನು ತೀರ್ಮಾನ ಆಗ್ತದೋ ಅದರಂತೆ ಅವ್ರು ನಡೆಕೊಳ್ಬೇಕು ಎಷ್ಟು ದಂಡ ಹಾಕಿದ್ರೆ ಕಟ್ಬೇಕು. ದಂಡ ಕಟ್ಟಿದ ಮೇಲೆ ಅವ್ರಿಗೆ ಅವ್ರ ಮನೆದೇವರ ಹತ್ತಿರ ಕರ್‍ಕೊಂಡು ಹೋಗಿ ಬೇಟೆ ಕೊಯ್ದು ಎಲ್ಲ ಕುಲಬಂಧುಗಳಿಗೆ ಇಟ್ಟು ಅವ್ರಿಗೆ ನಾಲಿಗೆ ಸುಟ್ಟು ತೀರ್ಥ ಮೈ ಮೇಲೆ ಹಾಕಿ ಸ್ವಲ್ಪ ಕುಡಿಸಿ ಕುಲಕ್ಕೆ ಸೇರಿಸ್ಕೊಂತೀವಿ ಅಂತವ್ರು ಮುಂದೆ ಯಾವ ಕಾರ್ಯಗಳಿಗೆ ಬರಂಗಿಲ್ಲ, ಮಾಡಂಗಿಲ್ಲ, ಚಪ್ಲಿನಿಂದ ಹೊಡೆದಾಡುವುದು ಬಹಳ ಕಷ್ಟ, ಬಹಳ ಪಾಪ, ಅವಮಾನ, ಆದ್ರಿಂದ ಯಾರು ಜಾಸ್ತಿ ಹೊಡೆದಾಡುವುದಿಲ್ಲ ನೋಡ್ರಿ.

ಯಾರದ್ರು ನಮ್ ಜಾತಿ ಬಿಟ್ಟು ಬೇರೆ ಜಾತಿಯಲ್ಲಿ ಮದ್ವೆಯಾದ್ರೆ ಅಂತವ್ರು ಕುಲದಿಂದ ಮುಲಾಜಿಲ್ದೆ ಹೊರಗೆ ಹಾಕ್ತಿವಿ. ನಮ್‌ಗಿಂತ ಮೇಲ್ ಜಾತಿ ಆದ್ರೆ ಒಳಗೆ ಸೇರಿಸ್ಕೊಳ್ತೀವಿ. ಕೆಳಜಾತಿಯಾದ್ರೆ ಕುಲದಿಂದ ಹೊರಗೆ ಇಡ್ತೀವಿ. ೫-೬ ವರ್ಷ ಕೆಳಗೆ ಬೆಳವನಮರದಹಟ್ಟಿಯಲ್ಲಿ ಮೊಳಕಾಲ್ಮೂರು ತಾಲ್ಲೂಕ್‌ನಲ್ಲಿ ಬರ್ತದೆ. ಆ ಊರಲ್ಲಿ ನಮ್ ಜಾತಿ ಹುಡುಗ ಪಿಂಜಾರು ಹುಡುಗಿನ ಮದ್ವೆ ಮಾಡಿಕೊಂಡು ಬಂದಿದ್ದ ಆಗ ಅವ್ರ ಬೆಡಗುಗೆ ಸೇರಿದ ಎಲ್ಲರನ್ನು ಹೊರಗೆ ಹಾಕಿದ್ವಿ. ಅವ್ರು ನಮ್ ಯಾವ ದೇವ್ರುತ್ರ ಬರಂಗಿಲ್ಲ ಆಗ ಅವ್ರೆಲ್ಲ ಸೇರಿ ನಾವೇನು ಮಾಡಿಲ್ಲ ಆತ್ನನೊಂದೇ ಹೊರಗೆ ಹಾಕ್ರಿ ನಾವೇನು ತಪ್ಪು ಮಾಡಿಲ್ಲಂದ್ರು ಈಗ್ಲೂ ಆತ್ನನನ್ನು ಹೊರಗೆ ಹಾಕಿವಿ ಹಿಂಗೆ ನಮ್ ಜಾತಿಯಲ್ಲಿ ಬಹಾಳ ಕಟ್ನಿಟ್ಟು ನೋಡ್ರಿ. ಇದು ಬಿಟ್ಟು ಆದೇವ್ರು ಈ ದೇವ್ರು ಅಂತ ಜಗಳ ಆಗ್ತಾವೆ ಅವು ಕೂಡ ಕಟ್ಟೆಮನೆಗಳಲ್ಲಿ ಆಗ್ಲಿಲ್ಲಂದ್ರೆ ಗುರುಸ್ಥಾನಕ್ಕೆ ಹೋಗ್ತೀವಿ. ಗುರುಸ್ಥಾನದಲ್ಲಿ ಎಲ್ಲಾರು ಇರ್ತಾರೆ ಮುಗ್ಗೂರು ನಾಯ್ಕುಡ್ಲು, ಏಡುಗುರುನಾಯ್ಕುಡ್ಲು, ತೊಮ್ಮಿದಿಮಿತ್ತೇವಾರು ಅಂತ, ಎಲ್ಲಾ ಕುಲಬಂಧುಗಳು ಅಲ್ಲಿ ಸೇರ್ತಾರೆ ಅಲ್ಲೇ ಎಲ್ಲಾ ತೀರ್ಮಾನ ಆಗ್ತದೆ. ಕಂಪಳದೇವರಹಟ್ಟಿ, ಗುರುಸಂಸ್ಥಾನ ಇದನ್ನು 'ಉದಿ' ಸಂಸ್ಥಾನ ಅಂತೀವಿ 'ಮುತ್ತೈಗಳು' 'ಪದಿ' ಸಂಸ್ಥಾನ. ಇಡೀ ನಮ್ಮ ಮ್ಯಾಸ ಮಂಡಲ ಏನಿದೆ ಎಲ್ಲಾ ಅಲ್ಲಿಗೆ ಕಲಿಯುತ್ತಾರೆ ಅಲ್ಲೇ ಅಂತಿಮ ತೀರ್ಮಾನ ಆಗ್ತದೆ. ನೋಡ್ರಿ ಈಗ್ಲೂ ಕೂಡ ಹಂಗೆ ನಡೆಸಿಕೊಂಡು ಬಂದಾರೆ. ಕೆಲವು ಜಗಳ ಗಿಗಳ ಅಂತ ಈಗ ಸ್ವಲ್ಪ ಓದು ಕಲ್ತು ಬುದ್ಧಿವಂತ್ರಾಗಿದ್ದಾರೆ. ನಮ್

ಜಾತಿಯಲ್ಲಿ ಕೋಳಿ ತಿನ್ನಂಗಿಲ್ಲ, ಕೋಳಿ ನಮ್ಮೂರಾಗೆ ಬರಂಗಿಲ್ಲ, ಸಾರಾಯಿ ಕುಡಿಯಂಗಿಲ್ಲ, ಈಚಲು ಚಾಪೆ, ಪರಿಕೆ, ಯಾವು ಮುಟ್ಟಂಗಿಲ್ಲ ಅಂತವೇನಾದ್ರು ಮಾಡಿದ್ರೆ ಅವ್ರಿಗೆ ಶಿಕ್ಷೆ ಕೊಡುತ್ತಿದ್ರು. ನಾಲಿಗೆ ಸುಡುತಿದ್ರು ಈಗ ನೋಡ್ರಿ ಕಾಲ ಕೆಟ್ಟೋಂಗಿದೆ ಅಷ್ಟೇ ಕಟ್ಟು ನಿಟ್ಟು ಇಲ್ಲ ಕೆಲವು ಅಂದರ್ರೆ ಸಾರಾಯಿ-ಗಿರಾಯಿ ಕೆಲವ್ರು ಕುಡಿತಾರೆ, ಕೋಳಿತಿನ್‌ತ್ತಾರಂತೆ ನಮಗೇನು ಗೊತ್ತಿಲ್ಲ ನಮ್ಮೂರಗೆ ಮಾತ್ರ ಇವು ಯಾವು ಯಾರ ಮಾಡಲ್ಲ, ಕೆಲವು ಊರುಗಳಲ್ಲಿ ಈಗ್ಲೂ ಕೂಡ ಹಂಗೆ ಇದೆ. ಜಗಳ-ಗಿಗಳ ಅಂತ ಮಾಡಿದ್ರೆ ಸೀದ ಪೋಲೀಸ್ ಸ್ಟೇಷನ್‌ಗೆ ಹೋಗ್ತಾರೆ ಹೊಲ-ಗಿಲ ವ್ಯಾಜ್ಯಗಳು ಮಾಡಿಕೊಂಡು ಕೋರ್ಟ್ ಕಛೇರಿಗಳಿಗೆ ಹೋಗಿ ಸಾವಿರಾರು ಗಟ್ಲೆ ಹಣಕಳ್ಕೊಂಡು ಊಟಕ್ಕೆ ತಿನ್‌ಲಿಕ್ಕೆ ಇಲ್ಲದೆ ಇರುವಂತವ್ರು ಕೂಡ ಇದ್ದಾರೆ ನೋಡ್ರಿ. ಹನ್ನೆರಡು ಕಟ್ಟೆಮನೆಗಳು ಈಗ ಕೆಲವು ಸರಿಯಾಗಿಲ್ಲ ಕೆಲವು ಅಂದ್ರೆ, ಹಿರೇಹಳ್ಳಿ, ನಾಯಕನಹಟ್ಟಿ, ನನ್ನಿವಾಳ, ಗೋನೂರು ಕಾಮಗೇತಲಹಳ್ಳಿ ಇವೆಲ್ಲವು ಕೂಡ ಈಗ್ಲೂ ಹಂಗೆ ಇದಾವೆ. ಅದೇ ರೀತಿ ಕಟ್ನಿಟ್ಟು ಪಾಲಿಸಿಕೊಂಡು ಬಂದಾವೆ ನೋಡ್ರಿ, ಹೇಳಿಕೊಂಡು ಹೋದ್ರೆ ಇನ್ನೂ ಮಸ್ತ ಇದೆ. ಸಾಕು ಇಲ್ಲಿಗೆ ನಿಮಗೆ ಏನುಬೇಕು ಅಷ್ಟು ಹೇಳಿದಿನಿ ನೋಡ್ರಿ.

ಒಟ್ಟಾರೆಯಾಗಿ ನ್ಯಾಯಪದ್ಧತಿ ಒಂದು ಕಾಲದಲ್ಲಿ ಕುಲ ಪಂಚಾಯ್ತಿಯನ್ನು ಬಿಟ್ಟು ಹೊರಗಡೆ ಹೋಗುತ್ತಿರಲಿಲ್ಲ. ಎಷ್ಟೇ ಕಷ್ಟಗಳಿದ್ದರೂ ಸಹ ತಮ್ಮ ತಮ್ಮಲ್ಲಿಯೇ ಬಗೆಹರಿಸಿಕೊಳ್ಳುತ್ತಿದ್ದರು. ಆದರೆ ಇಂದೆ ಕಾಲ ಬದಲಾದಂತೆಲ್ಲಾ ಆಧುನಿಕತೆಯ ಪ್ರಭಾವದಿಂದ ಮತ್ತು ಇಂದಿನ ಶಿಕ್ಷಣ ಕಲಿತ ಯುವಕ ಯುವತಿಯರು ಹಳೆಯ ಪದ್ಧತಿಗೆ ಮಾನ್ಯತೆ ಕೊಡುತ್ತಿಲ್ಲ. ಹಾಗೆ ಇಂದು ಸರ್ಕಾರದ ಆರಕ್ಷ ಠಾಣೆಗಳು ಬಂದಿವೆ. ಹಾಗೆ ಕೋರ್ಟ್ ಕಛೇರಿಗಳಿರುವುದರಿಂದ ಕುಲಪಂಚಾಯ್ತಿಗೆ ಮಾನ್ಯತೆ ಕೊಡದೆ ಸಣ್ಣ ಪುಟ್ಟ ಜಗಳಗಳಾದ್ರು ಆರಕ್ಷಕಠಾಣೆ ಕೋರ್ಟು ಕಛೇರಿಗಳಿಗೆ ಹೋಗುತ್ತಾರೆ. ಸಾವಿರಾರು ಗಟ್ಟಲೆ ಹಣ ಖರ್ಚುಮಾಡಿ ಇರೊಬರ ಆಸ್ತಿ ಪಾಸ್ತಿಗಳನ್ನೆಲ್ಲಾ ಮಾರಿಕೊಂಡು ತುತ್ತು ಅನ್ನಕ್ಕಾಗಿ ಪರದಾಡುವ ಸ್ಥಿತಿಯನ್ನು ಕೆಲವರು ತಲುಪಿದ್ದಾರೆ. ಹಾಗಾಗಿ ಕಟ್ಟೇಮನೆ ನ್ಯಾಯಪಂಚಾಯ್ತಿಗಳಿಗೆ ಇಂದು ಮಾನ್ಯತೆ ಕೊಟ್ಟಿಲ್ಲ. ಇಲ್ಲಿನ ವಿವರಗಳನ್ನು ನೋಡಿದರೆ ಸಾಮಾಜಿಕ ಪಲ್ಲಟದ ಅನೇಕ ಸೂಕ್ಷ್ಮಗಳನ್ನು ಗುರುತಿಸಲಿಕ್ಕೆ ಸಾಧ್ಯವಿದೆ. ಮುಖ್ಯಾಗಿ ಸಮುದಾಯ ನಿಷ್ಠ ಆಚರಣಾತ್ಮಕ ನೆಲೆಗಳು ಸಮೂಹ ನಿಷ್ಠ, ಗ್ರಾಮನಿಷ್ಠ ಆಚರಣಾ ಪರಂಪರೆಗಳಾಗಿ ಪರಿವರ್ತನೆ ಆಗುತ್ತಿರುವುದನ್ನು ಇಲ್ಲಿ ಗಮನಿಸಲು ಸಾಧ್ಯವಿದೆ. ಇಲ್ಲಿ ಬುಡಕಟ್ಟಿನ ಚಹರೆ ಕಳೆದು, ಕೆಳ ಸಮುದಾಯಗಳ ಚಹರೆಯಾಗಿ ಪರಿವರ್ತನೆ ಆಗುತ್ತಿರುವ ಸೂಕ್ಷ್ಮಗಳನ್ನು ಇಲ್ಲಿ ಗುರುತಿಸಬಹುದಾಗಿದೆ. ಅಂತೆಯೇ ಜಾತಿಯ ಒಳಗೇ ಸೃಷ್ಟಿಯಾಗುತ್ತಿರುವ ವರ್ಗ ಪ್ರಜ್ಞೆಯ ಅಂತರವನ್ನು ಇಲ್ಲಿ ಗ್ರಹಿಸಲಿಕ್ಕೆ ಸಾಧ್ಯವಿದೆ.

ಮ್ಯಾಸಬೇಡರು ಮತ್ತು ಇತರೆ ಸಮುದಾಯಗಳೊಂದಿಗೆ ಸಂಬಂಧ

ಪ್ರಸ್ತುತ ಸಂದರ್ಭದಲ್ಲಿ ಮ್ಯಾಸಬೇಡರು. ಸಂಸ್ಕೃತೀಕರಣ, ನಗರೀಕರಣ, ಹಾಗೂ ಆಧುನೀಕರಣ ಪ್ರಭಾವದಿಂದಾಗಿ ಬದಲಾಗುತ್ತಿದ್ದಾರೆ. ಹಿಂದಿನ ಕಾಲಕ್ಕೆ ಹೋಲಿಸಿಕೊಂಡರೆ ಸುಧಾರಿಸಿರುವ ಲಕ್ಷಣಗಳು ಕಂಡು ಬರುತ್ತವೆ. ಯಾಕೆಂದರೆ ಹಿಂದಿನ ಕಾಲದಲ್ಲಿ ಕಾಡುಗೊಲ್ಲರಂತೆ ಇವರು ಕೂಡ ತಮ್ಮ ಹಟ್ಟಿಗಳ

ಸುತ್ತಲೂ ಮುಳ್ಳು ಬೇಲಿಯನ್ನು ಹಾಕಿಕೊಂಡು ವಾಸಿಸುತ್ತಿದ್ದರು. ಮತ್ತು ಯಾವುದೇ ಸಾಂಸ್ಕೃತಿಕ ಹಬ್ಬಗಳು, ಊರುದೇವತೆ, ಗ್ರಾಮದೇವರಂತಹ ಹಬ್ಬಗಳು ಮಾಡುವಂತಹ ಸಂದರ್ಭಗಳಲ್ಲಿ ಒಂದು ವಾರಗಟ್ಟಲೇ ಯಾರು ತಮ್ಮ ಹಟ್ಟಿಯೊಳಗೆ ಪ್ರವೇಶಿಸುವಂತಿರಲಿಲ್ಲ. ಆದರೆ ಈಗೀಗ ಈ ಸಾಂಸ್ಕೃತಿ ಹಬ್ಬಗಳನ್ನು ಎಲ್ಲಾ ಸಮುದಾಯಗಳೊಂದಿಗೆ ಬೆರೆತು ಮಾಡುತ್ತಾರೆ. ಇತ್ತೀಚಿನ ದಿನಗಳಲ್ಲಿ ಆಧುನಿಕ ಶಿಕ್ಷಣದ ಪ್ರಭಾವದಿಂದಾಗಿ ಯುವಕ ಯುವತಿಯರು ಬಹುತೇಕ ಉದ್ಯೋಗಗಳನ್ನು ಅರಸಿ ನಗರ ಪಟ್ಟಣದಂತ ಪ್ರದೇಶಗಳಿಗೆ ಹೋಗುತ್ತಿರುವುದು ಕಂಡು ಬರುತ್ತಿದೆ. ಈ ಸಮುದಾಯದ ಉದ್ಯೋಗಸ್ಥ ಕುಟುಂಬಗಳು ಉದ್ಯೋಗವನ್ನು ಪಡೆದು ನಗರಗಳತ್ತ ತಮ್ಮ ಒಲವನ್ನು ಚಾಚುತ್ತಿದ್ದಾರೆ. ಕೆಲವರು ನಗರಗಳಲ್ಲಿ ಮನೆ, ಮಕ್ಕಳು, ವಿದ್ಯಾಭ್ಯಾಸ ಮಾಡಿಕೊಂಡು ನಗರಗಳಲ್ಲೇ ವಾಸಿಸುತ್ತಿರುವುದು ಪ್ರಮುಖವಾಗಿ ಕಂಡು ಬರುತ್ತಿದೆ. ಇಂತಹ ಪ್ರದೇಶಗಳಲ್ಲಿ ವಾಸಿಸುವ ಈ ಸಮುದಾಯದವರು ಅವರವರ ಪಾಡಿಗೆ ದುಡಿಮೆಯತ್ತ ಕೇಂದ್ರೀಕರಿಸುತ್ತಿದ್ದಾರೆ ವಿನಃ ಇತರೆ ಸಮುದಾಯಗಳೊಂದಿಗೆ ಹೆಚ್ಚಿನ ಸಂಬಂಧಗಳಿರುವುದಿಲ್ಲ. ಅದು ಇದ್ದರೂ ಸಹ ಅಷ್ಟಕಷ್ಟೇ. ಆದರೆ ಹಳ್ಳಿಗಳಲ್ಲಿ ಅಥವಾ ಹಟ್ಟಿಗಳಲ್ಲಿನ ಮ್ಯಾಸಬೇಡರು ಸದ್ಯ ಇಂತಹ ಆತಂಕಗಳಿಂದ ಮುಕ್ತರಾಗಿದ್ದಾರೆ. ಗ್ರಾಮ ಜೀವನದ ಎಲ್ಲ ಮುಖ್ಯ ಸಂದರ್ಭಗಳಲ್ಲಿ ಎಲ್ಲ ಸಮುದಾಯಗಳಲ್ಲಿ ಅವರ ಪಾಲುದಾರಿಕೆ ಇದ್ದೇ ಇರುತ್ತದೆ. ಮುಖ್ಯವಾಗಿ ಲಿಂಗಾಯಿತರು, ಕುರುಬರು, ಕಾಡುಗೊಲ್ಲರು, ಲಂಬಾಣಿಗರು, ಮುಸ್ಲಿಂಮ್ಮರು, ಹರಿಜನರು, ಮಡಿವಾಳ ಇನ್ನೂ ಮುಂತಾದ ಸಮುದಾಯಗಳೊಂದಿಗೆ ಮ್ಯಾಸಬೇಡರು ಅತ್ಯಂತ ಭಾವನಾತ್ಮಕ ಸಂಬಂಧಗಳಿವೆ, ಇಲ್ಲೆಲ್ಲಾ ರಾಷ್ಟ್ರ ರಾಜ್ಯಗಳ ರಾಜಕಾರಣ, ದೇವರು ದಿಂಡರುಗಳ ಕುರಿತಾದ ಸಂವಾದ ಎಷ್ಟೋಸಲ ಅಗ್ಗದ ತಮಾಷೆಯ ನೆಲೆಯಲ್ಲಿ ನಡೆದರೂ ಅದರಿಂದ ಈ ಸಮುದಾಯಗಳ ನಡುವಿನ ಬಾಂಧವ್ಯ ಕೆಡುವುದಿಲ್ಲ ಏನಾದರೂ ತಪ್ಪುಗಳು ನಡೆದರೆ ಅಥವಾ ಆ ತಪ್ಪಿತಸ್ಥ ಮತ್ತು ಆತನ ಕುಟುಂಬಕಷ್ಟೇ ಸೀಮಿತವಾಗಿ ಬಿಡುತ್ತವೆ. ಈ ವಿವರಗಳ ಜೊತೆಗೆ ಮ್ಯಾಸಬೇಡರು ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳ ನೆಲೆಯನ್ನು ಗುರುತಿಸುವಲ್ಲಿ ಸಹಾಯಕವಾಗುವ ಅಂಶವೆಂದರೆ, ಮ್ಯಾಸಬೇಡರು ಪೂರ್ವ ಶ್ರಮದ ಸಂಸ್ಕೃತಿಯ ನಿಚ್ಚಳವಾದ ಜೀವಂತಿಕೆ ಶೂದ್ರ ಸಮುದಾಯಗಳೊಂದಿಗಿನ ಒಡನಾಟ, ಗೊಲ್ಲ, ಲಿಂಗಾಯಿತರು, ಕುರುಬರು, ಹರಿಜನರು, ಲಂಬಾಣಿಗರು, ಪಿಂಜಾರರು, ಮುಸ್ಲಿಂಮ್ಮರು ಮುಂತಾದವರೊಡನೆ ಮ್ಯಾಸಬೇಡರ ಸಂಬಂಧ ಎಷ್ಟು ಆಪ್ತವಾದುದೆಂದರೆ ಇವತ್ತಿಗೂ ಇವರ ನಡುವೆ ಬೀಗರು, ಅಣ್ಣ-ತಮ್ಮಂದಿರು, ಚಿಕ್ಕಪ್ಪ-ದೊಡ್ಡಪ್ಪ, ಮಾವ-ಅಳಿಯ, ಅತ್ತೆ-ಸೊಸೆ, ಅಕ್ಕ-ತಂಗಿ ರೀತಿಯಲ್ಲಿ ಭಾವನಾತ್ಮಕ ನಂಬಿಕೆ ಇದೆ. ಈ ವರೆಗೆ ಎಲ್ಲಿ ಕೋಮುಗಲಭೆಗಳು ಹೆಚ್ಚಾಗಿ ನಡೆದಿರುವುದು ಕಂಡು ಬಂದಿಲ್ಲ. ನಡೆದರೂ ಎಲ್ಲೋ ಅಪರೂಪವೆಂದು ಹೇಳಬಹುದು. ಆದರೆ ನಗರಗಳಲ್ಲಿರುವವರಿಗೆ ಆಧುನಿಕತೆಯ ವೇಗದ ಅರಿವಾಗುತ್ತದೆ ಎನ್ನುವುದು ಬಿಟ್ಟರೆ ಅಲ್ಲಿನ ಸ್ಥಿತಿಗತಿಗೆ ಅಲ್ಲಿನ ಜೀವನಕ್ಕೆ ಹೊಂದಿಕೊಳ್ಳುವುದು ತುಂಬಾ ಕಷ್ಟವಾಗುತ್ತದೆ. ಏಕೆಂದರೆ ಕೊಳ್ಳುಬಾಕ ಸಂಸ್ಕೃತಿಯಿಂದ ಆರ್ಥಿಕ

ಅಸಮಾನತೆ ಹೆಚ್ಚಾಗುತ್ತದೆ. ಬದುಕಿನ ನಿರ್ವಹಣೆಯ ವೆಚ್ಚ ದುಡಿಮೆಯ ವೆಚ್ಚಕ್ಕಿಂತ ಹೆಚ್ಚಾಗಿದೆ. ಇದು ನಗರೀಕರಣ ಉಂಟುಮಾಡಿದ ಬಹುದೊಡ್ಡ ಕಂದಕವಾಗಿದೆ. ಹಾಗಾಗಿ ಹಟ್ಟಿಯ ಅಥವಾ ಹಳ್ಳಿಯ ಜೀವನವೇ 'ಲೇಸು' ಎನಿಸುತ್ತದೆ ಎನ್ನುತ್ತಿದ್ದಾರೆ. ನಗರದಲ್ಲಿರುವವರು.

ಹಟ್ಟಿಗಳಲ್ಲಿರುವ ಮ್ಯಾಸಬೇಡರು ಯಾವುದೇ ಧಾರ್ಮಿಕ ಕಾರ್ಯಗಳಲ್ಲಿ ತೊಡಗಿಸಿಕೊಂಡಾಗ ಪರಸ್ಪರ ಊರಿನಲ್ಲಿರುವ ಎಲ್ಲಾ ಸಮುದಾಯಗಳೊಂದಿಗೆ ಬೆರೆತು ಮಾಡುತ್ತಿದ್ದಾರೆ. ಅದರಲ್ಲಿ ಗ್ರಾಮದೇವತೆಗಳನ್ನು ಮಾಡುವ ಸಂದರ್ಭದಲ್ಲಿ ಎಲ್ಲಾರು ಒಟ್ಟಿಗೆ ಕೂಡಿ ಅವರವರು ಕೆಲಸಗಳನ್ನು ಹಂಚಿಕೊಂಡು ಪೂರೈಸುತ್ತಾರೆ. ಮದುವೆಯಂತಹ ಸಂದರ್ಭಗಳಲ್ಲಿ ಆಯಾ ಊರಿನ ಪ್ರತಿಯೊಂದು ಸಮುದಾಯವು ಕಡ್ಡಾಯವಾಗಿ ಭಾಗವಹಿಸುತ್ತದೆ. ಹಾಗೆ ಅಡಿಗೆ ಮಾಡಲು ಬಹುತೇಕ ಜನರು ಹೊರಗಡೆಯಿಂದ ಅಡಿಗೆ ಮಾಡುವವರನ್ನು ಕರೆಸುವುದರಿಂದ ಬೇದ ಭಾವ ಇಲ್ಲದೆ ಎಲ್ಲ ಸಮುದಾಯದವರು ಊಟಮಾಡುತ್ತಾರೆ. ಆದರೆ ಮನೆಯೊಳಗೆ ಪ್ರವೇಶ ಹರಿಜನರನ್ನು ಬಿಟ್ಟರೆ ಎಲ್ಲಾ ಸಮುದಾಯಗಳಿಗೆ ಅವಕಾಶ ಉಂಟು.

ಇವತ್ತಿಗೂ ಮ್ಯಾಸಬೇಡರು ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳು ಸಮಾಧಾನಕರವಾಗಿಲ್ಲದಿರುವುದಕ್ಕೆ ಚಾರಿತ್ರಿಕ ಕಾರಣಗಳಿರುವ ಹಾಗೆಯೇ ಸಮಕಾಲೀನ ಕಾರಣಗಳೂ ಇವೆ. ಮೂಲ ಕಸುಬನ್ನು ಪೂರ್ತಿ ಬಿಡದೆ ಕೃಷಿ ಕೆಲಸಗಳಿಂದ ಹಿಡಿದು, ಗೋಡೆಕಟ್ಟುವ, ಅಡವಿಯಲ್ಲಿ ಮರದ ಅಂಟನ್ನು ತರುವುದು, ಬಡಿಗೇತನ ಕೆಲಸ, ಕಾಡುತಿರುಗಿ ಬೀಡಿ ಎಲೆಯನ್ನು ತಂದು ಕಟ್ಟುವ ಕೆಲಸ, ಕಟ್ಟಿಗೆ ಮಾರುವವ ಕೆಲಸಗಳವರೆಗೂ ಮ್ಯಾಸಬೇಡರು ತಮ್ಮನ್ನು ತೊಡಗಿಸಿಕೊಂಡಿರುವುದನ್ನು ಗಮನಿಸಿದರೆ ಹೊಟ್ಟೆ ಹೊರೆಯುವ ನಿರಂತರ ಹೋರಾಟದಲ್ಲಿರುವುದು ತಿಳಿಯುತ್ತದೆ. ಮ್ಯಾಸಬೇಡರನ್ನು ಪ್ರತಿನಿಧಿಸುವವರಿಲ್ಲದೆ ಸರ್ಕಾರಿ ವಲಯದಲ್ಲಿ ತಮ್ಮನ್ನು ತಾವು ಗುರುತಿಸಿಕೊಳ್ಳಲಾಗದ ಅಸಾಹಯಕತೆ ಅವರಲ್ಲಿ ದಟ್ಟವಾಗಿದೆ. ತಮ್ಮ ವಿಶಿಷ್ಟ ಸಂಸ್ಕೃತಿಯನ್ನು ಉಳಿಸಿಕೊಂಡೆ ಎಲ್ಲರಂತೆ ಮನುಷ್ಯರಾಗಿ ಬದುಕಬೇಕೆಂಬ ಹಂಬಲ ಅವರಲ್ಲಿದೆ. ಎಲ್ಲವನ್ನು ಒಳಗೊಳ್ಳುವ ಸಂಸ್ಕೃತಿಯ ಪ್ರತಿನಿಧಿಗಳಾಗಿರುವ ಮ್ಯಾಸಬೇಡರು ಮುಖ್ಯವಾಗಿ ಉತ್ತಮ ಶಿಕ್ಷಣದತ್ತ ಒಲವು ತೋರಬೇಕಾಗಿದೆ. ಆ ಮೂಲಕ ಸಂಸ್ಕೃತಿಯ ವಿಶಿಷ್ಟ ವಿವರಗಳನ್ನು ಸಾರ್ವಜನಿಕವಾಗಿ ಮೂಡಿಸುತ್ತಾ ತಮ್ಮ ಸಂಸ್ಕೃತಿಯ ಹಿರಿಮೆಯನ್ನು ಅಜ್ಞಾತ ಜಗತ್ತಿಗೆ ಸಾರಬೇಕಾಗಿದೆ. ಈ ಕೆಲಸವಾಗಬೇಕಾದರೆ ಎಲ್ಲ ಸಮುದಾಯಗಳ ಸಹಕಾರ ಅತ್ಯಗತ್ಯ.

ಅಡಿಟಿಪ್ಪಣಿ

೧. ಕೃಷ್ಣ ಮೂರ್ತಿಹನೂರು, ಮ್ಯಾಸಬೇಡ ಸಂಸ್ಕೃತಿ, ಪು-೭೫-೯೩, ೧೯೯೩

೨. ಎಸ್.ರಾಜಶೇಖರ್, ಭಾರತೀಯ ಸಮಾಜ, ಪು-೬೪, ೨೦೦೪

೩. ಅದೇ ಕೃತಿ, ಪು-೬೫

೪. ಚಿ.ನ.ಶಂಕರ್‌ರಾವ್, ಭಾರತೀಯ ಸಮಾಜಶಾಸ್ತ್ರ, ಪು-೨೮

೫. ಕರಿಶೆಟ್ಟಿರುದ್ರಪ್ಪ, ಮ್ಯಾಸನಾಯಕರ ಒಂದು ಜನಾಂಗಿಕ ಅಧ್ಯಯನ, ಪು-೩೩, ೧೯೯೫

೬. ಆರ್.ಬಿ.ಕುಮಾರ್, ಮದ್ದೆಕಂಬಾರರು, ಪು-೫೫, ೨೦೦೪

* * *

ಅಧ್ಯಾಯ - ಆರು

ಮ್ಯಾಸಬೇಡರ ಆರ್ಥಿಕ ಕಥನ

ಅಧ್ಯಾಯ - ಆರು

ಮ್ಯಾಸಬೇಡರ ಆರ್ಥಿಕ ಕಥನ


ಮ್ಯಾಸಬೇಡರ ಸಮುದಾಯದ ಮೂಲ ವೃತ್ತಿ ಬೇಟೆ. ಬೇಟೆಯು ಒಂದು ಕಾಲದಲ್ಲಿ ಈ ಸಮುದಾಯಕ್ಕೆ ವರದಾನವಾಗಿತ್ತು. ಆದರೆ ಇಂದು ಸರ್ಕಾರದ ಹಲವು ಕಾಯ್ದೆ ಕಾನೂನುಗಳ ಪ್ರಕಾರ ವರದಾನವಾಗಿದ್ದ ಬೇಟೆಯು ಇಂದು ಶಾಪವಾಗಿದೆ. ಆದರೆ ಬೇಟೆಯ ನಂತರ ಈ ಸಮುದಾಯ ಕೃಷಿಯನ್ನೇ ಅವಲಂಬಿಸಿದೆ. ಶೇ.೬೦ರಷ್ಟು ಜನರು ಕೃಷಿಯನ್ನೇ ನಂಬಿ ಬದುಕುತ್ತಿದ್ದಾರೆ. ಮಳೆಯ ಪ್ರಮಾಣ ಬರುಬರುತ್ತಾ ಕಡಿಮೆಯಾಗ ತೊಡಗಿದೆ. ಹಾಗೆ ಮಳೆಯು ಎಲ್ಲಾ ಪ್ರದೇಶಗಳಲ್ಲಿ ಒಂದೇ ರೀತಿಯಾಗಿ ಬರುವುದಿಲ್ಲ. ಪ್ರಾದೇಶಿಕವಾಗಿ ಹೆಚ್ಚು ಕಡಿಮೆಯಾಗುತ್ತದೆ. ಇತ್ತೀಚಿನ ದಿನ ಮಾನಗಳಲ್ಲಿ ನಾಲ್ಕೈದು ವರ್ಷಗಳಿಂದ ಮಳೆಯ ಪ್ರಮಾಣ ತುಂಬಾ ಕಡಿಮೆಯಾಗಿದೆ. ಈ ಕಾರಣಕ್ಕಾಗಿಯೇ ಜನರ ಪರಿಸ್ಥಿತಿ ಅತಂತ್ರವಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವ ಜನರ ಉಡುಗೆ-ತೊಡುಗೆ, ದೈಹಿಕ ಲಕ್ಷಣಗಳೇ ಅವರ ಆರ್ಥಿಕ ಕಥನವನ್ನು ತಿಳಿಸುತ್ತವೆ. ಕೃಷಿಯಲ್ಲಿ ತಮ್ಮ ಉಪಜೀವನಕ್ಕಾಗಿ ಕೂಲಿಕಾರರಾಗಿ ದುಡಿಯುತ್ತಿದ್ದಾರೆ. ಯಾವುದೇ ರೀತಿಯ ತಾರತಮ್ಯ ಮನೋಭಾವನೆ ಇಲ್ಲದೆ ಊಟಕ್ಕೆ ಮುದ್ದೆ ಚಟ್ನಿ ಸಿಕ್ಕರೆ ಸಾಕು ಅದರಲ್ಲೇ ತೃಪ್ತಿ ಪಡುತ್ತಾರೆ. ಒಂದು ಕಾಲಕ್ಕೆ ಅಲೆಮಾರಿಗಳಾಗಿ ಕಾಡುಮೇಡುಗಳಲ್ಲಿ ಸಿಗುವ ಕಂದ ಮೊಲಗಳನ್ನು ತಿಂದು ಸ್ವಾವಲಂಬಿಗಳಾಗಿ ಬದುಕಿದ್ದರೂ ಪ್ರಸ್ತುತದಲ್ಲಿ ಒಪ್ಪೊತ್ತಿನ ಊಟಕ್ಕೆ ಯೋಚಿಸುವಂತಾಗಿದೆ.

ಜೀವನ ತುಂಬಾ ಕಷ್ಟವೆನಿಸಿದಾಗ ವರ್ಷದಲ್ಲಿ ಕನಿಷ್ಟ ಆರು ತಿಂಗಳು ವಲಸೆ ಹೋಗುತ್ತಾರೆ. ಈ ವಲಸೆಯು ಇಂದು ನಿನ್ನೆಯದಲ್ಲ. ಪ್ರಾಚೀನ ಕಾಲದಿಂದಲೂ ಈ ಸಮುದಾಯವು ಬೇಟೆ ಮತ್ತು ಪಶುಪಾಲನೆ ವೃತ್ತಿಯಲ್ಲಿಯೇ ಹೆಚ್ಚಾಗಿ ತೊಡಗಿಸಿಕೊಂಡಿದ್ದರಿಂದ ಪ್ರದೇಶದಿಂದ ಪ್ರದೇಶಕ್ಕೆ ನೀರು ಮತ್ತು ಆಹಾರಕ್ಕೆ ವಲಸೆ ಹೋಗುವುದು ಸಾಮಾನ್ಯವಾಗಿತ್ತು. ಈ ಒಂದು ಪದ್ಧತಿ ಇಂದೂ ಕೂಡ

ಪರಂಪರಾಗತವಾಗಿ ಮುಂದುವರೆಸಿಕೊಂಡು ಬಂದಿದೆ. ಹೆಚ್ಚಾಗಿ ಕೂಲಿ ಕಾರ್ಮಿಕರಾಗಿ, ಕೈಗಾರಿಕೆಗಳಲ್ಲಿ, ರೈಸ್‌ಮಿಲ್‌ಗಳಲ್ಲಿ, ಹತ್ತಿಮಿಲ್‌ಗಳಲ್ಲಿ ನೀರಾವರಿ ಸೌಕರ್ಯ ಇರುವ ಪ್ರದೇಶಗಳಿಗೆ ಕಬ್ಬು ಕಟಾವು ಮಾಡಲು ಹೋಗುತ್ತಾರೆಯ ಇತ್ತೀಚೆಗೆ ಪ್ರತಿಯೊಬ್ಬರಿಗೆ ಚಿರಪರಿಚಿತವಾದ ಕಾರ್ಮಿಕರಿಗೆ ಆಕರ್ಷಿಸುವ ತಾಣವೆಂದೇ ಪ್ರಸಿದ್ಧಿ ಪಡೆದಿರುವ ಸಂಡೂರಿನ ಗಣಿಗಾರಿಕೆಗೆ ಸುಮಾರು ಜನರು ಬಂದು ದುಡಿಯುತ್ತಿದ್ದಾರೆ. ನಗರ ಪ್ರದೇಶಗಳಂತಹ ಮಾರುಕಟ್ಟೆಯಲ್ಲಿ ಬಹುಪಾಲು ಮಂದಿ ಹಮಾಲರಾಗಿ ದುಡಿಯುತ್ತಿದ್ದಾರೆ. ಇಂತಹ ಜೀವನವನ್ನು ನಡೆಸುತ್ತಿರುವ ಈ ಸಮುದಾಯದ ಕೆಲವು ಜನರ ನೇರ ಸಂದರ್ಶನದ ಕಥನ ಹೀಗಿದೆ.

೬.೧.ಕಾರ್ಮಿಕರ ಸಂದರ್ಶನ

ಮ್ಯಾಸಬೇಡರ ಸಮುದಾಯದ ಕಾರ್ಮಿಕನಾದ ಗೋವಿಂದಪ್ಪ ಹೇಳುವ ಅನುಭವ ಈ ರೀತಿಯಾಗಿದೆ:



ಹೆಸರು - ಗೋವಿಂದಪ್ಪ

ಊರು - ದೇವರಹಟ್ಟಿ

ವಯಸ್ಸು - ೩೮

ವೃತ್ತಿ - ಕೂಲಿ

ಅಂಚೆ - ಅಪ್ಪಯ್ಯನಹಳ್ಳಿ

ತಾಲೂಕು - ಕೂಡ್ಲಿಗಿ

ಜಿಲ್ಲೆ - ಬಳ್ಳಾರಿ

ನೋಡ್ರಿ ನಮ್ ಜೀವನವೇ ಇಂಗೆ. ಯಾವಾಗ್ಲೊ ದುಡಿಯ್ ಬೇಕು ತಂದು ತಿನ್‌ಬೇಕು. ದುಡಿಯಲಿಲ್ಲಂದ್ರೆ ಉಪವಾಸವಿರಬೇಕು. ನಮ್‌ಗೇನು ಹೊಲಗಿಲ ಏನು ಇಲ್ಲ ಆರು ತಿಂಗಳು ಕಾಲ ಊರಲ್ಲಿದ್ರೆ ಆರು ತಿಂಗಳು ಕಾಲ ದುಡಿಯಲಿಕ್ಕೆ ಹೋಗ್‌ಬೇಕು. ನಾವು ಗಂಡ ಹೆಂಡತಿ ಇಬ್ರು ಮಕ್ಕಳಿದ್ದಾರೆ ಒಟ್ಟು ನಾಲ್ಕು ಜನ ಇದ್ದೀವಿ. ಮನೆ ಗುಡಿಸಲು ಮನೆ. ಅದು ಬೇಸಿಗೆಯಲ್ಲಿ ಬಹಳ ಭಯ. ಯಾಕಂದ್ರೆ ಬೆಂಕಿದೇ ಭಯ. ಯಾರಾದ್ರೂ ಮನೆ ಗಿನೆ ಮಾಡ್ಸಿ ಕೊಡ್ತಾರಂದ್ರೆ ಯಾರು ಮಾಡಿಕೊಡಂಗಿಲ್ಲ ಅದಕ್ಕೆ ಐದು ಸಾವಿರ ಕೇಳ್ತಾರೆ. ಅದು ಬರೇ ಇದ್ದಂತವರಿಗೆ ಅವರವರ ಸಂಬಂಧಿಗಳಿಗೆ ಮಾಡಿಸ್ತಾರೆ. ನಾವು ಬರೀ ಓಟು ಆಕ್ಷಿಕ್ಕೆ ಬೇಕು. ಆಗ ಮಾತ್ರ ಗೆಲ್ಲುವ ತನಕ ಮಾಡ್ಸಿಕೊಡ್ತೀವಿ ಅಂತಾರೆ. ಗೆದ್ ಮೇಲೆ ದುಡ್ಡು ಕೊಡಬೇಕಪ್ಪ, ಪುಗುಸಟ್ಟೆ ಯಾರು ಮಾಡಿಕೊಡ್ತಾರೆ ಅಂತಾರೆ. ಹಿಂಗಿದ್ರೆ ಹೇಗೆ ಬದುಕ್ ಬೇಕು ನಮ್ಮಂತವರು ನೀವೇ ಹೇಳ್ರಿ, ಅದಕ್ಕೆ ಯಾರ್ದು ಕಿರಿಕಿರಿ ಬೇಡ ಅಂತೇಳಿ ತಾಂಡದವರ ಜೊತೆಗೆ ಹೋಗ್ತೀವಿ-ಹೋಗಿ ಒಂದೇ ಸಲ ದುಡಕಂಡು ಬಂದು ಕಾಳು-ಕಡಿ, ಬಟ್ಟೆ-ಬರೆ ಮಾಡಿಕೊಂಡು ಮಕ್ಕಳಿಗೆ ಶಲೆಗೆ ಕಳಸ್ತೀವಿ. ನಾವು ಶ್ರೀರಂಗಪಟ್ಟಣಕಡೆಗೆ, ಚಂದ್ರಪಟ್ಟಣ,

ಮೈಸೂರು ಕಡೆಗೆ ಹೆಚ್ಚು ಹೊಗ್ತೀವಿ. ದಿನಕ್ಕೆ ಇನ್ನೂರ ಐವತ್ತರಿಂದ ಮುನ್ನೂರರ ಮಟ್ಟ ದುಡಿತೀವಿ. ಅಲ್ಲಿ ಒಂದೊಂದು ಗುಡಿಸ್ಲು ಹಾಕಿಕೊಡ್ತಾರೆ. ಗಂಡುಮಕ್ಳು ಅಂತವರು ಮದುವೆ ಆಗದೇ ಇರುವವರು ನಾಲ್ಕೈದು ಜನ ಒಂದು ಗುಡಿಸ್ಲನಲ್ಲಿ ಇರ್ತಾರೆ. ಗಂಡ-ಹೆಂಡ್ತಿಯರಿದ್ರೆ ಒಬ್ಬೊಬ್ಬರಿಗೆ ಒಂದೊಂದು ಕೊಡ್ತಾರೆ. ಅದು ಮಳೆ-ಗಿಳೆ ಬಂದ್ರೆ ಎಲ್ಲ ನೆಂದು ಹೊಗ್ತೈತಿ. ಅದ್ರಮೇಲೆ ಸೋಪರ್ ಚೀಲ ಹೊಲ್ದಿರ್ತಾರಲ್ಲ ಅದನ್ನು ಹಾಕಿಕೊಡ್ತಾರೆ. ಅದ್ರಲ್ಲೇ ಇರಬೇಕು. ದುಡ್ಡು-ಗಿಡ್ಡು ಎಲ್ಲ ನಮ್ಗೆ ಎಷ್ಟುಬೇಕೋ ಅಷ್ಟೇ ಇಸ್ಕಂತೀವಿ ಉಳಿದಿದ್ದೆಲ್ಲ ಬರುವಾಗ ಇಸ್ಕಂಡು ಬರ್ತೀವಿ. ನೋಡ್ರಿ ನಾವೆಲ್ಲ ತಿಂದು ಮಜಮಾಡಿ ಊಟ-ಗೀಟ ಎಲ್ಲ ಹೋಗಿ ಒಬ್ಬೊಬ್ರು ಹನ್ನೆರಡು ಹದಿಮೂರು ಸಾವಿರ ದುಡಿತೀವಿ. ನಮ್ದೇನು ಜಾಸ್ತಿ ಖರ್ಚು ಇಲ್ಲ. ತಾಂಡದವ್ರು ಆದ್ರೆ ಬಹಾಳ ಮಜಾಮಾಡ್ತಾರೆ. ನಾವೇನು ಅಂಗಿಲ್ಲ. ಏನೋ ವಾರಕ್ಕೆ ಒಂದು ಸಲ ಮಟನ್-ಗಿಟನ್ ತಂದು ಮಾಡಿಕೊಂತೀವಿ. ನನಗೇನು ಕುಡಿಯೋ ಅಭ್ಯಾಸ ಇಲ್ಲ. ಹಾಗಾಗಿ ಇಬ್ರೂ ಸೇರಿದ್ರೆ ೨೫ ಸಾವಿರ ತರ್ತೀವಿ. ಬಂದು ಕಾಳು-ಕಡಿ ಎಲ್ಲಾ ಮನೆಗೆ ಏನೇನು ಬೇಕು ಅದೆಲ್ಲ ತಗಂತೀವಿ. ಮಕ್ಕಳನ್ನು ಬೇರೆ ನಮ್ ಅಕ್ಕನ ಮನೆಯಲ್ಲಿ ಬಿಟ್ಹೋಗಿರ್ತೀವಿ. ಅವರಿಗೆ ಅಷ್ಟು ಇಷ್ಟು ಬೇಕೆಂದ್ರೆ ನಮ್ ಅಕ್ಕನ ಕೈಗೆ ಕೊಟ್ಟಿರ್ತೀವಿ. ಅವ್ರು ಊಟಕ್ಕೆ ಕಾಳು ಸಹ ಹಾಕಿ ಹೋಗಿರ್ತೀವಿ. ಹಿಂಗೆ ಮಾಡಿ ಅವ್ರಿಗೆ ಹೆಂಗೋ ಶಾಲೆಗೆ ಕಸ್ತೀವಿ ನೋಡ್ರಿ. ಸುಗ್ಗಿ-ಗಿಗ್ಗಿ ಬಂದ್ರೆ ಇಲ್ಲೇ ಸಿಗ್ತಾವೆ. ಅದು ಇದು ಅಂತ ಕೆಲ್ಸ ಸಿಗ್ತೈತಿ ಬೇಸಿಗೆಗೆ ಮಾತ್ರ ಬೇರೆ ಕಡೆಗೆ ಹೋಗ್ತೀವಿ. ಹಿಂಗೆ ದುಡಿಯಬೇಕು. ತಿನ್‌ಬೇಕು ನೋಡ್ರಿ ನಮ್ ಜೀವನ ಹಿಂಗೈತೆ. ಅದಕ್ಕೆ ಅಷ್ಟು ಇಷ್ಟು ಕೂಡಿಹಾಕಿಕೊಂಡು ಮನೆ ಕಟ್ಟಿಕೊಳ್‌ಬೇಕಂತ ಮಾಡಿವಿ. ನಮಗೆ ರೇಷನ್ ಕಾರ್ಡು ಇದೆ. ಎರಡು ತಿಂಗಳಿಗೊಮ್ಮೆ ಅಕ್ಕಿ, ಸಿಮೆಣ್ಣೆ ತಗಂತೀವಿ. ಇಷ್ಟೇ ನಮ್ ಜೀವನ ನೋಡ್ರಿ ನಾವು ಹೊಟ್ಟೆಗೆ ಕೂಡ ಸರಿಯಾಗಿ ಮಾಡಿಕೊಂಡು ತಿನ್ನಲ್ಲ ಅದೇ ಮೆಣಸಿಕಾಯಿ ಚಟ್ನಿ, ಅನ್ನ ಮುದ್ದೆ ಇಷ್ಟೇ ಇದ್ರೆ ಸಾಕು. ಜೀವನ ನಡೆಸ್ತೀವಿ. ಎಷ್ಟೇಳಿದ್ರೂ ಇನ್ನೂ ಹೇಳಿಕಂತ ಹೋದ್ರೆ ಒಂದು ದಿನ ಹೇಳಿದ್ರು ಮುಗಿಯಲ್ಲ ಅಷ್ಟಿದೆ. ನೋಡ್ರಿ ಅದಕ್ಕೆ ಸಾಕು ಇಷ್ಟು.

ಗೋವಿಂದಪ್ಪನ ಮಾತುಗಳನ್ನು ಗಮನಿಸಿದರೆ ಇವು ಕೇವಲ ಮ್ಯಾಸಬೇಡರ ಸಮುದಾಯ ಒಂದರ ಧ್ವನಿಯಂತಿರದೆ ಒಟ್ಟು ಕೆಳ ಸಮುದಾಯದ ಧ್ವನಿಯಂತೆ ಗೋಚರಿಸುತ್ತದೆ. ಬೇಡರು ಕೂಲಿಗಾಗಿ ವಲಸೆ ಹೋಗುತ್ತಿರುವುದು ತಮ್ಮಂತಹದ್ದೇ ಬುಡಕಟ್ಟು ಲಂಬಾಣಿ ಸಮುದಾಯದೊಂದಿಗೆ ಬೆಳೆಯುತ್ತಿರುವುದನ್ನು ಕಾಣಬಹುದು. ಈ ಮಾತುಗಳಲ್ಲಿ ಈ ಹೊತ್ತಿನ ದಾರುಣ ಆರ್ಥಿಕ ವ್ಯವಸ್ಥೆಯ ಕರಾಳ ಮುಖಗಳು ಕಾಣಸುತ್ತವೆ. ಆಧುನಿಕ ಮಾರುಕಟ್ಟೆ ಪ್ರಣಿತ ಬದುಕಲ್ಲಿ ಗೋವಿಂದಪ್ಪನಂತವರು ಅನೇಕ ಮಂದಿ ಇಂದು ದುಡಿಮೆಗಾಗಿ ನಗರ ಪ್ರದೇಶಗಳತ್ತ, ದಕ್ಷಿಣ ಕನ್ನಡದ ಕಾಫಿ ಸೀಮೆಯತ್ತ ಚಲಿಸುತ್ತಿದ್ದಾರೆ. ಅಲ್ಲಿ ದಾರುಣವಾಗಿ ಬದುಕುತ್ತಿರುವುದು ಮಾತುಗಳಲ್ಲೇ ತಿಳಿಯುತ್ತದೆ. ಈ ಮಾತುಗಳು ಪ್ರತೀ ಪ್ರಭುತ್ವದ ದೌರ್ಬಲ್ಯವನ್ನು ಬಿಂಬಿಸುತ್ತಿವೆ.

ಶೇಂಗ ಮಿಲ್‌ನಲ್ಲಿ ಕೆಲಸ ಮಾಡುತ್ತಿರುವ ಚಳ್ಳಕೆರೆ ಬಂಗಾರಪ್ಪ, ತಮ್ಮ ಬದುಕಿನ ಅನುಭವ ಹೇಳುವ ರೀತಿ ಹೀಗಿದೆ:



ಹೆಸರು - ಬಂಗಾರಪ್ಪ

ಊರು - ಚೌಳ್‌ಕೆರೆ

ವಯಸ್ಸು - ೩೮ ವರ್ಷ

ವೃತ್ತಿ - ಹಮಾಲಿ ಕೆಲಸ

ಅಂಚೆ - ಚೌಳ್‌ಕೆರೆ

ತಾಲೂಕು - ಚಳ್ಳಕೆರೆ

ಜಿಲ್ಲೆ - ಚಿತ್ರದುರ್ಗ

"ನೋಡ್ರಿ ನಾನು ಹಮಾಲಿ ಕೆಲ್ಸ್ ಮಾಡ್ಲಿಕ್ಕೆ ಶುರುವು ಮಾಡಿದ್ದು ಹನ್ನೆರಡು ಅಥವಾ ಹದಿಮೂರು ವರ್ಷದವನಿದ್ದೆ. ಆವಾಗಿನಿಂದ ಈ ಕೆಲ್ಸ ಮಾಡ್ಕೊಂಡು ಬಂದೀನಿ. ನಮ್ಮಪ್ಪ ಕೂಡ ಅದೇ ಕೆಲಸ ಮಾಡ್ತಿದ್ದ ನಮ್‌ಗೆ ಯಾವುದೇ ಹೊಲಗಿಲ ಇಲ್ಲ. ಹಮಾಲಿ ಕೆಲ್ಸ ಮಾಡ್ಬೇಕು. ಜೀವನ ನಡೆಸಬೇಕು ನೋಡ್ರಿ ನಾನು ಮೊದ್ಲು ಬಸ್ಸಿನಲ್ಲಿ ಸಣ್ಣ ಪುಟ್ಟ ಲಗೇಜ್ ಇಳಿಸಿಕೊಂಡು ಶುರುವು ಮಾಡಿದೆ. ನಂತರ ಕಾಯಂ ಆಗಿ ಒಂದು ಶೇಂಗ ಮಿಲ್‌ನಲ್ಲಿ ಪರ್ಮಿನೆಂಟಾಗಿ ಹೊಂದಿಕೊಂಡು ಹೋಗ್ತಿದೀವಿ. ಈ ಮಿಲ್‌ನಲ್ಲಿ ನಾವು ಪರ್ಮಿನೆಂಟಾಗಿ ಹೋಗಿರುವುದರಿಂದ ಬೇರೆ ಕಡೆ ಎಲ್ಲಿ ಹೋಗಲ್ಲ. ಯಾವಾಗ್ಲೂ ಕೆಲ್ಸ ಇದ್ದೇ ಇರ್ತದೆ. ಬೇಸಿಗೆ ಮುಂಗಾರಿ ಅನ್ನದೇ ಒಂದೇ ಕಡೆ ಇರ್ತೀವಿ. ಶೇಂಗ ಬೀಜ ಲೋಡಿಂಗ್ ಮಾಡುವುದು ಶೇಂಗ ಲೋಡಿಂಗ್ ಅನ್ ಲೋಡಿಂಗ್ ಇರ್ತದೆ. ಸುಗ್ಗಿಯಲ್ಲಿ ಸ್ವಲ್ಪ ಜಾಸ್ತಿ ಗಿರಾಕಿ ಇರ್ತದೆ. ಆವಾಗಂತೂ ರಾತ್ರಿಯೆಲ್ಲ ನಿದ್ದೆ ಇರಲ್ಲ. ನಮ್ ಸಾಹುಕಾರನವು ಐದು ಗಾಡಿಗಳಿವೆ. ಒಂದು ಗಾಡಿ ಹೋದ್ರೆ ಒಂದು ಇರ್ತದೆ. ನಾವು ದಿನಕ್ಕೆ ಇನ್ನೂರರಿಂದ ಮುನ್ನೂರು ತನಕ ದುಡಿತೀವಿ ಅದ್ರಲ್ಲಿ ಕುಡಿಲಿಕ್ಕೆ ಎಪ್ಪತ್ತು ಎಂಬತ್ತು ಹೋಗ್ತದೆ. ಉಳಿದದ್ದು ಮನೆಗೆ ಕೊಡ್ತೀನಿ. ನಮ್‌ಗೆ ವಾರಕ್ಕೊಮ್ಮೆ ಬಟ್ವಾಡಿ ಮಾಡ್ತಾರೆ. ಯಾವಾಗಾದ್ರು ಅರ್ಜಂಟಿದ್ರೆ ಮಾತ್ರ ಇಸ್ಕೊಂತೀವಿ. ಇಲ್ಲಂದ್ರೆ ಬಟ್ವಾಡಿ ದಿನ ಇಸ್ಕೊಂಡು ವಾರಕ್ಕೊಮ್ಮೆ ಸಂತೆ ಮಾಡಿಕೊಂಡು ಕಾಳುಕಡಿ ತಗಂತೀವಿ. ಕುಡಿಯಲ್ಲಿಲ್ಲಂದ್ರೆ ನಮ್‌ಗೆ ನಿದ್ದೆ ಬರಲ್ಲ. ಕುಡಿಯಲೇ ಬೇಕು. ಮನೆಗೆ ಬಂದಾಗ ನಮ್ ಹೆಣ್ಣುಮಕ್ಳು ಬೈತಾರೆ. ಆದ್ರೆ ಏನ್ ಮಾಡ್ಬೇಕು ಎಷ್ಟು ಬೈದರೂ ಬಿಡಂಗಿಲ್ಲ.


ಮಕ್ಳು ನಾಲ್ಕು ಜನ ಇದ್ದಾರೆಯ ಅವ್ರು ಶಾಲೆಗೆ ಹೋಗ್ತಾರೆ. ನಮ್ಮ ಮನೆಯಲ್ಲಿ ಒಟ್ಟು ೬ ಜನ ಇದ್ದೀವಿ. ನಮ್‌ದು ಇಲ್ಲೇ ಚಳ್ಳಕೆರೆ ಹತ್ತಿರ ಚೌಳ್‌ಕೇರಿ. ಇಲ್ಲೇ ಹಮಾಲಿ ಮಾಡಿಕೊಂಡು ಆಗಿನ ಕಾಲ್ದಾಗ ಜಾಗ ತಗಂಡಿದ್ದೆ ಈಗಾದ್ರೆ ಆಗ್ತಿದ್ದಿಲ್ಲ. ಸರ್ಕಾರದ ಕಡೆಯಿಂದ ಮನೆ ಮಾಡಿಕೊಂಡ್ವಿ ಅವ್ರು ಇಟ್ಟಿಗೆ, ಕಬ್ಬಿಣ ಎಲ್ಲ ತಂದು ಕೊಟ್ಟಿದ್ರು ಜೊತೆಗೆ ನಾನು ಹದಿನೈದು ಸಾವಿರ ಹಾಕಿ ಒಳ್ಳೆಯ ಮನೆ



ಕಟ್ಟಿಕೊಂಡಿವಿ. ಈಗಿನ ಕಾಲ್ದಲ್ಲಿ ಮನೆ ಇದ್ರೆ ಸಾಕು ಹೆಂಗೋ ಬದುಕ್ತೀವಿ. ವಾರಕ್ಕೆ ಎರಡು ಸಾವಿರ ಆಗ್ತದೆ. ಅದ್ರಲ್ಲಿ ಒಂದು ಸಾವಿರ ಮನೆ ಖರ್ಚಿಗೆ ಹೋದ್ರೆ ಒಂದು ಸಾವಿರ ಬ್ಯಾಂಕಿನಲ್ಲಿ ಇಡ್ತೀವಿ. ಯಾಕಂದ್ರೆ ಮಕ್ಳು ಓದುತ್ತಾರೆ. ಅದಕ್ಕೆ ಅವ್ರಿಗೆ ಮುಂದೆ ಹೆಂಗೋ ಹೇಳಕೆ ಆಗಲ್ಲಂತ ಇಟ್ಕೊಂಡೀವಿ ನೋಡ್ರಿ. ನನಗೆ ಈಗ ನಲ್ವತ್ತು ವರ್ಷ. ಹಿಂಗೈತಿ ನೋಡ್ರಿ ನಮ್ ಜೀವನ ಸಾಯುವತನಕ ಬರ್ರಿ ಹಿಂಗೆ ಹಮಾಲಿ ಮಾಡಬೇಕೆಂದ್ರೆ ಬಹಾಳ ಕಷ್ಟ ನೋಡ್ರಿ, ಅದು ಲೋಡಿಂಗ್ ಮಾಡಬೇಕು ಅಂದ್ರೆ ಬಹಳ ಕಷ್ಟ. ಒಂದು ಹಲಿಗೆ ಆಕಿರ್ತಾರೆ ಅದ್ರಮೇಲೆ ಎಪತ್ತು ಎಂಬತ್ತು ಕೇಜಿ ತೂಕ ಇರುವ ಚೀಲ ಹೊತ್ಕೊಂಡು ಹತ್‌ಬೇಕಂದ್ರೆ ಬಹಳ ಕಷ್ಟರಿ. ಏನ್ ಮಾಡಕಾಗಲ್ಲ. ನಮಗೆ ಇದು ಬಿಟ್ರೆ ಗತಿನೇ ಇಲ್ಲ. ಹೊಟ್ಟೆ ಪಾಡಿಗಾಗಿ ಏನಾದ್ರೂ ಮಾಡಬೇಕಲ್ಲ. ಹೆಂಗೋ ದೇವ್ರಿದ್ದಾನೆ ನೋಡ್ರಿ."

ಹೆಚ್ಚಾಗಿ ಕೈಗಾರಿಕಾ ವಲಯವಿರುವ ಚಳ್ಳಕೆರೆ ಭಾಗದಲ್ಲಿ ಬೇಡ ಸಮುದಾಯದವರು ಕಾರ್ಖಾನೆಗಳಲ್ಲಿ ಹಮಾಲಿ ಮತ್ತಿತರ ಕೆಲಸ ಮಾಡುತ್ತಿದ್ದಾರೆ. ಹಮಾಲರಾದ ಬಂಗಾರಪ್ಪ ಅವರ ವಿವರ ನೋಡಿದರೆ ಕನಿಷ್ಠ ಕೂಲಿ, ಅಸಂಘಟಿತ ವಲಯದ ಕಾರ್ಮಿಕರ ಶೋಷಣೆ ಎದ್ದು ಕಾಣುತ್ತದೆ. ತುಂಬಾ ಕಡಿಮೆ ಮಟ್ಟದ ಜೀವನ ವಿಧಾನ ಮನೆಕಟ್ಟಿಕೊಳ್ಳುವ ಕಷ್ಟ ಮಕ್ಕಳನ್ನು ಓದಿಸುವ ಕನಸು ಎಲ್ಲವನ್ನು ತನ್ನ ಹಮಾಲಿ ವೃತ್ತಿಯಿಂದಲೇ ನಿಭಾಯಿಸುವ ತುರ್ತು ಇರುವುದನ್ನು ಇಲ್ಲಿ ಗಮನಿಸಬಹುದು. ಎದು ಹೀಗೆ ಕಾರ್ಖಾನೆಯಲ್ಲಿ ಕೆಲಸ ಮಾಡುವ ಎಲ್ಲಾ ಸಮುದಾಯದವರ ಬವಣೆಯೂ ಆಗಿದೆ.

ಆವಲು ಓಬಯ್ಯ ಹೇಳುವ ತನ್ನ ಬದುಕಿನ ಅನುಭವದ ಚಿತ್ರಣ ಈ ರೀತಿಯಾಗಿದೆ:



ಹೆಸರು - ಆವಲು ಓಬಯ್ಯ

ಊರು - ಹಾಲಸಾಗರ

ವಯಸ್ಸು - ೪೯ ವರ್ಷ

ವೃತ್ತಿ - ಹಮಾಲಿ

ಅಂಚೆ - ಹಾಲಸಾಗರ

ತಾಲೂಕು - ಕೂಡ್ಲಿಗಿ

ಜಿಲ್ಲೆ - ಬಳ್ಳಾರಿ

"ನನ್ನ ಹೆಸರು ಆವಲು ಓಬಯ್ಯ. ನಾವು ನಾಲ್ಕುಜನ ಇದ್ದೀವಿ. ನಾನು ಸುಮಾರು ಹತ್ತು ಹನ್ನೆರಡು ವರ್ಷದಿಂದ ಶೇಂಗಮಿಲ್‌ನಲ್ಲೇ ಕೆಲಸ ಮಾಡ್ತೀವಿ. ಮಿಲ್ ಓನರ್ ಪಂಚಣ್ಣ ಅಂತ ಅವ್ರು ಈಗ ತೀರಿಕೊಂಡ್ರು. ಅವ್ರ ಮಕ್ಕಳು ಅದನ್ನು ನಡೆಸಿಕೊಂಡು ಹೋಗ್ತಾರೆ. ಪ್ರಭು ಮತ್ತು ಸುರೇಶ್ ಅಂತ. ಮಹಾದೇವಾಪುರ, ನೋಡ್ರಿ ನಾನು ಈ ರೈಸ್‌ಮಿಲ್‌ನಲ್ಲೇ ಯಾವಾಗ್ಲೂ ಪರ್ಮಿನೆಂಟಾಗಿದ್ದೀನಿ. ಅವ್ರು ನನಗೆ ಬಹಳ ಚೆನ್ನಾಗಿ ನೋಡಿಕೊಳತ್ತಾರೆ. ಅವ್ರವು ಎರಡು ಲಾರಿಗಳಿವೆ. ಅವ್ರು ಯಾವಾಗ



ಕರಿತಾರೋ ಅವಾಗ್ಲೆ ಹೋಗ್‌ಬೇಕು. ನಮ್ಮೂರಿಗೆ ಎರಡು ಕಿಲೋಮೀಟರ್ ಆಗ್ತೈತೆ. ಯಾವಾಗ ಬೇಕಾದ್ರು ಅರ್ಜಂಟ್ ಕೆಲ್ಸ ಇದ್ರೆ ಗಾಡಿ ತಗಂಡು ಬಂದ್ ಕರ್ಕೊಂಡು ಹೋಗ್ತಾರೆ. ನಮ್‌ದು ಕೆಲಸ ಶೇಂಗಕಾಯಿ ಮತ್ತು ಬೀಜ ಎರಡು ಲೋಡಿಂಗ್ ಮತ್ತು ಅನ್‌ಲೋಡಿಂಗ್ ಮಾಡ್ತೀವಿ. ಅದಿಲ್ಲದೆ ಬೇರೆ ಸಮಯದಲ್ಲಿ ಎಣ್ಣೆ ಮಿಶನ್ ಸ್ಟಾರ್ಟ್ ಮಾಡಿ ಎಣ್ಣೆ ತಗೀತೀವಿ. ನಮಗೆ ಕೂಲಿ ಇಂತಿಷ್ಟು ಅಂತೇನಿಲ್ಲ ನಾವು ಹೆಂಗೆ ಕೆಲ್ಸ ಮಾಡ್ತೀವೋ ಹಾಗೆ ಕೊಡ್ತಾರೆ. ಶೇಂಗ ಲೋಡಿಂಗ್ ಅನ್ ಲೋಡಿಂಗಾದ್ರೆ ೨೫೦ರಿಂದ ೩೫೦ ಹೆಚ್ಚು ಕಡಿಮೆ ಕೊಡ್ತಾರೆ. ನಮಗೇನು ಲಾಸ್ ಮಾಡಲ್ಲ. ಗಿರಾಕಿ ಇದ್ರೆ ಒಂದು ವಾರಕ್ಕೆ ೨೦೦೦ರಿಂದ ೨೫೦೦ವರೆಗೆ ದುಡಿತೀವಿ. ಗಿರಾಕಿಲ್ಲಂದ್ರೆ ಅದೇ ಬೀಜದ ಜಿನ್ನೆ, ಎಣ್ಣೆ ಜಿನ್ನೆ. ಬೀಜ ಬೇರೆ ರಾಜ್ಯಗಳಿಗೆ ಕಳಿಸುತ್ತಾರೆ. ತಮಿಳುನಾಡು, ಮಹಾರಾಷ್ಟ್ರ ಆ ಕಡೆ ಎಲ್ಲಾ ನಾವೇನು ಹೋಗಲ್ಲ ನಮ್ ಕೆಲ್ಸ ಏನಂದ್ರೆ ಇಲ್ಲೇ ಲೋಡ್ ಮಾಡಿ ಕಳಿಸ್ತೀವಿ. ಸುತ್ತಮುತ್ತ ಶೇಂಗಗೀಂಗ ಇದ್ರೆ ಲೋಡಿಂಗ್ ಮಾಡಿಕೊಡು ಬರ್ತೀವಿ. ಹಬ್ಬ ಏನಾದ್ರು ಬಂದ್ರೆ ನಮಗೆ ಹಬ್ಬದ ಖರ್ಚಿಗೆ ಕೊಡ್ತಾರೆ. ದೀಪಾವಳಿ ದಸರಾ ಅಂತ ಹಬ್ಬಗಳು ಬಂದ್ರೆ ಫ್ರೀಯಾಗಿ ಸಾವಿರ ಹದಿನೈದು ನೂರು ಖರ್ಚಿಗೆ ಕೊಡ್ತಾರೆ. ಬೀಜದ ಲೋಡಿಂಗ್ ಮಾಡುವುದು ಬಹಾಳ ಕಷ್ಟ. ಆದ್ರೆ ಏನ್ ಮಾಡಬೇಕು ಅನಿವಾರ್ಯಮಾಡ್‌ಬೇಕಲ್ಲ. ನಮಗೆ ರೂಢಿಯಾಗಿದೆ ಏನು ತೊಂದರೆ ಆಗಿಲ್ಲ ಇಷ್ಟುದಿನ ಕೆಲ್ಸ ಮಾಡಿದ್ರೂ ಏನು ತೊಂದ್ರೆ ಆಗಿಲ್ಲ. ಇಲ್ರಿ ಕುಡಿಯೋದು ಚಟ ಇಲ್ಲ. ದಿನಾಲು ಕೆಲ್ಸ ಮಾಡಿ ಮನೆಗೆ ಹೋಗಿ ಮಲಗ್ತೀವಿ. ಯಾವಾಗೋ ಹಬ್ಬಗಿಬ್ಬ ಮಾಡಿದ್ರೆ ಆವಾಗ ಮಾತ್ರ ಖುಷಿ ಮಾಡ್ಲಿಕ್ಕೆ ಕುಡಿತೀವಿ. ದಿನಾಲು ಏನು ಕುಡಿಯಲ್ಲ. ನಮ್‌ದು ಮನೆ ಇಲ್ಲ ನಾನು ಬೇರೆ ಆಗಿ ೭ ವರ್ಷ ನಡಿತಾ ಇದೆ. ಬೇರೆಯವರ ಮನೆಯಲ್ಲಿ ಇದ್ದೀವಿ. ಅದಕ್ಕೆ ನಮ್ ಹಳ್ಳಿಗಳಲ್ಲಿ ಬಾಡಿಗೆ-ಗೀಡಿಗೆ ಏನು ಕೊಡಂಗಿಲ್ಲ ಒಟ್ಟೇನಪ್ಪ ಮನೆಯೊಂದೆ ಚೆನ್ನಾಗಿ ಇಟ್ಕಂಡ್ರೆ ಸಾಕು. ಅದು ಗುಡಿಸ್ಲು ಮನೆ. ಬೇಸಿಗೆಯಲ್ಲಿ ಸ್ವಲ್ಪ ಭಯ ಯಾಕೆಂದ್ರೆ ಬೆಂಕಿದೆ ಭಯ ಆಶ್ರಯ ಮನೆಗಳು ಬರ್ತಾವೆ ನಾವು ಒಂದು ಮನೆಮಾಡ್ಸಿಕೊಳ್‌ಬೇಕಂದ್ರೆ ಜಾಗನೇ ಇಲ್ಲ. ಎಲ್ಲಾದ್ರು ನೋಡಿ ಒಂದು ಮನೆ ಮಾಡ್ಸಿಕೊಳಬೇಕು. ನನ್ನ ಹೆಂಡ್ತಿ ಕೂಡ ಕೂಲಿ ಹೋಗ್ತಾಳೆ. ಮಕ್ಕಳು ಇಬ್ರು ಸಣ್ಣವರಿದ್ದಾರೆ ಅವ್ರಿಗೆ ಶಾಲೆಗೆ ಕಳಿಸ್ತೀವಿ. ಒಟ್ಟೇನಪ್ಪ ಊಟಕ್ಕೆ ಬಟ್ಟೆಗೆ ಏನು ತೊಂದ್ರೆ ಇಲ್ಲಂಗೆ ಬದುಕ್ತೀವಿ. ಸೊಸೈಟಿಯಲ್ಲಿ ನಮಗೆ ಬೇಕಾದಾಗ ಅಕ್ಕಿ ತಗಂತೀವಿ. ಅವೇ ನಮ್‌ಗೆ ಸಾಕು ಜೊತೆಗೆ ಜೊಳ ತಗಂಡ್ರೆ ಸಾಕು. ಹಬ್ಬಗಳು ಏನಾದ್ರು ಬಂದ್ರೆ ಆವಾಗ ಚಲೋ ಅಡಿಗೆ ಮಾಡ್ತೀವಿ. ಮಾರೆಮ್ಮನ ಅಂತ ಹಬ್ಬ ಬಂದ್ರೆ ನಮ್ಮಪ್ಪನವರ ಮನೆಗೆ ಹೋಗ್ತೀವಿ. ನನ್ನ ಹೆಂಡ್ತಿ ಮಹಿಳಾ ಸಂಘಕ್ಕೆ ವಾರಕ್ಕೆ ೨೦ರಿಂದ ೩೦ ರೂಪಾಯಿ ಕಟ್ತಾಳೆ. ನಮಗೇನಾದ್ರು ಬೇಕೆಂದಾಗ ಜಾಸ್ತಿತಗಂಡು ಬಡ್ಡಿಹಾಕಿಕೊಡ್ತೀವಿ. ಹೊಟ್ಟೆಗೇನು ತಾಪತ್ರಾಯ್ ಇಲ್ಲ. ಏನಾದ್ರು ಅರ್ಜಂವಿದ್ರೆ ನಮ್ ಸಾಹುಕಾರನ ಕೇಳಿದ್ರೆ ಅವ್ರು ಕೊಡ್ತಾರೆ. ಈಗಿನ ಕಾಲ್ದಾಗೇನ್ರಿ ಹೆಂಗ್ ಬೇಕಾದ್ರೂ ಬದುಕಬಹುದು."

ಈಗಿನ ಕಾಲ್ದಾಗೇನ್ರಿ ಹೆಂಗ್‌ಬೇಕಾದ್ರು ಬದುಕಬಹುದು ಎನ್ನುವ ಹಾಲಸಾಗರದ ಆವಲು ಓಬಯ್ಯನ ಮಾತಿನಲ್ಲಿರುವ ಅರ್ಥವಾದರೂ ಏನು? ಜೀವನ ಮಾಡೋಕೆ ನಾನಾ ದಾರಿಗಳು ಕೆಲಸ ಮಾಡುವವರಿಗೇನು? ಅನ್ನುವ ಧೋರಣೆ ಇದ್ದಂತಿದೆ. ಆದರೆ ಆತ ಎಂದೂ ನಾನು ದುಡಿದ್ದಕ್ಕೆ ಸರಿಯಾದ ಪ್ರತಿಫಲ ಸಿಗುತ್ತದೆಯೇ ಎಂದು ಪ್ರಶ್ನೆ ಮಾಡಿಕೊಂಡಂತಿಲ್ಲ ಅಥವಾ ಇಂತಹ ತಿಳುವಳಿಕೆಯನ್ನು ಕೊಡುವ ಕಾರ್ಮಿಕ ನಾಯಕನೂ ಇದ್ದಂತಿಲ್ಲ ಆದರೂ ಇಲ್ಲಿ ಸಂಕೀರ್ಣ ಬದುಕಿನ ಚಿತ್ರಣವನ್ನು ಕೊಡುತ್ತಾರೆ. ಇಲ್ಲಿ ವರ್ಷಕ್ಕೊಮ್ಮೆ ಮಾರಮ್ಮನ ಹಬ್ಬಕ್ಕೆ ಊರಿಗೆ ಹೋಗುವುದಾಗಿ ಹೇಳುತ್ತಾರೆ. ಅಂದರೆ ಆಚರಣೆಗಿಂತ ಸಮುದಾಯಗಳ ಬದುಕಿನ ಅನಿವಾರ್ಯತೆಯನ್ನು ಈ ಮಾತುಗಳು ಧ್ವನಿಸುತ್ತವೆ. ಈ ಮಾತುಗಳಲ್ಲಿ ಅಸಹಾಯಕತೆ, ದಯನೀಯತೆ ಇರುವುದನ್ನು ನೋಡಬಹುದು.

ಗಾಳೆಮ್ಮನ ಗುಡಿ, ಪಾಲಯ್ಯ ತಮ್ಮ ಬದುಕಿನ ಅನುಭವದ ಅಳಲನ್ನು ಈ ಕೆಳಗಿನಂತೆ ಹೇಳುತ್ತಾನೆ:

ಹೆಸರು - ಪಾಲಯ್ಯ

ಊರು - ಗಾಳೆಮ್ಮನ ಗುಡಿ


ವಯಸ್ಸು - ೫೪

ವೃತ್ತಿ - ಕೂಲಿ

ಅಂಚೆ - ಗಾಳಮ್ಮನಗುಡಿ

ತಾಲೂಕು - ಹೊಸಪೇಟೆ

ಜಿಲ್ಲೆ - ಬಳ್ಳಾರಿ



"ಸರ್ ನನ್ನ ಹೆಸರು ಪಾಲಯ್ಯ ನಮ್‌ದು ಸ್ವಂತ ಹುಟ್ಟಿದ ಊರು ಚಿತ್ರದುರ್ಗದ ಹತ್ತಿರ ಬಂಗಾರಕ್ಕನಹಳ್ಳಿ. ಈಗ ವಾಸಮಾಡುವುದು ಗಾಳೆಮ್ಮನ ಗುಡಿ. ನಾನು ಇಲ್ಲಿಗೆ ಬಂದು ಮೂವತ್ತುವರ್ಷಗಳಾಗಿವೆ. ಒಟ್ಟು ೧೨ ಜನ ಇದ್ದೀವಿ. ನಾನು ಇಲ್ಲಿಗೆ ಬಂದದ್ದು ಘೋರ್ಪಡೆಯವರ ಫ್ಯಾಕ್ಟ್ರಿ ಇತ್ತು. ಆಗ ಫ್ಯಾಕ್ಟ್ರಿಯಲ್ಲಿ ಕೆಲಸ ಮಾಡ್ಲಿಕ್ಕೆ ಬಂದು ಇಲ್ಲೇ ಕಾಯಂ ಆಗಿ ಒಂದು ಗುಡಿಸಲು ಮನೆಕಟ್ಟಿಕೊಂಡು ಇದ್ದೀವಿ ನೋಡು. ಫ್ಯಾಕ್ಟ್ರಿ ಇದ್ದಾಗ ಚೆನ್ನಾಗಿದ್ವಿ. ಈಗ ಫ್ಯಾಕ್ಟ್ರಿ ಬಂದಾಗಿದೆ. ನಮ್ ಜೀವನ ಮಾಡೋದು ಬಹಳ ಕಷ್ಟ. ಈಗ ನಮ್ಮೂರ್ ಕಡೆ ಹೋಗ್ಲಿಕ್ಕೆ ಆಗಲ್ಲ ನಮ್ ಮಕ್ಕಳು ಶಾಲೆಗೆ ಹೋಗ್ತಾರೆ ಏನೋ ಮಾಡಿ ಇಲ್ಲೇ ಜೀವನ ಸಾಗಿಸ್‌ಬೇಕು. ನಾವು ಮ್ಯಾಸಬೇಡ್ರು. ಈ ಊರಿನಲ್ಲಿ ಎಲ್ಲಾರು ಊರುಬೇಡ್ರು ಇದ್ದಾರೆ. ನಮ್ಮವು ಎರಡೇಮನೆ ಮ್ಯಾಸಬೇಡ್ರು ಇದ್ದೀವಿ. ನೋಡ್ರಿ ನಮ್ ಮನೆ ಹೆಂಗಿದೆ ಗುಡಿಸಲು ಮನೆ ಇಷ್ಟು ವರ್ಷಗಳಾದ್ರು ಒಂದು ಮನೆ ಇಲ್ಲ. ನಾಲ್ಕೈದು ವರ್ಷಗಳಾಗಿ ಬಂದವರಿಗೆ ಮನೆಮಾಡಿಕೊಟ್ಟಾರೆ. ನಾವು ದಿನಾಲು ಕೂಲಿ ಕೆಲ್ಸಕ್ಕೆ ಹೋಗ್‌ಬೇಕು ತಂದಿದ್ದನ್ನು ಸಂಜೆಗೆ ಮಾಡಿಕೊಂಡು ತಿನ್‌ಬೇಕು. ಈ ಊರಿನ್ಯಾಗೆ ಬರಿ ಓಟೊಂದೆ ಕೇಳ್ತಾರೆ. ಏನು ಕೆಲ್ಸ

ಮಾಡ್ಕೊಲ್ಲ ಬಿಡಲ್ಲ. ನಮ್ ಮನೆ ಹತ್ತಿರ ಏನಾದ್ರು ಗಾಡಿ-ಗೀಡಿ ಬಲ್ಲಿಕ್ಕೆ ಸರಿಯಾಗಿ ದಾರಿಯೇ ಇಲ್ಲ. ಅದು ಬೇರೆ ಕಡೆಗೆ ಅಲ್ಲಿ ಇಲ್ಲಿ ಬಂದ್ರೆ ಅಕ್ಕಪಕ್ಕದ ಮನೆಯವರು ಜಗಳ ಮಾಡ್ತಾರೆ. ನೀವೇನಾದ್ರು ನಮ್‌ಗೆ ಒಳ್ಳೆಯದು ಮಾಡ್ರಿ. ನಾವು ಇಲ್ಲೇ ಸುತ್ತಮುತ್ತ ಗಣಿ ಕೆಲ್ಸಕ್ಕೆ ಹೋಗ್ತೀವಿ. ರಾತ್ರಿಯಲ್ಲ ಮೈನಿಂಗ್ ಕಲ್ಲು ಡಿಗ್ಗಿಂಗ್ ಮಾಡಿ ಕಳ್ಳ್ತನದಿಂದ ಸೈಕಲ್ ಮೇಲೆ ತರಬೇಕು. ತಂದ ಕಲ್ಲನ್ನು ಬೆಳಿಗ್ಗೆ ಸಣ್ಣಗೆ ಪುಡಿಮಾಡಿ ಒಂದು ಟನ್‌ಗೆ ೪೦೦ ರೂಪಾಯಿಗೆ ಕೊಡ್ತೀವಿ. ಯಾಕೆಂದ್ರೆ ಅದು ಕಳ್ ಮಾಲು. ಕಳ್ಳತನದಿಂದ ತಂದಿದ್ದಕ್ಕೆ ಹೆಂಗೆ ಕೇಳ್ತಾರೆ ಅಷ್ಟಕ್ಕೆ ಕೊಡ್‌ಬೇಕು. ನಿಜವಾದ ಮಾಲಿನ ರೇಟು ೮೦೦ರೂಪಾಯಿ ಇದೆ. ನೋಡ್ರಿ ಕಳ್‌ತನದಿಂದ ಮಾಡಿದ ಕೆಲಸ ಇಂಗೆ ಇರ್ತದೆ. ಅದು ಫಾರೆಸ್ಟ್‌ನಲ್ಲಿ ಯಾರಿಗಾದ್ರು ಸಿಕ್ರೆ ಅವ್ರು ಮಾಲುಗೀಲು ಎಲ್ಲಾ ಕಸ್ಕಂಡು ಬಿಡ್ತಾರೆ. ಅವರಿಗೆ ಅಣ್ಣಾ ಅಪ್ಪಾ ಅಂದು ಅಷ್ಟು ಇಷ್ಟು ಕೊಟ್ಟು, ತಗಂಡ್ ಬರಬೇಕು. ಮೈನಿಂಗ್ ಕೆಲಸ ಬಹಾಳ ದೂಳು ಆದ್ರೂ ಬಿಡಂಗಿಲ್ಲ ಕೆಲಸ ಮಾಡ್‌ಬೇಕು. ನಮ್ ಮಕ್ಕಳು ಹೊಸಪೇಟೆಗೆ ಸಿಮೆಂಟ್ ಕೆಲ್ಸಕ್ಕೆ ಹೋಗ್ತಾರೆ. ನಾನು ಮೈನಿಂಗ್ ಕೆಲ್ಸಕ್ಕೆ ಹೋಗ್ತೀನಿ. ತಿಂಗಳಿಗೊಮ್ಮೆ ಆಸ್ಪತ್ರೆಗೆ ದುಡಿದಿದ್ದೆಲ್ಲ ಇಡಬೇಕು. ಅದರಲ್ಲೇ ಬಟ್ಟೆ ಬರೆ ಊಟ ಎಲ್ಲಾ ಅದರಲ್ಲೇ ಸರಿ ಮಾಡ್‌ಬೇಕು. ಇಬ್ರೂ ಹೆಣ್ಣು ಮಕ್ಕಳು ಇದ್ದಾರೆ. ಅವರಿಗೆಲ್ಲಾ ಮದ್ವಿಮಾಡಿಕೊಟ್ಟೆವಿ. ಒಬ್ಬ ಮಗ ಶಾಲೆಗೆ ಮರಿಯಮ್ಮನಹಳ್ಳಿಗೆ ಹೋಗ್ತಾನೆ. ಅವನ ಖರ್ಚುಕೂಡ ಬಹಳ ಬರ್ತೈತಿ ನೋಡ್ರಿ ಇಂಗೈತಿ ನಮ್ ಜೀವನ ಎಲ್ಲಾ ಆ ದೇವರೇ ಕಾಪಾಡ್‌ಬೇಕು."

ಗಾಳೆಮ್ಮನಗುಡಿ ಪಾಲಯ್ಯನ ಮಾತಿನಲ್ಲಿ ಮೈನಿಂಗ್ ಕಾರ್ಮಿಕರ ಕಷ್ಟದ ಬವಣೆ ಗೊತ್ತಾಗುತ್ತಿದೆ. ಒಂದು ಕಡೆ ಮೈನಿಂಗ್ ಕೋಟಿಗಟ್ಟಲೆ ಗಳಿಸಿದ ಧನಿಗಳು ಇನ್ನೊಂದು ಕಡೆ ದಿನಗೂಲಿಗೆ ಮೈನಿಂಗ್ ನಲ್ಲೂ ದುಡಿದು ದೇಹಾರೋಗ್ಯ ಕೆಡಿಸಿಕೊಳ್ಳುತ್ತಿರುವ ಪಾಲಯ್ಯನಂತವರು ಹೀಗೆ ಬದಲಾಗುತ್ತಿರುವ ಉದ್ಯೋಗದ ಸ್ವರೂಪ, ಆ ಉದ್ಯೋಗ ತಂದೊಡ್ಡುವ ಅಪಾಯ ಈ ಎರಡನ್ನು ಈ ಮಾತುಗಳಲ್ಲಿ ಗುರುತಿಸಬಹುದು.

೬.೨.ಕೂಲಿ

ಯಾವುದೇ ವ್ಯಕ್ತಿ ಸಮಾಜದಲ್ಲಿ ಕನಿಷ್ಠ ಜೀವನವನ್ನು ಸಾಗಿಸಲು ಏನು ಇಲ್ಲದವರು ಉಳ್ಳವರ ಬಳಿ ದಿನವೊಂದಕ್ಕೆ ನಿಗದಿಪಡಿಸಿದ ಸಂಭಾವನೆಗಾಗಿ ಕೆಲಸ ಮಾಡುವುದೇ ಕೂಲಿ. ಇದರಲ್ಲಿ ದಿನಗೂಲಿ, ಕಾಯಂಗೂಲಿ, 'ವರವಿ' ಎಂದು ಮೂರು ಬಗೆಗಳು. ನಿತ್ಯ ಕೆಲಸ ಮಾಡುವುದು ದಿನಗೂಲಿ, ನಿತ್ಯ ಹೊಲ ಹಾಗೂ ದನಗಳನ್ನು ಇಂತಿಷ್ಟು ಕೂಲಿ ಎಂದು ಕಾಯುವುದು ಕಾಯಂಗೂಲಿ, ಒಂದು ವಾರದಿಂದ ತಿಂಗಳು, ಮೂರು ತಿಂಗಳು, ಇಲ್ಲವೆ ಆರು ತಿಂಗಳಗಳವರೆಗೆ ಕೆಲಸ ಮಾಡುವುದು ವರವಿ. ದಿನಗೂಲಿ ಹಾಗೂ ಕಾಯಂಗೂಲಿಯವರನ್ನು, ಮಾಲಕರು ನಾಳೆ ಕೆಲಸಕ್ಕೆ ಹಚ್ಚಬಹುದು, ಇಲ್ಲವೆ ಬಿಡಬಹುದು. ಆದರೆ ವರವಿಯಲ್ಲಿ ಹಾಗಲ್ಲ ಅವರನ್ನು ಕೆಲಸದಿಂದ ಬಿಡುವುದಿಲ್ಲ ಮತ್ತು ದಿನಗೂಲಿಯವರಿಗಿಂತ

ವರವಿಯವರ ಕೂಲಿ ಹೆಚ್ಚಿರುತ್ತದೆ. ಕೂಲಿ ಆಳುಗಳ ಸಂಖ್ಯೆ ಹೆಚ್ಚಿದ್ದು, ವರವಿ ಆಳುಗಳ ಸಂಖ್ಯೆ ಕಡಿಮೆ ಇರುತ್ತದೆ. ಸುಗ್ಗಿಯ ಸಮಯದಲ್ಲಿ ಕೂಲಿ ಆಳುಗಳ ಕೊರತೆ ಕಂಡುಬರುತ್ತದೆ.

ಆಗ ಪಕ್ಕದ ಹಳ್ಳಿಗಳಿಂದ ಆಳುಗಳನ್ನು ಎತ್ತಿನಗಾಡಿ ಇಲ್ಲವೆ ಟ್ರ್ಯಾಕ್ಟರ್, ಟ್ರಕ್‌ನಲ್ಲಿ ಕರೆತಂದು ಸರಳ ಹಾಗೂ ಹಗುರವಾದ ಕೆಲಸಗಳಿಗೆ ಹೆಣ್ಣಾಳುಗಳನ್ನು, ಭಾರವಾದ ಕೆಲಸಗಳಿಗೆ ಗಂಡಾಳುಗಳನ್ನು ನೇಮಿಸುತ್ತಾರೆ. ಆಳುಗಳು ಸರಿಯಾಗಿ ಕೆಲಸ ಮಾಡುತ್ತವೆಯೋ ಇಲ್ಲವೋ ಎಂಬುದನ್ನು ನೋಡಿಕೊಳ್ಳಲು ಮತ್ತು ವಾರಕ್ಕೊಮ್ಮೆ ಪಗಾರ ಮಾಡಲು ಮೇಸ್ತ್ರಿ ಅಥವಾ ಗುಮಾಸ್ತರನ್ನು ನೇಮಕ ಮಾಡಿಕೊಂಡಿರುತ್ತಾರೆ. ಕೆಲಸ ಕಡಿಮೆ ಇದ್ದಾಗ ಕಡಿಮೆ ಆಳುಗಳನ್ನು ಹೇಳುತ್ತಾರೆ. ಹೆಚ್ಚು ಇದ್ದಾಗ ಹೆಚ್ಚು ಆಳುಗಳನ್ನು ಹೇಳುತ್ತಾರೆ. ಈ ರೀತಿಯಾಗಿ ಭೂ ಮಾಲಿಕರು ತಮ್ಮ ಅನುಕೂಲಕ್ಕೆ ತಕ್ಕಂತೆ ಕೂಲಿಯನ್ನು ಕೂಲಿ ಆಳುಗಳನ್ನು ನಿಗದಿಮಾಡಿಕೊಂಡು ನಡೆಸಿಕೊಂಡು ಹೋಗುತ್ತಾರೆ.

*** ಕೂಲಿಕಾರರ ನೇರ ಸಂದರ್ಶನ ಈ ಕೆಳಗಿನಂತಿದೆ**

ದೇವರಹಟ್ಟಿಯ ಬೋರಮ್ಮ ತಮ್ಮ ಇಡೀ ಬದುಕನ್ನು ಬರೇ ಕೂಲಿಯ ಮಾಡಿಯೇ ಕಟ್ಟಿಕೊಂಡಿದ್ದಾಳೆ ಅವರು ಹೇಳುವ ವಿವರ ಈ ಕೆಳಗಿನಂತಿದೆ:

ಹೆಸರು - ಬೋರಮ್ಮ

ಊರು - ದೇವರಹಟ್ಟಿ

ವಯಸ್ಸು - ೫೪ ವರ್ಷ

ವೃತ್ತಿ - ಕೂಲಿ ಕೆಲಸ

ಅಂಚೆ - ಅಪ್ಪಯ್ಯನಹಳ್ಳಿ

ತಾಲೂಕು - ಕೂಡ್ಲಿಗಿ

ಜಿಲ್ಲೆ - ಬಳ್ಳಾರಿ



ನಾವು ದಿನಾಲು ಕೂಲಿ ಮಾಡಬೇಕು ತಿನ್‌ಬೇಕು. ನಾನು ಹುಟ್ಟಿದಾಗಿನಿಂದ್ಲೆ ನಮ್ ತಂದೆ ತಾಯಿ ಕೂಲಿಮಾಡಿನೇ ನಮ್ಮನ್ನೂ ಸಾಕಿದ್ರು ದೊಡ್ಡವರ ಮಾಡಿದ್ರು. ನಾವು ಸಹ ನಮ್ ತಂದೆ ತಾಯಿಯಂತೆ ಅದೇ ಕೆಲಸ ಮಾಡ್ತಿದ್ದೀವಿ. ನಾವು ದಿನಾಲು ಬೆಳಿಗ್ಗೆ ೮ ಗಂಟೆಗೆ ಹೋಗ್ತೀವಿ ಸಂಜೆ ನಾಲ್ಕುಗಂಟೆಗೆ ಬರ್ತೀವಿ ಅದು ಕೂಡ ನಮ್ಮೂರ್ನಾಗೆ ಯಾರವು ಜಾಸ್ತಿ ಹೊಲಗಳಲ್ಲಿ ಇದ್ರೂ ಸಹ ಅವು ಒಂದೆರಡು ದಿನ ಸಿಗ್ತಾವೆ. ಮತ್ತೆ ಬೇರೆ ಊರಿಗೆ ಅಂದ್ರೆ ಅಪ್ಪಯ್ಯನಹಳ್ಳಿ ತಾಂಡಕ್ಕೆ ಹೋಗ್ತೀವಿ ತಾಂಡದವರು ಜಾಸ್ತಿ ಹೊಲಗಳಿದಾವೆ ಅಪ್ಪಯ್ಯನಹಳ್ಳಿಯಲ್ಲಿ ಗೌಡ್ರು ಲಿಂಗಾಯಿತರವು ಜಾಸ್ತಿ ಹೊಲಗಳಿದಾವೆ ಅದಕ್ಕೆ ನಾವು ಈ ಎರಡು ಊರುಗಳಿಗೆ ಹೋಗ್ತೀವಿ. ಊರುಗಳೇನು ದೂರ ಇಲ್ಲ ಇಲ್ಲೇ ಅರ್ಧ ಮೈಲು ಆಗ್ತವೆ. ದಿನಾಲು ನಾವು ಕಳೆ ಕೀಳುವುದು, ಹತ್ತಿಬಿಡಿಸುವುದು, ಕೊಯ್ಯುವುದು ಏನಾದ್ರು ಇದ್ರೆ



ಕೊಯ್ಯಲಿಕ್ಕೆ ಹೋಗ್ತಿವಿ. ಸಸಿ ನಾಟಿ ಮಾಡ್ತೀವಿ, ಕಾಸಿಗೆ ಹಾರಿಸುವುದು, ಶೇಂಗ-ಗೀಂಗ ಬಂದ್ರೆ ಶೇಂಗ ಕೀಳಲಿಕ್ಕೆ ಹೋಗ್ತಿವಿ ಶೇಂಗ ಕಾಯಿ ಅರಿಯುವುದು. ಅದು ಇದು ಅಂತ ದಿನಾಲು ಏನಾದ್ರು ಇದ್ದೇ ಇರ್ತದೆ.

ಒಟ್ಟು ನಮ್‌ಗೆ ದಿನಾ ಕೂಲಿ ಸಿಗ್ತೈತೆ. ನಮಗೆ ಬೇಸಿಗೆಯಲ್ಲಿ ಇಪ್ಪತ್ತು ರೂಪಾಯಿ ಕೊಡ್ತಾರೆ. ಮುಂಗಾರಿ ಬಂದ್ರೆ ಇಪ್ಪತ್ತೈದು ಹೆಚ್ಚು ಅಂದ್ರೆ ಮೂವತ್ತು ಕೊಡ್ತಾರೆ. ಕೆಲಸ ಕಡಿಮೆ ಇದ್ರೆ ಅಷ್ಟೇ ಕೊಡ್ತಾರೆ ಕೆಲಸ ಜಾಸ್ತಿ ಇದ್ರೆ ಐದು ಹತ್ತು ಹೆಚ್ಚಿಗೆ ಕೊಡಂದ್ರೆ ಕೊಡ್ತಾರೆ. ನೋಡಿ ನಮಗೆ ಊಟ ನಾವು ತಗಂಡು ಹೋಗ್ಲಿಲಂದ್ರೆ ಕೊಡ್ತಾರೆ ಮುದ್ದೆ ಚೆಟ್ನಿ-ಗಿಟ್ನಿ ಮಾಡಿದ್ರೆ ಕೈಯಲ್ಲೇ ಇಸ್ಕಂಡು ತಿನ್‌ತೀವಿ, ಅನ್ನ ಸಾಂಬಾರು ಮಾಡಿದ್ರೆ ಪ್ಲೇಟ್ ಕೊಡ್ತಾರೆ. ಲಂಬಾಣಿ ಹೊಲಗಳಿಗೆ ಹೋದ್ರೆ ಅವ್ರು ಮೊಸ್ರು, ಮಜ್ಜಿಗಿ ಕೊಡ್ತಾರೆ. ಗೌಡ್ರು ಲಿಂಗಾಯಿತರು ಅಂತ ನಮಗೇನು ಭೇದಭಾವ ಮಾಡಿಲ್ಲಪ್ಪ ನಾವು ಬಹಳ ವರ್ಷಗಳಿಂದ ಅವ್ರು ಹೊಲ್ದಲ್ಲೇ ಮಾಡ್ತೀವಲ್ಲ ಅಂತದ್ದೇನು ಮಾಡಲ್ಲ ಪಾಪ ಯಾಕೆ ಅನ್‌ಬೇಕ್ರಿ ನಾವು ಹೋಗುವರೆಲ್ಲ ಒಳ್ಳೆಯವರು. ಯಾರು ಕೆಟ್ಟೋರು ಇಲ್ಲ. ನೋಡ್ರಿ ಇಷ್ಟರಲ್ಲೇ ನಮ್ ಜೀವನ ಸಾಗಿಸ್ತೀವಿ. ಅದ್ರಲ್ಲೇ ಬಟ್ಟೇಬರೆ ಊಟ ಎಲ್ಲಾ ಇಷ್ಟೇ ಕೂಲಿಯಲ್ಲೇ ಜೀವನ ನಡೆಸ್‌ಬೇಕು. ಮನೆ ಗುಡಿಸ್ಲುಮನೆ. ಸರ್ಕಾರದ ಮನೆಗಳು ಬರ್ತಾವೆ ಅವು ಇದ್ದಂತವರಿಗೆ ಮಾತ್ರ ಮಾಡಿಸುತ್ತಾರೆ. ಬಡವರಿಗೆ ಯಾರಿಗೂ ಇಲ್ಲ ನೋಡ್ರಿ ನಾವೇನಾದ್ರೂ ಕೇಳಿದ್ರೆ ಐದು ಸಾವಿರ ಕೇಳ್ತಾರೆ ನಾವು ಎಲ್ಲಿಂದ ತಂದುಕೊಡಬೇಕು ಹೇಳ್ರಿ ನೀವೆ. ನಾವು ಜೀವನ ಮಾಡೋದೆ ಕಷ್ಟ. ಐದು ಸಾವಿರ ರೂಪಾಯಿ ಎಲ್ಲಿಂದ ತಂದುಕೊಡಬೇಕು. ರೇಷನ್ ಕಾರ್ಡು ಇದೆ. ತಿಂಗಳ ತಿಂಗಳ ಅಕ್ಕಿ ಬರ್ತಾವೆ ನಾವು ಎರಡು ಮೂರು ತಿಂಗಳಿಗೊಮ್ಮೆ ತಗಂತೀವಿ. ಅಕ್ಕಿ, ಸಿಮೇಣ್ಣೆ, ಸಕ್ಕರೆ ತಗಂತೀವಿ, ನಾವು ಸ್ವಸಹಾಯ ಸಂಘವನ್ನು ಕಟ್ಟಿಕೊಂಡಿವಿ. ನಮ್ಮೂರಲ್ಲಿ ಸ್ತ್ರೀ ಶಕ್ತಿ ಸಂಘ ಮಾಡಿಕೊಂಡೀವಿ. ಮೂರುನಾಲ್ಕು ವರ್ಷವಾಯಿತು. ಒಂದುವಾರಕ್ಕೆ ಮೂವತ್ತು ಇಪ್ಪತ್ತು ಕಟ್ತೀವಿ. ಅವೆಲ್ಲ ಬ್ಯಾಂಕಿಗೆ ಸೇರಿವೆ. ನಮ್‌ಗೆ ಯಾವಗಾದ್ರೂ ಅರ್ಜಂಟ್ ಇದ್ರೆ ಬಿಡಿಸ್ಕೊಂತೀವಿ. ಹೆಂಗೋ ಮಾಡಿ ಜೀವನ ನಡಿಸ್‌ಬೇಕು. ನಾಲ್ಕು ಜನ ಇದ್ದೀವೆ ಅದ್ರಲ್ಲಿ ಹೆಚ್ಚು ಕಡಿಮೆ ನಡಿತ್ತೈತೆ.

ಈ ಮೇಲಿನ ಮಾತುಗಳಲ್ಲಿ ಪ್ರಮುಖವಾಗಿ ತಿಳಿಯುವುದೇನೆಂದರೆ ಕೂಲಿಕಾರರೂ ನಿಜದ ಬದುಕು ಮತ್ತು ಜಾತಿಯ ಶ್ರೇಣೀಕರಣದ ಸ್ವರೂಪ ಹೆಣ್ಣೊಬ್ಬಳ ಕೂಲಿತನದ ಬದುಕಿನ ಕಷ್ಟಗಳನ್ನು ದೇವರ ಹಟ್ಟಿಯ ಬೊರಮ್ಮನ ಮಾತುಗಳಲ್ಲಿ ಗುರುತಿಸಬಹುದು. ಬೆಲೆಗಳು, ಗಗನಕ್ಕೇರಿದ ಈ ಹೊತ್ತಿನಲ್ಲಿ ೨೦-೩೦ರೂ ಕೂಲಿಯಿಂದ ಬದುಕುವುದಾದರೆ ಹೇಗೆ ಎಂದು ಯೋಚಿಸಿದರೆ ಬೋರಮ್ಮನ ಬದುಕು ಅರ್ಥವಾಗುತ್ತದೆ. ಇಲ್ಲಿ ಬೋರಮ್ಮ ಮೇಲ್ವರ್ಗದ ಲಿಂಗಾಯಿತರ ಹೊಲಕ್ಕೆ ಮತ್ತು ಲಂಬಾಣಿ ಸಮುದಾಯದವರ ಹೊಲಕ್ಕೆ ಕೂಲಿ ಹೋಗುವ ಬಗ್ಗೆ ಹೇಳುತ್ತಾರೆ. ಅಲ್ಲಿಯೇ ಅವರು ನಮ್ಮನ್ನು

ಆಳಾಗಿ ಹೇಗೆ ನಡೆಸಿಕೊಳ್ಳುತ್ತಾರೆ. ಅನ್ನುವ ವಿವರವನ್ನು ಕೊಡುತ್ತಾಳೆ. ಕೊನೆಗೆ ಮಹಿಳಾ ಸಂಘದ ಮೂಲಕ ಉಳಿತಾಯವನ್ನು ಮಾಡುವ ಮಾತುಗಳು ಬರುತ್ತವೆ. ಸ್ವತಃ ಬೋರಮ್ಮನಿಗೆ ತನ್ನ ಬದುಕು ಕಷ್ಟ ಅನ್ನಿಸಿದಂತಿಲ್ಲ. ಆದರೆ ಬೋರಮ್ಮನ ಬದುಕಿನ ಕಥನ ಕೇಳಿದ ಯಾರಿಗಾದರೂ ಅವಳ ಕಷ್ಟ ಅರ್ಥವಾಗುತ್ತದೆ. ಬೋರಮ್ಮ ಒಟ್ಟು ಬೇಡ ಸಮುದಾಯದ ಮಹಿಳೆಯ ಪ್ರತಿನಿಧಿಯಾಗಿ ನಿಲ್ಲುತ್ತಾಳೆ.

ಅಬ್ಬೇನಹಳ್ಳಿ ಸಿಂತ್ಲಮ್ಮನವರು ತಮ್ಮ ಕೂಲಿಯ ಮಾಡಿ ಜೀವನ ನಡೆಸುತ್ತಿದ್ದಾರೆ. ಅವರು ಹೇಳುವ ಅನುಭವ ಹೀಗಿದೆ:

ಹೆಸರು - ಸಿಂತ್ಲಮ್ಮ

ಊರು - ಅಬ್ಬೇನಹಳ್ಳಿ

ವಯಸ್ಸು - ೪೮ ವರ್ಷ

ವೃತ್ತಿ - ಕೂಲಿ

ಅಂಚೆ - ಅಬ್ಬೇನಹಳ್ಳಿ

ತಾಲೂಕು - ಚಳ್ಳಕೆರೆ

ಜಿಲ್ಲೆ - ಚಿತ್ರದುರ್ಗ



ನನ್ನ ಹೆಸರು ಸಿಂತ್ಲಮ್ಮ. ನಾವು ದಿನಾಲು ಕೂಲಿಕೆಲ್ಸ ಮಾಡ್‌ಬೇಕು ತಿನ್‌ಬೇಕು. ನನಗಂಡ ಕುಡುಕ ದಿನಾಲು ಕುಡಿದ್ ಬರ್ತಾನೆ. ನನಗೆ ಮೂರು ಜನ ಮಕ್ಳು. ನಮ್‌ದು ಆಸ್ತಿ ಗೀಸ್ತಿ ಇಲ್ಲ. ನಾವು ಏನು ಪಾಪಕರ್ಮ ಮಾಡಿದ್ವೋ ಗೊತ್ತೆ ಇಲ್ಲ. ಎಲ್ಲಾದ್ರು ಭಿಕ್ಷೆ ಬೇಡುವವನಿಗೆ ಕೊಟ್ಟಿದ್ರೆ ಹೆಂಗೋ ದುಡುದು ಹಾಕ್ತಿದ್ದೆ. ಏನ್ ಮಾಡ್ತಿ ನಮ್ಮಪ್ಪ ನಮ್ಮಮ್ಮ ಹೋಗಿ ಕುಡುಕನಿಗೆ ಕೊಟ್ಟಿದ್ದಾರೆ. ಈ ಮೂರು ಮಕ್ಳು ಕಟ್‌ಕ್ಕೊಂಡು ಜೀವನ ಮಾಡ್‌ಬೇಕು. ಗೌಡ್ರು ಹೊಲ ಇದೆ ಲಿಂಗಾಯಿತರು ಬಹಾಳ ಇವೆ. ದಿನಾಲು ಅವರ ಹೊಲ್ದಲ್ಲಿ ಕೆಲ್ಸಕ್ಕೆ ಹೋಗ್ತೀನಿ. ಮಕ್ಕಳಿಗೆ ಶಾಲೆಗೆ ಕಳಿಸ್ತೀನಿ. ನನಗೆ ೨೦ ರೂಪಾಯಿ ಕೊಡ್ತಾರೆ, ಮುಂಗಾರಿ ಬಂದ್ರೆ ೩೦ ರೂಪಾಯಿ ಮಾಡ್ತಾರೆ ಯಾಕೆಂದ್ರೆ ಆವಾಗ ಆಳುಗಳು ಸಿಗಲ್ಲ ಅದಕ್ಕೆ ಹೆಚ್ಚಿಗೆ ಕೊಡ್ತಾರೆ.

ಹೊಲ್ದಲ್ಲಿ ಕಾಸಿಗೆ ಆರಿಸುವುದು, ಕಳೆತಗೆಯೋದು, ಸಸಿನಾಟಿ ಮಾಡುವುದು, ರೇಷ್ಮೆ ಎಲೆ ಕಿತ್ತೊದು, ಅದು ಇದು ಅಂತ ಇರ್ತದೆ ಬೇರೆ ಕಡೆ ಹೋಗಂಗಿಲ್ಲ ಕಾಯಂಯಾವಾಗ್ಲೂ ಕೆಲಸ ಇದ್ದೇ ಇರ್ತದೆ. ಬೆಳಿಗ್ಗೆ ೮ ಗಂಟೆಗೆ ಹೋದ್ರೆ ಸಂಜೆ ೫ ಗಂಟೆಗೆ ಬಿಡ್ತಾರೆ. ವಾರಕ್ಕೊಮ್ಮೆ ಬಟ್ವಾಡಿ ಮಾಡ್ತಾರೆ. ಮತ್ತೆ ನನಗೆ ಯಾವಾಗಾದ್ರು ಅರ್ಜಂಟ್ ಇದ್ರೆ ಜಾಸ್ತಿ ಕೇಳಿದ್ರೆ ಕೊಡ್ತಾರೆ ಮತ್ತು ಊಟ ನಾನು ತಗಂಡು ಹೋಗ್ತೀನಿ ಒಂದೊಂದು ದಿನ ತಗಂಡು ಹೊಗ್ಲಿಲ್ಲಂದ್ರೆ ಅವರೆ ಕೊಡ್ತಾರೆ. ಏನು ಬೇದಬಾವ

ಮಾಡಲ್ಲ ದಿನಾಲು ಚಟ್ನಿ ಮುದ್ದೆ ಇನ್ನೇನು ಮಾಡೋದು. ಏನೋ ಹಬ್ಬಗಿಬ್ಬ ಆದ್ರೆ ಸಿಹಿ ಅಡಿಗೆ ಮಾಡ್ತೀವಿ. ನನಗಂಡ ಕೂಡ ಕೆಲ್ಸಕ್ಕೆ ಹೋಗ್ತಾನೆ. ಮನೆಗೆ ಒಂದು ಪೈಸೆ ಕೊಡಲ್ಲ. ರಾತ್ರಿ ಕುಡಿದು ಬರ್ತಾನೆ ಕುಡಿದು ಬಂದು ಗಲಾಟೆ ಮಾಡ್ತಾನೆ. ಮಕ್ಕಳಿಗೆ ಬಡಿತಾನೆ ನನ್ನನ್ನು ಬಡಿತಾನೆ. ಏನ್ ಮಾಡ್ತಿ ನನ್ನ ಹಣೆಬರಹ ಹಂಗೈತಿ. ಇಂತವ್ರತ್ರ ಹೆಂಗೆ ಬಾಳ್ವೆ ಮಾಡೋದು. ನಮ್‌ದು ಗುಡಿಸಲು ಮನೆ ಸರ್ಕಾರ ಮನೆಗಳು ಬರ್ತಾವೆ, ಅವೆಲ್ಲ ಅವರವರ ಸಂಬಂಧಿಕರಿಗೆ ಮಾಡ್ಸಿಕೊಂತಾರೆ. ನಮ್ಮಂತವರಿಗೆ ಎಲ್ಲಿ ಕೊಡ್ತಾರೆ ಅದಕ್ಕೆ ದುಡ್ಡು ಕೇಳ್ತಾರೆ ಮತ್ತು ನನ್ ಗಂಡಗೆ ಕುಡಿಯೋದಿದ್ರೆ ಸಾಕು ಇಂತವೇನು ಕೇಳಲ್ಲಬಿಡಲ್ಲ. ಹಿಂಗಿರಿರಬೇಕಾದ್ರೆ ಹೆಂಗೆ ಮಾಡಿಕೊಡ್ತಾರೆ ನಮಗೆ ಎಲೆಕ್ಷನ್ ಬಂದಾಗ ಓಟೊಂದೇ ಕೇಳ್‌ಲಿಕ್ಕೆ ಬರ್ತಾರೆ ಆವಾಗ ಅಕ್ಕ, ಅಣ್ಣಾ, ಅಂತ ಗೆಲ್ಲಾಮಟ ಅಂತಾರೆ ಆ ಮೇಲೆ ನಮ್‌ಕಡಿಗೆ ತಿರುಗಿ ಸಹ ನೋಡೋದಿಲ್ಲ. ನಾನು ಒಂದು ಸಂಘಕ್ಕೆ ವಾರಕ್ಕೊಮ್ಮೆ ಮೂವತ್ತು ರೂಪಾಯಿ ಕಟ್ತೇನಿ ಯಾವಾಗಾದ್ರು ಬೇಕಾದಾಗ ಕೇಳಿದ್ರೆ ಸಂಘದ ಕಡೆಯಿಂದ ಕೊಡ್ತಾರೆ ಏನ್ ಮಾಡ್ತೀಯಪ್ಪ ಮನೆಯಲ್ಲಿ ಮಕ್ಳು ಶಾಲೆಗೆ ಹೋಗ್ತಾರೆ ಯಾವಾಗಾದ್ರೂ ಅರ್ಜಂಟಿದ್ದಾಗ ಬೇಕಾಗ್ತವೆ. ಅದಕ್ಕೆ ಸಂಘಕ್ಕೆ ಅಷ್ಟು ಇಷ್ಟು ಅಂತ ಕಟ್ಟಿದಕ್ಕೆ ಚೆನ್ನಾಗಿ ಆಗ್ತದೆ. ನಮ್ಮ ತಂದೆ ತಾಯಿ ಕೂಡ ತುಂಬಾ ಬಡವರು ಇಲ್ಲಾಂದ್ರೆ ಅವ್ರು ನನಗೆ ಸಹಾಯ ಆಗ್ತಿದ್ರು. ಎಲ್ಲಾ ಆ ದೇವರು ಇದ್ದಾನೆ. ಹೆಂಗೋ ಜೀವನ ಮಾಡ್ತೀವಿ. ನಮ್ ಹಣೆಬರಹ ಹಂಗೈತಿ ನೋಡ್ರಿ.

ಸಿಂತ್ಲಮ್ಮನ ಮಾತುಗಳು ಬೋರಮ್ಮನ ಮಾತುಗಳದೇ ಮತ್ತೊಂದು ವರಸೆಯಂತೆ ಕಾಣುತ್ತದೆ. ಆದರೆ 'ಕುಡಿತ'ವೊಂದು ಹೇಗೆ ಬೇಡ ಸಮುದಾಯದ ಮಹಿಳೆಯರನ್ನು ಶೋಷಿಸುತ್ತಿದೆ ಎನ್ನುವ ವಿವರ ಕೊಡುತ್ತಿದೆ. ಸಿದ್ಧಮ್ಮನ ಮಾತುಗಳಲ್ಲಿ ಬದುಕಿನ ಕಷ್ಟದ ಹಲವು ಆಯಾಮಗಳಿವೆ ತನ್ನ ಬದುಕಿನ ಕಷ್ಟಕ್ಕೆ ಬೋರಮ್ಮನಾಗಲಿ, ಸಿದ್ಧಮ್ಮನಾಗಲಿ ಯಾರನ್ನು ದೂಷಿಸುವುದಿಲ್ಲ ತಾವು ಪಡೆದದ್ದು ಎಂದು ಭಾವಿಸುತ್ತಾರೆ. ಇವರಿಬ್ಬರು ಇಡೀ ಬೇಡ ಸಮುದಾಯದ ಮಹಿಳೆಯರನ್ನು ಪ್ರತಿನಿಧಿಸುತ್ತಾರೆ.

೬.೩.ವ್ಯಾಪಾರ

ವ್ಯಾಪಾರ ಮಾಡುವ ಕುಶಲತೆ ಬಹಳ ಹಿಂದಿನಿಂದಲೂ ಬೆಳೆದು ಬಂದಿದ್ದು, ಸಮಾಜದಲ್ಲಿ ಬದುಕಬೇಕಾದ್ರೆ ಮಾನವನು ಯಾವುದಾದ್ರು ಒಂದು ಕೆಲಸದಲ್ಲಿ ತೊಡಗಿಸಿಕೊಳ್ಳಲೇ ಬೇಕಾಗುತ್ತದೆ. ಅದರಲ್ಲಿ ವ್ಯಾಪಾರ ಮಾಡಬೇಕಾದರೆ ಪೂರ್ವದಲ್ಲಿ ಆರ್ಥಿಕವಾಗಿ ಸಬಲತೆಯನ್ನು ಹೊಂದಲೇಬೇಕಾಗುತ್ತದೆ. ಕನಿಷ್ಟ, ವಾರದೊಳಗೆ ಇಂತಿಷ್ಟು ಹಣ ಲೇವಾದೇವಿ ಮಾಡ್ಲಿಕ್ಕೆ ಬೇಕಾಗುತ್ತದೆ. ಸಮಾಜದಲ್ಲಿ ಅತ್ಯಂತ ಕೆಳಸ್ಥರದಲ್ಲಿ ಬದುಕುತ್ತಿರುವ ಮ್ಯಾಸಬೇಡರ ಸಮುದಾಯದವರು ವ್ಯಾಪಾರದಲ್ಲಿ ತೊಡಗಿಸಿಕೊಂಡಿರುವುದು ತುಂಬಾ ವಿರಳ. ಇತ್ತೀಚೆಗೆ ಆರ್ಥಿಕವಾಗಿ ಸದೃಢರಾಗುತ್ತಿದ್ದಂತೆಯೇ ಕಿರಾಣಿ, ಕಾಯಿಪಲ್ಲೆ, ಹೂವಿನ ವ್ಯಾಪಾರ, ಕುರಿ, ಮೇಕೆ, ಮುಂತಾದ ವ್ಯಾಪಾರದಲ್ಲಿ ತೊಡಗಿದ್ದಾರೆ. ಮತ್ತು ಕೆಲವರು ಚೆಳಕೆರೆ,

ಬಳ್ಳಾರಿ, ದುರ್ಗದಲ್ಲಿ ದಲ್ಲಾಳಿತನವನ್ನು ಸಹ ಮಾಡುತ್ತಿದ್ದಾರೆ. ಹೀಗೆ ವ್ಯಾಪಾರದಲ್ಲಿ ತೊಡಗಿಸಿಕೊಂಡಿರುವ ಕೋನಸಾರಗ ಪಾಪಮ್ಮ ಹೇಳುವ ವಿವರ ಈ ಕೆಳಗಿನಂತಿದೆ:

ಹೆಸರು - ಪಾಪಮ್ಮ

ಊರು - ಕೋನಸಾಗರ



ವಯಸ್ಸು - ೫೨ ವರ್ಷ

ವೃತ್ತಿ - ವ್ಯಾಪಾರ

ಅಂಚೆ - ಕೋನಸಾಗರ

ತಾಲೂಕು - ಮೊಳಕಾಲ್ಮೂರು

ಜಿಲ್ಲೆ - ಚಿತ್ರದುರ್ಗ

ನನ್ನ ಹೆಸರು ತರಕಾರಿ ಪಾಪಮ್ಮ. ನನ್ನ ಊರು ಕೋನಸಾಗರ. ನಾನು ಹದಿನೈದು ಹದಿನಾರು ವರ್ಷದಿಂದ ಹೂವಿನ ವ್ಯಾಪಾರ ಮಾಡುತ್ತೇನೆ. ಜೊತೆಗೆ ಹಬ್ಬ ಹರಿದಿನಗಳು ಬಂದ್ರೆ ಬಾಳೆಹಣ್ಣು ತಂದು ಮಾರುತ್ತೇನೆ. ನಾನು ಹಿಂದೆ ಕೂಲಿ ಮಾಡಿ ಜೀವನ ಮಾಡ್ತಿದ್ದೇ. ಎರಡೂ ಎಕರೆ ಜಮೀನು ಇತ್ತು ಅದನ್ನು ಮಾಡಿಕೊಂಡು ಹೆಂಗೋ ಮಾಡಿ ಬೋರು ಹಾಕ್ಸಿವಿ ಆವಾಗಿನಿಂದ ನಾನು ವ್ಯಾಪಾರ ಮಾಡ್ಲಿಕ್ಕೆ ಶುರುಮಾಡಿದೆ. ದಿನಾಲು ತೋಟದಲ್ಲಿ ಹೋಗಿ ಹೂವು ತಗಂಡು ಬಂದು ಕಟ್ಟಿ ಮಾರ್ಲಿಕ್ಕೆ ಹೋಗ್ತಿನಿ, ಮಲ್ಲಿಗೆ 'ಹೂ' ಒಂದು ಕೆ.ಜಿ, ೨೦ ರಿಂದ ೧೧೦ರವರೆಗೆ ರೇಟು ಇರ್ತಾವೆ. ಕನಕಾಂಬ್ರ ೧೪೦ರಿಂದ ೧೫೦ರವರೆಗೆ ರೇಟ್ ಇರ್ತಾವೆ. ಹಿಂಗೆ ದಿನಾಲು ಹೂವು ಮಾರಿಯೇ ನಾನು ಜೀವನ ಮಾಡ್ತೀನಿ, ಮೊಳಕಾಲ್ಮೂರು, ಕೊಂಡ್ಲಳ್ಳಿ, ಚಳಕೆರೆ ಇನ್ನು ಬೇರೆ ಬೇರೆ ಕಡೆಗೆ ಹೋಗಿ ಮಾರಿ ಬರ್ತೀನಿ ನಾನು ಎಷ್ಟೆಷ್ಟು ಮಾರ್ತಿನೋ ಅದರ ಮೇಲೆ ವ್ಯಾಪಾರ ಆಗ್ತದೆ. ಹಬ್ಬ ಏನಾದ್ರು ಬಂದ್ರೆ ಬಾಳೆಗೊನೆ ತಂದು ಮಾರ್ತಿನಿ ಅದು ಕೂಡ ಒಂದೊಂದು ಗೊನೆಗೆ ೧೫ರಿಂದ ೨೦ರೂಪಾಯಿ ಲಾಭ ಸಿಗ್ತದೆ. ಮನೆಯಲ್ಲಿ ಎಲ್ಲಾ ಮಕ್ಳಗೆ ಮದುವೆಯಾಗಿದೆ. ನಾನು ದುಡಿದದ್ದು ನನಗೆ. ಒಟ್ಟಾರೆಯಾಗಿ ಕಷ್ಟಪಡ್ಲಾರ್ದಂಗೆ ಅರಾಮಾಗಿ ಜೀವನ ಮಾಡ್ತೀನಿ, ಸ್ವ-ಸಹಾಯ ಸಂಘಮಾಡಿಕೊಂಡೀವಿ ವಾರಕ್ಕೆ ಐವತ್ ರಿಂದ ಅರವತ್ತು ರೂಪಾಯಿ ಸಂಘಕ್ಕೆ ಕಟ್ತೀನಿ, ಮನೆಯಲ್ಲಿ ಮಕ್ಳು ಇಬ್ಬರೂ ಇದ್ದಾರೆ ಒಬ್ಬ ಮಗಳು ಇದ್ದಾಳೆ ಅರಾಮಾಗಿ ದುಡ್ಕೊಂಡ ಇದ್ದಿವಿ. ಟಿ. ವಿ ಇದೆ ರಾತ್ರಿ ಹೊತ್ತು ಧಾರವಾಹಿ ಯಾವುದಾದ್ರು ಸಿನಿಮಾ ಇದ್ರೆ ನೋಡ್ತೀವಿ. ಒಟೇನಪ್ಪ ನಮ್ ಹೊಟ್ಟೆಗೆ ಬಟ್ಟೆಗೆ ಏನು ತಾಪತ್ರಯ್ ಇಲ್ಲ ಚೆನ್ನಾಗಿದ್ದೀವಿ ನೋಡ್ರಿ, ನಾವೇನು.

ಇಲ್ಲಿ ಹೂವಿನ ವ್ಯಾಪಾರ ಮಾಡುವ ಪಾಪಮ್ಮನ ಅನುಭವ ಭಿನ್ನವಾಗಿದೆ. ಕೂಲಿಕಾರ ಮಹಿಳೆಯರಿಗಿಂತ ಸ್ವಲ್ಪ ಉತ್ತಮವಾಗಿದೆ. ಹಣದ ಉಳಿತಾಯ ಮಾಡಲು ಪಾಪಮ್ಮ ಮುಂದಾಗಿದ್ದಾರೆ.

ವ್ಯಾಪಾರದ ನಂತರ ತನ್ನ ಟಿ.ವಿ ನೋಡುವ ಆ ಮೂಲಕ ದಣಿವು ಮರೆಯುವ ತನ್ನ ಜಗತ್ತಿನ ಜೊತೆ ಬೇರೆ ಜಗತ್ತನ್ನು ಆಹ್ವಾನಿಸಿಕೊಳ್ಳುವ ಹಂತಕ್ಕಾದರೂ ಪಾಪಮ್ಮ ತಲುಪಿರುವುದನ್ನು ಗಮನಿಸಬಹುದಾಗಿದೆ.

ಮೋತ್ಲುಕುಂಟೆ ತಿಪ್ಪೇಸ್ವಾಮಿಯವರು ತಮ್ಮ ವ್ಯಾಪಾರದ ಅನುಭವ ಈ ರೀತಿಯಾಗಿದೆ:

ಹೆಸರು - ತಿಪ್ಪೇಸ್ವಾಮಿ

ಊರು - ಮೋತ್ಲುಕುಂಟೆ

ವಯಸ್ಸು - ೬೨ ವರ್ಷ

ವೃತ್ತಿ - ವ್ಯಾಪಾರ

ಅಂಚೆ - ಮೋತ್ಲುಕುಂಟೆ

ತಾಲೂಕು - ಮೊಳಕಾಲ್ಮೂರು

ಜಿಲ್ಲೆ - ಚಿತ್ರದುರ್ಗ

ನನ್ನ ಹೆಸರು ತಿಪ್ಪೇಸ್ವಾಮಿ ನಮದು ಮೋತ್ಲುಕುಂಟೆ ಊರು, ಮೊಳಕಾಲ್ಮೂರು ತಾಲ್ಲೂಕು ಚಿತ್ರದುರ್ಗ ಜಿಲ್ಲೆ ನಾನು ಐದನೆ ಕ್ಲಾಸ್ ಓದಿದ್ದೆ, ನಮ್ ಕಾಲ್ದದಲ್ಲಿ ನನಗೆ ಓದ್ಲಿಕ್ಕೆ ಲೆಕ್ಕಗಿಕ್ಕ ಎಲ್ಲ ಮಾಡ್ತೀನಿ, ನಮುದು ೨೦ ಎಕರೆ ಜಮೀನು ಇದೆ ೬ ಎಕರೆ ನೀರಾವರಿ ೧೪ ಎಕರೆ ಎರೆ ಭೂಮಿ ಇದೆ. ನಾನು ವ್ಯಾಪಾರ ಶುರು ಮಾಡಿದ್ದು ೧೨ ವರ್ಷದಿಂದ ನಾನು ಬರೇ ಕುರಿ ಮೇಕೆ ವ್ಯಾಪಾರ ಮಾಡ್ತಿನಿ ಮಕ್ಕಳು ಇಬ್ರು ಇದ್ದಾರೆ ಅವ್ರಿಗೆ ಮದ್ವೆ ಮಾಡಿದ್ದೇನೆ. ಅವ್ರೆಲ್ಲಾ ಹೊಲ್ದಲ್ಲಿ ಕೆಲಸ ನೋಡಿಕೊಳ್ತಾರೆ ನಾನು ಮಾತ್ರ ವ್ಯಾಪಾರ ಮಾಡ್ತೀನಿ. ಈ ವ್ಯಾಪಾರ ಮಾಡ್ಬೇಕಂದ್ರೆ ಕೈಯಾಗ ರೊಕ್ಕ ಇರಬೇಕು ಇಲ್ಲಂದ್ರೆ ವ್ಯಾಪಾರ ಮಾಡ್ಲಿಕ್ಕೆ ಆಗಲ್ಲ. ಎಂತೆಂತವರೋ ಇವತ್ತು ದಿವಾಳಿಯಾಗಿ ಮನೆಯಲ್ಲಿ ಕುಂತಾರೆ, ನಾನು ಹೆಚ್ಚು ಕಡಿಮೆ ಒಂದೊಂದು ಟೈಮು ಒಂದೊಂದು ಲಕ್ಷದವರಿಗೆ ವ್ಯಾಪಾರ ಮಾಡ್ತೀನಿ. ಅದು ಯಾವಾಗೋ ಒಂದು ಟೈಮು ಕೆಲವರು ಅರ್ಜಂಟಿದ್ದು ಇರಬರ ಕುರಿ ಮಾರ್ತಾರಲ್ಲ ಆಗ ದೊಡ್ಡ ವ್ಯಾಪಾರ ಮಾಡ್ತೀವಿ. ನಾನು ವ್ಯಾಪಾರ ದುರ್ಗ, ಮೊಳಕಾಲ್ಮೂರು, ರಾಂಪುರ, ಬಳ್ಳಾರಿ, ಬಣವಿಕಲ್ಲು, ಒಟ್ಟು ನಮ್ ಸುತ್ತಮುತ್ತ ಎಷ್ಟು ಊರುಗಳಲ್ಲಿ ವ್ಯಾಪಾರ ನಡಿಯುತ್ತದೋ ಅಷ್ಟೆಲ್ಲಾ ಊರುಗಳಿಗೆ ಹೋಗ್ತಿನಿ. ಜಾಸ್ತಿ ಅಂದ್ರೆ ಇಲ್ಲೇ ನಮ್ಮೂರು ಹತ್ತಿರ ರಾಂಪುರದಲ್ಲಿ ಶನಿವಾರ ಮತ್ತು ಸೋಮುವಾರ ಕಾಯಂ ಆಗಿ ಇದ್ದೇ ಇರ್ತದೆ ಜಾಸ್ತಿ ಮಾಲು ಇದ್ರೆ ದುರ್ಗಕ್ಕೆ ಹೋಗ್ತೀವಿ. ಒಂದೊಂದು ವಾರ ಸಾವಿರಗಟ್ಲೆ ಸಿಗ್ತೈತೆ ಒಂದೊಂದು ವಾರ ಪೂರ ಲಾಸ್ ಆಗ್ತೈತೆ ಎಷ್ಟು ಕಂಟ್ರೋಲ್ ಆಗಿ ಮಾಡಿದ್ರು ಸಹ ಒಂದೊಂದು ಟೈಮು ಹೆಚ್ಚು ಕಡಿಮೆ ಆಗ್ತದೆ. ನಾನು ಮಾತ್ರ ಜಾಸ್ತಿ ಲಾಸ್ ಮಾಡ್ಕೊಂಡಿಲ್ಲ ಈ ವ್ಯಾಪಾರ ಮಾಡಿ ಐದು ಎಕರೆ ಹೊಲ ಮಾಡಿದ್ದೇನೆ. ಮನೆಕಟ್ಸೀನಿ ಒಂದು ಬೋರ್ ಹಾಕ್ಸಿದ್ದೀನಿ, ನನಗೇನು ಲಾಸು ಇಲ್ಲ ಇದ್ರಾಗೆ ಅನುಭವ ಇದ್ರೋರ್ ಮಾತ್ರ ವ್ಯಾಪಾರ ಇಲ್ಲಂದ್ರೆ ಇಲ್ಲನೋಡ್ರಿ, ಯಾವುದಾದ್ರು ರೋಗ-ಗೀಗ ಬಂದ್ರಂತೂ ಗೂಡು ಗೂಡೇ ಜನಮಾರ್ತಾರೆ. ಯಾಕೆಂದ್ರೆ ಈ ಕುರಿ ಮೇಕೆಗಳಿಗೆ ರೋಗ

ಬಂತಂದ್ರೆ, ಒಂದೂ ಉಳಿಯಲ್ಲ ಎಲ್ಲಾ ಹೋಗ್ತಾವೆ. ಅಂತಹ ಸಂದರ್ಭದಲ್ಲಿ ನಾವು ಖರೀದಿಸಿ ಹೆಚ್ಚು ದುಡ್ಡು ಮಾಡಿಕೊಳ್ತೀವಿ, ಮತ್ತೇ ಅವ್ರಿಗೆ ಬೇರೆ ತಂದು ಕೊಡ್ತೀವಿ, ಹೊಲ್ದಲ್ಲಿ ಮಕ್ಳು ಮಾಡ್ತಾರೆ ನಾನೇನು ವಾರದಾಗ ಎರಡು ಮೂರು ಸಲ ಹೋಗಿ ಬರ್‍ತೀನಿ. ಮಕ್ಕಳೇ ಚೆನ್ನಾಗಿ ನೋಡಿಕೊಳ್ತಾರೆ. ನಾನೇನು ಆ ಕಡೆಗೆ ಜಾಸ್ತಿ ತಲೆ ಹಾಕಂಗಿಲ್ಲ ನೋಡ್ರಿ, ಸದ್ಯಕ್ಕೆ ಇಂಗಿದಿವಿ. ಮುಂದೆಂಗೊತ್ತಿಲ್ಲ.

ಜಾನುವಾರು ವ್ಯಾಪಾರಿ ತಿಪ್ಪೇಸ್ವಾಮಿಯ ಅನುಭವವನ್ನು ನೋಡಿ ಜಾನುವಾರು ಕಾಯುವವರು, ಮಾರುವವರು ಬಹುಪಾಲು ಪಶುಪಾಲಕ ಸಮುದಾಯವು ಪಾಲ್ಗೊಳ್ಳುತ್ತಿರುವುದನ್ನು ಗಮನಿಸಬಹುದು. ತಿಪ್ಪೇಸ್ವಾಮಿಯವರ ಮಾತಿನಲ್ಲಿ ಈ ಭಾಗದಲ್ಲಿ ಹೆಚ್ಚು ಪಶುಪಾಲನೆಯನ್ನು ಅವಲಂಭಿಸಿದ ಬಗ್ಗೆ ತಿಳಿಯುತ್ತದೆ. ಅಂತೆಯೇ ಈ ಬಗೆಯ ವ್ಯಾಪರವೂ ಕಷ್ಟ ನಷ್ಟದಿಂದ ಕೂಡಿರುತ್ತದೆ. ಹೆಚ್ಚು ಅನುಭವ ಹೊಂದಿರುವವರು ಮಾತ್ರ ಇದರಲ್ಲಿ ಯಶಸ್ವಿಯಾಗಲು ಸಾಧ್ಯ ಎಂಬುದನ್ನು ಪ್ರಮುಖವಾಗಿ ತಿಳಿಯಬಹುದಾಗಿದೆ.


೬.೪. ಕೃಷಿ

ಕರ್ನಾಟಕದಲ್ಲಿ ಮ್ಯಾಸಬೇಡರ ಸಮುದಾಯ ಕೃಷಿಯಲ್ಲಿ ಸಾಧಾರಣ ಮಟ್ಟದಲ್ಲಿ ತೊಡಗಿಸಿಕೊಂಡಿದ್ದಾರೆ ಎಂಬುದು ತಿಳಿದು ಬರುತ್ತದೆ. ಇವರು ಭೂಮಿಯನ್ನು ಹೊಂದಿರುವುದು ತುಂಬಾ ಕಡಿಮೆ. ಒಂದು ಕಾಲದಲ್ಲಿ ಇದ್ದರೂ ಸಹ ಅದನ್ನು ಇತರೆ ಮೇಲ್ವರ್ಗದ ಸಮುದಾಯಗಳು ಅಷ್ಟು ಇಷ್ಟು ಹಣದ ಆಸೆ ತೋರಿಸಿ ವಶಪಡಿಸಿಕೊಂಡಿದ್ದಾರೆ. ಇನ್ನು ಉಳಿದಿರುವುದು ಅಲ್ಪ ಸ್ವಲ್ಪ ಅದರಲ್ಲಿ ಇರುವವರು ಅತಿ ಸಣ್ಣ ರೈತರು ಹಾಗೂ ಕೃಷಿ ಕಾರ್ಮಿಕರೇ ಹೆಚ್ಚು. ಅತಿ ದೊಡ್ಡ ಭೂ ಹಿಡುವಳಿದಾರರು ಯಾರು ಇಲ್ಲ ಇದ್ದರೂ ಎಲ್ಲೋ ಬೆರಳೆಣಿಕೆಯಷ್ಟು ಸಿಗುತ್ತಾರೆ. ಕೆಲವರು ಭೂಮಿಯನ್ನು ಹೊಂದಿದ್ದರೂ ಸಹ ಅವು ತಗ್ಗುದಿಣ್ಣೆಗಳಿಂದ ಕೂಡಿರುವುದು. ಜೌಗು ಪ್ರದೇಶವೋ, ನೀರಾವರಿಗೆ ಸಮರ್ಪಕವಲ್ಲದ ಕೃಷಿಗೆ ಯೋಗ್ಯವಲ್ಲದ ಬಂಜರು ಭೂಮಿಯನ್ನು ಹೊಂದಿರುವುದು ಕಂಡು ಬರುತ್ತದೆ. ಇದಕ್ಕೆಲ್ಲ ಕಾರಣವೆಂದರೆ ಇತರೆ ಬೇರೆ ಸಮುದಾಯಗಳ ದಬ್ಬಾಳಿಕೆ ಮತ್ತು ತಮ್ಮ ಉಪಜೀವನಕ್ಕಾಗಿ ಪಶುಸಂಗೋಪನೆಯೇ ತಮಗೆ ಯೋಗ್ಯವೆಂದು ನಂಬಿ ಬದುಕುತ್ತಿರುವುದು ಪ್ರಮುಖದ್ದಾಗಿದೆ. ಇವರಲ್ಲಿ ಕೃಷಿ ಕಾರ್ಮಿಕರ ಸ್ಥಿತಿ ತುಂಬಾ ನಿಕೃಷ್ಟವಾದುದಾಗಿದೆ. ಇತ್ತೀಚೆಗೆ ಕೃಷಿಯಲ್ಲಿ ಸಹ ಆಧುನಿಕ ತಂತ್ರಜ್ಞಾನದ ಸಲಕರಣೆಗಳನ್ನು ಬಳಸುವುದರಿಂದ ಕೂಲಿ ಕೆಲಸವು ಸಹ ಸಿಗದಂತಹ ಪರಿಸ್ಥಿತಿಯಲ್ಲಿ ಬದುಕುತ್ತಿದ್ದಾರೆ.

ಇವರಲ್ಲಿ ಕೆಲವರು ಮೇಲ್ವರ್ಗದ ಸಮುದಾಯಗಳ ಜಮೀನಿನಲ್ಲಿ ಮತ್ತು ಮನೆಗಳಲ್ಲಿ ಜೀತದಾಳುಗಳಾಗಿ ದುಡಿಯುತ್ತಿದ್ದಾರೆ. ಇನ್ನೂ ಇವರಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರ ಸ್ಥಿತಿ ಹೇಳಲಾರದು. ಇವರು ತಾಂತ್ರಿಕ ಕಾರಣಗಳಿಂದಾಗಿ ತಮ್ಮ ಕೃಷಿ ಪದ್ಧತಿಗೆ ಹೊಸ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಲು ಸಾಧ್ಯವಾಗುವುದಿಲ್ಲ ಜೊತೆಗೆ ನೀರಾವರಿ ಸೌಲಭ್ಯವನ್ನು ಕಲ್ಪಿಸಿಕೊಳ್ಳಲು ಆಗ್ತಾಇಲ್ಲ. ಇದಲ್ಲದೆ ತಾಂತ್ರಿಕ ಕಾರಣ ನೀಡಿ ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳ ಸಾಲ ನೀಡುವುದಿಲ್ಲ. ಮಳೆಯ

ಪ್ರಮಾಣ ಕಡಿಮೆಯಾಗಿ ಕೃಷಿ ಮಾಡುವುದು ತುಂಬಾ ಕಡಿಮೆಯಾಗಿದೆ. ಇತ್ತೀಚೆಗೆ ನಾಲ್ಕು ಅಥವಾ ಐದು ವರ್ಷಗಳಿಂದ ಬರಗಾಲ ಬಂದು ಜನರು ಸಂಚಾರಿಗಳಾಗಿ ವಲಸೆ ಹೋಗುತ್ತಿದ್ದಾರೆ. ಬರಗಾಲದಿಂದ ನದಿಗಳಲ್ಲಿ ನೀರು ಕಡಿಮೆಯಾಗಿ ಕೊಳವೆಬಾವಿಗಳು ಬತ್ತಿಹೋಗುತ್ತಿವೆ. ಭತ್ತ, ರಾಗಿ, ಜೋಳ, ಕಡಲೆ ಮುಂತಾದ ಬೆಳೆಗಳನ್ನು ಬೆಳೆಯುತ್ತಿದ್ದು ಅವು ಅಷ್ಟಕ್ಕಷ್ಟೇ. ತಮ್ಮ ಉಪಜೀವನಕ್ಕಾಗಿ ಇತರೆ ಕುಲಕಸುಬು, ಕುರಿಸಾಕಾಣಿಕೆ, ಪಶುಸಂಗೋಪನೆ ಜೊತೆಗೆ ಸಣ್ಣಪುಟ್ಟ ವ್ಯಾಪಾರಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಸಾಮಾನ್ಯವಾಗಿ ಊರು ಮತ್ತು ಪಟ್ಟಣಗಳಲ್ಲಿ ವಾರಕ್ಕೊಮ್ಮೆ ಜರುಗುವ ಕುರಿ ಸಂತೆ ಮತ್ತು ಮೇಕೆಗಳ ಸಂತೆಯಲ್ಲಿ ಈ ಸಮುದಾಯವೇ ಅತಿ ಹೆಚ್ಚು ಪಾಲ್ಗೊಳ್ಳುತ್ತದೆ. ಇವರು ಕುರಿ ವ್ಯಾಪಾರವನ್ನು ಉಪವೃತ್ತಿಯನ್ನಾಗಿಸಿಕೊಂಡಿದ್ದಾರೆ. ತಮ್ಮ ಹೊಲಗಳಲ್ಲಿ ಬೆಳೆಯುವ ಆಹಾರಧಾನ್ಯ ವಾಣಿಜ್ಯ ಬೆಳೆಗಳನ್ನು ಪಕ್ಕದ ಪಟ್ಟಣಗಳಲ್ಲಿ ಕೊಂಡೊಯ್ದು ವ್ಯಾಪಾರಜ್ಞಾನವನ್ನು ಬೆಳೆಸಿಕೊಂಡಿದ್ದಾರೆ.

ಕಲೆ ದೇವಾಪುರದ ಮುದಿಯಪ್ಪ ಕೃಷಿಯನ್ನು ಕುರಿತು ಹೇಳುವ ವಿವರ ಈಗಿದೆ:



ಹೆಸರು - ಮುದಿಯಪ್ಪ

ಊರು - ಕಲೆದೇವಾಪುರ

ವಯಸ್ಸು - ೭೫ ವರ್ಷ

ವೃತ್ತಿ - ವ್ಯವಸಾಯ

ಅಂಚೆ - ಕಲೆದೇವಾಪುರ

ಜಿಲ್ಲೆ - ಚಿತ್ರದುರ್ಗ

ನನ್ನ ಹೆಸರು ಮುದಿಯಪ್ಪ. ನಮದು ಇಪತ್ತು ಎಕರೆ ಭೂಮಿ ಇದೆ. ಐದು ಎಕರೆ ನೀರಾವರಿ ಹದಿನೈದು ಎಕರೆ ಎರೆಭೂಮಿ ಇದೆ. ನಾವು ಪೂರ್ವದಿಂದ್ಲೆ ವ್ಯವಸಾಯ ಮಾಡ್ಕೊಂಡು ಬಂದೀವಿ. ನಮ್ ತಾತನವರ ಕಾಲದಿಂದ್ಲೂ ಮಾಡಿಕೊಂಡು ಬಂದಾರೆ ನಾವು ಕೂಡ ಹಂಗೆ ಮುಂದುವರೆಸಿಕೊಂಡು ಬಂದೀವಿ. ನಾಲ್ಕು ಎತ್ತುಗಳಿದಾವೆ. ಹಿಂದೆ ಭಾವಿ ಇತ್ತು. ಬರ್ತಾ ಬರ್ತಾ ಬಾವಿಯಲ್ಲಿ ನೀರು ಹೋದ್ಮು ಅದಕ್ಕೆ ಬೋರ್‌ವೆಲ್ ಮಾಡಿಕೊಂಡು ಮಾಡ್ತಾ ಇದ್ವೀವಿ ನೋಡ್ರಿ, ನಾವು ಮುಂಗಾರಿ ಬೆಳೆಯನ್ನು ಹತ್ತಿ, ಈರುಳ್ಳಿ, ಜೋಳ ಶೇಂಗ ಬೆಳೆಯನ್ನು ಬೆಳಿತೀವಿ, ಜೊತೆ ಉರುಳಿ ಹಾಕ್ತೀವಿ. ಹತ್ತಿಯಾವಾಗ್ಲೂ ಒಂದೇ ರೇಟ್ ಇರ್ತದೆ ಅದ್ರಿಂದೇನು ಲಾಸ್ ಇಲ್ಲ. ಈ ವರ್ಷ ಈರುಳ್ಳಿಯಿಂದ ಬಹಳ ಲಾಸಾಗಿದೆ. ನೋಡ್ರಿ. ಎರಡು ಲೋಡ್ ಈ ಬೆಳದಿದ್ವಿ ಕ್ವಿಂಟಾಲ್ ಬರಿ ನಾಲ್ಕುನೂರು ರೂಪಾಯಿಯಂತೆ ಕೊಟ್ಟಿವಿ ನೋಡ್ರಿ, ಜೋಳ ಎರಡು ಎಕರೆಗೆ ಹಾಕ್ತೀವಿ ಅವೇನು ಮಾರುವುದಿಲ್ಲ ತಿನ್ನಲ್ಲಿಕ್ಕೆ ಉಪಯೋಗಿಸುತ್ತೇವೆ. ೩೦ರಿಂದ ೪೦ ಚೀಲ ಬೆಳೆತೀವಿ ಅದ್ರಲ್ಲೇ ಕೂಲಿ ಆಳುಗಳಿಗೆ ಕೊಡಬೇಕು. ಅದ್ರಲ್ಲೇ ಮನೆಗೆ ಬಳಕೆ ಮಾಡ್ತೀವಿ. ಶೇಂಗ ಹತ್ತು ಎಕರೆಗೆ ಬರೀ ಶೇಂಗ ಹಾಕಿವಿ. ಅದು ಬೀಜ ಗೊಬ್ಬರಂತೆ ಅದ್ರದ್ದೇ ಬಹಳ ಖರ್ಚು ನಮ್‌ಗೆ ಎರಡು ಮೂರು ವರ್ಷದಿಂದ ಸರಿಯಾಗಿ ಮಳೆ



ಬರಲ್ಲ ಬರೀ ಕೈಕೊಡ್ತದೆ. ಬಹಳ ಲಾಸ್ ಆಗ್ತದೆ. ಏನ್ ಮಾಡ್ಲಿಕ್ಕೆ ಆಗಲ್ಲ ದೇವರು ಕೆಡ್ಸಿದ್ರೆ ಏನು ಲಾಸ್ ಇಲ್ಲ, ಒಂದು ವರ್ಷ ಕೆಡ್ಸಿದ್ರೆ ಒಂದು ವರ್ಷ ಕೊಡ್ತಾನೆ ಅಂತ ನಂಬಿಕೆ ಇಟ್ಕಬೇಕ್ರಿ. ಹತ್ತಿ ಬೆಳೆ ಅದಕ್ಕೆ ಅದು ಇದು ಅಂತ ರೋಗ ಬರ್ತದೆ ಔಷಧಿ ಹಾಕ್‌ಬೇಕು. ಬರಿ ಔಷಧದ್ದೇ ಹದಿನೈದು ಹದಿನಾರು ಸಾವಿರ ಆಗ್ಗೈತೆ ಆದ್ರೆ ಒಂದು ಮೂವತ್ತು ಸಾವಿರ ಬೆಳೆಸಿಗ್ಗೈತೆ. ಅದ್ರಿಂದ್ರೇನು ಲಾಸ್ ಇಲ್ಲ ಒಳ್ಳೆಯ ಬೆಳೆ ಯಾವಾಗ್ಲೂ ಒಂದೇ ರೇಟ್ ಇರ್ತದೆ ನೋಡ್ರಿ ಅದು. ಅದ್ರದ್ದೆ ನಮ್‌ಗೆ ದುಡ್ಡು, ಚೆನ್ನಾಗಿ ಬೆಳೆದ್ರೆ ಈರುಳ್ಳಿನೇ ಎರಡುವರೆ ಮೂರು ಲಕ್ಷ ಆಗ್ತದೆ. ಆದ್ರೆ ಅದು ಲಾಟ್ರಿ ಇದ್ದಂಗೆ ಯಾವಾಗ ರೇಟ್ ಇರ್ತತೋ ಯಾವಾಗ ಇಳಿತತೋ ಗೊತ್ತೇ ಆಗಲ್ಲ "ಮಳೆ, ಮಾರಾಟ, ಮರಣ" ಇವು ಯಾವಾಗ ಬೇಕಾದ್ರು ಬರ್ತಾವೆ ಯಾವಾಗ ಬೇಕಾದ್ರು ಹೋಗ್ತಾವೆ. ಇವುಗಳನ್ನು ನಂಬಂಗಿಲ್ಲ. ನಾವು ೨೪ ಜನ ಇದ್ದೀವಿ. ಮೂವರು ಅಣ್ಣ ತಮ್ಮಂದ್ರಿ ಇನ್ನು ಯಾರು ಬೇರೆ ಆಗಿಲ್ಲ ಕೂಡಿಯೇ ಇದ್ದೇವೆ. ಮೂವರು ಶಾಲೆಗೆ ಹೋಗ್ತಾರೆ. ಅವ್ರುದು ಬಹಳ ಖರ್ಚು ಬರ್ತೈತಿ. ನೋಡ್ರಿ ಈಗಿನ ಕಾಲ್ದಲ್ಲಿ ಬಹಳ ಕಷ್ಟ "ಬೇಸಾಯ, ನೀನ್ ಸಾಯ, ನಿನ್ನ ಹೆಂಡ್ರು ಮಕ್ಳು ಸಾಯ ಅದಂಗೆ" ದುಡ್ಡು ದುಡ್ಡು ಅಂತ ಹಿಂಗೆ ಸಾಯ್ ಬೇಕು ನೋಡ್ರಿ, ಕೂಲಿ ಮಾಡ್ಕೊಂಡು ಇರೋದೆ ಒಳ್ಳೆಯದು ಈಗಿನ ಕಾಲದಲ್ಲಿ ಹಿಂಗಾರಿ ಬೆಳೆ ಮೆಕ್ಕೇ ಜೋಳ, ಬದ್ನೇಕಾಯಿ ಆಕ್ತೀವಿ, ಅವು ಕೂಡ ಪರವಾಗಿಲ್ಲ ಚೆನ್ನಾಗಿ ಬೆಳಿತೀವಿ, ದುಡಿದ ದುಡ್ಡೆಲ್ಲಾ ಬರಿ ಹೆಣ್ಣು ಮಕ್ಕಳು ಆಗಿದ್ದಾರೆ ಅವ್ರಿಗೆ ಮದುವೆಗೆ ಹೋಗ್ತಾವೆ ಏನು ಅಷ್ಟು ಇಷ್ಟು ಅರ್ಜಂಟಿಗೆ ಇರ್ಲಿ ಅಂತ ಬ್ಯಾಂಕಿನಲ್ಲಿ ಇಟ್ಕಂಡೀವಿ. ಜೋಳವನ್ನು ತೆನೆಕೊಯ್ದು ಕಣದಲ್ಲಿ ಮೂರು ನಾಲ್ಕು ತಿಂಗಳು ಬಿಡ್ತೀವಿ ಅದಕ್ಕೆ ಭದ್ರವಾಗಿ ಸಪ್ಪೆಕಟ್ಟಿ ಗೂಡುತರಹ ಕಟ್ಟಿ ಬಿಡ್ತೀವಿ ಉಗಾದಿ ಹಬ್ಬದ ಸಂದರ್ಭದಲ್ಲಿ ಮಿಷನ್ ತಂದು ಮನೆಗೆ ಹಾಕ್ಕೋಳ್ತೀವಿ, ಟಿ.ವಿ ಮಾಡ್ಕೊಂಡೀವಿ ಏನೋ ರಾತ್ರಿ ಟಿ.ವಿ. ನೋಡ್ತೀವಿ, ನೋಡ್ರಿ ನಮ್ಮವೇನು ಕುರಿಗಿರಿ ಇಲ್ಲ ಐದು ಎಮ್ಮೆ, ನಾಲ್ಕು ಆಕಳುಗಳಿದಾವೆ, ಅದೇ ಗೊಬ್ಬರ ಹೊಲಕ್ಕೆ ಹಾಕ್ತಿವಿ ನೋಡ್ರಿ ಇಷ್ಟೆಲ್ಲಾ ಇದೆ ನೋಡ್ರಿ ಬೇಸಾಯ ಮಾಡೋರ್ ಕೆಲಸ.

ಮುದಿಯಪ್ಪ ಮಾತುಗಳನ್ನು ಗಮನಿಸಿದರೆ ಕೃಷಿಕರೆಲ್ಲ ಸ್ವಲ್ಪ ಉತ್ತಮ ಸ್ಥಿತಿಯರಂತೆ ಕಾಣುತ್ತಾರೆ. ಕೃಷಿಕರ ಕಷ್ಟದ ನಾನಾ ಮುಖಗಳನ್ನು ಇಲ್ಲಿ ಕಾಣಬಹುದು. ಇದು ಸಹ ಕೇವಲ ಬೇಡ ಸಮುದಾಯದ ಕೃಷಿಕರಿಗೆ ಇರುವ ಸಮಸ್ಯೆಗಳು ಎಂದು ಭಾವಿಸಲು ಬರುವುದಿಲ್ಲ. ಒಟ್ಟು ಕೃಷಿಕರ ಸಮಸ್ಯೆಯ ಸ್ವರೂಪ ಅಂತಲೇ ಪರಿಭಾವಿಸಬೇಕಾಗುತ್ತದೆ. ಇದರಲ್ಲಿ ಬೇಡರ ಪ್ರತಿನಿಧಿಕರಣದ ಸ್ವರೂಪದ ಎಂಥದ್ದು ಎಂದು ತಿಳಿಯಲು ಸಣ್ಣ ಸೂರಯ್ಯನ ಮಾತುಗಳು ಸಹಕಾರಿಯಾಗುತ್ತವೆ. ಇಲ್ಲಿ ಬೆಳೆ ಪದ್ಧತಿಯು ಸಾಂಪ್ರದಾಯಿಕ ಬೆಳೆ ಪದ್ಧತಿಯಿಂದ ಆಧುನಿಕ ವಾಣಿಜ್ಯ ಬೆಳೆ ಪದ್ಧತಿಯನ್ನು ಅನುಸರಿಸಿರುವುದನ್ನು ಕಾಣಬಹುದು. ಅಂತೆಯೇ ಆಧುನಿಕ ಕೃಷಿ ಪದ್ಧತಿಗೂ ಪಕ್ಕಾಗಿರುವ ಲಕ್ಷಣಗಳು ಈ ಮಾತುಗಳಲ್ಲಿ ಕಾಣಿಸುತ್ತವೆ. ಅಂತೆಯೇ ಕೃಷಿಯು ತಂದೊಡ್ಡುವ ಸವಾಲುಗಳ ಬಗ್ಗೆಯೂ ಸೂರಯ್ಯ ಹೇಳುತ್ತಾರೆ. ಹೀಗೆ ಕೃಷಿಯನ್ನು ಆಧರಿಸಿದ ಬೇಡರ ಬದುಕು ಸೂರಯ್ಯ ಹೇಳುವ ಹಲವು ಸಂಗತಿಗಳಿಗಿಂತ ಭಿನ್ನವಾಗಿಲ್ಲ.

೬.೫.ಪಶುಪಾಲನೆ

ಪಶುಪಾನೆಯು ಗೊಲ್ಲ ಮತ್ತು ಬೇಡ ಸಮುದಾಯದ ಪ್ರಮುಖ ಸಾಂಪ್ರದಾಯಿಕ ಕಸುಬು. ಈ ಎರಡು ಸಮುದಾಯಗಳು ತಮ್ಮ ವೃತ್ತಿಯನ್ನು ಪ್ರಾಚೀನ ಕಾಲದಿಂದಲೂ ಬೆಳೆಸಿಕೊಂಡು ಬಂದಿದ್ದಾರೆ. ಗೊಲ್ಲ ಸಮುದಾಯ ಇತ್ತೀಚೆಗೆ ವೃತ್ತಿಯನ್ನು ಕೈಬಿಟ್ಟು ಕೇವಲ ಕುರಿ ಸಾಕಾಣಿಕೆಯನ್ನು ಮಾತ್ರ ರೂಢಿಸಿಕೊಂಡಿದೆ. ಆದರೆ ಮ್ಯಾಸಬೇಡರು ಈ ವೃತ್ತಿಯನ್ನು ಈಗಲೂ ಜೀವಂತವಾಗಿ ಸಾಗಿಸಿಕೊಂಡು ಬಂದಿದ್ದಾರೆ. ಅಲೆಮಾರಿಗಳೆಂದೇ ಒಂದು ಕಾಲದಲ್ಲಿ ಪ್ರಸಿದ್ಧಿಯನ್ನು ಪಡೆದಿರುವ ಈ ಸಮುದಾಯ ಇಂದು ಕೂಡ ಹೆಚ್ಚಾಗಿ ಕಾಡು ಮೇಡುಗಳಲ್ಲಿ ಹೆಚ್ಚಾಗಿ ವಾಸಿಸುತ್ತಿದ್ದು, ದನ ಕರುಗಳನ್ನು ಸಾಕಿ ಅವುಗಳ ಹಾಲು, ಮೊಸರು, ತುಪ್ಪವನ್ನು ಮಾರಿ ಜೀವನ ಸಾಗಿಸುತ್ತಿದ್ದಾರೆ. ಆದರೆ ಕಾಡುಗಳು ಕಾಲ ಬದಲಾದಂತೆಲ್ಲ ಕ್ರಮೇಣ ಕಡಿಮೆಯಾಗತೊಡಗಿವೆ. ಇಂದಿಗೂ ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವ ಬೇಡರು ಪ್ರತಿಯೊಬ್ಬರು ಸಹ ತಮ್ಮ ಕುಲದ ಸಂಕೇತವಾಗಿಯಾದರೂ ಒಂದೆರಡು ಎತ್ತು ಎಮ್ಮೆ ಹಸುಗಳನ್ನು ಸಾಕುವ ಪರಂಪರೆಯನ್ನು ರೂಢಿಸಿಕೊಂಡಿದ್ದಾರೆ. ಇವುಗಳಿಂದ ಆದಾಯ ಮತ್ತು ಸೇವೆಯನ್ನು ನಿರೀಕ್ಷಿಸದಿದ್ದರೂ ತಮ್ಮ ಕುಲದ ಸಂಕೇತವಾಗಿ ಈ ಸಮುದಾಯ ತಮ್ಮ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗಲು ಅವರಿಗೆ ಅರಿವಿಲ್ಲದಂತೆಯೇ ಹಸು ಮತ್ತು ಎಮ್ಮೆಗಳನ್ನು ಪಾಲನೆ ಪೋಷಣೆ ಮಾಡಿಕೊಂಡು ಬದುಕುತ್ತಿದ್ದಾರೆ. ಇನ್ನು ಹೆಚ್ಚಿನ ಮಾಹಿತಿ ಸ್ವತಃ ಸಮುದಾಯದ ಹಿರಿಯ ಮತ್ತಾಜನಹಳ್ಳಿ ಅಬ್ಬನ ಪಾಪಯ್ಯರವರು ಪಶುಪಾಲನೆಯ ಕುರಿತು ಮಾಹಿತಿಯ ವಿವರ ಈಗಿದೆ:

ಹೆಸರು - ಅಬ್ಬನ ಪಾಪಯ್ಯ

ಊರು - ಮತ್ತಾಜನಹಳ್ಳಿ

ವಯಸ್ಸು - ೬೮ ವರ್ಷ

ವೃತ್ತಿ - ಕೃಷಿ ಮತ್ತು ಪಶುಪಾಲನೆ

ಅಂಚೆ - ಶಿಲಾಪನಹಳ್ಳಿ

ತಾಲೂಕು - ಸಂಡೂರು

ಜಿಲ್ಲೆ - ಬಳ್ಳಾರಿ

ನಮಗೆ ಈ ಕೆಲಸ ಇವತ್ತಿಂದಲ್ಲ ತುಂಬಾ ಹಳೆಯ ಕಾಲದಿಂದ್ಲೂ ಮೂರು ನಾಲ್ಕು ತಲೆಗಳು ಕಳೆದವ್ರಿ. ನಮ್ಮವು ೪೦ ರಿಂದ ೫೦ ಹಸುಗಳಿದಾವೆ. ಅವುಗಳನ್ನು ಮೇಯಿಸ್ಲಿಕ್ಕೆ ಇಬ್ರೂ ಪರ್ಮಿನೆಂಟಾಗಿ ಹೋಗ್ ಬೇಕು ಒಂದೊಂದು ದಿನ ಮೂವರು ಹೋಗ್ತಾರೆ. ಅದರಲ್ಲಿ ಅಡವಿಯಲ್ಲಿ ಬಹಳ ಕಷ್ಟ. ನಾವು ಇರೋದೆ ಈ ಗುಡ್ಡದಲ್ಲಿ ಚಿರತೆ ಹಾವಳಿ ಜಾಸ್ತಿ ಇದೆ. ನಾವು ಸ್ವಲ್ಪ ಮೈ ಮರೆತು ಕುಂತ್ಕೊಂಡ್ ಬಿಟ್ರೆ ಮುಗಿತು. ಏನಾದ್ರು ಒಂದು ಗ್ರಾಚಾರ ಕಾಡೈತೆ ಅಂತ ತಿಳ್‌ಕೊಳ್‌ಬೇಕು ನೋಡ್ರಿ. ಅದಕ್ಕಾಗಿ

ಹಿಂದೆ ಒಬ್ರೂ ಮುಂದೆ ಬಬ್ರೂ ಇರ್ಲೇಬೇಕು. ಈಗ ಮಳೆಗಾಲ ಬಹಾಳ ಕಡಿಮೆ ಆಗೈತೆ ಅದಕ್ಕೆ ಹುಲ್ಲು ಎಲ್ಲಿರ್ತತೋ ಅಲ್ಲಿಗೆ ಹೋಗ್‌ಬೇಕು. ಸ್ವಲ್ಪ ದೂರ ಹೋದ್ರೆ ಸಿಗ್ತೈತೆ ಜನ ಇರಬೇಕು ಅಷ್ಟೇ, ಇಂತಹ ಪರಿಸ್ಥಿತಿ ಇದೆ. ಇಂತದ್ರಲ್ಲಿ ಈ ಆಕಳಗಳನ್ನು ಸಾಕೋದು ಬಹಾಳ ಕಷ್ಟ. ಕಷ್ಟ ಆದ್ರೂ ಬಿಡಂಗಿಲ್ಲ, ಗೊಬ್ಬರ ಆಗ್ತೈತೆ ಹಾಲು ಮೊಸರು ಹಾಗ್ತೈತೆ. ಊರಲ್ಲಿ ಮನೆ ಹತ್ರ ಜಾಗ ಇಲ್ಲ. ಊರು ಹೊರಗಡೆ ಹಟ್ಟಿ ಕಟ್ಟೀವಿ. ಅದರಲ್ಲಿ ಒಂದು ಮಂಚಿಗೆ ಹಾಕ್ಕೊಂಡು ರಾತ್ರಿ ಒಬ್ರೂ ಹಾಲಿ ಇರಬೇಕು. ಯಾರು ಹೋಗ್ಲಿಲ್ಲಂದ್ರೆ ಚಿರತೆ ಬಂದು ಬಿಡ್ತದೆ. ಏನ್ ಮಾಡಕ್ಕಾಗಲ್ಲ. ಬೆಳಿಗ್ಗೆ ನಾಲ್ಕು ಗಂಟೆಗೆ ಎದ್ದು ಹಾಲು ಕರೆದು ಮೂರು ನಾಲ್ಕು ಕಿಲೋಮೀಟರ್ ದೂರ ಹೋಗಿ ಮಾರಿಕೊಂಡು ಬರಬೇಕು. ಅದು ಇಷ್ಟು ದಿನ ಬರೇ ಸೈಕಲ್ ಮೇಲೆ ಒಡಾಡ್‌ತಿದ್ವಿ ಈಗ ಒಂದು ಗಾಡಿ ತಗಂಡೀವಿ ನಮ್ಮೂರಿಗೇನು ಒಂದು ಬಸ್ಸು ಕೂಡ ಇಲ್ಲ ಏನಾದ್ರು ಅರ್ಜಂಟಿದ್ರೆ ಮುಗಿತು ಆ ದೇವರೇ ಕಾಪಾಡಬೇಕು ಅದಕ್ಕೆ ಗಾಡಿ ಮಾಡಿಕೊಂಡು ಬಿಟ್ವಿ. ಕಾಲ ಹೆಂಗೆ ಬರ್ತದೋ ಹೇಳಕ್ಕಾಗಲ್ಲ, ದಿನಾಲು ೪ ರಿಂದ ೫ ಲೀಟರ್ ಆಗ್ತವೆ. ಮೊಸರು ಮನೆಗೆ ಬಳಸಿಕೊಂತೀವಿ. ಮಜ್ಜಿಗೆ ಮಾಡ್ತೀವಿ ಅದು ನಮ್ಮೂರಿನ ಜನಕ್ಕೆ ಸಾಲ್ದು ಬರ್ತದೆ. ಬೆಣ್ಣೆ ಕೂಡ ಮಾರ್ತೀವಿ ಅದು ಒಂದು ಕೆಜಿಗೆ ೧೨೦ರಿಂದ ೧೫೦ ರೂಪಾಯಿ ಸಿಗ್ತದೆ. ದಿನಕ್ಕೆ ೨೦೦ ರೂಪಾ ಆಗ್ತದೆ. ಜೊತೆಗೆ ಗೊಬ್ರ ಕೂಡ ಮಾರ್ತೀವಿ. ಅದು ಒಂದು ಲೋಡಿಗೆ ಸಾವಿರ ದಿಂದ ಹನ್ನೆರಡು ನೂರು. ನಾವು ೨೨ ಜನ ಇದ್ದೀವಿ. ಮೂವರು ಅಣ್ಣ ತಮ್ಮಂದಿರು ಇನ್ನೂ ಬೇರೆ ಆಗಿಲ್ಲ. ಒಟ್ಟಿಗೆ ಇದ್ದೀವಿ ಹೊಲ್ದಕೆಲ್ಸ ಮಾಡೋರು ಹೊಲ್ದಲ್ಲಿ ಮಾಡ್ತಾರೆ. ಬೇಸಿಗೆ ಬಂದ್ರೆ ಅರಾಮಾಗಿ ಇರ್ತಾರೆ ಒಟ್ಟಿಗೆ ಹೆಂಗೋ ಜೀವನ ಮಾಡ್ತೀವಿ ನೋಡ್ರಿ.

ಅಬ್ಬನ ಪಾಪಯ್ಯನ ಮಾತುಗಳನ್ನು ಗಮನಿಸಿದರೆ ಪಶುಪಾಲನೆಯ ವರ್ತಮಾನದ ಮುಖ ಗೋಚರಿಸುತ್ತದೆ. ಇಂದು ಪಶುಪಾಲನೆಯನ್ನು ಒಂದು ಉಪಕಸುಬಾಗಿ ಅವಲಂಬಿಸಬಹುದೇ ಹೊರತು, ಪಶುಪಾಲನೆಯನ್ನು ಜೀವನ ನಿರ್ವಹಣೆಗೆ ನಂಬುವುದು ಕಷ್ಟ ಎಂಬ ಅಂಶ ಈ ಮಾತುಗಳಲ್ಲಿ ವ್ಯಕ್ತವಾಗುತ್ತದೆ. ಅಂತೆಯೇ ಗ್ರಾಮೀಣ ಜೀವನದ ಅನೇಕ ವೈರುಧ್ಯಗಳನ್ನು ಪಾಪಯ್ಯನ ಮಾತುಗಳಲ್ಲಿ ಗುರುತಿಸಲು ಸಾಧ್ಯವಿದೆ. ಮೂಲ ಸೌಕರ್ಯ ವಂಚಿತ ಹಳ್ಳಿಗಳ ಚಿತ್ರಣ ಇದರಿಂದಾಗಿ ಪಶುಪಾಲನೆಯ ಅವಲಂಬನೆ ಮತ್ತು ಅದರಿಂದಾಗುವ ಕಷ್ಟ. ಈ ಎರಡನ್ನು ಇಲ್ಲಿ ಗುರುತಿಸಲು ಸಾಧ್ಯವಿದೆ. ಪಾಪಯ್ಯನಂತೆ ಹಿಂಡು ಕುರಿಯ ಹಿಂಡು ದನದ ಪಶುಪಾಲಕರಿರುವಂತೆ, ಒಂದು ಕುರಿ ಒಂದು ಮೇಕೆ ಒಂದು ಆಕಳು, ಒಂದು ಜತೆ ಎತ್ತು ಈ ಪ್ರಮಾಣದಲ್ಲಿ ಪಶುಪಾಲನೆಯ ಕಲ್ಪನೆಯೇ ಕಿರಿದಾಗಿದೆ. ಹಿಂಡು ಪಶುಪಾಲಕರಿಗಿಂತ 'ಒಂಟಿ' ಪಶುಪಾಲಕರ ಚಿತ್ರಣ ಭಿನ್ನವಾಗಿಯೇ ಇರುತ್ತದೆ.

೬.೬.ಕುರಿಸಾಕಾಣಿಕೆ

ಮ್ಯಾಸಬೇಡರ ಸಮುದಾಯದವರು ಬೇಟೆ ಮತ್ತು ಪಶುಪಾಲನೆಯ ಜೊತೆಗೆ ಕುರಿಸಾಕಾಣಿಕೆಯನ್ನು ತಮ್ಮ ಪ್ರಧಾನ ಸಾಂಪ್ರದಾಯಿಕ ಕಸುಬನ್ನಾಗಿಸಿಕೊಂಡಿದ್ದಾರೆ. ಸಾಂಪ್ರದಾಯಿಕವಾಗಿ ಕುರಿಸಾಕಾಣಿಕೆಯು

ಕುರುಬರು ಮತ್ತು ಗೊಲ್ಲ ಸಮುದಾಯದಂತೆಯು ಈ ಸಮುದಾಯವು ಸಹ ತಮ್ಮ ವೃತ್ತಿಯನ್ನಾಗಿಸಿಕೊಂಡಿದೆ. ಚಿತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಸಾಕಾಣಿಕೆಯನ್ನು ಕಾಣಬಹುದು. ಮ್ಯಾಸಬೇಡರ ಸಮುದಾಯದಲ್ಲಿ ಶ್ರೀಮಂತಿಕೆ ನಿರ್ಧಾರವಾಗುವುದು ಅವರು ಎಷ್ಟು ಕುರಿಗಳನ್ನು ಸಾಕುತ್ತಾರೆ ಎಂಬುದರ ಮೇಲೆ. ಕಡಿಮೆ ಎಂದರೆ ಹದಿನೈದರಿಂದ ಹಿಡಿದು ಐವತ್ತರವರೆಗೆ ಇರುತ್ತವೆ. ಅದರಲ್ಲಿ ಹೆಚ್ಚು ಎಂದರೆ ಕೂಡ್ಲಿಗಿ ಮತ್ತು ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ಮತ್ತು ಮೊಳಕಾಲ್ಮೂರು ಹೆಚ್ಚಿನ ಸಂಖ್ಯೆಯಲ್ಲಿ ಇವರು ಕುರಿಸಾಕುತ್ತಾರೆ. ಇವರ ಮುಖ್ಯ ಜೀವನವೇ ಕುರಿಸಾಕಾಣಿಕೆಯನ್ನು ಅವಲಂಬಿಸಿದೆ. 'ಕುರಿಗಳಿಲ್ಲದೆ ನಮ್ ಜೀವನವೇ ಇಲ್ಲ ಅವೇ ನಮಗೆ ಪ್ರಮುಖ ಸಂಪತ್ತು' ಎಂದು ಸಮುದಾಯದ ಹಿರಿಯರು ಹೇಳುತ್ತಾರೆ. ಹಾಗಾಗಿ ರುದ್ರಮ್ಮನಹಳ್ಳಿಯ ಕೆಂಗ ಓಬಯ್ಯನು ಹೇಳುವ ವಿವರ ಈಗಿದೆ:

ಹೆಸರು - ಕೆಂಗ ಓಬಯ್ಯ

ಊರು - ರುದ್ರಮ್ಮನಹಳ್ಳಿ

ವಯಸ್ಸು - ೬೦ ವರ್ಷ

ಅಂಚೆ - ಹಿರೇಹಳ್ಳಿ

ತಾಲೂಕು - ಚಳ್ಳಕೆರೆ

ಜಿಲ್ಲೆ - ಚಿತ್ರದುರ್ಗ

"ನೋಡ್ರಿ ಕುರಿಸಾಕಾಣಿಕೆ ಇವತ್ತು ನಿನ್ನೆಯದಲ್ಲ. ನಾವು ಬಹಳ ಕಾಲದಿಂದಲೂ ನಮ್ ವೃತ್ತಿಯನ್ನು ಮಾಡ್ಕೊಂಡ ಬಂದಿದ್ದೇವೆ. ಅವೇ ನಮ್‌ಗೆ ಆಸ್ತಿ ಅವೆ ನಮ್‌ಗೆ ಹಣ ಎಷ್ಟು ಬರಗಾಲಬಂದ್ರೂನು ಸಹ ಅವುಗಳನ್ನು ಬದುಕುಸ್ತೀವ್ರಿ ಅವು ನಮ್‌ಗೆ ಎಂತಹ ಕಷ್ಟ ಬಂದ್ರೂನು ಒಂದೋ ಎರಡೋ ಮಾರ್ತೀವಿ ನಮ್ ಕಷ್ಟ ಬಗೆಹರಿಸಿಕೊಳ್ತೀವಿ ದೊಡ್ಡ ದೊಡ್ಡ ಭೂಮಿ ಇದ್ದಂತವರು ಹಣ ಬ್ಯಾಂಕಿನಲ್ಲಿ ಇಟ್ಕೊಂಡ್ರೆ ನಾವು ನಮ್ಮ ಹಣ ಬಯಲಿನಲ್ಲೇ ಇಟ್ಟಿರ್ತೀವಿ. ಯಾವುದಾದ್ರು ಕಾಯಿಲೆಗಳು ಬಂದ್ರೆ ನಾವೇ ನಮ್ಮ ಗಿಡಮೂಲಿಕೆಗಳನ್ನು ತಂದು ಹಾಕ್ತೀವಿ ಅಲ್ಲಿಗೆ ಕಾಯಿಲೆ ಹೋಗ್ಲಿಲ್ಲಂದ್ರೆ ಔಷಧಿ ಅಂಗಡಿಯೊಳಗೆ ಔಷಧಿ ತಂದು ನಾವೇ ಸೂಜಿ ಮಾಡ್ತೀವಿ. ಮತ್ತು ಆಗಾಗ ಡಾಕ್ಟ್ರ ಕರ್ಕೊಂಡು ಬರ್ತೀವಿ ಅವ್ರು ಹೇಳ್ತಾರೆ ಇಷ್ಟೇ ಔಷಧಿ ಸಣ್ಣ ಮರಿಗಳಿಗೆ ಹಾಕ್‌ಬೇಕು ದೊಡ್ಡವುಗಳಿಗೆ ಇಷ್ಟೇ ಔಷಧಿ ಹಾಕ್‌ಬೇಕು ಎಂದು ಹೇಳಿ ಹೋಗ್ತಾರೆ. ಒಂದೊಂದು ಕುರಿಗಳು ಈಗ ೨೦೦೦ರಿಂದ ೩೫೦೦, ನಾಲ್ಕು ಸಾವಿರದವರೆಗೆ ಮಾರ್ತೀವಿ ಹಟ್ಟಿಗಳನ್ನು ನಮ್‌ಮನೆಹತ್ತಿರ ಮನೆಹತ್ತಿರ ಜಾಗ ಇಲ್ಲಂದ್ರೆ ಊರು ಹೊರಗಡೆ ಕಟ್ಟಿಕೊಂಡು ಇರ್ತೀವಿ. ಹಟ್ಟಿಯೊಳಗೆ ಒಂದು ಮಂಚ ಹಾಕಿಕೊಂಡು ಮಂಚದ ಮೇಲೆ ಒಬ್ರು ಇದ್ರೆ ಉಳಿದವರು ಸುತ್ತ ಕಾಯುತ್ತಾರೆ. ಚಿರತೆ, ತೋಳ-ಗೀಳ ಬಂದ್ರೆ ನಾಯಿಗಳು ಇರ್ತಾವೆ. ಬೇಸಿಗೆ ಬಂದ್ರೆ ಹೊರಗಡೆ ಹೋಗ್ತೀವಿ ಗೊಬ್ಬರ ಕೊಟ್ರೇ ಯಾರಾದ್ರು ಊಟ ಕೊಡ್ತಾರೆ ಅವರವರ

ಹೊಲದಲ್ಲಿ ಮೇವು ಸಿಗ್ತತೆ ಮತ್ತೆ ಹೊರಗಡೆ ಹೋಗ್ತೀವಿ. ಹೆಂಗೋ ಬೇಸಿಗೆ ಮುಗಿಸ್ತೀವೆ ಮುಂಗಾರಿನಲ್ಲೇನು ಕಷ್ಟ ಇಲ್ಲ ನೋಡ್ರಿ.

ಕೆಂಗ ಓಬಯ್ಯನ ಮಾತುಗಳಲ್ಲಿ, 'ಹಿಂಡು' ಪಶುಪಾಲಕರ ಸದ್ಯದ ಸ್ಥಿತಿಯನ್ನು ಅರ್ಥಮಾಡಿಕೊಳ್ಳಬಹುದು. ಪಶುಪಾಲನೆಯಲ್ಲಿ ಬಳಸುವ ಸ್ವಂತದ ವೈದ್ಯ, ಸ್ವಾವಲಂಬನೆ, ಆರ್ಥಿಕ ಭದ್ರತೆಯ ಆತ್ಮವಿಶ್ವಾಸ ಈ ಮಾತುಗಳಲ್ಲಿ ಕಾಣುತ್ತದೆ. ಆದರೆ ಹೀಗೆ ಹಿಂಡು ಕುರಿಯು ಎಷ್ಟೋಬಾರಿ ಒಬ್ಬರವೇ ಆಗಿರುವುದಿಲ್ಲ. ಅನೇಕರ ಕುರಿಗಳು ಅದರಲ್ಲಿ ಜೊತೆಗೂಡಿರುತ್ತವೆ. ಈಗೀಗ ನೌಕರಿ ಹಿಡಿದು ಹೊರಗಿರುವ ನೌಕರಶಾಹಿಗಳೂ ಸಹ ಕುರಿ ಹಿಂಡನ್ನು ಖರೀದಿಸಿ ಕೂಲಿಯಾಳುಗಳನ್ನಿಟ್ಟು ಕಾಯಿಸುತ್ತಿರುವುದನ್ನು ಕಾಣಬಹುದು ಇಲ್ಲಿಯೂ ಕುರಿ ಕಾಯುವ ದಿನಗೂಲಿಗಳಿಗೂ ಸಹ ಕಷ್ಟದ ಜೀವನವನ್ನು ಅನುಭವಿಸುತ್ತಾರೆ.

ಈ ಮೇಲಿನ ಮಾಹಿತಿಯಿಂದ ಈ ಸಮುದಾಯದ ವಕ್ತೃವಿನಿಂದ ಮಾಹಿತಿಯ ಪ್ರಕಾರ ಈ ಸಮುದಾಯದ ಪ್ರಮುಖ ಆಸ್ತಿಯೇ ಕುರಿಸಾಕಾಣಿಕೆ ಅವೇ ಅವರಿಗೆ ಸಂಪತ್ತಾಗಿದ್ದರಿಂದ ಅವಿಲ್ಲದೆ ಜೀವನವೇ ಇಲ್ಲ ಎಂದು ತಿಳಿದು ಬರುತ್ತದೆ. ಒಂದು ಸಮುದಾಯದ ಜೀವನವೇ ಈ ರೀತಿಯಾಗಿದೆ ಎಂದು ನಿರ್ಧರಿಸಬಹುದು. ಮಳೆ, ಗಾಳಿ, ಬಿಸಿಲೆನ್ನದೇ ಇಡೀ ದಿನ ಇಡೀ ತಿಂಗಳು ವರ್ಷಗಟ್ಟಲೆ ಕುರಿಗಳು ಹೋದ ಹಾಗೆ ಅವುಗಳ ಬೆನ್ನಟ್ಟಿ ಹೋಗ್ತಾರೆ ಇವರು ಸಂಜೆ ಮನೆಗೆ ಬರುವಾಗ ಸೊರಗಿ ಸೊಪ್ಪಾಗಿರುತ್ತಾರೆ. ಕೆಲವು ಸಂದರ್ಭದಲ್ಲಿ ಇವರಿಗೆ ಕುಡಿಯಲು ನೀರು ಸಿಗುವುದಿಲ್ಲ. ಕುರಿಗಳಿಗೆ ನಾನಾ ತರಹದ ರೋಗಗಳು ಕಾಣಿಸಿಕೊಳ್ಳುತ್ತವೆ. ಅಂಟು ರೋಗಗಳು ಬಂದರಂತೂ ಇಡೀ ಕುರಿ ಹಿಂಡೇ ಸಾಯುತ್ತವೆ. ಅಂತಹ ಸಂದರ್ಭದಲ್ಲಿ ತುಂಬಾ ನಷ್ಟವಾಗುತ್ತದೆ. ಈ ನಷ್ಟವನ್ನು ತುಂಬಲು ಇವರಿಗೆ ಸರ್ಕಾರದ್ದೂ ಸೇರಿದಂತೆ ಯಾವುದೇ ಭದ್ರತೆ ಇರುವುದಿಲ್ಲ.

ಇತ್ತೀಚೆಗೆ ಕಾಡುಗಳ ನಾಶ ಮತ್ತು ಕೃಷಿ ಚಟುವಟಿಕೆಗಳಿಂದಾಗಿ ಕುರಿ ಸಾಕಾಣಿಕೆ ತುಂಬಾ ಕಷ್ಟದಾಯಕವಾಗಿ ಕಾಣುತ್ತದೆ. ಕ್ರಮೇಣವಾಗಿ ಕುರಿ ಸಾಕುವವರ ಸಂಖ್ಯೆ ಗಣನೀಯವಾಗಿ ಕಡಿಮೆಯಾಗುತ್ತಿದೆ. ಜೊತೆಗೆ, ನಗರೀಕರಣ, ಕೈಗಾರೀಕರಣ ಮತ್ತು ಶಿಕ್ಷಣದಿಂದಾಗಿ ಸಮುದಾಯದ ಯುವಕರು ಇತ್ತೀಚೆಗೆ ಆಧುನಿಕ ಕಸುಬಿನ ಕಡೆ ವಾಲುತ್ತಿದ್ದಾರೆ. ಇದಕ್ಕೆ ಮುಖ್ಯ ಕಾರಣಗಳೆಂದರೆ ಕುರಿ ಸಾಕಾಣಿಕೆ ಕಷ್ಟದ ಕೆಲಸ ಮತ್ತು ಕಳಂಕಿತ ಕೆಲಸವಲ್ಲದಿದ್ದರೂ, ಪ್ರತಿಷ್ಠೆ ದೃಷ್ಟಿಯಿಂದ ಪ್ರತಿಷ್ಠಿತವಾದುದು ಎಂದು ನಿರ್ಧರಿಸಲ್ಪಟ್ಟಿರುವ ಕೃಷಿ ಕೆಲಸದಲ್ಲಿ ತೊಡಗಲು ಪ್ರಾರಂಭಿಸಿದ್ದಾರೆ. ಇದಕ್ಕೆ ಪೂರಕವಾಗಿ ಸಾಮಾಜಿಕ ಸ್ತರದಲ್ಲಿ ಮೇಲೇರಲು ಹೊಸ ಸಾಮಾಜಿಕ ಪರಿಸರವನ್ನು ಹೊಂದಲು ತಮ್ಮ ರೀತಿ-ನೀತಿ, ಪದ್ಧತಿ, ರೂಢಿ, ವೇಷ-ಭೂಷಣ, ಆಚರಣೆ, ಊಟೋಪಚಾರಗಳಲ್ಲಿ ಬದಲಾವಣೆ ತಂದುಕೊಳ್ಳಲು ಪ್ರಾರಂಭಿಸಿದ್ದರಿಂದ ಸಾಂಪ್ರದಾಯಿಕ ಉದ್ಯೋಗವಾದ ಕುರಿ ಸಾಕಾಣಿಕೆ ಮತ್ತು ಪಶುಪಾಲನೆ ಕ್ರಮೇಣ ಈ ಸಮುದಾಯದಲ್ಲಿ ಕಡಿಮೆಯಾಗುತ್ತಿದೆ.

ಈ ಮೇಲಿನ ಇಷ್ಟು ವಿವರಗಳನ್ನು ಗಮನಿದರೆ ಮ್ಯಾಸಬೇಡರ ಆರ್ಥಿಕ ಕಥನದ ಭಿನ್ನ ಆಯಾಮಗಳನ್ನು ಗುರುತಿಸಲು ಸಾಧ್ಯವಾಗಿದೆ. ಇಲ್ಲಿ ಕೂಲಿ ಕಾರ್ಮಿಕರು, ವ್ಯಾಪಾರಿಗಳು, ಕೃಷಿಕರು, ಪಶುಪಾಲಕರು ಹೀಗೆ ಹಲವು ಸ್ಥರದ, ಹಲವು ಭಿನ್ನ ಪ್ರದೇಶದ ಜನರನ್ನು ಮಾತನಾಡಿಸಿದ ಕಥನಗಳನ್ನು ಇಲ್ಲಿ ನಿರೂಪಿಸಲಾಗಿದೆ. ಈ ಕಥನಗಳು ಬದಲಾದ ಆರ್ಥಿಕ ಸ್ಥಿತಿಯ, ಆಧುನಿಕತೆಯ ಪ್ರಭಾವದ, ಕೈಗಾರಿಕರಣದ ಪ್ರಭಾವದ ಅನೇಕ ಪ್ರಭಾವಗಳ ಹಿನ್ನೆಲೆಯ ಸಾಮಾಜಿಕ ಸ್ಥಿತ್ಯಂತರದ ಚಿತ್ರವನ್ನು ಬಿಚ್ಚಿಟ್ಟಿದೆ.

ಮುಖ್ಯವಾಗಿ ಸಮುದಾಯಕ್ಕೆ ವಿಶಿಷ್ಟವಾದ ವೃತ್ತಿಯಕಲ್ಪನೆ ವರೆಯಾಗುತ್ತಿದೆ. ಹಮಾಲಿ ಕೆಲಸ, ಕೈಗಾರಿಕೆಗಳಲ್ಲಿ ದಿನಗೂಲಿ, ಹೀಗೆ ಅನೇಕ ಅಸಂಘಟಿತ ವಲಯಗಳಲ್ಲಿ ಬೇಡರು ದುಡಿಯುತ್ತಿದ್ದಾರೆ. ಇಲ್ಲೆಲ್ಲ ಬಹುಪಾಲು ಕೆಲಸಗಾರರು ಕನಿಷ್ಟ ಕೂಲಿಗೆ ದುಡಿದು ಕನಿಷ್ಟ ಬದುಕನ್ನು ಬದುಕುತ್ತಿದ್ದಾರೆ. ಹಳ್ಳಿಯ ಕೃಷಿ ಕೂಲಿಗಳನ್ನು ಮಾತನಾಡಿಸಿದ ಕಥನಗಳು ಇಡೀ ಭಾರತದ ಹಳ್ಳಿಗಳನ್ನು ಪ್ರತಿನಿಧಿಸುವಂತಿವೆ. ಬೆರಮ್ಮ, ಸಿದ್ದಮ್ಮ, ಪಾಪಮ್ಮನಂತಹವರ ಕಥನಗಳು ಸಮುದಾಯದ ಮಹಿಳಾ ಬದುಕಿಗೆ ಹಿಡಿದ ಕನ್ನಡಿಯಾಗಿವೆ. ಇವರು ಇಡೀ ಮನೆಯನ್ನು ನಿಭಾಯಿಸುವ ಜವಾಬ್ದಾರಿಯನ್ನು ಹೊತ್ತಿರುವುದು ಗಮನಿಸಬಹುದು. ಮಹಿಳೆಯರಲ್ಲಿ ಉಳಿತಾಯದ ಪ್ರಜ್ಞೆ, ಜಾಗ್ರತವಾಗುತ್ತಿರುವುದನ್ನು ಗಮನಿಸಬಹುದು. ಸೂರಯ್ಯ ಅಬ್ಬನ ಪಾಪಯ್ಯನವರ ಕೃಷಿ, ಪಶುಪಾಲನೆಯನ್ನು ಕುರಿತ ಕಥನದಲ್ಲಿ ಗೋಚರಿಸುವಂತೆ ಆರ್ಥಿಕ ಸ್ವಾವಲಂಬನೆಗೆ ಕೃಷಿ, ಪಶುಪಾಲನೆಯನ್ನು ಅವಲಂಬಿಸುವಂತಿಲ್ಲ ಎನ್ನುವ ಮಾಹಿತಿಯನ್ನು ಒದಗಿಸುತ್ತವೆ.

ಒಟ್ಟಾರೆ ಕೆಳವರ್ಗದ ಅಸಂಘಟಿತ ಕೂಲಿಕಾರ್ಮಿಕ ಕೆಲಸದಲ್ಲಿ ಮಾತ್ರ ಬೇಡ ಸಮುದಾಯವು ಹೆಚ್ಚು ನೆಲೆ ಕಂಡಿರುವುದರಿಂದ, ಕೊನೆಗೂ ಮೇಲ್ವರ್ಗದ ಕೆಳಗೆ ಕೂಲಿಗಳಾಗಿ ದುಡಿಯುವ ಬದುಕೆ ಮುಂದುವರಿಯುತ್ತದೆ. ಇವರ ಯಾರ ಕೂಲಿಗಳಿಂದಲೂ ಸಂಪತ್ತು ಸಂಗ್ರಹವಾಗದೆ, ಆಗಿನ ದಿನದ ಬದುಕಿಗೆ ಮಾತ್ರ ಸಾಕಾಗುತ್ತದೆ. ಹಾಗಾಗಿ ಆರ್ಥಿಕವಾಗಿ ಪ್ರಬಲವಾಗುವ ಮಾತು ಕನಸಿನದೆ? ಹೀಗೆ ಆರ್ಥಿಕವಾಗಿ ಬೇಡಸಮುದಾಯ ಪ್ರತಿಶತ ಪ್ರಮಾಣ ದುರ್ಬಲವಾಗಿದೆಯೆಂದೇ ಹೇಳಬಹುದು.

೬.೭.ಬೇಟೆ

ಮ್ಯಾಸಬೇಡರ ಸಮುದಾಯದವರು ಮೂಲದಲ್ಲಿ ತಮ್ಮ ಜೀವನ ನಿರ್ವಹಣೆಗೆ ಪ್ರಮುಖವಾಗಿ ಎರಡು ವೃತ್ತಿಗಳನ್ನು ಅವಲಂಬಿಸಿರುವುದು ಕಾಣುತ್ತವೆ. ಕಾಡಿನಲ್ಲಿ ವಾಸಿಸುವ ಸಂದರ್ಭದಲ್ಲಿ ಈ ಸಮುದಾಯದವರು ಗೆಡ್ಡೆ-ಗೆಣಸು ಅಗೆದು ತಿನ್ನುತ್ತಿದ್ದರು ಮತ್ತು ಪ್ರಾಣಿಗಳನ್ನು ಬೇಟೆಯಾಡಿ ಅವುಗಳ ಮಾಂಸವನ್ನು ಆಹಾರವಾಗಿ ಬಳಸಿಕೊಳ್ಳುತ್ತಿರುವುದು ಪ್ರಮುಖವಾಗಿತ್ತು. ಈ ಎರಡೂ ವೃತ್ತಿಗಳೂ ಸಹ ಆಹಾರ ಸಂಗ್ರಹಣೆಗೆ ಮುಖ್ಯವಾಗಿದ್ದವು. ಅದರಲ್ಲೂ ಬೇಟೆ ಬಹು ಮುಖ್ಯವಾದುದಾಗಿತ್ತು. ಕಾಲ ಬದಲಾದಂತೆಲ್ಲಾ ಪ್ರತಿಯೊಬ್ಬರು ಪ್ರತಿಯೊಂದು ಸಮುದಾಯವು ಸಹ ಅನಿವಾರ್ಯವಾಗಿ ಬದಲಾಗಲೇ

ಬೇಕಾಗುತ್ತದೆ. ಈ ಒಂದು ನಿಟ್ಟಿನಲ್ಲಿ ಬೇಡ ಸಮುದಾಯವು ಸಹ ಇಂದು ತಮ್ಮ ಹಳೆಯ ಬೇಟೆಯ ವೃತ್ತಿಯನ್ನು ಕೈಬಿಟ್ಟಿದೆ ಮತ್ತು ಇಂದು ಸರ್ಕಾರದ ಹಲವಾರು ಕಾಯ್ದೆ ಕಾನೂನುಗಳ ಪ್ರಕಾರ ಬೇಟೆಯು ನಿಷೇದವಾಗಿದೆ. ಈ ಕಾರಣದಿಂದಾಗಿಯೂ ನಿಷೇಧವಾದರೂ ಸಹ ಗ್ರಾಮೀಣ ಪ್ರದೇಶಗಳಲ್ಲಿ ಮೊಲದ ಮತ್ತು ಹಂದಿಬೇಟೆಯು ಜೀವಂತವಾಗಿ ಮುಂದುವರೆಸಿಕೊಂಡು ಬಂದಿದ್ದಾರೆ. ಹಂದಿ ಬೇಟೆಯು ವರ್ಷದಲ್ಲಿ ಕೇವಲ ಒಂದೇ ಸಲ ಅಂದರೆ ಯುಗಾದಿ ಹಬ್ಬದ ಸಂದರ್ಭದಲ್ಲಿ ಮಾತ್ರ ಆಡುತ್ತಾರೆ.

ಹಂದಿಬೇಟೆ

ಮ್ಯಾಸಬೇಡರು ಹಂದಿಬೇಟೆಯನ್ನು ಆದಿಮ ಕಾಲದಿಂದಲೂ ಬೆಳೆಸಿಕೊಂಡು ಬಂದಿದ್ದಾರೆ. ಈ ಪರಂಪರೆಯನ್ನು ಪಾರಂಪರಿಕವಾಗಿ ತಮ್ಮ ಸಂಪ್ರದಾಯ ಆಚರಣೆಯ ಮೂಲಕ ಬೇಟೆಯಾಡುತ್ತಾರೆ. ಬೇಟೆಯ ಕುರಿತು ಕಂಪಳ ದೇವರ ಹಟ್ಟಿಯ ಗೊಡ್ಲು ಕಿಲಾರಿಯವರು ಹೇಳುವ ವಿವರ ಈ ಕೆಳಗಿನಂತಿದೆ:

ಬೇಟೆಯು ನಾವು ಬಹಾಳ ಕಾಲದಿಂದಲೂ ಆಡುತ್ತಾ ಬಂದಿದ್ದೇವೆ. ಈ ಬೇಟೆಯನ್ನು ಆಡಲಿಕ್ಕೆ ನಾವು ಯುಗಾದಿ ಹಬ್ಬ ಬರುವುದಕ್ಕಿಂತ ಎಂಟು ದಿನ ಮುಂಚೆ ಎಲ್ಲಾರು ಊರಿನಲ್ಲಿ ಕಲ್ತು ಮಾತಾಡ್ತೀವಿ ನೋಡ್ರಿ ಯುಗಾದಿ ಹತ್ತಿರ ಬಂತು ಅದಕ್ಕೆ ಎಲ್ಲೆಲ್ಲಿ ಅಡವಿಯಲ್ಲಿ ಹಂದಿಗಳಿದಾವೆ ಯಾರ‍್ಯಾರಿಗೆ ಕಾಣ್ತಾವೆ ಯಾರ‍್ಯಾರು ಎಲ್ಲೆಲ್ಲಿ ನೋಡಿದ್ದೀರಿ ಎಂದು ಕೇಳ್ತಾ ಪ್ರತೀ ಮನೆಗೊಬ್ಬರು ಊರಿನಲ್ಲಿ ಅಮವಾಸೆಯ ದಿನಕ್ಕಿಂತ ಒಂದು ದಿನ ಮುಂಚೆ ರಾತ್ರಿಯ ಹೊತ್ತು ಹಂದಿಗಳನ್ನು ಮಲಗಿಸಲಿಕ್ಕೆ (ತೆಲುಗಿನಲ್ಲಿ ಮೆಟ್ಲು ಪೋವುಂದಿ) ಅವು ಇರುವ ಜಾಗಕ್ಕೆ ಹೋಗ್ತೀವಿ. ಸುಮಾರು ೩೦ರಿಂದ ೪೦ಜನ ಇರ್ತೀವಿ ಒಂದೊಂದು ಗುಂಪೊಂದು ಮಾಡಿಕೊಂಡು ಒಂದೊಂದು ಗುಂಪಿಗೆ ಮೂರು ನಾಲ್ಕು ಜನ ಕೂಡಿ ಒಂದೊಂದು ಗುಡ್ಡಕ್ಕೆ ಹೋಗಿ ಅಲ್ಲೇ ಮಲಗ್ತೀವಿ. ಬೆಳಿಗ್ಗೆ ನಾಲ್ಕು ಗಂಟೆಯಿಂದ ಎದ್ದು ಅವು ಎಲ್ಲೆಲ್ಲಿ ಬರುತ್ತವೆ ಎಂದು ನೋಡ್ತಾ ಕುಳ್ತಿಕೊಳ್ತೀವಿ ಅವು ಮೂರು ನಾಲ್ಕು ಮೈಲು ದೂರಕ್ಕೆ ಹೋಗಿ ಮಲಗಲು ಬರ್ತಾವೆ. ಆಗ ಅವು ಎಲ್ಲೆಲ್ಲಿ ಹೋಗ್ತವೋ ಅವುಗಳ ಹಿಂದೆಯೇ ನಾವು ಮತ್ತು ಅಕ್ಕ-ಪಕ್ಕ ಅವುಗಳಿಗೆ ಕಾಣ್ದಂತೆ ಬೆನ್ನು ಹಟ್ಟಿಕೊಂಡು ಹೋಗ್ತೀವಿ. ಅವು ಮಲಗುವ ತನಕ ಹಿಂದೆ ಹೋಗಿ ಅವು ಎಲ್ಲಿ ಮಲಗ್ತಾವೆ ಅಲ್ಲಿ ಒಬ್ರನ್ನು ಕುಂದ್ರಿಸಿ ಇನ್ನು ಉಳಿದವ್ರು ಊರಿಗೆ ಹೋಗ್ತಿವಿ ಎಲ್ಲಾ ಕಡೆಗೆ ಹೋದವ್ರೆಲ್ಲ ಬಂದ್ ಮೇಲೆ ಅವ್ರನ್ನೆಲ್ಲಾ ವಿಚಾರಿಸಿ ಎಲ್ಲೆಲ್ಲಿ ಮಲಗಿದಾವೆ ಎಲ್ಲೆಲ್ಲಿ ಇಲ್ಲಾ ಎಂದು ತಿಳ್ಕೊಂಡು, ಎಲ್ಲಿ ಮಲಗಿರ್ತವೋ ಅಲ್ಲಿ ಊರಿನ ಎಲ್ಲಾರು ಸೇರಿ ಭರ್ಜಿ, ಗೊಂಡುಗೊಡಲಿ, ಮಚ್ಚು, ಕೊಡಲಿ, ಬಂದೂಕ ಮತ್ತು ನಾಯಿಗಳು ಎಲ್ಲಾರು ಸೇರಿ ಊರಿನ ಪ್ರಮುಖ ಸ್ಥಳದಲ್ಲಿ ಸೇರಿ ದೇವಸ್ಥಾನಕ್ಕೆ ಹೋಗಿ ಕೈಮುಗಿದು ನಮ್ ನಮ್ ಆಯುಧಗಳಿಗೆ ಪೂಜಿ ಮಾಡ್ಕೊಂಡು ಹಲಗಿ ಬಾರಿಸ್ಕೊಂಡು ಅಡವಿಗೆ ಹೋಗ್ತೀವಿ ಅಡವಿಯಲ್ಲಿ ಅವು ಎಲ್ಲಿ ಮಲಗಿರ್ತಾವೋ ಅಲ್ಲಿಗೆ ಎಲ್ಲಾರೂ ಸೇರಿ ಸುತ್ತಲೂ ಕಾಯುತ್ತೇವೆ. ಕೆಲವರು ಬಂದೂಕದವರು ನೇರವಾಗಿ ಅದು ಮಲಗಿರುವ ಜಾಗಕ್ಕೆ ಹೋಗಿ ಶೂಟ್ ಮಾಡ್ತಾರೆ. ನಂತರ ಉಳಿದ ಎಲ್ಲಾರು ಸೇರಿ ಅದನ್ನು ಹಿಂಬಾಲಿಸಿಕೊಂಡು ಹೋಗ್ತೀವಿ ಎಲ್ಲೆಲ್ಲಿ ನೀರು

ಇರ್ತದೋ ಅಂತಹ ಸ್ಥಳಗಳಲ್ಲಿ ಕಾಯ್ತೇವೆ. ಒಟ್ಟೇನಪ್ಪಂದ್ರೆ ಹಂದಿ ಬೇಟೆಯಾಗುವತನಕ ಯಾರೂ ಕೂಡ ಬೇರೆ ಕೆಲಸಗಳಿಗೆ ಹೋಗಲ್ಲ ಹಂದಿಬೇಟೆಯಾದ ಮೇಲೆ ಮುಂದಿನ ಕೆಲಸ ಬೇಟೆಯಾದ ಕೂಡ್ಲೆ ಅದನ್ನು ತಂದು ಮೆರವಣಿಗೆ ಮಾಡಿ ಊರಿನ ಬುಡ್ಡೇಕಲ್ಲು ಅಥವಾ ದೇವಸ್ಥಾನದ ಹತ್ತಿರ ಹಾಕಿ ಎಲ್ಲೂರು ಭಂಡಾರ, ಊದಿನ ಕಟ್ಟಿ ಹಚ್ಚಿ ಅದರ ಮೇಲೆ ನೀರಾಕ್ತಾರೆ ಎಲ್ಲಾ ಮುಗಿದ್ಮೆಲೆ ಬುಡ್ಡೇಕಲ್ಲು ಹತ್ತಿರ ಊಳುತ್ತಾರೆ. ಹಂದಿ ಬೇಟೆ ಆದ್ರೆ ಒಳ್ಳೆಯದು ಊರಿಗೆ 'ಉಲುಸು' ಬೆಳೆಗಳೆ ಚೆನ್ನಾಗಿ ಆಗ್ತವೆ. ಹಂದಿ ಮಾತ್ರ ನಾವು ತಿನ್ನುವುದಿಲ್ಲ.

ಆದರೆ ಗ್ರಾಮೀಣ ಪರಿಸರದಲ್ಲಿ ಅದು ಕಾಯ್ದೆ ಕಾನೂನುಗಳಿದ್ದರೂ ಸಹ ಯುಗಾದಿ ಹಬ್ಬದ ಸಂದರ್ಭದಲ್ಲಿ ಮೂರುದಿನ ಬೇಟೆಯಾಡುತ್ತಾರೆ. ಪಟ್ಟಣಗಳಂತೆ ಪ್ರದೇಶದಲ್ಲಿ ಸಂಪೂರ್ಣವಾಗಿ ನಿಷೇಧವಾಗಿದೆ ಎಂದು ಹೇಳಬಹುದು. ಉದಾಹರಣೆ ೨೦೦೮ರ ಯುಗಾದಿ ಹಬ್ಬದ ಸಂದರ್ಭದಲ್ಲಿ ಬೇಟೆಯನ್ನು ರದ್ದು ಮಾಡಿರುವ ಹೊಸಪೇಟೆ ತಾಲೂಕಿನ ಕಮಲಾಪುರ ಗ್ರಾಮವು ಪ್ರಮುಖ ಉದಾಹರಣೆಯಾಗಿದೆ.

ಮೊಲದ ಬೇಟೆ

ಮೊಲದ ಬೇಟೆ ಒಂದು ಕಾಲಕ್ಕೆ ಮ್ಯಾಸಬೇಡರು ತಮ್ಮ ಹೊಲಗಳಲ್ಲಿ ಎಳೆ ಪೈರುಗಳನ್ನು ತಿನ್ನುವುದಕ್ಕಾಗಿ ಹಿಡಿಯುತ್ತಿದ್ದರು. ಆದರೆ ಇಂದು ಈ ಸಮುದಾಯದವರು ಮೊಲಗಳನ್ನು ತಮ್ಮ ಬೇಟೆಗಾಗಿ ಹೋಗಿ ಅವುಗಳನ್ನು ಕೊಂದು ತಿನ್ನುವ ಪರಿಪಾಠ ಒಂದು ಬಗೆಯಾದರೆ ಮತ್ತೊಂದು ಬಗೆ ಉದ್ದೇಶ ಪೂರ್ವಕವಾಗಿ ಮೊಲಗಳನ್ನು ಕೊಂದು ಮಾರಾಟ ಮಾಡುತ್ತಾರೆ. ಮೊಲದ ಬೇಟೆಯನ್ನೇ ಪ್ರಮುಖ ವೃತ್ತಿಯನ್ನಾಗಿಸಿಕೊಂಡು ಜೀವನ ಸಾಗಿಸುತ್ತಿರುವ ಈ ಸಮುದಾಯದ ವ್ಯಕ್ತಿ ದೇವರಹಟ್ಟಿ ಹಾವಲು, ಓಬಯ್ಯರವರು ಹೇಳುವ ವಿವರ ಈ ರೀತಿಯಾಗಿದೆ.

ಮೊಲದ ಬೇಟೆ ಹಿಂದೆ ನಮ್ಮ ತಂದೆ ತಾತನ ಕಾಲದಲ್ಲಿ ತಿನ್ನಲಿಕ್ಕೆ ಮಾತ್ರ ಬೇಟೆಯಾಡುತ್ತಿದ್ರು ಇಂದು ನಾವು ನಾಲ್ಕೈದು ಜನರು ಸೇರಿ ಮೊಲಗಳನ್ನು ಬೇಟೆಯಾಡಿ ಅವುಗಳನ್ನು ತಂದು ಮಾರುತ್ತೇವೆ. ಮೊಲಗಳನ್ನು ಹಿಡಿಯಲು ಏನೇನು ತಯಾರಿ ಮಾಡ್ತೀವಿ ಅಂದ್ರೆ ಉದ್ದನೆಯ ಸಣ್ಣ ಕಬ್ಬಿಣದ ತಂತಿ ತಂದು ನಾಲ್ಕು ಅಂಗುಲುಗಳಿಗೆ ಒಂದರಂತೆ ತಂತಿಯ ಅಥವಾ ಹುರಿಯ ಉರುಲುಗಳನ್ನು ಮಾಡಿ ಸಾಲಾಗಿ ಕಟ್ಟಿರುತ್ತೇವೆ. ಈ ಒಂದು ಉರುಲು ೨೦ ರಿಂದ ೩೦ ಅಡಿ ಉದ್ದವಿರುತ್ತದೆ. ಈ ಸಾಲು ಉರುಲುಗಳನ್ನು ಹೊಲದ ಬದುವಿನಲ್ಲಿ ಇಲ್ಲವೆ ಹೊಲಕ್ಕೆ ಹೋಗುವದಾರಿಯಾಗಿರಬಹುದು ಅಡವಿಯಲ್ಲಾದರೆ ಅವು ಎಲ್ಲೆಲ್ಲಿ ತಿರುಗಾಡುತ್ತವೆ ಅಥವಾ ಮೇಯುತ್ತವೆ ಅಲ್ಲಿ ಅವು ಬರುವದಾರಿಗೆ ಕಟ್ಟುತ್ತೇವೆ. ಉರುಲುಗೆ ಎರಡು ಕಡೆ ಗೂಟಗಳನ್ನು ಬಡಿದು ಅಥವಾ ಅಕ್ಕಪಕ್ಕ ಚಿಕ್ಕ ಚಿಕ್ಕ ಗಿಡಗಳಿಗೆ ನೆಲದಿಂದ ಮುಕ್ಕಾಲು ಅಡಿ ಎತ್ತರಕ್ಕೆ ಎಳೆದು ಕಟ್ತೀವಿ. ಅವು ಹೊರಗಡೆ ಮೇಯಲು ಬಂದಾಗ ಮೊಲದ ಕುತ್ತಿಗೆಗೆ ಕಾಣದ ಹುರುಲುಗೆ ತಲೆ ತೂರಿಸಿ ರಭಸದಿಂದ ಓಡುವಾಗ ಉರುಲಿನ ಕಂಡಿಗೆ

ಸಿಕ್ಕಿಕೊಳ್ಳುತ್ತದೆ. ಉರುಲುಯನ್ನು ಸಂಜೆ ಆರು ಗಂಟೆಗೆ ಕಟ್ಟಿ ಬಂದ್ರೆ ಬೆಳಿಗ್ಗೆ ೬ ಇಲ್ಲವೆ ೭ ಗಂಟೆಗೆ ಹೋಗ್ತೀವಿ. ನಾವು ಹೋಗೊದ್ರೊಳಗೆ ಒಂದೆರಡು ಮೊಲಗಳು ಸಿಕ್ಕಿಕೊಂಡಿರುರ್ತವೆ. ಅದೇ ಉರುಲುನಲ್ಲಿ ಚಿರಿಕೊಂಡು ಒದ್ದಾಡಿ ಪ್ರಾಣ ಬಿಟ್ಟಿರುವ ಮೊಲಗಳನ್ನು ಬೆಳಿಗ್ಗೆ ತಂದು ಬೇರೆಯವರಿಗೆ ೧೨೦-೧೫೦ರೂಪಾಯಿಗಳಿಗೆ ಮಾರುತ್ತೇವೆ. ಇದು ಒಂದು ರೀತಿ.

ಇನ್ನೊಂದು ರೀತಿ ರಾತ್ರಿ ಸಮಯದಲ್ಲಿ ಬ್ಯಾಟರಿಯನ್ನು ಹಣೆಗೆ ಕಟ್ಟಿಕೊಂಡು ರಾತ್ರಿಯೆಲ್ಲಾ ಹುಡುಕುತ್ತಾ ಕಾಡಿನಲ್ಲಿ ಹೋಗ್ತೇವೆ. ಆಗ ಅಡ್ಡ ಬಂದ ಮೊಲಗಳು ಬ್ಯಾಟರಿ ಬೆಳಕನ್ನು ನೋಡಿದ ಕೂಡ್ಲೆ ಅವುಗಳ ಕಣ್ಣುಗಳು ಕೆಂಪಾಗಿ ಕಾಣುತ್ತವೆ. ಆ ಬ್ಯಾಟರಿ ಬೆಳಕನ್ನು ನೋಡಿದ ಮೊಲ ಮತ್ತೇ ಬೇರೆ ಕಡೆ ನೋಡುವುದಿಲ್ಲ. ಆಗ ಅದಕ್ಕೆ ಬ್ಯಾಟರಿ ಬಿಟ್ಕೊಂತನೆ ಅದರ ಪಕ್ಕಕ್ಕೆ ಹೋಗ್ತೀವಿ ಕೊಂಕುಳದಲ್ಲಿ ಇನ್ನೊಂದು ಮೊಲದಂತೆ ಶಬ್ದಮಾಡುವ ಹಾರನ್ ಮಾಡುವ ಗುಂಡಿಯನ್ನು ಒತ್ತುತ್ತೇವೆ. ಆ ಶಬ್ದಕ್ಕೆ ಮೊಲ ಹತ್ತಿರ ಬರುತ್ತದೆ. ಶಬ್ದ ಮಾಡದಂತೆ ನಾವು ಕೂಡ ಹತ್ತಿರ ಹೋಗಿ ಕೈಯಲ್ಲಿರುವ ಕೋಲಿನಿಂದ ಅದನ್ನು ಬಡಿದು ತರುತ್ತೇವೆ. ಮತ್ತೇ ಜೀವ ಇರುವಂತೆ ಇಡಿಯಬೇಕೆಂದ್ರೆ ಕೈಯಲ್ಲಿರುವ ಖಲ್ಲಿಯಂತಿರುವ ಬಲೆಯನ್ನು ಸದ್ದಾಗದಂತೆ ಹೋಗಿ ಅದರ ಮೇಲೆ ಹಾಕಿ ಹಿಡಿಯುತ್ತೇವೆ. ಹಿಂಗೆ ಮೊಲದ ಬೇಟೆಯನ್ನು ಆಡುತ್ತೇವೆ.

ಈ ಮೇಲಿನ ಮಾಹಿತಿಯಿಂದ ಮುಖ್ಯವಾಗಿ ತಿಳಿಯುವುದೇನೆಂದ್ರೆ. ಬುಡಕಟ್ಟು ಎಂದೇ ಹೆಸರಾಗಿರುವ ಈ ಸಮುದಾಯದವರು ಬೇಟೆಯ ವೃತ್ತಿಯನ್ನು ಪ್ರಾಚೀನ ಕಾಲದಿಂದಲೇ ವೃತ್ತಿಯನ್ನಾಗಿಸಿಕೊಂಡು ಬಂದಿದ್ದಾರೆ. ಬೇಟೆಯಿಂದಲೇ ತಮ್ಮ ಜೀವ ಸಾಗಿಸುತ್ತಿರುವವರು ಇಂದು ಎಷ್ಟೇ ಸರ್ಕಾರಿ ಕಾಯ್ದೆ ಕಾನೂನುಗಳನ್ನು ತಂದರೂ ಸಹ ತಮ್ಮ ವೃತ್ತಿಯನ್ನು ಬಿಟ್ಟಿಲ್ಲ. ಬಹುತೇಕ ಹಳ್ಳಿಗಳಲ್ಲಿ ಈ ವೃತ್ತಿಯು ಇನ್ನೂ ಜೀವಂತವಾಗಿದೆ ಎಂದು ಹೇಳಬಹುದು. ಕಾಲ ಬದಲಾದಂತೆಲ್ಲಾ ಹೊಸ ಹೊಸ ತಂತ್ರಗಳ ಮೂಲಕ ಬೇಟೆಯನ್ನು ಆಡುತ್ತಾರೆ. ಮಾನವನು ಬದುಕಲು ನೂರಾರು ದಾರಿಗಳಂತೆ ತಮ್ಮ ಜೀವನಕ್ಕಾಗಿ ಯಾವುದಾದ್ರು ವೃತ್ತಿಯನ್ನು ಅವಲಂಬಿಸಿ ಬದುಕುಬೇಕಾಗುತ್ತದೆ. "ಹುಟ್ಟಿಸಿದ ದೇವರು ಹುಲ್ಲು ಮೇಯಿಸಲ್ಲ" ಎನ್ನುವ ಗಾದೆ ಮಾತಿನಂತೆ ತಮ್ಮ ಜಾಣ್ಮೆಯ ಮೂಲಕ ಕಾಡಿನಲ್ಲಿರುವ ಮೊಲಗಳನ್ನು ಹಿಡಿದು ತಂದು ಜೀವನ ಸಾಗಿಸುತ್ತಿದ್ದಾರೆ. ಈ ರೀತಿ ಬೇಟೆಯ ಮುಖಾಂತರ ಬರುಬರುತ್ತ ಇಂತಹ ಪ್ರಾಣಿಗಳನ್ನು ನೋಡಬೇಕೆಂದರೆ ಮುಂದೊಂದು ದಿನದಲ್ಲಿ ಎಲ್ಲಾದರು ಪ್ರಾಣಿ ಸಂಗ್ರಹಾಲಯಗಳಿಗೆ ಹೋಗಬೇಕಾಗುತ್ತದೇನು? ಎನ್ನುವ ಆತಂಕ ಕಾಡುತ್ತದೆ.

* * *

ಅಧ್ಯಾಯ - ಏಳು

ವರ್ತಮಾನದ ಕಥನ

ಅಧ್ಯಾಯ - ಏಳು

ವರ್ತಮಾನದ ಕಥನ

ಪ್ರಸ್ತುತ ಸಂದರ್ಭದಲ್ಲಿ ಮ್ಯಾಸಬೇಡರ ಸಮಕಾಲೀನ ಕಥನ ನೋಡುವುದಾದರೆ ನಾನು ಕ್ಷೇತ್ರಕಾರ್ಯ ಅನುಭವದ ಹಿನ್ನೆಲೆಯಲ್ಲಿ ವಕ್ತೃಗಳು ನೀಡಿದ ಮಾಹಿತಿ ಪ್ರಕಾರ ಹಿಂದೆ ಅರಣ್ಯವಾಸಿಗಳಾಗಿ ಕಾಡು ಮೇಡುಗಳಲ್ಲಿ ವಾಸಿಸುತ್ತಿದ್ದ ಇವರು ಸದ್ಯದ ಸ್ಥಿತಿಯನ್ನು ಕುರಿತು ಹೇಳುದೇನೆಂದರೆ ಇಂದಿಗೂ ಸಹ ಕೆಲವು ಹಟ್ಟಿಗಳಲ್ಲಿ ಜನರ ಸ್ಥಿತಿ ತುಂಬ ಕಷ್ಟದಾಯಕವಾಗಿದೆ. ತಮ್ಮ ಉಪ ಜೀವನಕ್ಕಾಗಿ ಪಂಪರೆಯಿಂದ ನಂಬಿಕೊಂಡು ಬಂದ ಬೇಟೆಯು ವರ್ತಮಾನದಲ್ಲಿ ಕಾನೂನುಗಳ ತೊಡಕಿನಿಂದ ಜೀವನದ ದಾರಿಗಳು ಮುಚ್ಚಿದಂತಾಗಿ ಅನಿವಾರ್ಯವಾಗಿ ಬೇರೆ ಕಸುಬನ್ನು ಆಶ್ರಯಿಸಬೇಕಾಗಿ ಬಂದಿದೆ. ಒಂದು ಕಾಲದಲ್ಲಿ ಅಕ್ಷರ ಜ್ಞಾನದ ಕೊರತೆಯಿಂದ ದೂರ ಉಳಿದಿದ್ದರು ಜೀವನ ನಿರ್ವಹಣೆಗಾಗಿ ಬೇಕಾದ ಜ್ಞಾನವನ್ನು ಕೊರತೆಯಿಲ್ಲದೆ ಸಂಪಾದಿಸಿಕೊಂಡಿದ್ದರು. ಇಂದು ಕಾಡು ನಾಡಾಗಿ ಪರಿವರ್ತನೆಯಾಗುತ್ತಿರುವ ಇಂದಿನ ಸಂದರ್ಭದಲ್ಲಿ ನಾಡಿನೊಂದಿಗೆ ಸಂಪರ್ಕ ಬೆಳೆಸಿಕೊಂಡು ನಗರ ಪ್ರದೇಶಗಳಿಗೆ ಇಂದಿನ ಯುವಕರು ವಲಸೆ ಹೋಗುತ್ತಿದ್ದಾರೆ. ಹಾಗೆ ಪಟ್ಟಣಗಳಲ್ಲಿ ಸಹ ತಮ್ಮ ಜೀವನ ನಿರ್ವಹಣೆ ಸಾಗಿಸುತ್ತಿದ್ದು, ಉಳಿದವರು ತಮ್ಮ ತಮ್ಮ ಹಟ್ಟಿಗಳಲ್ಲಿ ಹತ್ತು ಹಲವು ಕಸುಬುಗಳನ್ನು ಮಾಡಿಕೊಂಡು ಜೀವನ ಸಾಗಿಸುತ್ತಿದ್ದಾರೆ.

ನನ್ನ ಅಧ್ಯಯನ ಕಾಲ ಮಿತಿಯೊಳಗೆ ಕೇವಲ ಎರಡು ಜಿಲ್ಲೆಗಳಲ್ಲಿನ ಮ್ಯಾಸಬೇಡರನ್ನು ಮಾತ್ರ ಸಂದರ್ಶಿಸಲು ಸಾಧ್ಯವಾಗಿದ್ದು, ಈ ಎರಡೂ ಜಿಲ್ಲೆಗಳಲ್ಲಿ ವಾಸಿಸುತ್ತಿರುವ ಮ್ಯಾಸಬೇಡರ ಆರ್ಥಿಕ ಸ್ಥಿತಿ ತುಂಬಾ ಕಷ್ಟದಾಯಕವಾಗಿರದೆ ಸುಮಾರು ಶೇ. ೫೦ರಷ್ಟು ಜನರು ಸ್ಥಿರಾಸ್ಥಿಯನ್ನು ಹೊಂದಿದವರು ಬಿಟ್ಟರೆ ಇನ್ನು ಶೇ ೫೦ರಷ್ಟು ಜನ ಕಡುಬಡವರಾಗಿದ್ದು ಬರೇ ಕೂಲಿ ನಾಲಿಯನ್ನು ಅವಲಂಬಿಸಿ ಬದುಕು ಬೇಕಾದ ಪರಿಸ್ಥಿತಿ ಇವರದ್ದಾಗಿದೆ. ಮಾನವ ಸಮಾಜ ನಿತ್ಯ ಪರಿವರ್ತನಶೀಲವಾದುದು. ಚೇತನ ಶೀಲವಾದುದು ಯಾವತ್ತೂ ಇಂತಹ ಬದಲಾವಣೆಗಳಿಗೆ ಒಳಗಾಗುತ್ತಿರುತ್ತದೆ. ಇದು ಆ ಸಮುದಾಯಗಳ

ಜೀವಂತಿಕೆ ಲಕ್ಷಣವೂ ಕೂಡ. ಹೀಗೆ ಮಾನವ ಸಮುದಾಯ ಆದಿಮ ಸ್ಥಿತಿಯಿಂದ ಇವತ್ತಿನ ಕಂಪ್ಯೂಟರ್ ಯುಗದವರಿಗೆ ಹಲವು ಸ್ಥಿತ್ಯಂತರಗಳಿಗೆ ಒಳಗಾಗಿದೆ. ಭಾರತ ಸಮಾಜ ಜೀವನ ವಿಚಿತ್ರ, ಸದ್ಯಕ್ಕೆ ದೇಶದ ಎಲ್ಲಾ ವಿಚಾರಗಳೂ, ವ್ಯವಸ್ಥೆಗಳೂ ಅರೆ ಬೆಂದ ಕಾಳಿನಂತೆ ನುಂಗಲೂ ಆಗದ, ಉಗಿಯಲೂ ಆಗದ ಸ್ಥಿತಿಯಲ್ಲಿವೆ. ಬೆಂಕಿ ಕಂಡು ಹಿಡಿಯುವಿಕೆ ಮನುಷ್ಯ ಕುಲದ ಇತಿಹಾಸದಲ್ಲಿ ಒಂದು ಹೊಸ ಯುಗಕ್ಕೆ ನಾಂದಿಯಾದಂತೆಯೇ ವಿದ್ಯುತ್ ಉತ್ಪಾದನೆ ವಿಜ್ಞಾನ ಯುಗದ ಇನ್ನೊಂದು ಪ್ರಮುಖ ಘಟ್ಟ. ಬೆಂಕಿ ಮತ್ತು ವಿದ್ಯುತ್ ನಡುವಿನ ಎರಡೂ ಸ್ಥಿತಿಗಳನ್ನು ಉಳಿಸಿಕೊಂಡಿರುವ ಭಾರತದ ಜನ ಜೀವನವನ್ನು ಸೂಕ್ಷ್ಮವಾಗಿ ಗಮನಿಸಿದರೆ ಇನ್ನೂ ನಮ್ಮ ಗಿರಿಜನರು ಇನ್ನೂ ಬೆಂಕಿಯ ಸ್ಥಿತಿಯಲ್ಲೆ ಮುಂದುವರಿದವರು. ವಿದ್ಯುತ್ ಸ್ಥಿತಿಯಲ್ಲೂ ಇದ್ದಾರೆ ಎಂದು ಸಾಂಕೇತಿಕವಾಗಿ ಹೇಳಬಹುದು ಎನ್ನುವ ಹಿ.ಚಿ.ಬೋರಲಿಂಗಯ್ಯನವರ ಈ ಮಾತು ತುಂಬಾ ಮಹತ್ವ ಪೂರ್ಣವಾದುದು.

ಭಾರತೀಯ ಸಮಾಜವೇ ಇಂತಹ ಅತಂತ್ರ ಸ್ಥಿತಿಯಲ್ಲಿ ಬದುಕುತ್ತಿದೆ. ಆಧುನಿಕ ಮಾನವ ಇಂದು ಎಷ್ಟೋ ವಿಷಯಗಳಲ್ಲಿ ವೇಗವಾಗಿ ಚಲಿಸುತ್ತಾನೆ. ಅಥವಾ ಸಾಗುತ್ತಾನೆ. ಮಂಗಳ ಗ್ರಹ ಮತ್ತು ಚಂದ್ರಲೋಕದಲ್ಲಿ ವಾಸಮಾಡಲು ಹೊಸ ಅನ್ವೇಷಣೆಗಳನ್ನು ನಡೆಸಿದ್ದಾನೆ. ಬುಡಕಟ್ಟು ಸಮುದಾಯಗಳ ವಾಸ್ತವ ಲೋಕದ ಬದುಕಿನ ಕಡೆ ಗಮನಿಸಿದರೆ ಅಷ್ಟೇ ಹಿಂದೆ ಹಿಂದೆ ಹೆಜ್ಜೆಗಳನ್ನು ಹಾಕುತ್ತಿದೆ. ಇವರು ಇನ್ನೂ ಕೂಡ ಆದಿಮ ಸ್ಥಿತಿಯಲ್ಲಿಯೇ ಜೀವನ ನಡೆಸುತ್ತಿದ್ದಾರೆ. ಕೆಲವೊಂದು ಬುಡಕಟ್ಟುಗಳು ಆಧುನಿಕ ವಿದ್ಯಮಾನಗಳೊಂದಿಗೆ ಮುಖಾಮುಖಿಯಾಗುತ್ತಾ ತಮ್ಮ ಬದುಕನ್ನು ಕಟ್ಟಿಕೊಳ್ಳಲು ಪ್ರಯತ್ನಿಸುತ್ತಿವೆ. ಈ ಸಾಲಿನಲ್ಲಿ ಮ್ಯಾಸಬೇಡರ ಬುಡಕಟ್ಟು ಪ್ರಮುಖವಾದುದು. ಕರ್ನಾಟಕದ ಮತ್ತು ಭಾರತದ ಯಾವುದೇ ಬುಡಕಟ್ಟು ಸಮುದಾಯವೂ ಕೂಡ ಹಳೆಯದನ್ನು ಬಿಡುವ ಹೊಸದನ್ನು ತನ್ನದಾಗಿಸಿಕೊಳ್ಳುವಲ್ಲಿ ಆತುರದಿಂದ ತುದಿಗಾಲ ಮೇಲೆ ನಿಂತಿದೆ. ಆದರೆ ಅದು ಸುಲಭ ಸಾಧ್ಯವಲ್ಲ. ಗತದ ಜೀವನದ ಚರಿತ್ರೆಯ ಹೆಜ್ಜೆಗಳ ಅರಿವನ್ನು ವರ್ತಮಾನದಲ್ಲಿ ನೆನಪಿಸಿಕೊಳ್ಳುತ್ತಾ ಭವಿಷ್ಯತ್ತಿನ ಕನಸಿನ ದಿನಗಳ ಬದುಕಿಗಾಗಿ ಬಹು ಎಚ್ಚರಿಕೆಯಿಂದ ಎಲ್ಲಾ ಸಮುದಾಯಗಳು ಹೆಜ್ಜೆಹಾಕುತ್ತಿವೆ.

ಹತ್ತೊಂಬತ್ತನೆಯ ಶತಮಾನ ಭಾರತೀಯ ಸಮಾಜವನ್ನು ಸತ್ವ ಪರೀಕ್ಷೆಗೆ ಒಡ್ಡಿದ ಕಾಲಮಾನ ವಸಾಹತು ಆಡಳಿತ ಜೊತೆಗೆ ಬಂದ ಶಿಕ್ಷಣ, ಆಧುನಿಕ ಬುಡಕಟ್ಟು ಸಮುದಾಯಗಳ ಬದಲಾವಣೆಗೆ ಸಾಕಷ್ಟು ಪ್ರಭಾವ ಬೀರಿವೆ. ಕೈಗಾರಿಕೀಕರಣ ಪ್ರಭಾವವೂ ಕೂಡ ಬುಡಕಟ್ಟು ಸಮುದಾಯಗಳ ಬದಲಾವಣೆಗೆ ಸಹಕಾರಿಯಾಗಿದೆ. ಇಂತಹ ಬದಲಾವಣೆಗಳಿಗೆ ಒಳಗಾದ ಭಾರತದ ಅದರಲ್ಲಿ ಕರ್ನಾಟಕದಲ್ಲಿ ನೆಲೆನಿಂತಿರುವ ಬುಡಕಟ್ಟುಗಳಿಗೆ ಆಧುನಿಕರಣದ ಪ್ರಭಾವ ನುಂಗಲಾರದ ಬಿಸಿ ತುಪ್ಪದಂತಾಗಿದೆ. ಪರಂಪರೆಯಿಂದ ನಂಬಿಕೊಂಡು ಬಂದ ವೃತ್ತಿಗಳಿಗೆ ಹಾಗೂ ಜೀವನ ಮೌಲ್ಯಗಳಿಗೆ ಆಧುನಿಕತೆಯ ಬಿರುಗಾಳಿ ಗೊಂದಲಕ್ಕೀಡುಮಾಡಿದೆ. ಸುಮಾರು ವರ್ಷಗಳ ಹಿಂದೆ ಆಂಧ್ರದಿಂದ ಬಂದು ಕರ್ನಾಟಕದಲ್ಲಿ

ನೆಲೆಸಿರುವ ಇವರು ಇಂದು ಹೆಚ್ಚು ಜನಸಂಖ್ಯೆಯನ್ನು ಹೊಂದಿದ್ದು ಸ್ವಾವಲಂಬನೆಯಿಂದ ತಮ್ಮದೇ ಆದ ಸ್ವತಂತ್ರ ಬದುಕನ್ನು ಕಟ್ಟಿಕೊಂಡಿದ್ದಾರೆ. ತಮ್ಮ ಸ್ವಂತ ದುಡಿಮೆಯ ಫಲದಿಂದ ಹಂಚಿನ ಮನೆ, ಜಿಂಕ್‌ಶೀಟ್ ಮನೆ ಹಾಗೂ ಆರ್.ಸಿ.ಸಿ.ಮನೆಗಳನ್ನು ಕಟ್ಟಿಕೊಂಡು ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ನೆಲಸಿದ್ದಾರೆ. ಜೀವನ ನಿರ್ವಹಣೆಗಾಗಿ ವಿವಿಧ ವೃತ್ತಿಗಳಲ್ಲಿ ತೊಡಗಿಸಿಕೊಂಡು ಬದುಕನ್ನು ಕಟ್ಟಿಕೊಂಡಿದ್ದಾರೆ. ದಿನಬಳಕೆ ವಸ್ತುಗಳಾದ ಮಣ್ಣಿನ ಪಾತ್ರೆಗಳ ಸ್ಥಾನವನ್ನು, ಹಿತ್ತಾಳೆ, ಅಲ್ಯೂಮಿನಿಯಂ, ಸ್ಟೀಲ್ ಪಾತ್ರೆಗಳು ಆಕ್ರಮಿಸಿಕೊಂಡಿವೆ. ಸೀಮೆ ಎಣ್ಣೆ ದೀಪಗಳಿಂದ ಬೆಳಕನ್ನು ಪಡೆಯುತ್ತಿದ್ದ ಇವರು ಇಂದು ಭಾಗ್ಯಜ್ಯೋತಿಯಡಿಯಲ್ಲಿ ಎಲ್ಲರ ಮನೆಗಳಲ್ಲಿ ವಿದ್ಯುತ್ ದೀಪದ ಬೆಳಕನ್ನು ಕಾಣುತ್ತಿದ್ದಾರೆ. ಕೆಲವರು ಇನ್ನು ಸೀಮೆ ಎಣ್ಣೆ ಬೆಳಕಿನಲ್ಲೇ ಇದ್ದಾರೆ. ನಗರ ಪ್ರದೇಶದ ಪ್ರಭಾವಕ್ಕೊಳಗಾದ ಕೆಲವು ಯುವಕ ಯುವತಿಯರೂ ಟಿಶರ್ಟ್, ಜೀನ್ಸ್‌ಫ್ಯಾಂಟ್, ಇನ್ನಿತರೆ ರಂಗುರಂಗಿನ ಉಡುಪುಗಳಿಗೆ ಮಾರು ಹೋಗಿದ್ದಾರೆ. ಸ್ತ್ರೀಯರು ಚೂಡಿದಾರ, ನೈಟಿ, ಲಂಗ, ರವಿಕೆಯಂತ ಉಡುಪುಗಳನ್ನು ಬಳಸುವುದರ ಜೊತೆಗೆ, ಸ್ನೋ, ಪೌಡರ್, ಲಿಪ್‌ಸ್ಟಿಕ್‌ನಂತಹ ಅಲಂಕಾರ ಸಾಮಾಗ್ರಿಗಳನ್ನು ಬಳಸುತ್ತಿರುವುದು ಕಂಡು ಬರುತ್ತದೆ. ಆದರೆ ಹಿರಿಯ ತಲೆಮಾರಿನ ಸ್ತ್ರೀಯರು ಮತ್ತು ಪುರುಷರು ತಮ್ಮ ಮೂಲ ಉಡುಗೆ ತೊಡುಗೆಯ ಹಂತದಲ್ಲಿರುವುದು ಗೋಚರಿಸುತ್ತದೆ. ಹೀಗೆ ಮ್ಯಾಸಬೇಡರು ಆಧುನಿಕತೆಯ ಪ್ರಭಾವಕ್ಕೆ ಒಳಗಾಗಿ ಭೌತಿಕವಾಗಿ ಅಲ್ಪಸ್ವಲ್ಪ ಬದಲಾವಣೆಯನ್ನು ಕಂಡುಕೊಂಡಿದ್ದಾರೆ.

ಮ್ಯಾಸಬೇಡರ ಬುಡಕಟ್ಟು ಸಮುದಾಯವು ತನ್ನದೇ ಆದ ಮತ್ತು ವ್ಯವಸ್ಥಿತವಾದ ಸಾಂಪ್ರದಾಯಿಕ ಆಡಳಿತ ಕ್ರಮವನ್ನು ಹೊಂದಿದೆ. ಆಧುನಿಕ ಪ್ರಜಾಪ್ರಭುತ್ವದ ರಾಜಕೀಯವಲ್ಲದಿದ್ದರೂ ತಮ್ಮದೇ ಆದ ಸರಳ ಸಂಘಟಿತ ರಾಜಕೀಯ ಕಥನವನ್ನು ಹೊಂದಿರುತ್ತಾರೆ. ಈ ಒಂದು ನಿಟ್ಟಿನಲ್ಲಿ ಪ್ರಸ್ತುತ ಸಮುದಾಯ ಆಂತರಿಕ ಮತ್ತು ಬಾಹ್ಯವಾಗಿ ಅನೇಕ ಸಮಸ್ಯೆಗಳ ಸುಳಿಯಲ್ಲಿ ಸಿಲುಕಿ ಅವುಗಳನ್ನು ಪರಿಹರಿಸಿಕೊಳ್ಳಬೇಕಾಗಿದೆ. ಹಾಗೆ ತಮ್ಮ ಪಾವಿತ್ರತೆ ಮತ್ತು ರಕ್ಷಣೆಯ ದೃಷ್ಟಿಯಿಂದ ಇದು ಅತ್ಯಾವಶ್ಯಕವಾಗಿ ತಮ್ಮ ಗುಂಪಿನ ನಾಯಕ ಅಥವಾ ಮುಖಂಡನಿಗೆ ಎಲ್ಲಾ ರೀತಿಯಿಂದಲೂ ಗೌರವ ಕೊಡುತ್ತಾರೆ. ಗುಂಪಿನ ಮುಖಂಡನನ್ನು ಸಾಮಾನ್ಯವಾಗಿ ಅನುವಂಶೀಯವಾಗಿಯೇ ಆಯ್ಕೆ ಮಾಡುತ್ತಾರೆ. ಹಟ್ಟಿಯ ಯಜಮಾನ, ಗೌಡ, ಪೂಜಾರಿ, ತಳವಾರ ಮೊದಲಾದ ಅಧಿಕಾರದ ಹುದ್ದೆಗಳು ಅನುವಂಶೀಯವಾಗಿ ಬರುತ್ತಿದ್ದವು. ಹಟ್ಟಿಯ ಯಾವುದೇ ಒಳ ಜಗಳಗಳಾದರೂ ಹಟ್ಟಿ ಪಂಚಾಯ್ತಿಯ ಮೂಲಕ ಬಗೆಹರಿಸಿಕೊಳ್ಳುತ್ತಿದ್ದರು. ಗಂಭೀರವಾದ ವಿಚಾರಗಳಿದ್ದರೆ ಗುಡಿ ಕಟ್ಟೆ ಮತ್ತು ಕಟ್ಟೆ ಮನೆಗಳಿಗೆ ಹೋಗುತ್ತಿದ್ದರು. ಬಿಗಿಯಾದ ಕಟ್ಟು-ಕಟ್ಟಳೆಗಳು ದಂಡ ಬಹಿಷ್ಕಾರಗಳಿಗೆ ಹೆದರಿ ಬುಡಕಟ್ಟು ಸಂಸ್ಕೃತಿಯ ಸಾಮಾಜಿಕ ನಿಯಮಗಳನ್ನು ಚಾಚು ತಪ್ಪದೆ ಪಾಲಿಸುತ್ತಿದ್ದರು. ಹಟ್ಟಿಯ ಮುಖಂಡ ಅಥವಾ ಯಜಮಾನ ಪ್ರಾಮಾಣಿಕವಾಗಿ ಮತ್ತು ನಿಷ್ಪಕ್ಷಪಾತವಾಗಿ ಆಡಳಿತ ಕ್ರಮ ನಡೆಸುತ್ತಿದ್ದ. ಹಟ್ಟಿಯ ಯಾವುದೇ ಹಬ್ಬ,

ಜಾತ್ರೆ, ಮದುವೆ ಮಂಗಳ ಕಾರ್ಯಗಳನ್ನು ಹಟ್ಟಿಯ ಯಜಮಾನನ ಮುಖಂಡತ್ವದಲ್ಲೇ ನಡೆಯುತ್ತಿದ್ದವು. ತಮ್ಮ ಜನಾಂಗಕ್ಕೋಸ್ಕರ ತ್ಯಾಗ ಬಲಿದಾನಗಳನ್ನು ಮಾಡಿದ ಹಟ್ಟಿಗೌಡರ ಕಥೆಗಳು ಇತಿಹಾಸದಲ್ಲಿ ಪ್ರಸಿದ್ಧವಾಗಿವೆ. ಎಂತಹ ಕಷ್ಟ, ನಷ್ಟಗಳು ಬಂದರೂ ಸಮುದಾದಾಯದ ಗುಟ್ಟನ್ನು ಹಾಗೂ ಪಾವಿತ್ರ್ಯತೆಯನ್ನು ಕಾಪಾಡಿಕೊಳ್ಳುತ್ತಿದ್ದರು. ನ್ಯಾಯನಿರ್ಣಯ ಮತ್ತು ರಾಜಕೀಯ ವ್ಯವಸ್ಥೆಯಲ್ಲಿ ತಪ್ಪಿತಸ್ಥರಿಗೆ ದಂಡ ಶಿಕ್ಷೆ ಹಾಗೂ ಬಹಿಷ್ಕಾರ ವಿಧಿಸುವ ವಿಶೇಷ ಪ್ರಾಧಿಕಾರವನ್ನು ಹಟ್ಟಿಯ 'ಯಜಮಾನ' ಅಥವಾ ಗೌಡನಿಗೆ ಕೊಡಲಾಗಿತ್ತು. ಕೆಲವೊಂದು ಸಲ ಇವರ ರಾಜಕೀಯ ಕಥನ ಹೇಗಿರುತ್ತದೆಂದರೆ ಹಟ್ಟಿಯ ಗೌಡ ನ್ಯಾಯ ತೀರ್ಮಾನ ಮಾಡುವಾಗ ತನ್ನ ಮಗನನ್ನೇ ಸೊಸೆಯನ್ನೇ ತಪ್ಪಿತಸ್ಥರೆಂದು ತೀರ್ಮಾನಿಸಿ ದಂಡ ಹಾಕುತ್ತಿದ್ದರು, ಸ್ವಾತಂತ್ರ್ಯ ನಂತರ ಪ್ರಜಾಪ್ರಭುತ್ವ ಸರ್ಕಾರ ಚುನಾವಣೆ ವ್ಯವಸ್ಥೆ ಜಾರಿಗೆ ತಂದಾಗಲೂ ಕೂಡ ಈ ಬುಡಕಟ್ಟು ಸಮುದಾಯ ಹಟ್ಟಿಯ 'ಯಜಮಾನ' ಅಥವಾ 'ಗೌಡನ' ಮೇಲಿನ ಗೌರವದಿಂದ ಆತ ಅನುಚಿಸಿದ ಪಕ್ಷ ಮಥವಾ ವ್ಯಕ್ತಿಗೆ ಮತ ಹಾಕುತ್ತಾ ಬಂದರು ಕಾಲಕ್ರಮೇಣ 'ಹಟ್ಟಿ'ಯ ಮುಖಂಡನೆ ತಮ್ಮ ಸಮುದಾಯಕ್ಕೆ ದ್ರೋಹ ಬಗೆಯಲು ಪ್ರಾರಂಭಿಸಿದಾಗ ವಿದ್ಯಾವಂತ ಯುವಕ ಯವತಿಯರು ಪ್ರತಿಭಟನೆ ಮಾಡುವ ಸ್ಥಿತಿಗೆ ಬಂದಿದೆ. ನಂತರ ಬುಡಕಟ್ಟು ಸಮುದಾಯ ಒಂದು ಒಗ್ಗಟ್ಟಿನಿಂದ ಬಾಳಿ ಬದುಕುವ ಮನಃಸ್ಥಿತಿಯನ್ನು ಕಳೆದುಕೊಂಡಿದ್ದಾರೆ. ಇದರಿಂದ ಐಕ್ಯತೆ ಎನ್ನುವುದು ಮರೆಯಾಗಿ ವಿಘಟನೆಗಳು ಪ್ರಾರಂಭವಾದವು ಪ್ರಜಾಪ್ರಭುತ್ವ ನೀತಿ ಮತ್ತು ಧೋರಣೆಗಳನ್ನು ಇವತ್ತು ಸಮುದಾಯದ ಎಲ್ಲಾ ಸದಸ್ಯರು ಅರ್ಥ ಮಾಡಿಕೊಂಡು ತಾವೇ ಚುನಾವಣೆಗೆ ನಿಲ್ಲಲು ಮುಂದಾಗಿದ್ದಾರೆ. ಗ್ರಾಮ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ, ಜಿಲ್ಲಾ ಪಂಚಾಯ್ತಿ, ವಿಧಾನಸಭೆ, ಲೋಕಸಭೆ ಮತ್ತು ರಾಜ್ಯಸಭೆ ಮೊದಲಾದ ಚುನಾವಣೆಯಲ್ಲಿ ಗೆದ್ದು 'ಹಟ್ಟಿ'ಯಿಂದ ಹಿಡಿದು ದಿಲ್ಲಿಯವರೆಗೂ ಆಡಳಿತ ನಡೆಸುವಂತ ಹೆಸರಾಂತ ರಾಜಕಾರಣಿಗಳು ಈ ಜಿಲ್ಲೆಗಳಲ್ಲಿ ಜನಿಸಿದ್ದಾರೆ. ಹಾಗೇ ಕರ್ನಾಟಕದ ತುಂಬಾ ಈ ಸಮುದಾಯದ ಪ್ರತಿಭಾವಂತ ರಾಜಕಾರಣಿಗಳಿದ್ದಾರೆ. ಹಾಲಿ ಚಿತ್ರದುರ್ಗ ಜಿಲ್ಲೆಯ ಲೋಕಸಭಾ ಸದಸ್ಯರು ಎನ್.ವೈ.ಹನುಮಂತಪ್ಪ ಹಾಗೂ ಮಾಜಿ ಲೋಕಸಭಾ ಸದಸ್ಯ ಶಶಿಕುಮಾರ್ ಇದೇ ಚಿತ್ರದುರ್ಗ ಜಿಲ್ಲೆಯವರು. ಹಾಗೆ ಬಳ್ಳಾರಿ ಜಿಲ್ಲೆಯ ಹಾಲಿ ಸಚಿವರು, ಬಿ.ಶ್ರೀರಾಮುಲು ಆರೋಗ್ಯ ಸಚಿವರು, ಹಾಗೆಯೇ ಈ ಎರಡೂ ಜಿಲ್ಲೆಗಳ ಹಾಲಿ ಶಾಸಕರು ೬ ಜನ ಇದ್ದಾರೆ. ಚಿತ್ರದುರ್ಗ ಜಿಲ್ಲೆಯ ತಿಪ್ಪೇಸ್ವಾಮಿ, ಚಳ್ಳ ಕೆರೆ, ಹಾಗೂ ಮೊಳಕಾಲ್ಮೂರು ತಾಲೂಕಿನ ಎನ್.ವೈ.ಗೋಪಾಲಕೃಷ್ಣ, ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ಶಾಸಕ ನಾಗೇಂದ್ರ, ಕಂಪ್ಲಿಯ ಶಾಸಕ ಸುರೇಶ್ ಬಾಬು, ಸಂಡೂರು ಶಾಸಕ ತುಕಾರಾಮ, ಸಿರುಗುಪ್ಪದ ಶಾಸಕ ಸೋಮಲಿಂಗಪ್ಪ ಈ ೭ ಜಿಲ್ಲೆಗಳಿಂದ ಇಷ್ಟು ರಾಜಕಾರಣಿಗಳು ಪ್ರಸ್ತುತ ಆಡಳಿತವನ್ನು ನಡೆಸುತ್ತಿದ್ದಾರೆ. ಇನ್ನೂ ಕರ್ನಾಟಕವನ್ನು ಅವಲೋಕಿಸಿದರೆ ಹಾಲಿ ಹಾಗೂ ಮಾಜಿಗಳು ಹೆಚ್ಚು ಕಡಿಮೆ ಇಲ್ಲಿಯವರೆಗೂ ೪೦ರಿಂದ ೪೫ ಜನ ಶಾಸಕರು ಹಾಗೂ

ಸದಸ್ಯರು ಸಿಗುತ್ತಾರೆ. ಒಟ್ಟಾರೆಯಾಗಿ ನೋಡುವುದಾದರೆ ಒಂದು ಕಾಲದಲ್ಲಿ ಎಲ್ಲೋ ಬಂದು ಗುಡ್ಡ ಗಾಡಿನಲ್ಲಿ ಅರಣ್ಯದಲ್ಲಿ ವಾಸಿಸುತ್ತಿರುವ ಈ ಸಮುದಾಯ ಇವತ್ತು ಸ್ವಾತಂತ್ರ್ಯನಂತರದಿಂದ ಇಲ್ಲಿಯವರೆಗೂ ರಾಜಕೀಯ ಕಥನವನ್ನು ಹಿಂತಿರುಗಿ ನೋಡಿದರೆ ಇಷ್ಟು ಜನರು ರಾಜಕೀಯವಾಗಿ ಪ್ರವೇಶಿಸಿದ್ದಾರೆ? ಎಂಬುದು ಎಲ್ಲರಿಗೂ ಆಶ್ಚರ್ಯವಾಗುತ್ತದೆ. ಸಮಾಜದಲ್ಲಿ, ರಾಜಕೀಯದಲ್ಲಿ ನಾವೇನು ಕಮ್ಮಿ ಇಲ್ಲಾ ಎಂಬುದನ್ನು ತೋರ್ಪಡಿಸಿಕೊಳ್ಳಲು ಅವರ ಹಿಂದಿನ ಕಥನವನ್ನು ನೋಡಿದರೆ ಗೊತ್ತಾಗುತ್ತದೆ. ಶಿಕ್ಷಣವು ಒಂದು ಸಾಮಾಜಿಕ ಬದಲಾವಣೆಯ ಶಕ್ತಿಯಾಗಿದೆ. ಇದು ಸಾಮಾಜಿಕ ಚಲನೆಯ ವಾಹಕವಾಗಿದ್ದು, ಮೇಲ್ಮುಖ ಚಲನೆಗೆ ಅನುವು ಮಾಡಿಕೊಡುತ್ತದೆ. ಶಿಕ್ಷಣವು ವ್ಯಕ್ತಿಯ ಅಂತಸ್ತಿನ ನಿರ್ಧಾರಕ ಅಂಶವಾಗಿದೆ. ಒಂದು ದೇಶದ ಸಮುದಾಯದ ಸರ್ವತೋಮುಖ ಅಭಿವೃದ್ಧಿಯು ಶಿಕ್ಷಣವನ್ನು ಅವಲಂಬಿಸಿದೆ. ಶಿಕ್ಷಣವಿಲ್ಲದ ವ್ಯಕ್ತಿ ವೈಯಕ್ತಿಕವಾಗಿಯೇ ಆಗಲಿ, ಸಾಮಾಜಿಕವಾಗಿಯೇ ಆಗಲಿ ಉನ್ನತಿಯಾಗಲು ಸಾಧ್ಯವಿಲ್ಲ. ವ್ಯಕ್ತಿಯ ಮತ್ತು ಸಮಾಜದ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಹಿಂದುಳಿದಿರುವಿಕೆಗೆ ಶಿಕ್ಷಣದ ಕೊರತೆಯೇ ಕಾರಣವಾಗಿದೆ. ಎಲ್ಲಕ್ಕಿಂತ ಮುಖ್ಯವಾಗಿ ವ್ಯಕ್ತಿ ಸಮಾಜದಲ್ಲಿ ಮತ್ತು ಸಮಾಜದ ಮುಖ್ಯವಾಹಿನಿಯಲ್ಲಿ ಮಿಳಿತವಾಗಬೇಕಾದರೆ ಶಿಕ್ಷಣ ಅತ್ಯಂತ ಅಗತ್ಯವಾಗಿದೆ. ನಾಗರೀಕ ಪ್ರಪಂಚದಿಂದ ಪ್ರತ್ಯೇಕವಾಗಿ ಹಟ್ಟಿ ಕಟ್ಟಿಕೊಂಡು ವಾಸಿಸುವ ಮ್ಯಾಸಬೇಡರಿಗೆ ಒಂದು ಕಾಲದಲ್ಲಿ ಶಿಕ್ಷಣ ನುಂಗಲಾರದ ತುತ್ತಾಗಿತ್ತು. ಆದರೆ ಈಗ ಸುಲಭವಾಗಿ ಕಲಿಯಲು ಎಲ್ಲಾ ಅನುಕೂಲತೆಗಳಿವೆ. ಬಡತನ ಅಜ್ಞಾನ ಮತ್ತು ಮೂಢನಂಬಿಕೆ ಮೊದಲಾದ ಕಾರಣಗಳಿಂದಾಗಿ ಮಕ್ಕಳಿಗೆ ಶಿಕ್ಷಣ ಕೊಡುವುದಕ್ಕಿಂತ ಹೆಚ್ಚಾಗಿ ಕೂಲಿನಾಲಿಗೆ ಕಳಿಸುವುದಕ್ಕೆ ಪಾಲಕರೆ ಬೆಂಬಲಿಸುತ್ತಾರೆ. ಕೂಡ್ಲಿಗಿ, ಮೊಳಕಾಲ್ಮೂರು ಸಂಡೂರು, ಚಳ್ಳಕೆರೆಯಂತಹ ಪ್ರದೇಶದಲ್ಲಿ ವಾಸಿಸುವ ಹಟ್ಟಿಗಳಲ್ಲಿ ಈಗಲೂ ಸಹ ಕೆಲವರಿಗೆ ಕನ್ನಡವೇ ಸರಿಯಾಗಿ ಮಾತನಾಡಲಿಕ್ಕೆ ಬರುವುದಿಲ್ಲ ಸರ್ಕಾರದ ಪಠ್ಯಪುಸ್ತಕಕ್ಕೂ ಅವರ ಆಡುವ ಭಾಷೆಗೂ ಬಹಳ ಅಂತರವಿದೆ. ಕನ್ನಡ ಮತ್ತು ತೆಲುಗನ್ನು ಎರಡೂ ಭಾಷೆಗಳನ್ನು ಅಪಭ್ರಂಶವಾಗಿ ಬಳಸುತ್ತಾರೆ. ಅನ್ನ ಬಟ್ಟೆ ಪುಸ್ತಕದ ಕೊರತೆಯಿಂದ ಪಾಲಕರ ಬೇಜವಾಬ್ದಾರಿತನದಿಂದ ಮತ್ತು ಶಿಕ್ಷಕರ ಅಸಡ್ಡೆತನದಿಂದ ಶ್ರೀಮಂತರ ಮಕ್ಕಳ ಪಕ್ಕದಲ್ಲಿ ಸರಿಸಮಾನವಾಗಿ ಕುಳಿತುಕೊಳ್ಳುವ ಸಂಕೋಚ ಭಾವನೆಯಿಂದಾಗಿ ಮಕ್ಕಳು ಶಾಲೆಗೆ ತಪ್ಪಿಸುತ್ತಾರೆ.

ಪಶುಪಾಲನೆ ಮತ್ತು ಕೃಷಿ ಎರಡನ್ನೇ ನಂಬಿ ಜೀವಿಸುತ್ತಿರುವ ಮ್ಯಾಸಬೇಡರಲ್ಲಿ ಬಾಲಕಾರ್ಮಿಕ ಪದ್ಧತಿ ಅಧಿಕಾವಾಗಿದೆ. ಏಳೆಂಟು ವರ್ಷದ ಮಕ್ಕಳು ಶಾಲೆಬಿಟ್ಟು ದನ, ಕುರಿ ಮೇಕೆಗಳ ಹಿಂದೆ ತಿರುಗುವ ದೃಶ್ಯ ಕ್ಷೇತ್ರಕಾರ್ಯದಲ್ಲಿ ಕಂಡುಬಂದಿದೆ. ಒಂದುವೇಳೆ ಮಕ್ಕಳು ಶಾಲೆಗೆ ಹೋಗುತ್ತಿದ್ದರೂ ಸುಗ್ಗಿ ಮತ್ತು ಬೇಸಾಯದ ಕಾಲದಲ್ಲಿ ಮಕ್ಕಳನ್ನು ಶಾಲೆಗೆ ಕಳಿಸುವುದಿಲ್ಲ. ಕೃಷಿ ಪ್ರಧಾನ ಅವಿಭಕ್ತ ಕುಟುಂಬಗಳಲ್ಲಿ ಮಕ್ಕಳ ಶ್ರಮ ಅಗತ್ಯವಾಗಿದೆ. ಅವಿಭಕ್ತ ಕುಟುಂಬದಲ್ಲಿ ವ್ಯಕ್ತಿಯ ಲಿಂಗ ವಯಸ್ಸು

ಮತ್ತು ಪ್ರತಿಭೆಗೆ ತಕ್ಕಂತೆ ಕೆಲಸ ಕಾರ್ಯಗಳನ್ನು ಹಂಚಿ ಕೊಡುವುದರಿಂದ ಚಿಕ್ಕ ಮಕ್ಕಳನ್ನು ಎತ್ತಿಕೊಳ್ಳುವುದು, ಆಡಿಸುವುದು, ಕುಡಿಯಲು ನೀರು ತರುವುದು, ಹೊಲಗದ್ದೆಗಳಿಗೆ ಬುತ್ತಿ ಕೊಟ್ಟು ಬರುವುದು ಮುಂತಾದ ಸಣ್ಣ ಪುಟ್ಟ ಕಾರ್ಯಗಳಿಗೆ ಮಕ್ಕಳನ್ನು ಬಳಸಿಕೊಳ್ಳುತ್ತಾರೆ. ಹೊಸದುರ್ಗ, ಹೊಳಲ್ಕೆರೆ, ಹಿರಿಯೂರು, ಚಿತ್ರದುರ್ಗ, ಹೊಸಪೇಟೆ, ಬಳ್ಳಾರಿ, ಮೊದಲಾದ ತಾಲ್ಲೂಕುಗಳಲ್ಲಿ ಶೈಕ್ಷಣಿಕವಾಗಿ ಮುಂದುವರೆದ ಹಟ್ಟಿಗಳಿವೆ. ಹಾಗೆ ಕೂಡ್ಲಿಗಿ, ಸಂಡೂರು, ಚಳ್ಳಕೆರೆ, ಕೆಲವು ಪ್ರದೇಶಗಳಲ್ಲಿ ಶೈಕ್ಷಣಿಕವಾಗಿ ಹಿಂದುಳಿದ ಹಟ್ಟಿಗಳೂ ಸಹ ಇವೆ. ಕೆಲವು ಪ್ರದೇಶಗಳಲ್ಲಿ ಶೈಕ್ಷಣಿಕ ಸಂಸ್ಥೆಗಳನ್ನು ನೋಡದೆ ಇರುವಂಥ ಜನತೆ ಹಟ್ಟಿಗಳಲ್ಲಿದ್ದಾರೆ.

ಆದರೂ ಸಹ ಶಿಕ್ಷಣಕ್ಕೆ ಹೆಚ್ಚು ಮಹತ್ವ ಕೊಡುತ್ತಿದ್ದಾರೆ. ಹಿಂದುಳಿದ ಮ್ಯಾಸ ಬೇಡರು ಜಾಗೃತಗೊಂಡು ಅನೇಕ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ವಿದ್ಯಾಪ್ರಸಾರ ಮಾಡುತ್ತಿದ್ದಾರೆ. ಬಳ್ಳಾರಿಯಲ್ಲಿ ಜಿಲ್ಲಾ ವಾಲ್ಮೀಕಿ ವಿದ್ಯಾಭಿವೃದ್ಧಿ ಸಂಘದಿಂದ ಶಿಕ್ಷಣ ಸಂಸ್ಥೆಗಳು ಸ್ಥಾಪನೆಗೊಂಡವು. ಚಿತ್ರದುರ್ಗದಲ್ಲಿ ಚಿತ್ರದುರ್ಗ ಶಿಕ್ಷಣ ಸಂಸ್ಥೆಗಳು ವಾಲ್ಮೀಕಿ ವಿದ್ಯಾಸಂಸ್ಥೆ, ಜಿಲ್ಲಾ ಮದಕರಿನಾಯಕ ವಿದ್ಯಾಸಂಸ್ಥೆ ಇತ್ಯಾದಿ ಸಂಘ-ಸಂಸ್ಥೆಗಳು ಗಿರಿಜನರ ಶೈಕ್ಷಣಿಕ ಕೊರತೆಯನ್ನು ನೀಗಿಸುವಲ್ಲಿ ಸಫಲವಾಗಿವೆ. ಉತ್ತರ ಕರ್ನಾಟಕದ (ಗೋಕಾಕ್) ಏಕೈಕ ಗಿರಿಜನರ ಶಿಕ್ಷಣ ಸಂಸ್ಥೆಯಾದ ಲಕ್ಷ್ಮೀ ಎಜುಕೇಷನ್ ಸೊಸೈಟಿಯು ಇಲ್ಲಿನ ಜನರಿಗೆ ಅನೇಕ ರೀತಿಯಲ್ಲಿ ನೆರವಾಗಿದೆ. ಬೀದರ್, ಗುಲ್ಬರ್ಗಾ, ರಾಯಚೂರುಗಳಲ್ಲಿ ಸಹ ಸಣ್ಣ ಪುಟ್ಟ ಸಂಸ್ಥೆಗಳಿದ್ದು ಪರದಿ ಪಡೆಯಲು ಅನುಕೂಲವಾಗಿವೆ. ಬಳ್ಳಾರಿ ಜಿಲ್ಲೆಯ ಕೆಲ ಗ್ರಾಮಗಳಲ್ಲಿ ಈ ಸಮುದಾಯಕ್ಕೆ ಸೇರಿದ ಶಿಕ್ಷಣ ಸಂಸ್ಥೆಗಳನ್ನು ತೆರೆದಿರುವುದು ಕಂಡು ಬರುತ್ತದೆ. (ವಿರೂಪಾಕ್ಷಿ ಪೂಜಾರಹಳ್ಳಿ, ಪುಟ-೨೬೧)

ಇವರು ವಾಸಿಸುವ ಕೆಲವು ಹಟ್ಟಿಗಳಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕರಾಗಲಿ ಅಥವಾ ಶಿಕ್ಷಣ ಇಲಾಖೆಯಾಗಲಿ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿಲ್ಲ. ಕೆಲವೊಂದು ಶಿಕ್ಷಕರು, ಕೃಷಿ ವ್ಯಾಪಾರ, ಬಡ್ಡಿ ವ್ಯವಹಾರ ಮತ್ತು ಮದ್ಯಪಾನ ಮಾಡುವ ಪ್ರವೃತ್ತಿಗಳು ಕ್ಷೇತ್ರಕಾರ್ಯದಲ್ಲಿ ಕಂಡು ಬಂದಿದೆ.

ಕರ್ನಾಟಕ ಇತರೆ ಜಿಲ್ಲೆಗಳಿಗೆ ಹೋಲಿಕೆ ಮಾಡಿದರೆ ಶಿಕ್ಷಣ ಕ್ಷೇತ್ರದಲ್ಲಿ ಈಗಲೂ ಹಟ್ಟಿಗಳಿಂದ ಕೂಡಿದ ಈ ಎರಡೂ ಜಿಲ್ಲೆಗಳಲ್ಲಿ ತುಂಬಾ ಹಿಂದುಳಿದಿದೆ. ನಗರ ಪಟ್ಟಣಗಳಲ್ಲಿ ವಾಸಿಸುವಂತವರು ಶಿಕ್ಷಣವನ್ನು ಸರಿಯಾಗಿ ಸದುಪಯೋಗ ಪಡೆದುಕೊಳ್ಳುತ್ತಿದ್ದಾರೆ. ಹಟ್ಟಿಗಳಲ್ಲಿ ಇನ್ನು ಹಳೆಯ ಕಾಲದ ಗೊಡ್ಡು ಸಂಪ್ರದಾಯಗಳಿಂದ ಮಕ್ಕಳನ್ನು ಸರಿಯಾಗಿ ಶಾಲೆಗೆ ಕಳಿಸುವುದಿಲ್ಲ. ಅಲ್ಲಿಂದ ಬಂದಿರುವ ವಿದ್ಯಾರ್ಥಿಗಳನ್ನು ಬುಡಕಟ್ಟಿನ ಹಿನ್ನೆಲೆಯಿಂದ ಬಡತನ, ಅನಕ್ಷರತೆ, ಕಟ್ಟುನಿಟ್ಟಿನ ಸಂಪ್ರದಾಯಗಳ ಸೆಳತಕ್ಕೆ ಸಿಕ್ಕು ಶಾಲೆ ಬಿಡುವುದು ಅನುತ್ತೀರ್ಣರಾಗುವುದೇ ಹೆಚ್ಚು. ಎಸ್.ಎಸ್.ಎಲ್.ಸಿ, ಪಿ.ಯು.ಸಿ, ವಿದ್ಯಾಭ್ಯಾಸ ಮಾಡುವವರ ಸಂಖ್ಯೆ ಅಧಿಕ. ಹೀಗಾಗಿ ಬಡತನ, ದಾರಿದ್ರ್ಯಾ, ಅಜ್ಞಾನ ಪರಾವಲಂಬನೆ,

ಗುಲಾಮತನ, ದಾಸ್ಯಪ್ರವೃತ್ತಿ ಪ್ರಮುಖವಾಗಿವೆ. ಇವುಗಳನ್ನು ನಿರ್ನಾಮ ಮಾಡಿ ಮೇಲೇಳಲು ಜಾಗೃತಗೊಳಿಸುವ ಅವಶ್ಯಕತೆ ಇದೆ. ಮ್ಯಾಸಬೇಡರ ಮಕ್ಕಳು ಹೆಚ್ಚಾಗಿ ಕೂಲಿ ಕೆಲಸಕ್ಕೆ ಹೋಗುವುದುಂಟು. ಹೀಗಾಗಿ ಶಿಕ್ಷಣದಲ್ಲಿ ಪರಿವರ್ತನೆಗೊಂಡ ಸಮುದಾಯಗಳನ್ನು ನೋಡಿ ಇಂದು ಮ್ಯಾಸಬೇಡರ, ಶಾಲೆ ಕಾಲೇಜುಗಳ ಹಂತಕ್ಕೆ ತಲುಪಿದ್ದಾರೆ. ಇಂದು ಪದವಿ ಸ್ನಾತಕೋತ್ತರ ಪದವಿ, ಬಿ.ಇಡಿ. ಪಡೆಯುತ್ತಿರುವವರಂತೂ ಹೆಚ್ಚು ಸಂಖ್ಯೆಯಲ್ಲಿ ಕಂಡು ಬರುತ್ತಾರೆ. ಇಷ್ಟೆಲ್ಲ ಶಿಕ್ಷಣ ಪಡೆಯಲು ಉಚಿತ ವಸತಿ ನಿಲಯಗಳಿರುವುದರಿಂದ. ಅದೇ ರೀತಿ ಕಾನೂನು, ವೈದ್ಯಕೀಯ, ಇಂಜಿನಿಯರಿಂಗ್ ಮುಂತಾದ ತಾಂತ್ರಿಕ ಕೋರ್ಸ್‌ಗಳಲ್ಲಿ ಇವರಿಗೆ ಮೀಸಲಾತಿ ಸೌಲಭ್ಯವಿರುವುದರಿಂದ ಅನುಕೂಲವಾಗಿದೆ. ಹೆಚ್ಚಾಗಿ ಸರಿಯಾಗಿ ಈ ಎಲ್ಲಾ ಸೌಲಭ್ಯಗಳನ್ನು ಉಪಯೋಗಿಸಕೊಳ್ಳುತ್ತಿರುವವರು ಊರುಬೇಡರು. ಅದರಲ್ಲೇ, ನಗರ ಪಟ್ಟಣಗಳಲ್ಲಿ ವಾಸಮಾಡುವಂತವರು ಎಂದು ಹೇಳಿದರೆ ತಪ್ಪಾಗಲಾರದು. ಶಿಕ್ಷಣ ಹೇಗೋ ಮಾಡಿ ಪದವಿಗಳನ್ನು ಪಡೆದರೂ ಸಹ ಇಂದು ಬಹು ಮುಖ್ಯವಾದ ಸಮಸ್ಯೆ ಉದ್ಯೋಗದ ಸಮಸ್ಯೆ. ಯಾಕೆಂದರೆ ಇಂದು ಮುಂದುವರಿದ ಕೆಲವರು ಪ.ಪಂಡಕ್ಕೆ ಸೇರ್ಪಡುತ್ತಿದ್ದಾರೆ. ಹಾಗೆ ಮೀಸಲಾತಿ ಪ್ರಮಾಣ ೧೦೦ಕ್ಕೆ ಕೇವಲ ೩ರಷ್ಟು ಇದೆ. ಅದಕ್ಕಾಗಿ ಬಡತನದಿಂದ ಮತ್ತು ನಿರುದ್ಯೋಗದ ಸಮಸ್ಯೆಯಿಂದ ನರಳುತ್ತಿದ್ದು ಮೀಸಲಾತಿಯ ಪ್ರಮಾಣ ಕೇಂದ್ರದಲ್ಲಿರುವುದನ್ನು ರಾಜ್ಯದಲ್ಲಿ ಜಾರಿಗೆ ತರುವುದು ಅಗತ್ಯವಾಗಿದೆ. ಮ್ಯಾಸಬೇಡರು ಬೇಟೆಯ ನಂತರ ಕೃಷಿ ಮತ್ತು ಪಶುಪಾಲನೆಯಲ್ಲಿ ತೊಡಗಿಸಿಕೊಂಡಿರುವುದೇ ಹೆಚ್ಚು. ಕಾಲ ಬದಲಾದಂತೆಲ್ಲ ಅದಕ್ಕೆ ಹೊಂದಿಕೊಂಡು ಸ್ವತಂತ್ರವಾದ ಬದುಕನ್ನು ಕಂಡುಕೊಂಡರು. ಮತ್ತು ಸರ್ಕಾರದ ವತಿಯಿಂದ ಬರುವ ಸೌಲಭ್ಯಗಳನ್ನು ಸದುಪಯೋಗ ಪಡಿಸಿಕೊಳ್ಳುತ್ತಾರೆ. ಅವರದೇ ಆದ ಒಂದು ವ್ಯವಸ್ಥಿತವಾದ ಜೀವನವನ್ನು ರೂಪಿಸಿಕೊಂಡಿದ್ದಾರೆ. ಚಿತ್ರದುರ್ಗ ಜಿಲ್ಲೆ ಹಿರಿಯೂರು, ಹೊಸದುರ್ಗ, ಹೊಳಲ್ಕೆರೆಗಳಲ್ಲಿ ಹೆಚ್ಚಾಗಿ ಭೂಮಿಯನ್ನು ಹೊಂದಿರುವುದರಿಂದ ಅಡಿಕೆ, ತೆಂಗು ಬೆಳೆಗಳನ್ನು ಹೆಚ್ಚಾಗಿ ಬೆಳೆಯುತ್ತಿದ್ದಾರೆ. ಚಳ್ಳಕೆರೆ, ಮೊಳಕಾಲ್ಮೂರು ತಾಲ್ಲೂಕುಗಳಲ್ಲಿ ಹೆಚ್ಚಾಗಿ, ಕೊಳವೆ ಬಾವಿ(ಬೋರ್‌ವೆಲ್)ಯ ಮೂಲಕ, ಈರುಳ್ಳಿ, ಮೆಕ್ಕೆಜೋಳ, ಶೇಂಗ ಬೆಳಗಳನ್ನೇ ಅಧಿಕವಾಗಿ ಬೆಳೆಯತ್ತಾರೆ. ಆರ್ಥಿಕತೆ ಸುಧಾರಣೆಗೊಂಡಿದೆ. ಇನ್ನು ಬಳ್ಳಾರಿ ಜಿಲ್ಲೆ, ಕೂಡ್ಲಿಗಿ, ಹಗರಿಬೊಮ್ಮನಹಳ್ಳಿ ಹಡಗಲಿ, ಈ ತಾಲ್ಲೂಕುಗಳಲ್ಲಿ ಹೆಚ್ಚು ಹಿಂದುಳಿದಿದ್ದ, ಕೂಲಿ ಜೀವನವೇ ಅಧಿಕವಾಗಿದ್ದು, ಒಪ್ಪೊತ್ತಿನ ಊಟಕ್ಕಾಗಿಯೇ ಯೋಚಿಸುವಂತವರೇ ಹೆಚ್ಚು ಕಂಡುಬರುತ್ತಾರೆ. ಹೊಸಪೇಟೆ, ಸಿರುಗುಪ್ಪ, ಬಳ್ಳಾರಿ, ತುಂಗಾಭದ್ರ ಡ್ಯಾಂನ ನೀರನ್ನು ಸದುಪಯೋಗ ಪಡಿಸಿಕೊಂಡು ಕಬ್ಬು, ಭತ್ತ, ಬಾಳೆ ಹೆಚ್ಚಾಗಿ ಬೆಳೆಯುತ್ತಿದ್ದಾರೆ. ಒಟ್ಟಾರೆಯಾಗಿ ಈ ಎರಡು ಜಿಲ್ಲೆಗಳನ್ನು ಅವಲೋಕಿಸಿದರೆ ದೊಡ್ಡ ರೈತ ಕುಟುಂಬಗಳಿರುವುದು ಕಡಿಮೆ. ಇಂದು ಹೆಚ್ಚಾಗಿ ಕಾಡನ್ನು ಕಡಿದು ಉಳುಮೆ ಮಾಡುವುದರಿಂದ ಪರಿಸರ ವನ್ಯಜೀವಿಗಳ ನಾಶದಿಂದ ಮಳೆ ಪ್ರಮಾಣ ಇಳಿತಕ್ಕೆ ಕಾರಣವಾಗಿದೆ.

ಇಂದು ಕಟ್ಟಿಗೆ ಮಾರುವುದು, ಕಳೆ ತೆಗೆಯುವುದು, ಫಸಲು ಕೊಯ್ಯುವುದು. ಬಿತ್ತನೆ ಮಾಡುವುದು, ರೈಸ್‌ಮಿಲ್, ಎಣ್ಣೆಮಿಲ್, ಬೇರೆ ಕಡೆಗ ಕಬ್ಬು ಕಡಿಯಲು ವಲಸೆ ಹೋಗುವುದು, ಹೀಗೆ ವಿವಿಧ ವೃತ್ತಿಗಳಲ್ಲಿ ತೊಡಗಿಸಿಕೊಂಡು ಜೀವನ ಸಾಗಿಸುತ್ತಿದ್ದಾರೆ.

ಬೇಡರ ಮಹಿಳೆಯರು ಸಹ ಪುರುಷರಂತೆ ಎತ್ತಿನಗಾಡಿ, ನೇಗಿಲನ್ನು ಕಪಿಲೆಯನ್ನು ಮಹಿಳೆ ಕಲಿತಿರುವುದುಂಟು. ಮಹಿಳೆಯರು ಬಹುಮುಖ್ಯವಾಗಿ ಇಂದು ಪ್ರತಿಯೊಂದು ಹಟ್ಟಿಗಳಲ್ಲಿಯೂ ಸಹ ಸ್ವಸಹಾಯ ಸಂಘಗಳನ್ನು ಕಟ್ಟಿಕೊಂಡು ವಾರಕ್ಕೆ ೫೦ ರೂಪಾಯಿಯಿಂದ ಹಿಡಿದು ೧೦೦ರೂಪಾಯಿಯ ವರೆಗೆ ಉಳಿಸುತ್ತಾರೆ. ಒಂದೊಂದು ಹಟ್ಟಿಗಳಲ್ಲಿ ಎರಡು ಸಂಘಗಳೂ, ಅಂದರೆ ಕಡಿಮೆ, ೫ರಿಂದ ೬ ಸಂಘಗಳನ್ನು ಕಟ್ಟಿಕೊಂಡು ಸಂಘಗಳನ್ನು ಬೆಳೆಸುತ್ತಾರೆ. ಬ್ಯಾಂಕ್‌ವತಿಯಿಂದ ಕಡಿಮೆ ಬಡ್ಡಿದರದಲ್ಲಿ ಸಾಲವನ್ನು ಪಡೆಯುತ್ತಿದ್ದಾರೆ. ಅದರಲ್ಲೇ ಸಬ್‌ಸಿಡಿಯು ಸಹ ಇರುತ್ತದೆ. ತಮಗೆ ಅಗತ್ಯವೆನಿಸಿದಾಗ ಮಾತ್ರ ಆ ಹಣವನ್ನು ಉಪಯೋಗಿಸಿಕೊಳ್ಳುತ್ತಾರೆ. ಹೀಗೆ ಪುರುಷರಿಗಿಂತ ಮಹಿಳೆಯೇ ಹೆಚ್ಚು ಶ್ರಮವಹಿಸಿ ದುಡಿಯುತ್ತಾಳೆ.

ಪ್ರಸ್ತುತ ಸಂದರ್ಭದಲ್ಲಿ ಮ್ಯಾಸಬೇಡರ ಧಾರ್ಮಿಕ ಜೀವನವು ಧರ್ಮದೊಂದಿಗೆ ಬೆಸೆದುಕೊಂಡಿದೆ. ಇವರಲ್ಲಿಯೂ ಸಹ ಶೈವ ಮತ್ತು ವೈಷ್ಣವ ಎಂಬ ಎರಡೂ ಪಂಥಗಳಿವೆ. ಮ್ಯಾಸಬೇಡರಲ್ಲಿ ಮಂದಲನಾಯಕನ ಬೆಡಗಿನವರು, ನಾಮದವರು, ಮತ್ತು ಮಲ್ಲಿನಾಯಕನ ಬೆಡಗಿನವರು, ಲಿಂಗದವರು ಎಂದು ಕರೆಯುತ್ತಾರೆ. ಈ ಎರಡು ಪಂಗಡಗಳಲ್ಲಿ ಸರ್ವಚೇತನವಾದ ಮತ್ತು ಕುಲದೇವತಾವಾದ 'ಪದ್ಧತಿ ಹಿಂದಿನಿಂದಲೂ ಆಚರಣೆಯಲ್ಲಿದೆ. ಮ್ಯಾಸಬೇಡರಿಗೆ ಹನ್ನೆರಡು ದೇವರುಗಳು ಬಹು ಮುಖ್ಯವಾಗಿವೆ ದೇವರು ಧರ್ಮ ಮತ್ತು ಧಾರ್ಮಿಕತೆಗೆ ಬಹಳ ಮಹತ್ವ ಕೊಡುತ್ತಾ ಬಂದಿದ್ದಾರೆ. ಹುಟ್ಟುವ ಮಕ್ಕಳಿಗೆ. ದೇವರ, ಹೆಸರುಗಳನ್ನು ಇಡುತ್ತಿದ್ದರು. ಆದರೆ ಇಂದು ಈ ದೇವರ ಹೆಸರು ಬಿಟ್ಟು ಪರ್ಯಾಯವಾಗಿ ಸಿನಿಮಾ ಹೀರೋ ಹೀರೋನಿಯರ ಹೆಸರುಗಳನ್ನು ಇಡುತ್ತಾರೆ. ನಂತರ ಮೂರುವರ್ಷದಲ್ಲಿ ಮನೆ ದೇವರ ಹತ್ತಿರವೇ ಕೂದಲನ್ನು ತೆಗಿಸುತ್ತಾರೆ. ಇವರು ವೈಯಕ್ತಿಕ ಆಚರಣೆಗಳಿಗಿಂತ ಸಾಮೂಹಿಕ ಆಚರಣೆಗಳಿಗೆ ಬಹಳ ಮಹತ್ವ ಕೊಡುತ್ತಾರೆ. ಹುಟ್ಟು ಮತ್ತು ಸಾವುಗಳು ಸೂತಕವೆಂದು ತಿಳಿದು ಅವುಗಳ ಬಗ್ಗೆ ಕಟ್ಟುನಿಟ್ಟಾದ ಸಂಪ್ರದಾಯಗಳಿವೆ.

ಹಟ್ಟಿಯೊಳಗಿರುವ ದೇವರ ಭಯದಿಂದ ಹಟ್ಟಿಯ ಹೊರಗೆ ಗುಡ್ಲು ಕಟ್ಟಿ ಹೆರಿಗೆ ಮಾಡಿಸುತ್ತಿದ್ದರು. ಆದರೆ ಇಂದು ಈ ಪದ್ಧತಿಯು ಬದಲಾಗಿದೆ. ಮನೆಯ ಒಳಗಡೆ ಹೆರಿಗೆ ಮಾಡಿಸುತ್ತಾರೆ. ಋತುಮತಿಯಾದ ಹೆಣ್ಣನ್ನು ಸಹ ಹಿಂದೆ ಊರು ಹೊರಗಡೆ ಇಡುತ್ತಿದ್ದರು. ಆದರೆ ಇದು ಕೂಡ ಇಂದು ಬದಲಾಗಿ ಊರಿನ ಒಳಗಡೆ ಮನೆಯ ಮುಂದೆ ಅಥವಾ ಮನೆಯ ಅಕ್ಕಪಕ್ಕದಲ್ಲಿ ಐದು ದಿನಗಳ ಕಾಲ ಕೂಡಿಸುತ್ತಾರೆ. ಹಳೆಯ ಸಂಪ್ರದಾಯಗಳಿಗೆ ಅಂಟಿಕೊಂಡ ಈ ಸಮುದಾಯದವರು ವಾಸದ ಮನೆ ಮತ್ತು ದೇವಸ್ಥಾನಗಳನ್ನು

ಹುಲ್ಲುಗಳಿಂದಲೇ ಕಟ್ಟಿಕೊಳ್ಳುತ್ತಿದ್ರು. ಆದರೆ ಇಂದು ಸರ್ಕಾರದ ಆಶ್ರಯ ಮನೆಗಳು ಬಂದಿದ್ದರಿಂದ ಗುಡಿಸಲು ಮನೆ ಇರುವವರಿಗೆ ಆಶ್ರಯ ಮನೆಯನ್ನು ಮಾಡಿಸಿಕೊಡುತ್ತಿದ್ದಾರೆ. ತಮ್ಮ ಹಟ್ಟಿಯ ದೇವಸ್ಥಾನದ ಸುತ್ತ ಮುಳ್ಳು ಬೇಲಿಯನ್ನು ಹಾಕಿಕೊಳ್ಳುತ್ತಿದ್ದರು, ಈಗಲೂ ಕೆಲವು ಕಡೆ ಇದೇ ಪದ್ಧತಿ ಮುಂದುವರೆದಿದೆ. ಈ ಬೇಲಿ ರಕ್ಷಣೆ ಮತ್ತು ಪವಿತ್ರತೆ ಎರಡು ದೃಷ್ಟಿಯಿಂದ ಕಟ್ಟಿಕೊಳ್ಳುತ್ತಾರೆ. ಮೊಳಕಾಲ್ಮೂರು, ಚಳ್ಳಕೆರೆ, ಚಿತ್ರದುರ್ಗ ಮತ್ತು ಕೂಡ್ಲಿಗಿ ತಾಲ್ಲೂಕುಗಳಲ್ಲಿ ಹಂಚಿ ಹುಲ್ಲಿನ ದೇವಸ್ಥಾನಗಳು ಕಂಡು ಬಂದರೆ ಹೊಳಲ್ಕೆರೆ, ಹೊಸದುರ್ಗ ಮತ್ತು ಹಿರಿಯೂರು ತಾಲ್ಲೂಕುಗಳಲ್ಲಿ ಬಾಳೆಪಚ್ಚೆ ಮುತ್ತುಗದ ಎಲೆಯಿಂದ ನಿರ್ಮಿಸಿದ ದೇವರ ಗುಬ್ಬಗಳು ಕಂಡುಬರುತ್ತವೆ. ಈ ಸಮುದಾಯದವರು ದೇವರು, ಧರ್ಮ, ಕುಲ, ಹಬ್ಬ ಮತ್ತು ಜಾತ್ರೆಗಳಿಗೆ ಕೊಟ್ಟಷ್ಟು ಮಹತ್ವ ಆರ್ಥಿಕ ಮತ್ತು ಶೈಕ್ಷಣಿಕ ಕ್ಷೇತ್ರಕ್ಕೆ ಕೊಡುವುದಿಲ್ಲ ಮತ್ತು ಇವರಲ್ಲಿ ಕಂಡುಬರುವ ಕೆಲವು ಗೊಡ್ಡು ಸಂಪ್ರದಾಯಗಳಲ್ಲಿ ವೈಜ್ಞಾನಿಕ ಅಂಶಗಳನ್ನು ಗುರುತಿಸಬಹುದು. ಮುಟ್ಟಾದ ಹೆಣ್ಣು ಮಕ್ಕಳು ಐದು ದಿನಗಳವರೆಗೆ ಮನೆಯಿಂದ ಹೊರಗಡೆ ಇರಬೇಕು. ಹೆರಿಗೆಯಾದ ಹೆಣ್ಣು ಮಕ್ಕಳಿಗೆ ಕೂಡ ಕೆಲವು ಕಡೆ ಪ್ರತ್ಯೇಕ ಮನೆ ಇರುತ್ತವೆ. ಹುಟ್ಟು ಸಾವು ಮತ್ತು ಮುಟ್ಟು ಸಂದರ್ಭದಲ್ಲಿ ಶುಭಕಾರ್ಯ ಮಾಡುವುದಿಲ್ಲ. ಉಡಿಗೆ-ತೊಡುಗೆಯಲ್ಲೂ ಚಡ್ಡಿ-ಚಲ್ಲಣ, ತಲೆಗೆ ಪೇಟ ಹೆಂಸಗಸರು ಬಿಳಿಯ ಸೀರೆ, ರವಿಕೆ ತೊಡುತ್ತಾರೆ. ವಯಸ್ಸಾದ ಸಂಪ್ರದಾಯಸ್ಥ ಹೆಂಗಸರು ರವಿಕೆ ಈಗಲೂ ತೊಡುವುದಿಲ್ಲ, ಈಗಲೂ ಕೆಲವು ಹಟ್ಟಿಗಳಲ್ಲಿ ಗುರುಸ್ಥಾನದ ದೀಕ್ಷೆ ಪಡೆದಿರುವವರು ಹೆಣ್ಣು ಮಕ್ಕಳು ಗಂಡ ಸತ್ತರೂ ಸಹ ತಾಳಿ, ಬಳೆ, ಹೂವು, ಕುಂಕುಮವನ್ನು ಧರಿಸಿ ಸದಾ ಮುತ್ತೈದೆಯರಾಗುತ್ತಾರೆ.

ಯಾವುದೇ ಧಾರ್ಮಿಕ ಕಾರ್ಯಗಳಲ್ಲಿ ವಿಶೇಷವಾಗಿ ಮಣ್ಣಿನ ಮಡಿಕೆ, ಕುಡಿಕೆ ಮುಚ್ಚಳಗಳನ್ನು ಬಳಸುತ್ತಾರೆ. ಇಂದು ಕಂಚು, ಹಿತ್ತಾಳೆ, ತಾಮ್ರ ಮೊದಲಾದ ಪಾತ್ರೆಗಳು ಬಂದರೂ ಸಹ ಮಣ್ಣಿನ ಮಡಿಕೆಗಳೇ ಶ್ರೇಷ್ಠ ಎಂದು ಹೇಳುತ್ತಾರೆ. ದೇವಸ್ಥಾನದಲ್ಲಿ ದೇವರಿಗೆ ಮೀಸಲು ಅಡಿಗೆ ಮಾಡುವಾಗ ಹೊಸ ಮಣ್ಣಿನ ಮಡಿಕೆಯನ್ನೇ ಬಳಸುತ್ತಾರೆ. ಕೆಲವೊಂದು ದೇವರುಗಳಿಗೆ ಕಾರ ಅಥವಾ ಸಾಂಬಾರ ಆಗುವುದಿಲ್ಲವೆಂದು ಬೆಲ್ಲ ಬಾಳೆಹಣ್ಣು, ಎಳೆಗಂಜಿ, ಹಾಲು, ಮೊಸರು, ಮಜ್ಜಿಗೆಯನ್ನು ನೈವೇದ್ಯಕ್ಕೆ ಬಳಸುತ್ತಾರೆ. ಉಪ್ಪು ಹಾಕದ ಸಾರು ಮತ್ತು ಹುರುಳಿ ಗುಗ್ಗರಿಯನ್ನು ದೇವರಿಗೆ ಎಡೆಹಾಕುತ್ತಾರೆ. ಕೆಲವೊಂದು ದೇವರುಗಳಿಗೆ ಆಹಾರ ಪದ್ಧತಿಗಳು ನಿಗದಿಯಾಗಿರುತ್ತವೆ. ಹೊಸದುರ್ಗ ತಾಲ್ಲೂಕಿನ ಹಾರ್ನರಶಿವೆ ರಂಗಪ್ಪನಿಗೆ ಸಕ್ಕರೆ ಬಾಳೆಹಣ್ಣು, ಹೊಳಲ್ಕೆರೆ ತಾಲ್ಲೂಕು ದುಮ್ಮಿ ಜುಂಜಪ್ಪನಿಗೆ ಹಾಲು ಬೆಲ್ಲ ಹಾಕುವಂತೆ ಮೊಳಕಾಲ್ಮೂರು ತಾಲ್ಲೂಕಿನ ಕಂಪಳ ರಂಗಸ್ವಾಮಿಗೆ ಬೆಲ್ಲ, ಬಾಳೆಹಣ್ಣು, ಚಳ್ಳಕೆರೆ ತಾಲ್ಲೂಕಿನ ದೊಡ್ಡ ಚಲ್ಲರೂ ಬಯಲು ಹನುಮಂತ ರಾಯನಿಗೆ ಹೋಳಿಗೆ ತುಪ್ಪ, ಸಾಣೀಕೆರೆ ಗಿಡದಗಳ ವೀರ ಚಿಕ್ಕಣ್ಣನಿಗೆ ಎಳಗಂಜಿ ಹಾಲು, ಬೆಲ್ಲ ಎಡೆ ಹಾಕುತ್ತಾರೆ. ಈ ಬುಡಕಟ್ಟು ಸಮುದಾಯದಲ್ಲಿ

ಸಾಹಿತ್ಯ ಕಲೆ ಮತ್ತು ಸಂಸ್ಕೃತಿ ಶ್ರೀಮಂತವಾಗಿದೆ. ಯಾವುದೇ ಜೀವನ ಸಂಕಷ್ಟಗಳಿಗೆ ಅಥವಾ ಸಮಸ್ಯೆಗಳಿಗೆ ದೇವರು, ದೆವ್ವ, ಭೂತಗಳೇ ನಂಬಿ ಹರಕೆ ಹೊತ್ತು ತೀರಿಸುತ್ತಾರೆ. ಜ್ವರಗಿರ ಬಂದರೆ, ಮೈಯಲ್ಲಿ ಇನ್ನಾವುದೋ ರೋಗ ಬಂದರೆ ಇಂದಿಗೂ ಸಹ ದೇವರ ತೀರ್ಥ, ಭಂಡಾರ ಹಚ್ಚಿಕೊಳ್ಳುತ್ತಾರೆ. ಕಾಯಿಕರ್ಪೂರ ಒಡೆಸುತ್ತಾರೆ. ಈಗೆಲ್ಲ ಮಾಡಲು ಪ್ರಮುಖ ಕಾರಣ ದೇವರೇ ನಮಗೆ ವಾಸಿಮಾಡುತ್ತಾನೆ ಎಂದು ಪ್ರಬಲವಾದ ನಂಬಿಕೆ ಇವರಲ್ಲಿ ಬೇರೂರಿದೆ.

ಈ ಸಮುದಾಯದ ಜನರು ಈಗಲೂ ಕೆಲವು ಹಟ್ಟಿಗಳಿಗೆ ಸರ್ಕಾರಿ ನೌಕರಿದಾರರು ಮತ್ತು ಫ್ಯಾಂಟು ಬೂಟು ಹಾಕಿಕೊಂಡು ಹೊದರೆ ಹಟ್ಟಿಯ ಒಳಗೆ ಪ್ರವೇಶಿಸಿದರೆ ಸಂಶಯಾಸ್ಪದವಾಗಿ ನೋಡುತ್ತಾರೆ. ಒಮ್ಮೆ ಒಬ್ಬ ವ್ಯಕ್ತಿಯ ಮೇಲೆ ನಂಬಿಕೆಯನಿಟ್ಟರೆ ಅವರಿಗೋಸ್ಕರ ಪ್ರಾಣವನ್ನಾದರೂ ಕೊಡಲು ಸಿದ್ಧರಿರುತ್ತಾರೆ. ಇತ್ತೀಚೆಗೆ ಯಾವುದೇ ಶುಭಕಾರ್ಯಗಳು ಮಾಡಿದರೆ ಆಯಾ ದೇವರುಗಳ ಪೂಜಾರಿಗಳನ್ನು ಕರೆತರುತ್ತಾರೆ. ಮದುವೆಯಂತಹ ಸಂದರ್ಭದಲ್ಲಿ ಈಗಲೂ ಸಹ ಲಗ್ನಕಟ್ಟಲು, ಜಂಗಮರನ್ನು ಕರೆತರುತ್ತಾರೆ. ಕೆಲವು ಕಡೆ ಬ್ರಾಹ್ಮಣರನ್ನು ಕರೆಸುತ್ತಾರೆ. ಮತ್ತೆ ಕೆಲವರು ಹರಿಹರ ತಾಲೂಕಿನ ರಾಜನಹಳ್ಳಿ ಶ್ರೀ ವಾಲ್ಮೀಕಿ ಸ್ವಾಮೀಜಿಯನ್ನು ಕರೆಸಿಕೊಳ್ಳುತ್ತಾರೆ. ಹೀಗೆ ಮ್ಯಾಸಬೇಡರ ಪ್ರಸ್ತುತ ಸಂದರ್ಭದಲ್ಲಿ ಧಾರ್ಮಿಕ ಕಥನವನ್ನು ಸಂಕ್ಷಿಪ್ತವಾಗಿ ವಿಶ್ಲೇಷಿಸಲಾಗಿದೆ.

ಒಟ್ಟಾರೆಯಾಗಿ ಕರ್ನಾಟಕದಲ್ಲಿ ನೆಲಸಿರುವ ಮ್ಯಾಸಬೇಡರು ತಮ್ಮ ಅನುಕೂಲಕ್ಕೆ ತಕ್ಕಂತೆ ವೃತ್ತಿ ಉದ್ಯೋಗವನ್ನು ಅವಲಂಬಿಸಿದ್ದಾರೆ. ಹಾಗೆಯೇ ಬೇಟೆಯನ್ನು ಕೈಬಿಟ್ಟರೂ ಸಹ ಕೃಷಿ, ಪಶುಪಾಲನೆ, ದಿನಗೂಲಿಗಳಾಗಿ, ಹಾಗೆ ಕಾಡಿನಲ್ಲಿ ಸಿಗುವ ಮರದ ಅಂಟು, ಬೀಡಿ ಎಲೆ ಕಟ್ಟುವುದು, ಜೇನುಸಾಕಾಣಿಕೆ ಹೀಗೆ ಹಲವಾರು ವೃತ್ತಿಗಳಲ್ಲಿ ನಿರತರಾಗಿದ್ದಾರೆ. ಹೀಗೆ ರಾಜ ಪ್ರಭುತ್ವದಲ್ಲಿದ್ದ ಮ್ಯಾಸಬೇಡರ ಸ್ಥಿತಿ-ಗತಿಗಳನ್ನು ಇಂದಿನ ಪ್ರಜಾಪ್ರಭುತ್ವದ ವ್ಯವಸ್ಥೆಗೆ ಹೋಲಿಸಿಕೊಂಡರೆ ಜೀವನಕ್ರಮದಲ್ಲಿ ಸುಧಾರಿಸಿದ್ದಾರೆ. ಇನ್ನೂ ಸುಧಾರಿಸಬೇಕಾಗಿದೆ. ರಾಜಕೀಯ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಧಾರ್ಮಿಕ ಮೊದಲಾದ ಕ್ಷೇತ್ರಗಳಲ್ಲಿ ಪ್ರಗತಿದಾಯಕವಾಗಿ ಮುನ್ನೆಡೆದಿದ್ದಾರೆ. ಇದಕ್ಕೆ ಎಲ್.ಜಿ.ಹಾವನೂರು ಅವರ ಆಯೋಗದಲ್ಲಿ 'ನಾಯಕ' ಎಂದು ಬೇಡ ಬುಡಕಟ್ಟನ್ನು ಪರಿಶಿಷ್ಟ ವರ್ಗಕ್ಕೆ ಸೇರಿಸಿದಾಗ ಸೌಲಭ್ಯ ಪಡೆಯಲು ಕಾರಣವಾಯಿತು. ಕೆಲವರು ಸೌಲಭ್ಯವಿಲ್ಲದ ಕಾರಣ ತಳವಾರ ಪರಿವಾರ ಮೊದಲಾದ ಬೇಡರ ಪರ್ಯಾಯ ಹೆಸರುಗಳನ್ನು ಎ.ಟಿ.ಗೆ.ಸೇರಿಸಲು ಒತ್ತಾಯಿಸಿದ್ದಾರೆ. ಮೇಲಿನಂತೆ ಸಮಾಜದ ಏಳ್ಗೆಗೆ ಅನೇಕ ಸಮಾಜ ಸೇವಕರು ಶ್ರಮಿಸುತ್ತಿದ್ದಾರೆ. ಬೌದ್ಧಿಕವಾಗಿ ಪತ್ರಿಕೆ ಇತರ ಸಮೂಹ ಮಾಧ್ಯಮಗಳು ಬೇಡರ ಸುಧಾರಣೆಗೆ ಪೂರಕವಾಗಿವೆ. ಇಂದು ಪ್ರತಿಯೊಂದು ಊರುಗಳಲ್ಲಿ ವಾಲ್ಮೀಕಿ ಜಯಂತಿಗಳು ಆಚರಿಸುವುದರ ಮೂಲಕ ಬುಡಕಟ್ಟಿನ ಸಂಘಟನೆ ಸಮಸ್ಯೆಗಳ ನಿವಾರಣೆ ಇತರೆ ಸಂಗತಿಗಳ ಪ್ರಸ್ತಾಪವು ಆಗುತ್ತಿದೆ. ರಾಜ್ಯದಲ್ಲಿ ದಟ್ಟವಾಗಿ ನೆಲಸಿರುವ ಇವರು ವಿವಿಧ ರೀತಿಯಲ್ಲಿ ಪ್ರಗತಿಯ ಹಾದಿಯಲ್ಲಿ ಮುನ್ನೆಡೆಯುವಂತೆ ಕಂಡುಬರುತ್ತಿದೆ.

ಅಧ್ಯಾಯ - ಎಂಟು

ಫಲಿತಗಳು ಮತ್ತು ಪರ್ಯಾಯಗಳು

ಅಧ್ಯಾಯ - ಎಂಟು

ಫಲಿತಗಳು ಮತ್ತು ಪರ್ಯಾಯಗಳು

ಪ್ರಸ್ತುತ ಈ ಅಧ್ಯಯನವು ಮ್ಯಾಸಬೇಡರ ಸಮುದಾಯದ ಆತ್ಮಕಥನಗಳ ಭಾಗವನ್ನು ಅವಲಂಬಿಸಿದೆ. ಹೀಗಾಗಿ ಒಂದು ಸಮುದಾಯವನ್ನು ಅಧ್ಯಯನ ಮಾಡಿ ಸಾರ್ವತ್ರಿಕ ಎನ್ನುವ ದುಂಡು ಹೇಳಿಕೆ ನೀಡುವ ಬದಲು ಸೂಕ್ಷ್ಮವಿವರಗಳ ಮೂಲಕ ಮ್ಯಾಸಬೇಡರ ವರ್ತಮಾನದ ಬದುಕಿನ ಸಂಕೀರ್ಣತೆಯನ್ನು ಈ ಅಧ್ಯಯನದಲ್ಲಿ ಗುರುತಿಸಲಾಗಿದೆ. ಇಂತಹ ಸಂಕೀರ್ಣತೆಯ ಬಗೆಗೆ ಹಿಂದಿನ ಅಧ್ಯಯನಗಳಲ್ಲಿ ಕೆಲವು ಸೂಚನೆಗಳಿದ್ದವು ಅಂತಹ ಸೂಚನೆಗಳ ಮೂಲಕವೇ ಅದರ ಹಲವು ಆಯಾಮಗಳನ್ನು ಗುರುತಿಸಲು ಪ್ರಯತ್ನಗಳಲ್ಲಿ ವಿವರಿಸಲಾಗಿದೆ.

೧. ಮ್ಯಾಸಬೇಡ ಸಮುದಾಯದಲ್ಲಿ ಹೆಚ್ಚುತ್ತಿರುವ ವರ್ಗಶ್ರೇಣೀಕರಣ

ಈಗೀಗ ಜಾತಿ, ಸಮುದಾಯಗಳ ವರ್ಗಶ್ರೇಣೀಕರಣವು ಗಟ್ಟಿಯಾಗುತ್ತಿದೆ. ಅದು ಮ್ಯಾಸಬೇಡ ಸಮುದಾಯದ ಅಧ್ಯಯನದಲ್ಲೂ ಕಾಣಿಸಿಕೊಂಡಿತು. ಮ್ಯಾಸಬೇಡ ಸಮುದಾಯದಲ್ಲಿ ನೌಕರವರ್ಗ, ಶ್ರೀಮಂತ ವರ್ಗ, ಮಧ್ಯಮ ವರ್ಗ ಬಡತನದ ರೇಖೆ ಕೆಳಗಿನವರು ಎಂದು ಗುರುತಿಸಬಹುದು. ನೌಕರವರ್ಗ ತಮ್ಮ ಹಟ್ಟಿಯನ್ನೇ ಬಿಟ್ಟು ನಗರದಲ್ಲಿ ನೆಲೆಸುತ್ತಿದ್ದಾರೆ. ಕೂಡ್ಲಿಗಿ ತಾಲೂಕು ಕಾತ್ರಿಕೆಹಟ್ಟಿಯವರಾದ ಪೋಸ್ಟ್‌ಮಾಸ್ಟರ್ ತಿಪ್ಪೇಸ್ವಾಮಿ ಅವರು ಹೇಳುವಂತೆ ಮಕ್ಕಳ ವಿದ್ಯಾಭ್ಯಾಸಕ್ಕೆ ನಗರದಲ್ಲಿ ಇರೋದು ಅನಿವಾರ್ಯ ಹಟ್ಟೀಲಿದ್ರೆ ಮಕ್ಳ ಎಜುಕೇಶನ್ ಎಂಗ್ರಿ ಎನ್ನುತ್ತಾರೆ. ಅದೇ ರೀತಿ ಹಿರೇಹಳ್ಳಿಯ ಕಲ್ಪನ ಪ್ರಾಥಮಿಕ ಶಾಲಾಶಿಕ್ಷಕಿ ಅವರು ಕೂಡ ಇವತ್ತಿನ ಕಾಲ್ದಲ್ಲಿ ಹಟ್ಟಿಗಳಲ್ಲಿದ್ರೆ ಏನು ಮಾಡ್ಲಿಕ್ಕೆ ಆಗಲ್ಲ, ಏಕೆಂದ್ರೆ ಮಕ್ಳು ಹಾಳಾಗಿ ಹೋಗ್ತಾರೆ ಅವರು ಸರಿಯಾಗಿ ಕಲಿಯಲ್ಲ ಆದ್ದರಿಂದ ನಾನು ಕೂಡ ಚಿತ್ರದುರ್ಗಕ್ಕೆ ಬಂದು ಬಾಡಿಗೆ ಮನೆ ಮಾಡ್ಕೊಂಡು ಇಲ್ಲಿಂದನೆ ನಾನು ನಾಲ್ಕೈದು ಕಿಲೋಮೀಟರ್ ಓಡಾಡುತ್ತಲೆ ಮಕ್ಕಳ ಎಜುಕೇಶನ್ ಕಡೆಗೆ ಹೆಚ್ಚು ಒತ್ತು ಕೊಡ್ತೀವಿ ಎನ್ನುತ್ತಾರೆ.

ಇನ್ನು ಹಳ್ಳಿಯಲ್ಲೇ ಉಳಿಯುವುದು ಕೃಷಿ ಆಧರಿಸಿದ ಬೇಡರು ಮಾತ್ರ. ಮ್ಯಾಸ ಬೇಡ ಸಮುದಾಯದಲ್ಲೂ ಅಕ್ಷರವಂತ ವರ್ಗ ಅನಕ್ಷರಸ್ಥ ವರ್ಗ ಎಂಬ ವರ್ಗ ಶ್ರೇಣೀಕರಣ ಬೆಳೆಯುತ್ತಿದೆ. ಕೂಡ್ಲಿಗಿ ತಾಲೂಕಿನ ಪೂಜಾರಹಳ್ಳಿಯಲ್ಲಿ ಬೇಡರ ಯುವಕನೊಬ್ಬ ತನ್ನ ಸಮುದಾಯಕ್ಕೆ ಇಲ್ಲದ ಆಮಿಷ ವೊಡ್ಡಿ ಮೋಸ ಮಾಡಿರುವುದು ತಿಳಿಯಿತು. ಅಂದರೆ ಶಿಕ್ಷಿತ ವರ್ಗದಲ್ಲಿ ಕೆಲವರು ತನ್ನದೇ ಸಮುದಾಯದ ಅಶಿಕ್ಷಿತ ವರ್ಗವನ್ನು ಮೋಸಮಾಡಲು ಹಿಂಜರಿಯುತ್ತಿಲ್ಲ ಬೇಡ ಸಮುದಾಯವನ್ನು ಪ್ರತಿನಿಧಿಸುವ ಹರಿಹರದ ಬಳಿ ಇರುವ ರಾಜನ ಹಳ್ಳಿಯ ಗುರುಪೀಠವೂ ಕೂಡ ಬೇಡರಲ್ಲಿರುವ ನೌಕರರನ್ನು, ಆರ್ಥಿಕವಾಗಿ ಉತ್ತಮವಾಗಿರುವವರನ್ನು ಶಿಕ್ಷಿತರನ್ನು ರಾಜಕಾರಣಿಗಳನ್ನು ಮಾತ್ರ ಬೇಡರು ಎಂಬಂತೆ ಬಿಂಬಿಸುತ್ತಿದೆ. ಈ ಪೀಠಕ್ಕೆ ಬಡತನದಲ್ಲಿರುವ ಬೇಡರ ಬಗ್ಗೆ ಯಾವುದೇ ಅನುಕಂಪವಿಲ್ಲ. ತೀರಾ ಕೆಳಗಿನವರನ್ನು ಮೇಲೆತ್ತುವ ಧೋರಣೆಯಂತೂ ಇದ್ದಂತಿಲ್ಲ ಬೇಡ ಸಮುದಾಯವನ್ನು ಪ್ರತಿನಿಧಿಸುವ ಪತ್ರಿಕೆಗಳಲ್ಲಿ ಈ ಬಗ್ಗೆ ಕಾಳಜಿ ವ್ಯಕ್ತವಾಗುತ್ತಿಲ್ಲ ಆರ್ಥಿಕವಾಗಿ ತೀರಾ ಕೆಳಮಟ್ಟದಲ್ಲಿರುವ ಬಡವರು ಇಂದು ಬೇಡರ ಪ್ರತಿನಿಧಿಗಳಾಗಿ ಉಳಿದಿಲ್ಲ. ಹೀಗೆ ಬೇಡ ಸಮುದಾಯದೊಳಗೆ ವರ್ಗಶ್ರೇಣೀಕರಣ ಹೆಚ್ಚುತ್ತಿದೆ.

೨. ಕೋಮು ಗಲಬೆ ಮತ್ತು ಮ್ಯಾಸಬೇಡ ಸಮುದಾಯ

ಈ ಅಧ್ಯಯದ ಕ್ಷೇತ್ರಕಾರ್ಯಕ್ಕೆ ಆಯ್ದುಕೊಂಡ ಹಳ್ಳಿಗಳು ಎರಡು ಬಗೆಯವು. ಒಂದು ಬಹುಸಂಖ್ಯಾತ ಬೇಡ ಸಮುದಾಯವಿರುವ ಹಳ್ಳಿಗಳು, ಎರಡು ಅಲ್ಪಸಂಖ್ಯಾತ ಬೇಡ ಸಮುದಾಯವಿರುವ ಹಳ್ಳಿಗಳು, ಬಹುಸಂಖ್ಯಾತ ಬೇಡ ಸಮುದಾಯ ವಿರುವ ಹಳ್ಳಿಗಳಲ್ಲಿ ಇತರೆ ಸಮುದಾಯಗಳ ಜೊತೆಗಿನ ಸಂಘರ್ಷದಲ್ಲಿ ಬೇಡರು ಪ್ರಭಲವಾಗಿದ್ದಾರೆ. ಇನ್ನು ಅಲ್ಪಸಂಖ್ಯಾತ ಬೇಡರಿರುವ ಹಳ್ಳಿಗಳಲ್ಲಿ ಮೇಲ್ವರ್ಗದ ಜಾತಿಯವರ ಜೊತೆಗಿನ ಸಂಘರ್ಷದಲ್ಲಿ ಬೇಡರು ದುರ್ಬಲರಾಗಿದ್ದಾರೆ. ಈ ಎರಡು ಬಗೆಯ ಹಳ್ಳಿಗಳಲ್ಲಿ ಎರಡನೇಯ ವರ್ಗದ ಅಲ್ಪಸಂಖ್ಯಾತರ ಬೇಡರಂತೂ ಮೇಲ್ವರ್ಗದ ಜಾತಿಗಳಿಂದ ಮತ್ತೆ ಮತ್ತೆ ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾರೆ. ಗುಡೇಕೋಟೆ, ಕಾನಹೊಸಹಳ್ಳಿ ಪೋಲೀಸ್ ಸ್ಟೇಷನ್‌ನಲ್ಲಿ ವಿಚಾರಿಸಲಾಗಿ ಬೇಡರ ಜಗಳದ ಕೇಸುಗಳೇ ಹೆಚ್ಚಿವೆ. ಕೂಡ್ಲಿಗಿಯಲ್ಲಿ ನ್ಯಾಯವಾದಿಯಾದ ಬೇಡ ಸಮುದಾಯದ ಓಂಕಾರಪ್ಪ ಇವರನ್ನು ವಿಚಾರಿಸಿದಾಗ 'ಬೇಡರು ಮತ್ತು ಲಿಂಗಾಯಿತ ಜಾತಿಯ ಜಗಳಗಳಲ್ಲಿ ನ್ಯಾಯಾಲಯದಲ್ಲಿ ತಪ್ಪಿಲ್ಲದಿದ್ದರೂ ಅಪರಾದಿಗಳಾಗುವುದು ಬೇಡರೆ' ಎಂದು ಹೇಳುತ್ತಾರೆ. ಕೋಮುಗಲಭೆಯಿಂದ ದೌರ್ಜನ್ಯಕ್ಕೊಳಗಾದ ಪ್ರಮುಖ ಎರಡು ಉದಾಹರಣೆಗಳೆಂದರೆ ೨೦೦೭ರಲ್ಲಿ ಕೂಡ್ಲಿಗಿ ತಾಲೂಕಿನ ಗುಡೇಕೋಟೆ ವ್ಯಾಪ್ತಿಗೆ ಸೇರಿದ ಹುಲಿಕುಂಟೆಯಲ್ಲಿ ಎರಡು ಜೋಡಿ ಕೊಲೆಗಳಾದವು. ಈ ಕೊಲೆಗೆ ಪ್ರಮುಖ ಕಾರಣರಾದವರು ಲಿಂಗಾಯಿತರು ಎಂಬುದು ತಿಳಿದು ಬಂದಿದೆ. ಹಾಗೆ ೨೦೦೫ರಲ್ಲಿ ರಾಮದುರ್ಗದಲ್ಲಿ ಮ್ಯಾಸಬೇಡರ ರಾಜಕೀಯ ಮುಖಂಡ ಬಂಡಿಸೂರಯ್ಯನು ಕೊಲೆಯಾದನು. ಇದಕ್ಕೆ ಕಾರಣರಾದವರು ಕೂಡ ಲಿಂಗಾಯಿತರೇ. ಹೀಗೆ ಹಲವಾರು ಪ್ರಕರಣಗಳು ಸಿಗುತ್ತವೆ. ಹೀಗಾಗಿ ಕೋಮು

ಜಗಳಗಳಿಂದ ಬೇಡ ಸಮುದಾಯದಲ್ಲಿ ಆತಂಕ ಮನೆ ಮಾಡಿದೆ. ಈ ಆತಂಕದಿಂದಾಗಿ ಬೇಡರು ದೌರ್ಜನ್ಯಕ್ಕಿಳಿಯುವ ಘಟನೆಗಳೂ ನಡೆದಿವೆ.

೩. ಬದಲಾಗುತ್ತಿರುವ ಆರ್ಥಿಕ ಅವಲಂಬನೆ ಮತ್ತು ಹೆಚ್ಚುತ್ತಿರುವ ಬಡತನ

ಚಳ್ಳಕೆರೆ, ಕೂಡ್ಲಿಗಿ, ಮೊಳಕಾಲ್ಮೂರು, ಬಳ್ಳಾರಿ ಭಾಗದಲ್ಲಿ ಹೆಚ್ಚು ಬೇಡ ಸಮುದಾಯ ಕೃಷಿಯನ್ನು ಆಧರಿಸಿದೆ. ಉಪಕಸುಬಾಗಿ ಬೇಟೆ ಮತ್ತು ಪಶುಪಾಲನೆಯನ್ನು ಮಾಡುತ್ತಿದ್ದರು. ಈಗ ಬೇಟೆ ಸಂಪೂರ್ಣವಾಗಿ ನಿಂತಿದ್ದು, ಪಶುಪಾಲನೆಯ ಪ್ರಮಾಣವೂ ಸ್ವಲ್ಪ ಮಟ್ಟಿಗೆ ಕಡಿಮೆಯಾಗುತ್ತಿದೆ. ಶೈಕ್ಷಣಿಕವಾಗಿ ಈ ಸಮುದಾಯ ಪ್ರತಿಶತ ಕಡಿಮೆ ಇರುವುದರಿಂದ (೨೦೦೧ರ ಜನಗಣತಿ ಪ್ರಕಾರ ಪರಿಶಿಷ್ಟ ಪಂಗಡ ಸಾಕ್ಷರತೆ ಪ್ರಮಾಣ ೪೮.೩% ಇದೆ. ಪುರುಷ ೫೯.೭% ಇದ್ದರೆ ಮಹಿಳೆಯರು ೩೬.೬% ಪ್ರತಿಶತ ಸಾಕ್ಷರತೆ ಹೊಂದಿದ್ದಾರೆ) ಶಿಕ್ಷಣದಿಂದಾಗಿ ದೊರೆಯುವ ಉದ್ಯೋಗಗಳು ಸಂಖ್ಯೆಯೂ ಕಡಿಮೆಯೆ, ಹಾಗಾಗಿ ಉದ್ಯೋಗಗಳು ಬದಲಾಗುತ್ತಿವೆ. ಕಟ್ಟಡ ಕಾರ್ಮಿಕ ವೃತ್ತಿ ನಗರವನ್ನು ಆಶ್ರಯಿಸುವ ಕೂಲಿಕೆಲಸಗಳು ಕೂಲಿಗಾಗಿ ನಗರದತ್ತ ವಲಸೆ, ಹಳ್ಳಿಗಳಲ್ಲಿದ್ದ ಮೂಲ ಕಸುಬುಗಳು ಇಲ್ಲವಾ ಗುವಿಕೆ ಕಂಡುಬರುತ್ತಿದೆ. ಹೆಚ್ಚಾಗಿ ಹಳ್ಳಿಗಳ ಯುವ ಜನತೆ ನಗರದತ್ತ ವಲಸೆ ಹೋಗುತ್ತಿರುವುದು ಈ ಅಧ್ಯಯನದ ಸಂದರ್ಭದಲ್ಲಿ ಕಂಡುಬಂದಿದೆ. ಚಿತ್ರದುರ್ಗದ ನಗರವನ್ನು ಆಶ್ರಯಿಸಿ ಸುತ್ತಮುತ್ತಲ ೧೦೦ಕ್ಕೂ ಹೆಚ್ಚು ಹಳ್ಳಿಗಳಲ್ಲಿ ಬೇಡರು ತಮ್ಮ ವೃತ್ತಿಗಳನ್ನು ಬದಲಾಯಿಸಿಕೊಂಡಿದ್ದಾರೆ. ಚಿತ್ರದುರ್ಗ ತಾಲೂಕು ಹಾಯ್‌ಕಲ್ಲಿನ ಅಲಿಕೇರೆ ರಮೇಶ್ ಎಂಬುವರನ್ನು ಮಾತನಾಡಿಸಿದಾಗ 'ನಮ್ಮ ಬಾಗ್ದಾಗ ರೆಡ್ಡೇರು ಹೊಲಗಳು ಜಾಸ್ತಿ, ಅವ್ರ ಹೊಲಕ್ಕೆ ಕೂಲಿ ಓಗೋದಕ್ಕಿಂತ, ಬೇಲ್ದಾರ ಕೆಲ್ಸ (ಕಟ್ಟಡ ಕೆಲಸ) ಮಾಡೋದೆ ವಾಸಿ' ಎನ್ನುತ್ತಾರೆ. ಹೀಗೆ ನಗರದ ಸುತ್ತಮುತ್ತಲ ಹಳ್ಳಿಗಳ ಬೇಡರಲ್ಲಿ ವೃತ್ತಿಗಳು ಬದಲಾಗಿವೆ. ಇದರಿಂದಾಗಿ ಬೇಡ ಸಮುದಾಯದ ಆರ್ಥಿಕ ಆಯಾಮವು ಬದಲಾಗಿದೆ. ಹೀಗಿದ್ದೂ ಬೇಡ ಸಮುದಾಯದಲ್ಲಿ ಪ್ರತಿಶತವಾಗಿ ಬಡತನವು ಹೆಚ್ಚಾಗುತ್ತಿದೆ.

೪. ಮತಾಂತರ : ಸಮುದಾಯದ ನಂಬಿಕೆಯಲಾಗುತ್ತಿರುವ ಪಲ್ಲಟ

ಬಳ್ಳಾರಿ ಜಿಲ್ಲೆಯ ಚಿಕ್ಕಜೋಗಿಹಳ್ಳಿ, ಹೊಸಹಳ್ಳಿಯ ಸುತ್ತಮುತ್ತಲಿನ ಹಳ್ಳಿಗಳಾದ, ಕರ್ನಾರಹಟ್ಟಿ, ಕಂಪಳದೇವರಹಟ್ಟಿ, ಹುಳಿಯಾಳ್, ವಲಸೆ, ಕುಮ್ಮತಿ ಲೋಕಿಕೆರೆ, ಹೂಡೆ, ಗುಡೇಕೋಟೆ ಸರಹದ್ದಿನ ಯರ್ರೋಬಯ್ಯನಹಟ್ಟಿ, ದೇವರಹಟ್ಟಿ, ರಾಮದುರ್ಗ, ಚಂದ್ರಶೇಖರಪುರ ಇನ್ನು ಮುಂತಾದ ಹಳ್ಳಿಗಳಲ್ಲಿ ಜನರನ್ನು ಮಾತನಾಡಿಸಿದಾಗ ಅವರು ಹೇಳುವಂತೆ ನಾವು ಏಸುಕ್ರಿಸ್ತನನ್ನು ಆರಾಧನೆ ಮಾಡಲು ಪ್ರಾರಂಭ ಮಾಡಿದಾಗಿನಿಂದ ನಮಗೆ ನೆಮ್ಮದಿ ಇದೆ. ಮನೆಯಲ್ಲಿ ಶಾಂತಿವಾತಾವರಣವಿದೆ ಮತ್ತು ಮಕ್ಕಳಿಗೆ ಯಾವುದೇ ರೀತಿ ತೊಂದರೆ ಕಾಡುತ್ತಿಲ್ಲ. ಒಟ್ಟಾರೆ ಎಲ್ಲಾ ರೀತಿಯಿಂದ ಒಳ್ಳೆಯದಾಗುತ್ತಾ ಬಂದಿದೆ ಅದಕ್ಕಾಗಿ ನಾವು ಏಸುಸ್ವಾಮಿಯನ್ನು ಆರಾಧನೆ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ಮತ್ತು ಅವರನ್ನು

ಸಂದರ್ಶಿಸಿ ಮಾತನಾಡಿಸಿದರೆ ಸಮುದಾಯದ ದೈವೀ ನಂಬಿಕೆಯಲ್ಲಿ ಪಲ್ಲಟ ಸಂಬವಿಸುತ್ತಿರುವುದನ್ನು ಗಮನಿಸಬಹುದು. ಮುಖ್ಯವಾಗಿ ಕ್ರೈಸ್ತ ಧರ್ಮದ ಪ್ರಭಾವಕ್ಕೊಳಗಾಗುತ್ತಿರುವುದನ್ನು ಗಮನಿಸಬಹುದು. ತಮ್ಮದೇ ಸಮುದಾಯ ದೈವಗಳಾದ ಗಾದ್ರಿಪಾಲನಾಯಕ, ಜಗಳೂರು ಪಾಪಾನಾಯಕ, ಕಂಪಳರಂಗಸ್ವಾಮಿ, ಮಾರಮ್ಮನನ್ನು ಆರಾಧಿಸುತ್ತಿದ್ದ ಬೇಡ ಸಮುದಾಯ ಕೆಲವರು ಈಗ ಯೇಸುಕ್ರಿಸ್ತನನ್ನು ಆರಾಧಿಸುತ್ತಿದ್ದಾರೆ.

೫. ಹಿಂದುತ್ವದ ಜತೆ ಬೇಡ ಸಮುದಾಯದ ಸಮೀಕರಣ

ಈ ಅಧ್ಯಯನಕ್ಕಾಗಿ ಕ್ಷೇತ್ರಕಾರ್ಯ ಮಾಡಿದಾಗ ಬೇಡ ಸಮುದಾಯದಲ್ಲಿ ಹಿಂದುತ್ವದ ಮೂಲಭೂತವಾದವೊಂದು ಸಣ್ಣ ಪ್ರಮಾಣದಲ್ಲಿ ಬೆಳೆಯುತ್ತಿರುವುದನ್ನು ಗುರುತಿಸಲಾಯಿತು. ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನಲ್ಲಿ ಈ ಪ್ರಮಾಣವು ಹೆಚ್ಚಾಗಿದೆ. ರಾಮಾಯಣವನ್ನು ಬರೆದವ 'ವಾಲ್ಮೀಕಿ' ರಾಮನನ್ನು ಸೃಷ್ಟಿಸಿದವ ವಾಲ್ಮೀಕಿ ಹಾಗಾಗಿ ವಾಲ್ಮೀಕಿಯನ್ನು ಪ್ರತಿನಿಧಿಸುವ ಬೇಡ ಸಮುದಾಯ ಹಿಂದುತ್ವದ ಉಳಿವಿಗಾಗಿ ಶ್ರಮವಹಿಸಬೇಕು ಎನ್ನುವ ಬಜರಂಗದಳ, ಆರ್.ಎಸ್.ಎಸ್‌ನ ಕಾರ್ಯಕರ್ತರು ಕಡೆಗೆ ಬೇಡ ಸಮುದಾಯ ಒಗ್ಗೂಡುತ್ತಿದೆ. ಹೊಸಪೇಟೆ ತಾಲೂಕಿನ ಕಮಲಾಪುರದಲ್ಲಿ ನೂರಕ್ಕೂ ಹೆಚ್ಚು ಬೇಡರ ಯುವಕರು ಆರ್.ಎಸ್.ಎಸ್.ಕಾರ್ಯಕರ್ತರಾಗಿದ್ದಾರೆ. ಹೀಗೆ ಹಿಂದುತ್ವದಿಂದಾಗಿ ಉಂಟಾಗುವ ಕೋಮುಗಲಭೆಯಲ್ಲಿ ಈ ಭಾಗದಲ್ಲಿ ಬೇಡರೇ ಹೆಚ್ಚು ಪಾಲ್ಗೊಳ್ಳುವ ಸಂಭವವಿದೆ. ಇನ್ನು ಹನುಮಂತನನ್ನು ಹಿಂದುತ್ವದ ಆರಾಧನೆಯ ದೈವವನ್ನಾಗಿ ಬಿಂಬಿಸಲಾಗುತ್ತಿದೆ. ಬಹುಪಾಲು ಹನುಮಂತನ ಭಕ್ತರಾದ ಬೇಡರು ಸಹಜವಾಗಿ ಹಿಂದುತ್ವದ ಕಡೆ ವಾಲುತ್ತಿರುವ ಸೂಚನೆಗಳು ಈ ಅಧ್ಯಯದಿಂದ ಕಂಡುಬಂದಿವೆ. ಹಾಗಾಗಿ ಬೇಡ ಸಮುದಾಯದ ಬಗ್ಗೆ ಯೋಚಿಸುವಾಗ ಇದೊಂದು ಆತಂಕದ ವಿಷಯವೇ ಆಗಿದೆ.

ಸಂಸ್ಕೃತೀಕರಣ : ಮೇಲ್ವರ್ಗದ ಅನುಕರಣೆ

ಈ ಅಧ್ಯಯನದ ಸಂದರ್ಭದಲ್ಲಿ ಸಂಸ್ಕೃತೀಕರಣದ ಹಲವು ಆಯಾಮಗಳು ಗೋಚರಿಸಿದವು. ಬೇಡ ಸಮುದಾಯದಲ್ಲಿ ನೌಕರಿ ಹಿಡಿದ ಮಧ್ಯಮ ವರ್ಗ ವ್ಯಾಪಾರ ವಹಿವಾಟಿನಲ್ಲಿ ತೊಡಗಿಸಿಕೊಂಡ ಶ್ರೀಮಂತವರ್ಗ ರಾಜಕೀಯದಲ್ಲಿ ಸಕ್ರೀಯವಾದ ರಾಜಕಾರಣಿ ವರ್ಗದವರು ತಮ್ಮ ಮೂಲ ಬುಡಕಟ್ಟಿನ ಆಚರಣಾ ಲೋಕದಿಂದ ಬಿಡಿಸಿಕೊಳ್ಳುತ್ತಿದ್ದಾರೆ. ಚಳ್ಳಕೆರೆ, ಎಚ್.ಶ್ರೀಧರ್ ಹಾಗೂ ಕಾಟಪ್ಪನಹಟ್ಟಿಯ ಭೀಮಣ್ಣರವರು ಹೇಳುವಂತೆ ಇವರು ಮಾಂಸಹಾರ ತ್ಯಜಿಸಿದ್ದು ಸತ್ಯನಾರಾಯಣ ಪೂಜೆಯನ್ನು ನಿರಂತರವಾಗಿ ಮಾಡುತ್ತಾ ಬಂದಿದ್ದಾರೆ. ವರ್ಷಕ್ಕೊಮ್ಮೆ ನಡೆಯುವ ಸತ್ಯನಾರಾಯಣ ಪೂಜೆಗೆ. ಬ್ರಾಹ್ಮಣ ಅರ್ಚಕರನ್ನು ಕರೆಯಿಸಿ ಕಡಿಮೆ ಅಂದರೂ ಪೂಜೆಗೆ ಹತ್ತುಸಾವಿರದಷ್ಟು ವ್ಯಯ ಮಾಡುತ್ತಾರೆ. ಇಂತಹದ್ದೇ

ಹತ್ತಾರು ಕುಟುಂಬಗಳನ್ನು ಭೇಟಿ ಮಾಡಲಾಯಿತು. ಇವರುಗಳೆಲ್ಲಾ ಮಾಂಸಹಾರ ಬಿಟ್ಟಿರುವುದನ್ನು ಸತ್ಯನಾರಾಯಣ ಪೂಜೆ ಮಾಡುತ್ತಿರುವುದನ್ನು ತುಂಬಾ ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಈ ಹೇಳಿಕೆಯಲ್ಲಿ ಮೇಲ್ವರ್ಗದ ಅನುಕರಣೆಯ ಬಗ್ಗೆ ಗೌರವವಿದೆ. ಹಾಗೆ ತಮ್ಮ ಸಮುದಾಯದ ಆಚರಣಾ ಲೋಕದಿಂದ ದೂರವಾಗುವ ಬಗ್ಗೆ ಆತಂಕವಿಲ್ಲ ಈ ಬಗೆಯ ಮೇಲ್ಚ್‌ನೆಯ ಸ್ವರೂಪ ಆರ್ಥಿಕ ಸ್ಥಿತಿಗತಿಗಳನ್ನು ಆಧರಿಸಿ ವ್ಯತ್ಯಾಸಗಳಾಗುತ್ತವೆ. ಹಳ್ಳಿಗಳಲ್ಲಿ ಆರ್ಥಿಕವಾಗಿ ತುಂಬಾ ಕೆಳಸ್ತರದಲ್ಲಿರುವವರು, ಕೃಷಿಯಾಧಾರಿತ ಬೇಡರು ಮಾತ್ರ ತಮ್ಮ ಸಮುದಾಯದ ಪಾರಂಪರಿಕ ಆಚರಣಾ ಲೋಕವನ್ನು ಅನುಸರಿಸುವುದೇ ಶ್ರೇಷ್ಠವೆನಿಸುತ್ತದೆ. ಇಲ್ಲಿ ಆರ್ಥಿಕತೆಯ ಅನುಗುಣವಾಗಿ ಹೇಗೆ ಒಂದು ಸಮುದಾಯದ ಜನರು ತಮ್ಮ ಸಂಪ್ರದಾಯಾಚರಣೆ ಹಾಗೂ ಆಹಾರ ಪದ್ಧತಿಯನ್ನು ಬದಲಾಯಿಸಿಕೊಳ್ಳುತ್ತಾರೆ ಎಂಬುದನ್ನು ಪ್ರಮುಖವಾಗಿ ತಿಳಿಯಬಹುದು. ಅಂದರೆ ಇಲ್ಲಿ ಮೇಲ್ವರ್ಗದ ಆಚರಣಾ ಲೋಕವೇ ಅವರಿಗೆ ಶ್ರೇಷ್ಠವೆನಿಸುತ್ತದೆ ವಿನಃ ತಮ್ಮ ಆಚರಣಾ ಲೋಕದ ಬಗ್ಗೆ ಯಾವುದೇ ರೀತಿಯ ಆತಂಕ ಕಾಡುವುದಿಲ್ಲ. ಇಲ್ಲಿ ಈ ರೀತಿ ಮಾಡಲು ತೊಡಗಿಸಿಕೊಂಡಿರುವುದರಿಂದ ಶಾಖಾ ಹಾರಿಗಳಾಗುತ್ತ. ಮಾಂಸಹಾರವನ್ನು ತೆಜಿಸುತ್ತಾರೆ. ಒಂದು ಸಮುದಾಯದಲ್ಲಿ ಹೇಗೆ ತಮಗರಿವಿಲ್ಲದಂತೆ ಸಂಸ್ಕೃತೀಕರಣಗೊಳ್ಳುತ್ತಾರೆ ಎಂಬುದು ತಿಳಿಯಬಹುದಾಗಿದೆ.

೨. ಮ್ಯಾಸಬೇಡ ಮತ್ತು ಊರುಬೇಡರ ಹೆಚ್ಚುತ್ತಿರುವ ಪಂಗಡ ಬೇದ

ಬೇಡರನ್ನು ಮುಖ್ಯವಾಗಿ ಮ್ಯಾಸಬೇಡ ಮತ್ತು ಊರುಬೇಡ ಎಂದು ಎರಡು ಪಂಗಡಗಳಾಗಿ ಗುರುತಿಸಬಹುದು. ಈ ಪಂಗಡ ಎರಡು ಪ್ರತ್ಯೇಕ ಜಾತಿಗಳಾಗಿ ರೂಪುಗೊಳ್ಳುವ ಲಕ್ಷಣಗಳು ಕಾಣುತ್ತೇವೆ. ಈ ಎರಡೂ ಪಂಗಡಗಳ ನಡುವೆ ಶ್ರೇಷ್ಠತೆಯ ಸ್ಪರ್ಧೆ ನಡೆಯುತ್ತಿದೆ. ಮ್ಯಾಸಬೇಡರು ನಾವು ಶ್ರೇಷ್ಠ ಅಂದರೆ, ಊರು ಬೇಡರು ನಾವು ಶ್ರೇಷ್ಠ ಎನ್ನುತ್ತಿದ್ದಾರೆ. ಹಾಗೆ ನೋಡಿದರೆ ಪಶುಪಾಲನೆಯ, ಅಲೆಮಾರಿ ಹಂತ, ಕೃಷಿಯಾಧಾರಿಸಿ ನೆಲೆ ನಿಂತಹಂತ. ಈ ಎರಡರ ನಡುವೆ ಬೇದದ ಕಾರಣಕ್ಕೆ ಈ ಎರಡು ಪಂಗಡಗಳಾಗಿದ್ದರೂ, ಇದು ಈಗ ಮುಖ್ಯ ಚರ್ಚೆಗೆ ಬರದೆ ಶ್ರೇಷ್ಠತೆಯ ಪ್ರಶ್ನೆ ಮುಖ್ಯವಾಗಿದೆ. ಶೈಕ್ಷಣಿಕವಾಗಿ, ಆರ್ಥಿಕವಾಗಿ ಊರುಬೇಡರು ಮ್ಯಾಸಬೆಡರಿಗಿಂತ ಉತ್ತಮ ಸ್ಥಿತಿಯಲ್ಲಿದ್ದಾರೆ. ಊರುಬೇಡರು ಸಾಮಾನ್ಯವಾಗಿ ಬೇಗನೆ ಮೇಲ್ವರ್ಗದ ಅನುಕರಣೆಗೆ ಮುಂದಾಗುತ್ತಾರೆ. ಇವರಲ್ಲಿ ಬಹುಪಾಲು ಮಾಂಸಹಾರ ತ್ಯಜಿಸಿದವರಿದ್ದಾರೆ. ಈಚೆಗೆ ಕನ್ನಡ ವಿಶ್ವವಿದ್ಯಾಲಯ, ವಾಲ್ಮೀಕಿ ಅಧ್ಯಯನ ಪೀಠದಿಂದ ಕೂಡ್ಲಿಗಿಯಲ್ಲಿ 'ಮ್ಯಾಸಬೇಡರು' ಕುರಿತು ವಿಚಾರಸಂಕಿರಣ ನಡೆಯಿತು. ಆಗ ಊರುಬೇಡರು ಈ ಸಂಕೀರಣದ ಬಗ್ಗೆ ಅಪಸ್ವರವೆತ್ತಿ ಸಂಘರ್ಷದ ಹಂತಕ್ಕೂ ಹೋಗಿತ್ತು. ಈಗೀಗ ಈ ಎರಡೂ ಪಂಗಡಗಳ ನಡುವೆಯೂ ವಿರಳವಾಗಿ ಕೋಮು ಘರ್ಷಣೆಗಳು ನಡೆದದ್ದೂ ಇದೆ. ಇದರ ನಡುವೆಯೇ ಈ ಎರಡೂ ಪಂಗಡಗಳ ನಡುವೆಯೇ ವೈವಾಹಿಕ ಸಂಬಂಧಗಳೂ ಏರ್ಪಟ್ಟಿವೆ. ಆರ್ಥಿಕ ಸ್ಥಿತಿ-ಗತಿಯನ್ನು ಆಧರಿಸಿ ಈ ಎರಡೂ ಪಂಗಡಗಳ ನಡುವೆ ಸಂಬಂಧದ ನಿರ್ಧಾರವಾಗುತ್ತಿದೆ. ಈ ಅಧ್ಯಯನದ

ವ್ಯಾಪ್ತಿಯಲ್ಲಿ ಬಹುಸಂಖ್ಯಾತ ಮ್ಯಾಸಬೇಡರು ಬರುವುದರಿಂದ ಈ ಅಧ್ಯಯದಲ್ಲಿ ಹೆಚ್ಚು ಮ್ಯಾಸಬೇಡರ ಕುರಿತ ಸಂಸ್ಕೃತಿಯನ್ನು ಅವಲೋಕಿಸಿದೆ.

೮. ಜನಪ್ರಿಯ ಮಾದರಿಯ ಅಧ್ಯಯನಗಳು, ಸಂಕೀರ್ಣ ಬದುಕಿನ ಸರಳೀಕರಣ

ಈ ಅಧ್ಯಯನದ ಸಂದರ್ಭಕ್ಕೆ ಬೇಡರನ್ನು ಕುರಿತ ಈತನಕ ನಡೆದ ಬಹುಪಾಲು ಅಧ್ಯಯನಗಳನ್ನು ಗಮನಿಸಲಾಯಿತು. ಈ ಅಧ್ಯಯನಗಳಲ್ಲಿ ಕೃಷ್ಣಮೂರ್ತಿ ಹನೂರ ಅವರು ಮತ್ತು ವಿರೂಪಾಕ್ಷಿ ಪೂಜಾರಹಳ್ಳಿಯವರ ಅಧ್ಯಯನಗಳನ್ನು ಹೊರತು ಪಡಿಸಿದರೆ, ಬಹುಪಾಲು ಅಧ್ಯಯನಗಳುಜನಪ್ರಿಯ ಮಾದರಿಯಲ್ಲಿ ನಡೆದಂತವು. ಕನ್ನಡ ವಿಶ್ವವಿದ್ಯಾಲಯದ ವಾಲ್ಮೀಕಿ ಅಧ್ಯಯನ ಪೀಠವು ಪ್ರಕಟಿಸಿದ ಪ್ರಕಟಣೆಯಲ್ಲೂ ಸೂಕ್ಷ್ಮ ಅಧ್ಯಯನಗಳು ಸಾಧ್ಯವಾಗಿಲ್ಲ ಪ್ರಸ್ತುತ ಅಧ್ಯಯನದ ಆತ್ಮಕಥನಗಳನ್ನು ಆಧರಿಸಿ ಬೇಡಸಮುದಾಯದ ಬದುಕು ಈವರೆಗೆ ನಡೆಸಿದ ಅಧ್ಯಯನಗಳಷ್ಟು ಸರಳವಾಗಿಲ್ಲ. ತುಂಬಾ ಸಂಕೀರ್ಣವಾಗಿದೆ ಬೇಡರು ಎನ್ನುವ ಒಂದು ಮಾದರಿಯಲ್ಲಿ ಈ ಸಮುದಾಯವನ್ನು ಗಮನಿಸುವಂತಿಲ್ಲ. ಪ್ರಾದೇಶಿಕ ಭಿನ್ನತೆಗನುಗುಣವಾಗಿ ಅನೇಕ ಭಿನ್ನತೆಗಳಿವೆ. ಹೊಸಪೇಟೆ, ಕಂಪ್ಲಿ, ಶಿರುಗುಪ್ಪ ಮುಂತಾದ ವ್ಯಾಪ್ತಿಯಲ್ಲಿ ತುಂಗಾಭದ್ರ ನೀರು ಹರಿವು, ನಿರಾವರಿ ಇರುವ ಈ ಭಾಗದ ಬೇಡರ ಸಾಂಸ್ಕೃತಿಕ ಸಂಗತಿಗಳು ತೀರ ಭಿನ್ನವಾಗಿವೆ. ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕು, ಸಂಡೂರು ತಾಲೂಕು, ಚಿತ್ರದುರ್ಗ ಜಿಲ್ಲೆಯ ಬಹುಪಾಲು ಹಳ್ಳಿಗಳಲ್ಲಿ ಒಣ ಭೂಮಿ ಕೃಷಿಯನ್ನು ಆಧರಿಸಿದ ಬೇಡರ ಸಾಂಸ್ಕೃತಿಕ ಸಂಗತಿಗಳು ಭಿನ್ನವಾಗಿವೆ. ಇನ್ನೂ ನಗರದಲ್ಲಿ ನೆಲಸಿದ ಬೇಡರು ತೀರಾ ಸೌಲಭ್ಯವಂಚಿತ ಹಟ್ಟಿಗಳಲ್ಲಿ ನೆಲೆಸಿರುವ ಬೇಡರಿಗೂ ಅಗಾಧ ವ್ಯತ್ಯಾಸಗಳಿವೆ. ವಾಲ್ಮೀಕಿ ಗುರುಪೀಠ ಪ್ರತಿನಿಧಿಸುವ ಬೇಡರು, ಆರ್ಥಿಕವಾಗಿ ಮೇಲ್‌ಸ್ತರದಲ್ಲಿರುವವರು ಮಾತ್ರ ಅದೇ ಗುಡೇಕೋಟೆ, ಪೂಜಾರಹಳ್ಳಿ, ಹೊಸಹಳ್ಳಿ ಕಡೆ ಇರುವ ಗಾದ್ರಿಪಾಲನಾಯಕ, ಜಗಳೂರು ಪಾಪನಾಯಕ, ನಲ್ಲುಜರುವಯ್ಯ, ಕಂಪಳರಂಗಸ್ವಾಮಿ, ಮಾರಮ್ಮ ಇತ್ಯಾದಿ ದೈವಾರಾಧನೆಯಲ್ಲಿ ಆರ್ಥಿಕವಾಗಿ ತೀರಾ ಕೆಳಸ್ತರದಲ್ಲಿರುವವರು ಮತ್ತು ಹಟ್ಟಿಗಳಲ್ಲಿ ನೆಲೆಸಿರುವ ಬೇಡರು ಪಾಲ್ಗೊಳ್ಳುತ್ತಾರೆ. ಹೀಗೆ ಮ್ಯಾಸಬೇಡ ಸಮುದಾಯದ ಬಹುಮುಖಿ ಸಂಕೀರ್ಣ ಬದುಕನ್ನು ಈ ಸಮುದಾಯವನ್ನು ಅಭ್ಯಸಿಸಿದ ಬಹುಪಾಲು ಅಧ್ಯಯನಗಳು ಸರಳೀಕರಿಸಿವೆ.

೯. ಕಡಿಮೆಯಾಗುತ್ತಿರುವ ದೇವದಾಸಿ ಪದ್ಧತಿ

ಈ ಅಧ್ಯಯನದ ಸಂದರ್ಭದಲ್ಲಿ ದೇವದಾಸಿ ಪದ್ಧತಿ ಹೆಚ್ಚುತ್ತಿರುವ ಕೂಡ್ಲಿಗಿ, ಮರಿಯಮ್ಮನಹಳ್ಳಿ, ಬೇಡರ ಮನೆಗಳಿಗೆ ಭೇಟಿನೀಡಲಾಯಿತು. ಇವರ ಮಾತುಗಳನ್ನು ಗಮನಿಸಲಾಗಿ ದೇವದಾಸಿ ಪದ್ಧತಿ ಕ್ರಮೇಣ ಕಡಿಮೆಯಾಗುತ್ತಿದೆ. ಬಹುಪಾಲು ದೇವದಾಸಿಯರ ಹೆಣ್ಣುಮಕ್ಕಳು ವಿದ್ಯಾಭ್ಯಾಸ ಪಡೆಯುತ್ತಿದ್ದಾರೆ. ಮದುವೆಯಾಗುತ್ತಿದ್ದಾರೆ. ಹಳ್ಳಿಗಳಲ್ಲಿ ಬಹುತೇಖ ಈ ಪದ್ಧತಿಯು ಕಡಿಮೆಯಾಗಿದೆ ಕಾರಣ ಸ್ವತಃ ದೇವದಾಸಿಯರಾದವರು ತಾವು ಪಟ್ಟಪಾಡು ನಮ್ಮ ಮಕ್ಕಳಿಗೂ ಬರದಿರಲಿ ಎಂಬ ಎಚ್ಚರ

ಬಂದಿದೆ. ಇನ್ನು ಮಕ್ಕಳ ಪಡೆಯುವಿಕೆಯು ಪ್ರಮಾಣ ಕಡಿಮೆಯಾಗುತ್ತಿದೆ. ಹಾಗಾಗಿ ಹೆಚ್ಚುವರಿ ಮಕ್ಕಳನ್ನು 'ದೇವದಾಸಿ' ಬಿಡುವ ಪದ್ಧತಿ ಈಗ ಇರುವ ಒಂದೆರಡು ಮಕ್ಕಳ ವಿಷಯದಲ್ಲಿ ಮರುಕಳಿಸುತ್ತಿಲ್ಲ. ಈ ಅಧ್ಯಯನದ ಕ್ಷೇತ್ರಕಾರ್ಯದಲ್ಲಿ ಗಮನಿಸಿದಂತೆ ದೇವದಾಸಿ ಪದ್ಧತಿಯ ಆಚರಣೆಯ ಪ್ರಮಾಣ ತುಂಬಾ ಕಡಿಮೆಯಾಗುತ್ತಿರುವುದು ಕಂಡುಬಂದಿದೆ.

೧೦. ಮ್ಯಾಸಬೇಡ ಸಮುದಾಯ ಕಟ್ಟಿಕೊಳ್ಳುತ್ತಿರುವ ಹೊಸ ಅನನ್ಯತೆ

ಮ್ಯಾಸಬೇಡ ಸಮುದಾಯವನ್ನು ಅಧ್ಯಯನ ಮಾಡುತ್ತ ಈ ಸಮುದಾಯ ಕಟ್ಟಿಕೊಳ್ಳುತ್ತಿರುವ ಹೊಸ ಅನನ್ಯತೆಗಳನ್ನು ಗುರುತಿಸಲಾಯಿತು. ಸಾಂಸ್ಕೃತಿಕ ನಾಯಕರ ಆರಾಧನೆಯ ಅನನ್ಯತೆಗಳು ಬದಲಾಗುತ್ತಿದೆ. ಈಗ ವಾಲ್ಮೀಕಿ ಗುರುಪೀಠದ ಸ್ವಾಮೀಜಿ ಬೇಡ ಸಮುದಾಯದ ಹೊಸ ಗುರುತಾಗಿ ಮಾರ್ಪಡುತ್ತಿದೆ. ಬೇಡ ಸಮುದಾಯದ ಮದುವೆ, ಹಬ್ಬ, ಜಾತ್ರೆ, ವಾಲ್ಮೀಕಿ ಜಯಂತಿ ಮುಂತಾದ ಕಾರ್ಯಕ್ರಮಗಳಿಗೆ ಸ್ವಾಮೀಜಿಯನ್ನು ಕರೆತರಲಾಗುತ್ತಿದೆ. ಬೇಡರ ವಾರ್ಷಿಕಾವರ್ತನ ಆಚರಣೆಯಲ್ಲಿ ಹಿಂದೆಂದೂ ಇರದಿದ್ದ ವಾಲ್ಮೀಕಿ ಜಯಂತಿಯನ್ನು ಎಲ್ಲ ಕಡೆ ಆಚರಿಸಲಾಗುತ್ತಿದೆ. ಈ ಆಚರಣೆಯಲ್ಲಿ ವೀರಮದಕರಿ, ಓಬವ್ವ, ಹನುಮಂತ, ವೀರ ಸಿಂಧೂರ ಲಕ್ಷ್ಮಣ, ಏಕಲವ್ಯ ಮುಂತಾದವರ ಸ್ಥಬ್ಧ ಚಿತ್ರ, ಫೋಟೋ ಮೆರವಣಿಗೆ ನಡೆಯುತ್ತಿದೆ. ಈ ಜಯಂತಿಯಂದು ಬೇಡ ಸಮುದಾಯದ ಕುರಿತ ಉಪನ್ಯಾಸಗಳನ್ನು ಏರ್ಪಡಸಲಾಗುತ್ತಿದೆ. ರಾಜಕೀಯವಾಗಿ ಈಚೆಗೆ ಈಗಿನ ಆರೋಗ್ಯಸಚಿವ ಶ್ರೀರಾಮುಲು ಅವರನ್ನು ಬೇಡರ ನಾಯಕನನ್ನಾಗಿ ಬಿಂಬಿಸಲಾಗುತ್ತದೆ. ಜಾರಕಿಹೊಳೆ ಕುಟುಂಬ ಸದಸ್ಯರನ್ನು ಹೊಸ ನಾಯಕರನ್ನಾಗಿ ಬಿಂಬಿಸಲಾಗುತ್ತಿದೆ. ಹೀಗೆ ರಾಜಕೀಯವಾಗಿ ಉತ್ತಮ ಸ್ಥಾನದಲ್ಲಿರುವವರನ್ನು ಬೇಡ ಸುದಾಯ 'ನಾಯಕ' ಸ್ಥಾನ ಕಟ್ಟಿಕೊಟ್ಟಿದೆ. ಇನ್ನು ಸಿನಿಮಾ ಮಾಧ್ಯಮನದಲ್ಲಿ ಕನ್ನಡದಲ್ಲಿ ಬೆಳೆಯುತ್ತಿರುವ ನಟ ಸುದೀಪ್ ಅವರನ್ನು ಬೇಡರ ಪ್ರತಿ ನಿದಿಯಾಗಿ ಗುರುತಿಸಿಕೊಳ್ಳಲಾಗುತ್ತಿದೆ. ಈಚಿನ ಸುದೀಪ್ ಅಭಿನಯದ ವೀರಮದಕರಿ ಚಲನಚಿತ್ರಕ್ಕೆ ಕರ್ನಾಟಕದ ಕೆಲವಡೆ ಬೇಡ ಸಮುದಾಯ ಪ್ರಾಣಿಬಲಿ ನೀಡಿ ಸಂಭ್ರಮಿಸುತ್ತಿರುವುದನ್ನು ನೆನೆಯಬಹುದು. ಈಗ ಬೇಡ ಸಮುದಾಯದ ಮನೆಗಳಲ್ಲಿ ವಾಲ್ಮೀಕಿ ಸ್ವಾಮೀಜಿ, ಸುದೀಪ್ ಮುಂತಾದವರ ಫೋಟೋಗಳಿರುವುದನ್ನು ಗಮನಿಸಬಹುದು. ಈಚೆಗೆ ಬೇಡ ಸಮುದಾಯದಲ್ಲಿ ಹೆಚ್ಚಾಗಿ ಮಕ್ಕಳನ್ನು ಶಿಕ್ಷಿತರನ್ನಾಗಿಸಬೇಕೆಂಬ ಎಚ್ಚರ ಬೆಳೆಯುತ್ತಿದೆ. ಸಮುದಾಯದ ಎಲ್ಲಾರಿಗೂ ಶಿಕ್ಷಣ ಹೊಸ ಅನನ್ಯತೆಯಾಗುತ್ತಿರುವಂತೆ ಮಾರ್ಪಡುತ್ತಿದೆ. ಹೀಗೆ ಬೇಡ ಸಮುದಾಯ ಹೊಸ ಅನನ್ಯತೆಗಳನ್ನು ಕಟ್ಟಿಕೊಳ್ಳುತ್ತಿದೆ.

ಪರ್ಯಾಯಗಳು

ಈ ಅಧ್ಯಯನದಿಂದಾಗಿ ಕೆಲವು ಸಂಗತಿಗಳು ಗಮನಕ್ಕೆ ಬರುತ್ತವೆ. ಇಂತಹ ಸಂಗತಿಗಳನ್ನು ಆಧರಿಸಿ ಪರ್ಯಾಯಗಳನ್ನು ಸೂಚಿಸಬಹುದು. ಒಂದು ಸಮುದಾಯಕ್ಕೆ ಸರ್ಕಾರ ಕೈಗೊಳ್ಳಬೇಕಾದ ಪರ್ಯಾಯ ಸಮುದಾಯವೆ ಜಾಗ್ರತೆಗೊಳ್ಳಬೇಕಾದ ಪರ್ಯಾಯ ಮ್ಯಾಸಬೇಡ ಸಮುದಾಯವನ್ನು ಕುರಿತು ಅಧ್ಯಯನ ಮಾಡಬೇಕಾದ ಹೊಸ ಸಾಧ್ಯತೆಗಳು ಕುರಿತು ಈ ಭಾಗದಲ್ಲಿ ಚರ್ಚಿಸಲಾಗಿದೆ.

೧. ಎಲ್ಲ ಬುಡಕಟ್ಟು ಸಮುದಾಯಗಳಿಗೆ ಸಾರ್ವತ್ರಿಕವಾಗಿ ಒಂದೇ ನಿಯಮ ಪಾಲನೆ ಅಗತ್ಯವಿದೆ

ಬುಡಕಟ್ಟು ಸಮುದಾಯಗಳಿಗೆ ಸಾರ್ವತ್ರಿಕವಾಗಿ ಒಂದೇ ನಿಯಮಗಳನ್ನು ಪಾಲಿಸಲಾಗುತ್ತಿದೆ. ಆದರೆ ವಾಸ್ತವವಾಗಿ ಎಲ್ಲಾ ಬುಡಕಟ್ಟು ಸಮುದಾಯಗಳ ವರ್ತಮಾನದ ಸಮಸ್ಯೆ ಒಂದೇ ಆಗಿರುವುದಿಲ್ಲ. ಆಯಾ ಸಮುದಾಯಗಳಿಗೆ ಭಿನ್ನವಾದ ಸಮಸ್ಯೆಗಳಿಗೆ, ಹಾಗು ಸರ್ಕಾರ ಕೈಗೊಳ್ಳಬೇಕಾದ ಯೋಜನೆಗಳನ್ನು ಆಯಾ ಸಮುದಾಯಗಳ ಬಗೆಗೆ ಅಧ್ಯಯನ ಮಾಡಸಿ, ಆ ಸಮುದಾಯವನ್ನು ಮೇಲೆತ್ತಲು ಹೇಗೆ ಸಮುದಾಯ ಪರವಾಗಿ ಯೋಚಿಸಬಹುದು ಎನ್ನುವ ಬಗೆಗೆ ಚಿಂತಿಸಬೇಕಿದೆ. ಮ್ಯಾಸಬೇಡ ಸಮುದಾಯಕ್ಕೂ ಈ ಮಾತು ಅನ್ವಯವಾಗುತ್ತದೆ. ಮ್ಯಾಸಬೇಡರು ಮೂಲತಃ ಪಶುಪಾಲನ ಸಮುದಾಯ, ಸರ್ಕಾರ ಈ ಸಮುದಾಯಕ್ಕೆ ಕೊಡುವ ಆಶ್ರಯ ಮನೆ ತೀರಾ ಸಣ್ಣವು. ಆದರೆ ಅವರು ಸಾಕುವ ಜಾನುವಾರುಗಳಿಗೆ ಮನೆಯ ಸುತ್ತ ಮುತ್ತ ಸ್ಥಳವೇ ಇರುವುದಿಲ್ಲ.

೨. ಸ್ವಂತ ಉದ್ಯೋಗ ಮಾಡಿಕೊಳ್ಳಲು ಕಡಿಮೆ ಬಡ್ಡಿಯ ದರದಲ್ಲಿ ಬ್ಯಾಂಕಿನಿಂದ ಸಾಲಸೌಲಭ್ಯವನ್ನು ಒದಗಿಸಿಕೊಡಬೇಕು.

ಮ್ಯಾಸಬೇಡ ಸಮುದಾಯದಲ್ಲಿ ಅಕ್ಷರಸ್ಥರು ಮಾತ್ರವಲ್ಲದೆ ಅನಕ್ಷರಸ್ಥರಿಗೂ ಕೂಡ ಕಡಿಮೆ ಬಡ್ಡಿಯ ದರದಲ್ಲಿ ಸಾಲವನ್ನು ಒದಗಿಸಿಕೊಡಬೇಕು. ಹಾಗೆ ಅವರ ಆರ್ಥಿಕಸ್ಥಿತಿ-ಗತಿಗೆ ಅನುಗುಣವಾಗಿ ಬಡ್ಡಿಯ ದರವನ್ನು ಸಡಿಲಗೊಳಿಸಬೇಕು. ಇಂತಹ ಸಾಲಗಳನ್ನು ಯಾವುದೇ ಮಧ್ಯವರ್ತಿಗಳ ಪಾಲಾಗದಂತೆ ಎಚ್ಚರವಹಿಸಿ ಆಯಾ ಫಲಾನುಭವಿಗಳಿಗೆ ತಲುಪುವಂತೆ ವ್ಯವಸ್ಥೆ ಮಾಡಬೇಕು.

ಮ್ಯಾಸಬೇಡ ಸಮುದಾಯದವರು ನೌಕರರೆಲ್ಲಾ ಸೇರಿ ರಾಜ್ಯಮಟ್ಟದ ಸಂಘಟನೆ ಮಾಡಿಕೊಂಡು, ಮ್ಯಾಸಬೇಡರ ಸಮುದಾಯದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸಹಾಯಹಸ್ತಚಾಚಲು ನೆರವಾಗುವಂತೆ ಪ್ರಯತ್ನ ಮಾಡಬೇಕು. ಮ್ಯಾಸಬೇಡರ ರಾಜಕಾರಣಿಗಳಿಗೆ ಈ ಸಮುದಾಯದ ಸಮಸ್ಯೆಗಳು ಅರ್ಥವಾಗುವಂತೆ ಮನವರಿಕೆ ಮಾಡಬೇಕು. ಹೀಗೆ ಮ್ಯಾಸಬೇಡರು ಎಚ್ಚರಗೊಂಡು ಜಾಗ್ರತೆಗೊಳ್ಳಬೇಕು. ಸಮುದಾಯ ಒಳಗಿನಿಂದಲೇ ಒಂದು ಬಗೆಯ ಅಭಿವೃದ್ಧಿಯ ನೆಲೆ ರೂಪುಗೊಳ್ಳಬೇಕು.

೩. ಸಮುದಾಯಿಕ ಸಹಕಾರ ಸೌಹಾರ್ದವನ್ನು ಬಲಪಡಿಸುವುದು

ಇದು ಬೇಡ ಸಮುದಾಯವನ್ನು ಕುರಿತು ಅಧ್ಯಯನ ಮಾಡುವ ಈ ಸಮುದಾಯದವರೇ ಆದ ಪ್ರಜ್ಞಾವಂತರ ನಾಯಕರುಗಳು ನಿರ್ವಹಿಸಬೇಕಾದ ಕಾರ್ಯ ಬೇಡ ಸಮುದಾಯದ ಒಳಗೇ ಇರುವ ಭಿನ್ನತೆಗಳನ್ನು ಮರೆತು ಒಂದು ವೇದಿಕೆಯನ್ನು, ಒಗ್ಗಟ್ಟನ್ನು ಪ್ರದರ್ಶಿಸುವ ಅಗತ್ಯವಿದೆ. ಅಂತೆಯೇ ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿರುವ ಬೇಡ ಸಮುದಾಯ ಕೆಲವರು, ಅದೇ ಸಮುದಾಯದ ಒಳಗಿನ ಮಕ್ಕಳನ್ನು ದತ್ತು ತೆಗೆದುಕೊಂಡು ಶಿಕ್ಷಣ ಕೊಡಿಸುವುದು ಅಥವಾ ಬೇಡಸಮುದಾಯದ ಮಕ್ಕಳಿಗಾಗಿ ಶಿಕ್ಷಣ ಸಂಸ್ಥೆಯನ್ನು ತೆರೆಯುವುದು ಅಗತ್ಯವಿದೆ. ಹೀಗೆ ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿರುವವರು ಆರ್ಥಿಕವಾಗಿ ಕೆಳಸ್ಥರದಲ್ಲಿರುವ ಮ್ಯಾಸಬೇಡರನ್ನು ಪರಸ್ಪರ ಸಹಕಾರದಿಂದ ಕಾಣುವ ಅಗತ್ಯವಿದೆ.

ಆಯಾ ಕ್ಷೇತ್ರದಲ್ಲಿರುವ ಬೇಡ ಸಮುದಾಯದ ಪ್ರತಿನಿಧಿಗಳು ಆಯಾ ಕ್ಷೇತ್ರದಲ್ಲಿ ಬೇಡ ಸಮುದಾಯಕ್ಕೆ ಆಗುತ್ತಿರುವ ಅನ್ಯಾಯವನ್ನು ತಡೆಗಟ್ಟುವುದು ಅಗತ್ಯ.

ಮ್ಯಾಸ ಬೇಡ ಸಮುದಾಯವು ಕೆಳವರ್ಗದ ಹಲವಾರು ಜಾತಿಗಳ ಜೊತೆ ಸೇರಿ ತಳಸಮುದಾಯಗಳ ಶಕ್ತಿಯನ್ನು ಬಲಪಡಿಸುವ ಅಗತ್ಯವಿದೆ. ಕೆಳಸಮುದಾಯಗಳ ಜಾತಿಯ ನೆಲೆಯಲ್ಲಿ ವಿಂಗಡನೆಗೊಂಡು ದ್ವೀಪಗಳಾದರೆ ಬಹುದೊಡ್ಡ ಶಕ್ತಿಯೊಂದು ಸಿಡಿದು ಚೂರಾದಂತಾಗುತ್ತದೆ. ಹಾಗಾಗಿ ಇತರೆ ಸಮುದಾಯಗಳ ಜೊತೆಗೆ ಸಹಕಾರ ಸೌಹರ್ದವನ್ನು ಬೆಳೆಸಿಕೊಳ್ಳುವಂತೆ ಸಮುದಾಯವನ್ನು ಎಚ್ಚರಿಸಬೇಕಾಗಿದೆ.

೪. ಬೇಡ ಸಮುದಾಯದ ಸಮರ್ಪಕ ಸೂಕ್ತ ಅಧ್ಯಯನದ ಅಗತ್ಯವಿದೆ

ಕರ್ನಾಟಕದ ಬೇಡರು ಎಂದು ಸಾರ್ವತ್ರಿಕ ಲಕ್ಷಣಗಳನ್ನು ಆರೋಪಿಸಲು ಬರುವಂತಿಲ್ಲ. ಪ್ರಾದೇಶಿಕವಾಗಿ ಅನೇಕ ಭಿನ್ನತೆಗಳಿವೆ.

ಬೇಡ ಸಮುದಾಯದ ಬಗ್ಗೆ ಸರ್ಕಾರ ಕೊಡುವ ಯಾಂತ್ರಿಕ ಅಂಶಗಳಿಗಿಂತ, ಸಮುದಾಯದ ಪ್ರಜ್ಞಾವಂತಿಕೆ ಸೂಕ್ಷ್ಮವಾಗಿ ಅಧ್ಯಯನ ಮಾಡುವ ಅಗತ್ಯವಿದೆ. ಬೇಡ ಸಮುದಾಯಕ್ಕಿರುವ ಸಮಸ್ಯೆಗಳ ಹತ್ತು ಹಲವಾರು ಸಮಸ್ಯೆಗಳನ್ನು ಅದರ ಭಿನ್ನಸ್ವರೂಪಗಳನ್ನು ತಿಳಿಸುವ ಅಧ್ಯಯನಗಳಾಗಬೇಕು ಹಾಗಾದಲ್ಲಿ ಬೇಡ ಸಮುದಾಯದ ಬಗ್ಗೆ ಯೋಜನೆ ರೂಪಿಸಲು ಸಹಕಾರಿಯಾಗುತ್ತದೆ. ಈಗೀಗ ಬೇಡ ಸಮುದಾಯದ ಅಧ್ಯಯನಗಳು ಬಹುಪಾಲು ಚಿತ್ರದುರ್ಗ, ಬಳ್ಳಾರಿ ಜಿಲ್ಲೆಯನ್ನು ಕೇಂದ್ರೀಕರಿಸಿವೆ. ರಾಯಚೂರು ಭಾಗದ ಬೇಡರು ಸ್ವತಃ ಸಂಸ್ಥಾನದ ನಾಯಕರಾಗಿ ಆಳುವ ಸಮುದಾಯವಾಗಿತ್ತು. ಅಲ್ಲಿನ ಬೇಡರ ಚಿತ್ರ ಬೇರೆಯೇ ಆಗಿರುವ ಸಾಧ್ಯತೆ ಇದೆ. ಹೀಗೆ ಬೇಡ ಸಮುದಾಯದ ನಾನಾ ರೂಪಗಳನ್ನು ಅದರೆಲ್ಲಾ ಆಯಾಮಗಳೊಂದಿಗೆ ಅಧ್ಯಯನ ಮಾಡುವ ಅಗತ್ಯವಿದೆ.

೫. ಸರ್ಕಾರಿ ಯೋಜನೆಗಳ ಪುನರ್ ಮೌಲ್ಯೀಕರಣದ ಅಗತ್ಯ

ಪರಿಶಿಷ್ಟ ಪಂಗಡ ಎನ್ನುವ ಒಂದು ದೊಡ್ಡ ಪಂಗಡದಲ್ಲಿ ಬುಡಕಟ್ಟು ಸಮುದಾಯಗಳೆಲ್ಲವನ್ನು ಸೇರಿಸುವುದು. ಪರಿಶಿಷ್ಟ ಪಂಗಡಕ್ಕೆ ನೀಡುವ ಸೌಲಭ್ಯಗಳನ್ನು ಎಲ್ಲ ಬುಡಕಟ್ಟುಗಳಿಗೆ ಅನ್ವಯಿಸುವ ಯೋಜನೆಗಳಿವೆ. ಆದರೆ ವಾಸ್ತವವಾಗಿ ಪರಿಶಿಷ್ಟ ಪಂಗಡದ ಎಲ್ಲ ಸಮುದಾಯಗಳ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಸ್ಥಿತಿ-ಗತಿಗಳನ್ನು ಒಂದೇ ತರನಾಗಿಲ್ಲ ಸಮಸ್ಯೆಯ ಸ್ವರೂಪವೂ ಭಿನ್ನವಾಗಿದೆ. ಹಾಗಾಗಿ ಈ ಬಗೆಯ ಸರ್ಕಾರಿ ಯೋಜನೆಗಳು ವಿಫಲವಾಗುವುದೇ ಹೆಚ್ಚು. ಪರಿಶಿಷ್ಟ ಪಂಗಡಕ್ಕೆ ಕೇಂದ್ರ ಸರ್ಕಾರದ್ದು ಶೇ. ೭ರಷ್ಟು ಮೀಸಲಾತಿ ಇದ್ದರೆ. ಅದು ಕರ್ನಾಟಕದಲ್ಲಿ ಶೇಕಡ ೩ರಷ್ಟಿದೆ. ಈ ಮೀಸಲಾತಿಯ ಪ್ರಮಾಣವನ್ನು ಹೆಚ್ಚಿಸುವ ಅಗತ್ಯವಿದೆ. ಈಗಾಗಲೇ ಮೀಸಲಾತಿ ಸೌಲಭ್ಯಪಡೆದು ಉತ್ತಮ ಸ್ಥಿತಿಯಲ್ಲಿರುವವರೇ ಮತ್ತೆ ಮತ್ತೆ ಮೀಸಲಾತಿ ಪಡೆಯುತ್ತಿದ್ದಾರೆ. ಈ ಬಗೆಯ ದುರುಪಯೋಗವನ್ನು ತಪ್ಪಿಸಲು ಪ್ರಯತ್ನಿಸಬೇಕು. ಆಯಾ ಸಮುದಾಯವನ್ನು ಪ್ರತ್ಯೇಕವಾಗಿ ಅಧ್ಯಯನ ಮಾಡಿ ಪ್ರತ್ಯೇಕವಾದ ಯೋಜನೆಗಳನ್ನು ರೂಪಿಸುವ ಅಗತ್ಯವಿದೆ.

ಸಮಾರೋಪ

ಸಮಾರೋಪ

ಸಮುದಾಯದ ಅಧ್ಯಯನಗಳನ್ನು ಅವುಗಳ ಜನಸಂಖ್ಯಾಧರಿತ, ಸರ್ಕಾರಿ ಅಂಕಿ ಅಂಶಗಳನ್ನಾಧರಿಸಿ ವಿಶ್ಲೇಷಿಸಿ, ವಿವರಿಸುವ ಅಧ್ಯಯನಗಳು ಅಕಡೆಮಿಕ್ ಶಿಸ್ತಿನಲ್ಲಿ ಹೆಚ್ಚಾಗಿದೆ. ಈ ಬಗೆಯ ಅಧ್ಯಯನಗಳ ಫಲಿತಗಳು ಈಗಾಗಲೇ ಸಮುದಾಯಗಳ ಬಗೆಗೆ ಇರುವ ಗ್ರಹಿಕೆಗೆ ಪೂರಕವಾಗಿರುತ್ತವೆ. ಹೆಚ್ಚೆಂದರೆ ಇಂತಹ ಗ್ರಹಿಕೆಗಳನ್ನು ಮತ್ತಷ್ಟು ಗಟ್ಟಿಗೊಳಿಸುತ್ತವೆ. ಪ್ರಸ್ತುತ ಅಧ್ಯಯನವು ಇಂತಹ ಮಾದರಿಯನ್ನು ಸಂಪೂರ್ಣವಾಗಿಬಿಟ್ಟುಕೊಟ್ಟಿದೆ. ಸಮುದಾಯವನ್ನು ಕುರಿತ ಅಂಕೆ ಸಂಖ್ಯೆಗಳ ವಿಶ್ಲೇಷಣೆಗಿಂತ, ಆ ಸಮುದಾಯದ ಅಂತರ್ಯದಲ್ಲಿ ಹುದುಗಿರಬಹುದಾದ ಧ್ವನಿಯನ್ನು ಕೇಳಿಸಿಕೊಳ್ಳುವ ಮೂಲಕ ಒಂದು ಸಮುದಾಯದ ಬಗೆಗಿನ ಸಿದ್ಧಗ್ರಹಿಕೆಯನ್ನು ಬದಲಿಸಲು ಮಾಡಿದ ಪ್ರಯತ್ನವೆ ಈ ಸಂಶೋಧನೆ.

ಸಮಾಜ ಬದಲಾಗುತ್ತಿದೆ. ಬೇಡ ಸಮುದಾಯವೂ ಇತರೆ ಕೆಳ ಸಮುದಾಯಗಳ ಜತೆ ತಾನೂ ಬದಲಾವಣೆಗೆ ಪಕ್ಕಾಗುತ್ತಿದೆ. ಹಾಗೆಂದಾಗ ಎಂತಹ ಬದಲಾವಣೆ ಎನ್ನುವ ಪ್ರಶ್ನೆ ಎದುರಾಗುತ್ತದೆ. ಕೃಷಿ ಸಂಪನ್ಮೂಲವನ್ನಾಧರಿಸಿ, ಪಶುಪಾಲನೆಯನ್ನಾಧರಿಸಿ, ವಸ್ತುವಿನಿಮಯ ಪದ್ಧತಿಯ ಆರ್ಥಿಕ ರೂಪರೇಷೆಯನ್ನು ಹೊಂದಿದ ಸಮುದಾಯ, ಈಗ 'ಹಣ'ದ ಕೇಂದ್ರಿಕೃತ ಅರ್ಥವ್ಯವಸ್ಥೆಯ ಜತೆ ಮುಖಾಮುಖಿಯಾಗುತ್ತಿದೆ. ಈ ಅಧ್ಯಯನ ಕೈಗೊಂಡ ಭೂ ಪ್ರದೇಶ ಬಹುಪಾಲು ಕೃಷಿಯಾಧರಿತವಾದದ್ದು, ಮಳೆಯಾಶ್ರಿತ ಕೃಷಿಯನ್ನು ನಂಬಿದವರು, ವಸ್ತು ವಿನಿಮಯದಿಂದ 'ಹಣ'ದ ವಿನಿಮಯದ ಬದುಕಿಗೆ ತೆರೆದುಕೊಳ್ಳುತ್ತಿರುವವರು. ಈ ಹೊತ್ತಲ್ಲಿ ಬೇಡರ ಅನನ್ಯತೆ 'ಬೇಟೆ' ಮುಂತಾದ ಲಕ್ಷಣಗಳನ್ನು ಆರೋಪಿಸುವುದು ಶ್ಲೇಷೆ ಎನ್ನಿಸುತ್ತದೆ. ಸರ್ಕಾರ ನೀಡುವ ಮೀಸಲಾತಿ ಸೌಲಭ್ಯಗಳಿಂದಾಗಿ ಈ ಸಮುದಾಯ ರಾಜಕೀಯ ಅಧಿಕಾರ ಪಡೆಯಲು ಹವಣಿಸುತ್ತಿದೆ. ಸರ್ಕಾರಿ ಉದ್ಯೋಗ ಹಿಡಿದು ಮೇಲ್‌ಸ್ತರಕ್ಕೆ ಚಲನೆಗೊಳ್ಳುತ್ತಿದೆ. ಶಿಕ್ಷಣವನ್ನು ಹೊಸ ಬಗೆಯ ಅನನ್ಯತೆಯನ್ನಾಗಿ ಸ್ವೀಕರಿಸಿ ಮುನ್ನಡೆಯುತ್ತಿದೆ. ಈ ಅಧ್ಯಯನದಿಂದಾಗಿ ಈ ಬಗೆಯ ಆಶಾವಾದವು ಕಾಣಿಸಿತಾದರೂ, ಇನ್ನೂ ಸೌಲಭ್ಯವಂಚಿತ ಹಳ್ಳಿಗಳಲ್ಲಿ ಬೇಡರು ದಟ್ಟದಾರಿದ್ರದಲ್ಲಿ ಕಾಲದೂಡುತ್ತಿರುವುದು, ಹಳ್ಳಿಗಳಲ್ಲಿ ಮೇಲ್ ವರ್ಗದ ಲೋಕದೃಷ್ಟಿಯನ್ನೇ ತಮ್ಮದು ಎನ್ನುವ ಭ್ರಮೆಯಲ್ಲಿ ಹಿಂದುತ್ವವಾದದಲ್ಲೂ

ಭಾಗಿಯಾಗುತ್ತಿರುವುದು. ಬೇಡ ಸಮುದಾಯದ ಒಳಗೇ ವರ್ಗ ಶ್ರೇಣೀಕರಣ ಸೃಷ್ಟಿಯಾಗುತ್ತಿರುವುದು, ಇಲ್ಲಿಯೂ ತೀರಾ ಬಡತನದ ಬೇಡರ ವರ್ಗವೊಂದು ಸೃಷ್ಟಿಯಾಗುತ್ತಿರುವುದು, ಇಂತಹ ಹಲವು ಸಂಗತಿಗಳು ಬೇಡರ ಆತ್ಮಕಥನದ ಭಾಗದಲ್ಲಿ ಗೋಚರಿಸಿವೆ.

ತನ್ನ ಸಮುದಾಯದ ದೈವ, ಲೋಕದೃಷ್ಟಿಯಲ್ಲಿ ನಂಬಿಕೆ ಕಳೆದುಕೊಂಡು ಅನ್ಯಧರ್ಮ ದೈವದ ಕಡೆ ಸೆಳೆತಕ್ಕೆ ಒಳಗಾಗಿರುವುದು, ಆರ್ಥಿಕವಾಗಿ ಸುಧಾರಿಸಿದ ಬೇಡರು ಸಂಸ್ಕೃತೀಕರಣ ಪ್ರಕ್ರಿಯೆಯಲ್ಲಿ ತೊಡಗಿರುವುದು, ಗ್ರಾಮೀಣ ಭಾಗದ ಬೇಡರ ಯುವ ಜನಾಂಗ ನಗರದತ್ತ ಉದ್ಯೋಗ ಹರಸಿ ಹೊರಟಿರುವುದು, ಇಂತಹ ಕಡೆ ನಗರ ಮತ್ತು ಗ್ರಾಮ್ಯದ ವಿಚಿತ್ರ ಸಂಬಂಧವೊಂದು ಕುತೂಹಲ ಮೂಡಿಸುತ್ತಿರುವುದು ಇಂತಹ ಸೂಕ್ಷ್ಮ ಸಂಗತಿಗಳು ಈ ಅಧ್ಯಯನದಲ್ಲಿ ಕಾಣುತ್ತವೆ. ಬೇಡರ ಆತ್ಮಕಥನದ ಈ ಭಾಗಗಳಲ್ಲಿ ಬದಲಾಗುತ್ತಿರುವ ಕುಲದ ನಂಬಿಕೆಗಳು, ಬದಲಾಗುತ್ತಿರುವ ವೃತ್ತಿಯ ಕಲ್ಪನೆ, ಬದಲಾಗುತ್ತಿರುವ ಸಾಮಾಜಿಕ ಸಂಬಂಧಗಳ ಸ್ವರೂಪವನ್ನು ಈ ಅಧ್ಯಯನದಲ್ಲಿ ಕಾಣಬಹುದು. ಇಲ್ಲಿ ಇಡೀ ಬೇಡ ಸಮುದಾಯವೇ ಆತ್ಮಕಥನದ ಸ್ವರೂಪದಲ್ಲಿ ನಿರೂಪಣೆಗೊಂಡಿರುವುದರಿಂದ, ಅಧ್ಯಯನಕಾರನಿಗೂ, ಸಮುದಾಯದ ಸದಸ್ಯರಿಗೂ ಇರಬಹುದಾದ ಅಂತರ, ತೊಡಕು ಇಲ್ಲಿ ನಿವಾರಣೆಯಾಗಿದೆ. ಹಾಗಾಗಿ ಸಮುದಾಯದ ಅಧ್ಯಯನದ ಭಿನ್ನ ಮಾದರಿಯೊಂದು ಈ ಅಧ್ಯಯನದಲ್ಲಿ ಸಾಧ್ಯವಾಗಿದೆ.

* * *

ಅನುಬಂಧಗಳು

ಗ್ರಂಥಋಣ

ವಕ್ತೃಗಳ ವಿವರ

ಛಾಯಚಿತ್ರಗಳು

ಗ್ರಂಥಸೂಚಿ

೦೧. ಅನ್ನಪೂರ್ಣಮ್ಮ.ಸಿ.ಬಿ, ಮ್ಯಾಸಬೇಡರ ಸಾಂಸ್ಕೃತಿಕ ನಾಯಕಿಯರು, (ಅಪ್ರಕಟಿತ-ಸಂಶೋಧನ ಮಹಾಪ್ರಬಂಧ) ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭

೦೨. ಅಭಯ್ ಕುಮಾರ್, ಕೌಕ್ರಾಡಿ ಮುಗೇರರು ಜನಾಂಗ ಜಾನಪದ ಅಧ್ಯಯನ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೭

೦೩. ಈಶ್ವರಪ್ಪ ಎಂ.ಜಿ, ಮ್ಯಾಸಬೇಡರು, ಐ.ಬಿ.ಹೆಚ್. ಪ್ರಕಾಶನ, ಬೆಂಗಳೂರು, ೧೯೮೨

೦೪. ಕಪಟರಾಳ ಕೃಷ್ಣರಾಯರು, ಸುರಪುರ ಸಂಸ್ಥಾನದ ಇತಿಹಾಸ, ಪ್ರಕಾಶಕರು ಪುಸ್ತಕ ಶಕ್ತಿ ಪ್ರಕಾಶನ, ಬೆಂಗಳೂರು, ೨೦೦೫

೦೫. ಕರಿಶೆಟ್ಟಿ ರುದ್ರಪ್ಪ, ಮ್ಯಾಸನಾಯಕರು ಒಂದು ಜನಾಂಗಿಕ ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೦೬. ಕಲಬುರ್ಗಿ ಎಂ.ಎಂ, ಕರ್ನಾಟಕದ ಕೈಫಿಯತ್ತುಗಳು, ಪ್ರಸಾರಾಂಗ ಕ.ವಿ.ವಿ, ಹಂಪಿ, ೧೯೯೪

೦೭. ಕುಮಾರ್ ಆರ್.ಬಿ, ಕರ್ನಾಟಕದಲ್ಲಿ ಮುದ್ದೆ ಕಂಬಾರರು, ಸಾರಾ ಎಂಟರ್ ಪ್ರೈಸಸ್, ಮೈಸೂರು

೦೮. ಕಾಳೇಗೌಡ ನಾಗವಾರ, ಹುಚ್ಚಪ್ಪ ಮಾಸ್ತರ್ ಎನ್, (ಸಂ) ಗಿರಿಜನ ಸಂಸ್ಕೃತಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೨೦೦೦

೦೯. ಕೃಷ್ಣ ಮೂರ್ತಿ ಹನೂರು, ಮ್ಯಾಸಬೇಡರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩

೧೦. ಕೃಷ್ಣ ಮೂರ್ತಿ ಹನೂರು, ಜನಪದ ಮತ್ತು ಬುಡಕಟ್ಟು ಗೀತೆಗಳು, ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೮

೧೧. ಕೃಷ್ಣ ಮೂರ್ತಿ ಹನೂರು, ಸಾವಿರ ಸಿರಿ ಬೆಳಗು, ಪ್ರಸಾರಾಂಗ ಕ.ವಿ.ವಿ.ಹಂಪಿ, ೨೦೦೫

೧೨. ಕೋಟಗಾನಹಳ್ಳಿ, ರಾಮಯ್ಯ, ಸಿಂದ್ ಮಾದಿಗರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩

೧೩. ಖಂಡೋಬ ಪಿ.ಕೆ, ಕರ್ನಾಟಕ ಲಂಬಾಣಿಗಳು ಒಂದು ಸಾಂಸ್ಕೃತಿಕ ಅಧ್ಯಯನ, ದಿ.ತೇಜಸಿಂಗ್‌ರಾಠೋಡ್ ಮೆಮೋರಿಯಲ್ ಟ್ರಸ್ಟ್, ಗುಲಬರ್ಗಾ, ೧೯೯೧

೧೪. ಖಂಡೋಬ ಪಿ.ಕೆ, ಸುಡುಗಾಡುಸಿದರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩

೧೫. ಗುರುರಾಜ್ ಬಾಪಟ್, ಜನಸಂಸ್ಕೃತಿಕ ಶೋಧ, ಕವಿಂದ್ರ ಪುಸ್ತಕಾಲಯ ಶಿವಮೊಗ್ಗ, ೨೦೦೭

೧೬. ಗುರುಲಿಂಗಯ್ಯ ಎಂ.ನಾಗಪ್ಪ ವಿ, ಕಾಡುಗೊಲ್ಲ ಅಲೆಮಾರಿ ಸಮುದಾಯಗಳ ಅಧ್ಯಯನ ಮಾಲೆ, ಕನ್ನಡ ಪುಸತಕ ಪ್ರಾಧಿಕಾರ, ಬೆಂಗಳೂರು, ೨೦೦೮

೧೭. ಚಂದ್ರಪ್ಪ ಎನ್, ಮೊಂಡರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩

೧೮. ಚಂದ್ರು ಕಾಳೇನಹಳ್ಳಿ, ಸೋಲಿಗರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩

೧೯. ಚನ್ನಣ್ಣ ವಾಲೀಕಾರ, ಹೈದರಾಬಾದ್ ಕರ್ನಾಟಕದ ಗ್ರಾಮದೇವತೆಗಳ ಜಾನಪದೀಯ ಅಧ್ಯಯನ, ವಾಲೀಕಾರ, ವಿರಸಂ, ದಲಿತ ಬಂಡಾಯ ಸಾಹಿತ್ಯ ಪ್ರಕಾಶನ ಕೇಂದ್ರ, ಗುಲಬರ್ಗಾ, ೧೯೯೮

೨೦. ದಾದಾಪೀರ್ ಬಿ.ಸಿ, ಪಿಂಜಾರರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩

೨೧. ದೇವೇಂದ್ರಕುಮಾರ್ ಹಕಾರಿ, ಡೊಂಬರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩

೨೨. ನಂಜಮ್ಮಣ್ಣಿ ಎಂ, ಸಾಮಾಜಿಕ ಮಾನವಶಾಸ್ತ್ರ, ಪ್ರಸಾರಾಂಗ ಮೈಸೂರು ವಿ.ವಿ, ಮೈಸೂರು

೨೩. ನಾಗರಾಜು ಎಂ.ಹೆಚ್, ಕುಂಚಿಟಿಗರ ಸಾಂಸ್ಕೃತಿಕ ಇತಿಹಾಸ, ಅನಿಕೇತನ ಪ್ರಕಾಶನ, ತುಮಕೂರು, ೨೦೦೩

೨೪. ನಾಗಯ್ಯ ಜಿ.ಎಂ, ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ, ಲೋಹಿಯ ಪ್ರಕಾಶನ ಬಳ್ಳಾರಿ, ೨೦೦೨

೨೫. ನಾಯಕ್ ಡಿ.ಟಿ, ಲಂಬಾಣಿ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩

೨೬. ನಿಂಗಪ್ಪ ಮುದೇನೂರು, ಕನ್ನಡ ಜನಪದ ಮಹಾಕಾವ್ಯಗಳ ಸಾಂಸ್ಕೃತಿಕ ವೀರರು, (ಪಿಎಚ್.ಡಿ.ಮಹಾಪ್ರಬಂಧ), ಸಿ.ವಿ.ಜಿ ಪಬ್ಲಿಕೇಷನ್, ಬೆಂಗಳೂರು, ೨೦೦೪

೨೭. ಪರಮಶಿವಯ್ಯ ಜೀ.ಶಂ, ದಕ್ಷಿಣ ಕರ್ನಾಟಕದ ಕಾವ್ಯ ಪ್ರಕಾರಗಳು, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೯

೨೮. ಪ್ರಭಾಕರ್ ಎ.ಎಸ್, ಮ್ಯಾಸಬೇಡರ ಕಥನಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

೨೯. ಮುತ್ತಯ್ಯ ಎಸ್.ಎಂ, ಕಿಲಾರಿ (ಮ್ಯಾಸಬೇಡರ ಎತ್ತಿನ ಕಿಲಾರಿ ಬೋರಯ್ಯನ ಆತ್ಮಕಥೆ), ಸೃಷ್ಟಿ ಪಬ್ಲಿಕೇಷನ್, ಬೆಂಗಳೂರು, ೨೦೦೮

೩೦. ಮೀರಾಸಾಬಿಹಳ್ಳಿ ಶಿವಣ್ಣ, ಕಾಡುಗೊಲ್ಲ ಬುಡಕಟ್ಟು ವೀರರು, ಸಿ.ವಿ.ಜಿ, ಪಬ್ಲಿಕೇಷನ್, ಬೆಂಗಳೂರು, ೨೦೦೫

೩೧. ಮೀರಾಸಾಬಿಹಳ್ಳಿ ಶಿವಣ್ಣ, ಮ್ಯಾಸಮಂಡಲ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೩

೩೨. ಮೀರಾಸಾಬಿಹಳ್ಳಿ ಶಿವಣ್ಣ, ಕಾಡುಗೊಲ್ಲರ ಸಂಸ್ಕೃತಿ, ಸಿ.ವಿ.ಜಿ, ಪಬ್ಲಿಕೇಷನ್ಸ್, ಬೆಂಗಳೂರು, ೨೦೦೪

೩೩. ಮೊಗಳ್ಳಿ ಗಣೇಶ್, ಮೌಖಿಕ ಕಥನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲ, ಹಂಪಿ, ೨೦೦೬

೩೪. ಮೊಗಳ್ಳಿ ಗಣೇಶ್, ಆದಿಮ, ಸಾರಾಂಗ ಪ್ರಕಾಶನ, ತಿಪಟೂರು, ೨೦೦೫

೩೫. ಮೈತ್ರಿ ಕೆ.ಎಂ, ಕುಮಾರರಾಮ ಮತ್ತು ಕೃಷ್ಣಗೊಲ್ಲರ ಮಹಾಕಾವ್ಯ (ಬುಡಕಟ್ಟು ಮಹಾಕಾವ್ಯ ಮಾಲೆ), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭

೩೬. ಮೈತ್ರಿ ಕೆ.ಎಂ, ಬುಡಕಟ್ಟಿನ ಕುಲಕಸುಬುಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ,

೩೭. ಮೈಲಹಳ್ಳಿ ರೇವಣ್ಣ, ಚಿತ್ರದುರ್ಗ ಸುತ್ತಿನ ಜನಪದ ಕಾವ್ಯಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೮೪

೩೮. ರಾಜಾರಾಮ ಹೆಗಡೆ (ಸಂ), ಭಾರತೀಯ ಇತಿಹಾಸ ಸಮಾಜ ಮತ್ತು ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೪

೩೯. ರಾಜಣ್ಣ ಆರ್, ನಾಯಕ ಜನಾಂಗದ ಇತಿಹಾಸ, ಚಳ್ಳಕೆರೆ, ೧೯೮೨

೪೦. ರಾಮಚಂದ್ರೇಗೌಡ ಹಿ.ಶಿ (ಸಂ), ಜಾನಪದ ಗ್ರಹಿಕೆ ಮತ್ತು ಪರಿಕಲ್ಪನೆ, ಕರ್ನಾಟಕ ಜಾನಪದ, ಯಕ್ಷಗಾನ ಅಕಾಡೆಮಿ, ಬೆಂಗಳೂರು, ೨೦೦೪

೪೧. ರೋಮಿಲ ಥಾಪರ್ ಮತ್ತು ಹರ್ಬನ್ ಮುಖಿಯ, ಬಿಪನ್ ಚಂದ್ರ, ಕೋಮುವಾದ ಹಾಗೂ ಭಾರತೀಯ ಇತಿಹಾಸ ಲೇಖನ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೧೯೮೫

೪೨. ಲಕ್ಷ್ಮಿಪತಿ ಕೋಲಾರ, ಮಾಸ್ತಿಕರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩

೪೩. ವಿರೂಪಾಕ್ಷಿ ಪೂಜಾರಹಳ್ಳಿ, ಗಾದರಿಪಾಲನಾಯಕನ ಕಾವ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭

೪೪. ವಿರೂಪಾಕ್ಷಿ ಪೂಜಾರಹಳ್ಳಿ, ಚಿತ್ರದುರ್ಗಜಿಲ್ಲೆಯ ಬುಡಕಟ್ಟು ವೀರರು, ಕನ್ನಡ ವಿಶ್ವವಿದ್ಯಾಲ, ಹಂಪಿ, ೨೦೦೨

೪೫. ವಿರೂಪಾಕ್ಷಿ ಪೂಜಾರಹಳ್ಳಿ, ಬೇಟೆ ಮತ್ತು ಬೇಡರು, ಚಿನ್ನಹಗರಿ ಪ್ರಕಾಶನ ಪೂಜಾರಹಳ್ಳಿ, ೨೦೦೬

೪೬. ವಿರೂಪಾಕ್ಷಿ ಪೂಜಾರಹಳ್ಳಿ, ಕಾಮಗೇತಿ ವಂಶಸ್ಥರ ಚರಿತ್ರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬

೪೭. ಶಂಕರ ನಾರಾಯಣ, ತೀ.ನಂ, ಕಾಡುಗೊಲ್ಲರ ನಂಬಿಕೆ ಮತ್ತು ಸಂಪ್ರದಾಯಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೮೨

೪೮. ಸದಾಶಿವಪ್ಪ ಕುಂಬಾರ, ಹರಪನಹಳ್ಳಿ ಪಾಳೆಯಗಾರರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೬

೪೯. ಸಣ್ಣೋಬಯ್ಯ ಎಸ್.ಕೆ, ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳು ಒಂದು ಸಮಾಜ ಶಾಸ್ತ್ರೀಯ ಅಧ್ಯಯನ (ಅಪ್ರಕಟಿತ: ಸಂಶೋಧನಾ ಮಹಾ ಪ್ರಬಂಧ), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨

೫೦. ಚಂದ್ರಶೇಖರ್ ವಿ.ಡಾವಣಗೇರೆ, ಕಾಯಕಯೋಗಿ ಶ್ರೀ ಗುರು ತಿಪ್ಪೇರುದ್ರಸ್ವಾಮಿ, ಶ್ರೀ.ಗುರು ತಿಪ್ಪೇರುದ್ರ ದೇವಸ್ಥಾನ ಸಮಿತಿ, ನಾಯಕನಹಟ್ಟಿ, ೨೦೦೧

ವಕ್ತೃಗಳ ವಿವರ

ಕ್ರಮ ಸಂಖ್ಯೆ	ಹೆಸರು	ಲಿಂಗ	ವಯಸ್ಸು	ಜಾತಿ	ಉದ್ಯೋಗ	ಊರು	ಶಿಕ್ಷಣ	ಭೂಮಿ	ಮನೆ	ಜಿಲ್ಲೆ
೧.	ಪಾಪಮ್ಮ	ಹೆಣ್ಣು	೫೮	ನಾಯಕ	ಕೂಲಿ	ನೇತ್ರನಹಳ್ಳಿ	ಇಲ್ಲ	ಇಲ್ಲ	ಗುಡಿಸಲು	ಚಿತ್ರದುರ್ಗ
೨.	ನಾಗಮ್ಮ	ಹೆಣ್ಣು	೪೪	ನಾಯಕ	ಕೂಲಿ	ಕರ್ನಾರಹಟ್ಟಿ	ಇಲ್ಲ	ಇಲ್ಲ	ಗುಡಿಸಲು	ದಾವಣಗೆರೆ
೩.	ಪಾಲಮ್ಮ	ಹೆಣ್ಣು	೪೪	ನಾಯಕ	ಮನೆಗೆಲಸ	ದೇವರಹಟ್ಟಿ	ಇಲ್ಲ	೧ ಎಕರೆ	ಸೀಟು	ಚಿತ್ರದುರ್ಗ
೪.	ಸಣ್ಣ ಓಬಮ್ಮ	ಹೆಣ್ಣು	೬೭	ನಾಯಕ	ಮನೆಗೆಲಸ	ಬಚ್ಚಿಬೋರಮ್ಮನ ಹಟ್ಟಿ	ಇಲ್ಲ	೨ ಎಕರೆ	ಮಾಳಿಗೆ	ಚಿತ್ರದುರ್ಗ
೫.	ಬೋರಮ್ಮ	ಹೆಣ್ಣು	೫೫	ನಾಯಕ	ಮನೆಗೆಲಸ	ಕುಮ್ಮತಿ	ಇಲ್ಲ	೪ ಎಕರೆ	ಮಾಳಿಗೆ	ಬಳ್ಳಾರಿ
೬.	ರೇವಣ್ಣ	ಗಂಡು	೩೪	ನಾಯಕ	ಕೃಷಿ	ಯರ್ರೋಬಯ್ಯನ ಹಟ್ಟಿ	೧೦ನೇ ತರಗತಿ	೨ ಎಕರೆ	ಮಾಳಿಗೆ	ಬಳ್ಳಾರಿ
೭.	ಸಣ್ಣ ಸೂರಯ್ಯ	ಗಂಡು	೩೪	ನಾಯಕ	ಶಿಕ್ಷಕರು	ದೇವರಹಟ್ಟಿ	-	-	ಮಾಳಿಗೆ	ಬಳ್ಳಾರಿ
೮.	ಬೋಮ್ಮಯ್ಯ	ಗಂಡು	೬೫	ದೇವರ ಸೇವೆ ಮತ್ತು ಕೃಷೀ		ಗೌರಸಮುದ್ರ	ಇಲ್ಲ	೩ ಎಕರೆ	ಮಾಳಿಗೆ	ಚಿತ್ರದುರ್ಗ
೯.	ಶರಣಮ್ಮ	ಹೆಣ್ಣು	೪೯	ನಾಯಕ	ಕೂಲಿ	ಬಂಡಿಮೋಟ್	ಇಲ್ಲ	ಇಲ್ಲ	ಗುಡಿಸಲು	ಬಳ್ಳಾರಿ
೧೦.	ಪೂಜಾರಿ ಪ್ರಕಾಶ್	ಗಂಡು	೪೬	ನಾಯಕ	ಪೂಜಾರಿ ಕೆಲಸ	ಹಿರೇಹಳ್ಳಿ	ಇಲ್ಲ	೧ ಎಕರೆ	ಮಾಳಿಗೆ	ಚಿತ್ರದುರ್ಗ

೧೧.	ಪೂಜಾರಿ ಬೊಮ್ಮಯ್ಯ	ಗಂಡು	೬೨	ನಾಯಕ	ಪೂಜಾರಿ ಕೃಷಿ	ಗೌರಸಮುದ್ರ	೭ನೇ	ತರಗತಿ	೨	ಎಕರೆ	ಮಾಳಿಗೆ	ಚಿತ್ರದುರ್ಗ
೧೨.	ಗೋವಿಂದಪ್ಪ	ಗಂಡು	೩೮	ನಾಯಕ	ಕೂಲಿ	ದೇವರಹಟ್ಟಿ	ಇಲ್ಲ		ಇಲ್ಲ		ಗುಡಿಸಲು	ಬಳ್ಳಾರಿ
೧೩.	ಬಂಗಾರಪ್ಪ	ಗಂಡು	೩೮	ನಾಯಕ	ಹಮಾಲಿ	ಚೆಳಕೆರೆ	ಇಲ್ಲ		ಇಲ್ಲ		ಸೀಟು	ಚಿತ್ರದುರ್ಗ
೧೪.	ಅವಲು ಓಬಯ್ಯ	ಗಂಡು	೩೯	ನಾಯಕ	ಹಮಾಲಿ	ಹಾಲಸಾಗರ	ಇಲ್ಲ		ಇಲ್ಲ		ಗುಡಿಸಲು	ಬಳ್ಳಾರಿ
೧೫.	ಪಾಲಯ್ಯ	ಗಂಡು	೫೪	ನಾಯಕ	ಕೂಲಿ	ಗಾಳೆಮ್ಮನಗುಡಿ	ಇಲ್ಲ		ಇಲ್ಲ		ಗುಡಿಸಲು	ಬಳ್ಳಾರಿ
೧೬.	ಸಿಂತ್ಲಮ	ಹೆಣ್ಣು	೪೮	ನಾಯಕ	ಕೂಲಿ	ಅಬ್ಬೇನಹಳ್ಳಿ	ಇಲ್ಲ		ಇಲ್ಲ		ಗುಡಿಸಲು	ಚಿತ್ರದುರ್ಗ
೧೭.	ಪಾಪಮ್ಮ	ಹೆಣ್ಣು	೫೨	ನಾಯಕ	ವ್ಯಾಪಾರ	ಕೋನಸಾಗರ	ಇಲ್ಲ		೨	ಎಕರೆ	ಮಾಳಿಗೆ	ಚಿತ್ರದುರ್ಗ
೧೮.	ತಿಪ್ಪೇಸ್ವಾಮಿ	ಗಂಡು	೬೭	ನಾಯಕ	ವ್ಯಾಪಾರ	ಮೋತ್ಲುಕುಂಟೆ	೫ನೇ	ತರಗತಿ	೧೦	ಎಕರೆ	ಮಾಳಿಗೆ	ಚಿತ್ರದುರ್ಗ
೧೯.	ಮುದಿಯಪ್ಪ	ಗಂಡು	೬೫	ನಾಯಕ	ಕೃಷಿ	ಕಲೆದೇವಪುರ	೫ನೇ	ತರಗತಿ	೨೦	ಎಕರೆ	ಮಾಳಿಗೆ	ಚಿತ್ರದುರ್ಗ
೨೦.	ಅಬ್ಬನ ಪಾಪಯ್ಯ	ಗಂಡು	೬೮	ನಾಯಕ	ಕೃಷಿ	ಮತ್ತಾಜನಹಳ್ಳಿ	ಇಲ್ಲ		೮	ಎಕರೆ	ಅಂಚಿನ	ಬಳ್ಳಾರಿ
೨೧.	ಕೆಂಗ ಓಬಯ್ಯ	ಗಂಡು	೬೦	ನಾಯಕ	ಕುರಿಕಾಯುವುದು	ರುದ್ರಮ್ಮನಹಳ್ಳಿ	ಇಲ್ಲ		೪	ಎಕರೆ	ಮಾಳಿಗೆ	ಚಿತ್ರದುರ್ಗ
೨೨.	ಗೊಡ್ಲು ಕಿಲಾರಿ	ಗಂಡು	೬೬	ನಾಯಕ	ಕೃಷಿ / ಕಿಲಾರಿತನ	ಕಂಪಾಳದೈವರಹಟ್ಟಿ	ಇಲ್ಲ		೩	ಎಕರೆ	ಮಾಳಿಗೆ	ಚಿತ್ರದುರ್ಗ
೨೩.	ಪೂಜಾರಿ ಸಣ್ಣಬೋರಯ್ಯ	ಗಂಡು	೬೯	ನಾಯಕ	ಪೂಜಾರಿ / ಕೃಷಿ	ಖುದಾಪುರ	ಇಲ್ಲ		೨	ಎಕರೆ	ಮಾಳಿಗೆ	ಚಿತ್ರದುರ್ಗ
೨೪.	ತಿಮ್ಮಪ್ಪ	ಗಂಡು	೭೦	ನಾಯಕ	ಕೃಷಿ	ಕೆ.ಬಿ.ಕೆ.ಹಟ್ಟಿ	ಇಲ್ಲ		೪	ಎಕರೆ	ಮಾಳಿಗೆ	ಬಳ್ಳಾರಿ
೨೫.	ಸಣ್ಣ ಬೋರಯ್ಯ	ಗಂಡು	೨೮	ನಾಯಕ	ಕೂಲಿ	ಸೂರಮ್ಮನಹಳ್ಳಿ	ಇಲ್ಲ		ಇಲ್ಲ		ಗುಡಿಸಲು	ಚಿತ್ರದುರ್ಗ

೨೬.	ಬೋರಮ್ಮ	ಹೆಣ್ಣು	೫೮	ನಾಯಕ	ಮನೆಗೆಲಸ	ರುದ್ರಮ್ಮನಹಳ್ಳಿ	ಇಲ್ಲ	೨ ಎಕರೆ	ಗುಡಿಸಲು	ಚಿತ್ರದುರ್ಗ
೨೭.	ಸೂರಮ್ಮ	ಹೆಣ್ಣು	೩೪	ನಾಯಕ	ಕೂಲಿ	ಕೋನಸಾಗರ	ಇಲ್ಲ	ಇಲ್ಲ	ಗುಡಿಸಲು	ಚಿತ್ರದುರ್ಗ
೨೮.	ರೇವಣ್ಣ	ಗಂಡು	೩೪	ನಾಯಕ	ಪೂಜಾರಿ	ಕಂಪಳದೇವರಹಟ್ಟಿ	ಬಿ.ಎ	೪ ಎಕರೆ	ಮಾಳಿಗೆ	ಚಿತ್ರದುರ್ಗ
೨೯.	ಕೆಂಗ ಬೋರಯ್ಯ	ಗಂಡು	೭೪	ನಾಯಕ	ಕೃಷಿ	ಹಾಲಸಾಗರ	೪ನೇ ತರಗತಿ	೫ ಎಕರೆ	ಮಾಳಿಗೆ	ಬಳ್ಳಾರಿ
೩೦.	ಪೂಜಾರಿ ನಿಜಲಿಂಗಪ್ಪ	ಗಂಡು	೬೯	ನಾಯಕ	ಪೂಜಾರಿ/ಕೃಷಿ	ಕಾಮಗೇತನಹಳ್ಳಿ	೫ನೇ ತರಗತಿ	೧೫ ಎಕರೆ	ಮಾಳಿಗೆ	ದಾವಣಗೆರೆ
೩೧.	ದುರುಗಪ್ಪ	ಗಂಡು	೪೮	ನಾಯಕ	ಕೂಲಿ	ಸ್ವಾಮಿಹಳ್ಳಿ	ಇಲ್ಲ	ಇಲ್ಲ	ಗುಡಿಸಲು	ಬಳ್ಳಾರಿ
೩೨.	ಜಯಣ್ಣ	ಗಂಡು	೩೩	ನಾಯಕ	ಕೂಲಿ	ಕರಿಓಬೇನಹಳ್ಳಿ	ಇಲ್ಲ	ಇಲ್ಲ	ಗುಡಿಸಲು	ಚಿತ್ರದುರ್ಗ
೩೩.	ಓಬಣ್ಣ ಡಿ.ಟಿ	ಗಂಡು	೪೧	ನಾಯಕ	ಶಿಕ್ಷಕರು	ಬಚ್ಚಿಬೋರಯ್ಯನಹಟ್ಟಿ	ಐ.ಟಿ.ಸಿ	೩ ಎಕರೆ	ಮಾಳಿಗೆ	ಚಿತ್ರದುರ್ಗ
೩೪.	ಪಾಪಮ್ಮ	ಹೆಣ್ಣು	೩೪	ನಾಯಕ	ಕೂಲಿ	ಪಾಲವ್ವನಹಳ್ಳಿ	ಇಲ್ಲ	ಇಲ್ಲ	ಗುಡಿಸಲು	ಚಿತ್ರದುರ್ಗ
೩೫.	ನಾಗೇಂದ್ರ	ಗಂಡು	೩೦	ನಾಯಕ	ಶಿಕ್ಷಕರು	ಸೂರಮ್ಮನಹಳ್ಳಿ	ಐ.ಟಿ.ಸಿ	೨ ಎಕರೆ	ಮಾಳಿಗೆ	ಚಿತ್ರದುರ್ಗ
೩೬.	ಪಾಲಯ್ಯ	ಗಂಡು	೪೫	ನಾಯಕ	ಕೃಷಿ	ಯರ್ರನಿಂಗೇನಹಳ್ಳಿ	ಕೃಷಿ	೬ ಎಕರೆ	ಮಾಳಿಗೆ	ಬಳ್ಳಾರಿ
೩೭.	ವಲ್ಲಯ್ಯ	ಗಂಡು	೪೩	ನಾಯಕ	ಕೂಲಿ	ನನ್ನಿವಾಳ	ಇಲ್ಲ	ಇಲ್ಲ	ಗುಡಿಸಲು	ಚಿತ್ರದುರ್ಗ
೩೮.	ಬೈಯಣ್ಣ	ಗಂಡು	೩೮	ನಾಯಕ	ಟೈಲರಿಂಗ್	ದೇವರಹಟ್ಟಿ	೧೦ನೇ ತರಗತಿ	೨ ಎಕರೆ	ಮಾಳಿಗೆ	ಬಳ್ಳಾರಿ
೩೯.	ಗಿಡ್ಡ ಬೋರಯ್ಯ	ಗಂಡು	೩೩	ನಾಯಕ	ಕೂಲಿ	ತಿಪ್ಪಯ್ಯನಹಳ್ಳಿ	ಇಲ್ಲ	ಇಲ್ಲ	ಗುಡಿಸಲು	ಚಿತ್ರದುರ್ಗ

ಹೂಡೆಂ ನಿಂದ ಕುದರೆ ಬಂದಿರುವುದು



ದಡ್ಡಿಸೂರನಾಯಕ ದೇವರಿಗೆ ಅಲಗು ಆಯುತ್ತಿರುವ ದೃಶ್ಯ ಹಿರೇಹಳ್ಳಿ



ಜಗಳೂರಿನಲ್ಲಿ ಜವಳಿ ತೆಗೆಯುಸತ್ತಿರುವ ದೃಶ್ಯ



ಮಾರಮ್ಮನಿಗೆ ಹಾಕಿರುವ ಬಳೆರಾಶಿ



ಪೋತರಾಜು ಗಾವ ಜಿಗಿಯಲು ತಯಾರು





ಕಂಪಳ ದೇವರ ಗುಡಿಯ ಮುಂದೆ ನಿಂತಿರುವ ಪೂಜಾರಿ



ಜಗಳೂರ ಅಜ್ಜನ ಹಬ್ಬದಲ್ಲಿ ಗುಗ್ಗರಿ ಬೇಯಿಸುವುದು



ನಾಯಕನಹಟ್ಟಿ ತಿಪ್ಪೇಸ್ವಾಮಿಯ ನಗಾರಿ ವಾದ್ಯ



ದಡ್ಡಿ ಸೂರನಾಯಕನ ಗುಡಿಯ ಮುಂದೆ ಭಕ್ತಾದಿಗಳು



ಎತ್ತುಗಳ ಜಾತ್ರೆಯಲ್ಲಿ ದಾಸೋಹ ಸೇವೆ



ದೇವರ ಎತ್ತುಗಳಿಗಾಗಿ ಕಾಯುತ್ತಿರುವ ದೃಶ್ಯ



ಅಯ್ಯಪ್ಪಸ್ವಾಮಿ ಮಾಲೆಯನ್ನು ಹಾಕಿರುವ ದೃಶ್ಯ



ತಿಪ್ಪೇಸ್ವಾಮಿ ದೇವಸ್ಥಾನ, ನಾಯಕನಹಟ್ಟಿ



ಕಂಪಳ ದೇವರ ಎತ್ತುಗಳು



ಪೂಜಾರಿ ಜೊತೆ ನಿಂತಿರುವ ಸಂಶೋಧಕ



ಸಿಡಿ ಆಡಲಿಕ್ಕೆ ತಯಾರಿಸಿರುವ ಸಿಡಿಗಂಭ



ಡಿಗ್ಗಿಂಗ್ ಮಾಡುತ್ತಿರುವ ಕಾರ್ಮಿಕರು



ಡಿಗ್ಗಂಗ್ ನಲ್ಲಿ ಮಹಿಳೆ



ದಡ್ಡಿ ಸೂರನಾಯಕ ಪೂಜಾರಿ ಹಿರೇಹಳ್ಳಿ



ಸುಗ್ಗಿ ಹಬ್ಬದಲ್ಲಿ ಸುಗ್ಗಿ ಎಡೆಯನ್ನು ಹಾಕಿರುವುದು



ಚಿಂತಗುಟ್ಲ ಬೋರೆದೇವರು ಖುದಾಪುರ



ಬೇಟೆಕೊಯ್ಯುತ್ತಿರುವ ದೃಶ್ಯ, ಜಗಳೂರು



ದೇವರಿಗೆ ಬಿಟ್ಟಿರುವ ಪ್ರಮುಖ ಎತ್ತನ್ನು ಸಿಂಗರಿಸುವ ದೃಶ್ಯ



